

ಸ್ಟೊಯಿನಿಸ್ ಅಬ್ಬರ
ಪಂಜಾಬ್ ಕಿಂಗ್ಸ್ ಬ್ಯಾಟರ್ ಮಾರ್ಕಸ್ ಸ್ಟೊಯಿನಿಸ್ (ಅಜೇಯ 62;22ಎ, 4x4, 6x6) ಮಂಗಳವಾರ ರಾಜಸ್ಥಾನ ರಾಯಲ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಮಿಂಚಿನ ಅರ್ಧಶತಕ ದಾಖಲಿಸಿದರು

prajavani.net prajavani

ಬುಧವಾರ, ಏಪ್ರಿಲ್ 29, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 118 | ಪುಟ 14

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 76,886 | ನಿಫ್ಟಿ 23,995 | $/₹ 94.68

ಮುಕ್ತ ವಿ.ವಿ–ಸರ್ಕಾರ ಸಂಘರ್ಷ

ಕೆಎಸ್‌ಒಯು ಏಕಸ್ವಾಮ್ಯಕ್ಕೆ ಕಡಿವಾಣ
ಎಲ್ಲ ವಿ.ವಿಗಳಲ್ಲೂ ದೂರ ಶಿಕ್ಷಣ ಕೋರ್ಸ್

• ಚಂದ್ರಹಾಸ ಹಿರೇಮಳಲಿ



ಬೆಂಗಳೂರು: ಆದೇಶ ಪಾಲನೆ ಮಾಡದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಒಯು) ಜತೆ ಸಂಘರ್ಷಕ್ಕೆ ಮುಂದಾಗಿರುವ ರಾಜ್ಯ ಸರ್ಕಾರ, ಎಲ್ಲ ವಿಶ್ವವಿದ್ಯಾಲಯಗಳಲ್ಲೂ ದೂರ ಶಿಕ್ಷಣ ಕೋರ್ಸ್‌ಗಳ ಆರಂಭಕ್ಕೆ ಅನುಮತಿ ನೀಡಲು ನಿರ್ಧರಿಸಿದೆ.

ಇದೇ ವರ್ಷದ ಮಾರ್ಚ್‌ನಲ್ಲಿ 'ಏಕಾತ್ಮ ಮಾನವ ದರ್ಶನ' ಕಾರ್ಯಕ್ರಮವನ್ನು ಕೆಎಸ್‌ಒಯು ಆಯೋಜಿಸಿತ್ತು. ಅದನ್ನು ರದ್ದುಗೊಳಿಸುವಂತೆ ಸರ್ಕಾರ ಹೊರಡಿಸಿದ್ದ ಆದೇಶವನ್ನು ವಿ.ವಿಯು ಲೆಕ್ಕಕ್ಕೇ ತೆಗೆದುಕೊಂಡಿರಲಿಲ್ಲ. ಈ ವಿಷಯ ರಾಜ್ಯ ಸರ್ಕಾರ ಹಾಗೂ ವಿ.ವಿ ಮಧ್ಯೆ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಿತ್ತು. ಈಗ ಮತ್ತೊಂದು ಹೆಜ್ಜೆ ಮುಂದಿಟ್ಟಿರುವ ಉನ್ನತ ಶಿಕ್ಷಣ ಇಲಾಖೆ, ವಿ.ವಿಗೆ ಇದ್ದ ಏಕಸ್ವಾಮ್ಯ ಅಧಿಕಾರವನ್ನು ಮೊಟಕುಗೊಳಿಸಿ ವಿಕೇಂದ್ರೀಕರಣ ಮಾಡಲು ಮುಂದಾಗಿದೆ. 2021ಕ್ಕೂ ಮೊದಲಿದ್ದ ಪದ್ಧತಿಯನ್ನು ಜಾರಿಗೊಳಿಸುವತ್ತ ಹೆಜ್ಜೆ ಇಟ್ಟಿದೆ.

ಪ್ರಸ್ತುತ ಕರ್ನಾಟಕದಲ್ಲಿ ದೂರ ಶಿಕ್ಷಣ ಕೋರ್ಸ್‌ಗಳನ್ನು ನಡೆಸುತ್ತಿರುವ ಏಕೈಕ ವಿಶ್ವವಿದ್ಯಾಲಯ ಕೆಎಸ್‌ಒಯು. ಇತರೆ ವಿಶ್ವವಿದ್ಯಾಲಯಗಳಿಗೂ ಕೋರ್ಸ್‌ಗಳ ಆರಂಭಕ್ಕೆ ಅವಕಾಶ ನೀಡಿದರೆ ಸಂಪನ್ಮೂಲ ಗಣನೀಯವಾಗಿ ಕಡಿಮೆಯಾಗಿ ಕೆಎಸ್‌ಒಯು ಆರ್ಥಿಕವಾಗಿ ದುರ್ಬಲಗೊಳ್ಳಲಿದೆ. ಅತ್ತ ಉಳಿದ ವಿಶ್ವವಿದ್ಯಾಲಯಗಳು ಚೇತರಿಕೆ ಕಾಣಲಿವೆ. ಸರ್ಕಾರದ ಮೇಲಿನ ಅನುದಾನದ ಅವಲಂಬನೆ ಕಡಿಮೆಯಾಗಲಿದೆ ಎನ್ನುವುದು ಉನ್ನತ ಶಿಕ್ಷಣ ಇಲಾಖೆಯ ಲೆಕ್ಕಾಚಾರ.

ಅರ್ಧಕ್ಕೇ ಓದು ತೊರೆದ ವಿವಾಹಿತೆಯರು, ಪದವಿ ಸ್ನಾತಕೋತ್ತರ ಪದವಿ ಪಡೆಯಲು ಸಾಧ್ಯವಾಗದವರು, ಸರ್ಕಾರಿ ಕೆಲಸ ಸಿಕ್ಕ ಕಾರಣಕ್ಕೆ ಉನ್ನತ ಶಿಕ್ಷಣ ಮೊಟಕುಗೊಳಿಸಿದವರು, ದುಡಿಯುತ್ತಲೇ ಪದವಿ ಪಡೆಯುವ ಕನಸುಗಳನ್ನು ಕಂಡವರಿಗೆ ಶೈಕ್ಷಣಿಕ ಆಸರೆ ನೀಡಿದ್ದು ಮೂರು ದಶಕಗಳ ಹಿಂದೆ ಆರಂಭವಾದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ. ನಂತರ ಬದಲಾದ ಕಾಲಘಟ್ಟದಲ್ಲಿ ಹಲವು ವಿಶ್ವವಿದ್ಯಾಲಯಗಳು ಸಾಂಪ್ರದಾಯಿಕ ಶಿಕ್ಷಣದ ಜತೆಗೆ ದೂರ ಶಿಕ್ಷಣ ನಿರ್ದೇಶನಾಲಯಗಳನ್ನೂ ತೆರೆದವು. ಇದರಿಂದ ಸ್ಥಳೀಯರಿಗೆ ಸುಲಭವಾಗಿ ಪದವಿ, ಸ್ನಾತಕೋತ್ತರ ಪದವಿ ಪಡೆಯಲು ಅವಕಾಶವಾಯಿತು.

ಅನುದಾನಕ್ಕಿಂತ ಹಲವು ಪಟ್ಟು ಆದಾಯ: ಮೈಸೂರು, ಬೆಂಗಳೂರು, ಶಿವಮೊಗ್ಗ, ಮಂಗಳೂರು ಮತ್ತು ಧಾರವಾಡ ವಿಶ್ವವಿದ್ಯಾಲಯಗಳು ದೂರ ಶಿಕ್ಷಣವನ್ನು ನೀಡುತ್ತಿದ್ದವು. ವಿಶ್ವವಿದ್ಯಾಲಯದ ಹೊರಗೂ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು 30ರಿಂದ 40 ಕೋರ್ಸ್‌ಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ನೀಡುತ್ತಿದ್ದವು. ಕುವೆಂಪು ವಿಶ್ವವಿದ್ಯಾಲಯ ಮತ್ತೊಂದು ಹೆಜ್ಜೆ ಮುಂದೆ ಹೋಗಿ ರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಎನ್‌ಐಐಟಿ) ಜತೆ ಒಪ್ಪಂದ ಮಾಡಿಕೊಂಡು ದೂರ ಶಿಕ್ಷಣದಲ್ಲಿ ಕಂಪ್ಯೂಟರ್ ಸೈನ್ಸ್ ಪದವಿ ಆರಂಭಿಸಿತ್ತು. ಈ ಕೋರ್ಸ್‌ಗಳಲ್ಲಿ ಪದವಿ ಪಡೆದ ಶೇ 90ರಷ್ಟು ವಿದ್ಯಾರ್ಥಿಗಳು ಉದ್ಯೋಗದ ಅವಕಾಶ ಪಡೆದರು. ಕೆಎಸ್‌ಒಯುಗೆ ಪರ್ಯಾಯವಾಗಿ ಕೋರ್ಸ್‌ಗಳನ್ನು ನೀಡುತ್ತಿದ್ದ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು ದೂರ ಶಿಕ್ಷಣದಿಂದಲೇ ವಾರ್ಷಿಕವಾಗಿ ಗಳಿಸುತ್ತಿದ್ದ ಆದಾಯ ₹5 ಕೋಟಿಯಿಂದ ₹40 ಕೋಟಿಯವರೆಗೂ ಇತ್ತು. ಕುವೆಂಪು ವಿಶ್ವವಿದ್ಯಾಲಯ ಪ್ರತಿ ವರ್ಷ ₹45 ಕೋಟಿ ಆದಾಯ ಗಳಿಸುತ್ತಿತ್ತು. ಇದು ಸರ್ಕಾರ ನೀಡುತ್ತಿದ್ದ ವಾರ್ಷಿಕ ಅನುದಾನಕ್ಕಿಂತ 10 ಪಟ್ಟು ಅಧಿಕ.

ಕೆಎಸ್‌ಒಯು ಬಲಪಡಿಸಲು ಆದೇಶ: ಇತರ ವಿಶ್ವವಿದ್ಯಾಲಯಗಳಲ್ಲಿನ ದೂರ ಶಿಕ್ಷಣ ನಿರ್ದೇಶನಾಲಯಗಳಿಂದಾಗಿ ವಿದ್ಯಾರ್ಥಿಗಳ ಕೊರತೆ ಎದುರಿಸುತ್ತಿದ್ದ ಕೆಎಸ್‌ಒಯು ಬಲಪಡಿಸಲು ನಿರ್ಧರಿಸಿದ್ದ ಅಂದಿನ ಬಿಜೆಪಿ ನೇತೃತ್ವದ ಸರ್ಕಾರ 2021ರಲ್ಲಿ ಮುಕ್ತ ಮತ್ತು ದೂರ ಶಿಕ್ಷಣ ನೀಡುವ ಅಧಿಕಾರವನ್ನು ಕೆಎಸ್‌ಒಯುಗೆ ಮಾತ್ರ ಸೀಮಿತಗೊಳಿಸಿ ಆದೇಶ ಹೊರಡಿಸಿತ್ತು. ಕೆಲ ವಿಶ್ವವಿದ್ಯಾಲಯಗಳು ಆದೇಶ ಪ್ರಶ್ನಿಸಿ ಕೋರ್ಟ್ ಮೊರೆ ಹೋದರೂ ಪ್ರಯೋಜನ ಆಗಿರಲಿಲ್ಲ.

'ಏಕಾತ್ಮ ಮಾನವ ದರ್ಶನ' ತಂದ ಸಂಕಷ್ಟ

ಇದೇ ವರ್ಷದ ಮಾರ್ಚ್ 25ರಿಂದ 27ರವರೆಗೆ ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ಕೆಎಸ್‌ಒಯು ಆವರಣದಲ್ಲಿ 'ಏಕಾತ್ಮ ಮಾನವ ದರ್ಶನ' ಅಂತರರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನ ನಡೆದಿತ್ತು.

ಕಾರ್ಯಕ್ರಮಕ್ಕೆ ರಾಜ್ಯಪಾಲರು ಹಾಗೂ ಕೇಂದ್ರ ಸಚಿವರನ್ನು ಆಹ್ವಾನಿಸಲಾಗಿತ್ತು. ಆದರೆ, ಉನ್ನತ ಶಿಕ್ಷಣ ಸಚಿವರನ್ನು ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘಿಸಿದ ಕಾರಣಕ್ಕೆ ಕಾರ್ಯಕ್ರಮ ರದ್ದುಗೊಳಿಸಲು ರಾಜ್ಯ ಸರ್ಕಾರ ಆದೇಶಿಸಿತ್ತು. ಅದನ್ನು ಧಿಕ್ಕರಿಸಿದ್ದ ಕುಲಪತಿ ಶರಣಪ್ಪ ಹಲಸೆ ಕಾರ್ಯಕ್ರಮಕ್ಕೆ ಸಹಕಾರ ನೀಡಿದ್ದರು. ನಂತರ ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು. 'ವಿಶ್ವವಿದ್ಯಾಲಯವು ಸ್ಥಳವನ್ನು ಬಾಡಿಗೆ ಆಧಾರದಲ್ಲಿ ನೀಡಿದೆ' ಎಂದು ಕುಲಪತಿ ಉತ್ತರ ನೀಡಿದ್ದರು. ನಂತರ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲು ಉನ್ನತ ಶಿಕ್ಷಣ ಇಲಾಖೆ ಪತ್ರ ಬರೆದಿತ್ತು.

ಕೆಎಸ್‌ಒಯು ಕುಲಪತಿ ವಿರುದ್ಧ ಕ್ರಮ ಹಾಗೂ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಆಕ್ಷೇಪ ವ್ಯಕ್ತಪಡಿಸಿದ್ದರು.

> **ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಆಯಾ ವ್ಯಾಪ್ತಿಯ ಒಳಗೆ ದೂರ ಶಿಕ್ಷಣ ಕೋರ್ಸ್‌ಗಳನ್ನು ಆರಂಭಿಸಲು ಅನುಮತಿ ನೀಡಲಾಗುವುದು. ಇದರಿಂದ ಸ್ಥಳೀಯ ವಿದ್ಯಾರ್ಥಿಗಳ ಪದವಿ ಶಿಕ್ಷಣದ ಪ್ರಮಾಣ ಹೆಚ್ಚಾಗಲಿದೆ**
> **ಎಂ.ಸಿ.ಸುಧಾಕರ್,** ಉನ್ನತ ಶಿಕ್ಷಣ ಸಚಿವ

> **ದೂರ ಶಿಕ್ಷಣ ಕೋರ್ಸ್‌ಗಳಿಗೆ ಅನುಮತಿ ನೀಡಿದರೆ ವಿಶ್ವವಿದ್ಯಾಲಯಗಳು ಆರ್ಥಿಕವಾಗಿ ಬಲಗೊಳ್ಳುತ್ತವೆ. ಮೂಲ ಸೌಕರ್ಯ ಸಾಧ್ಯವಾಗಲಿದೆ. ಅವಲಂಬನೆಯೂ ತಗ್ಗಲಿದೆ**
> **ಪ್ರೊ.ಎಂ.ವೆಂಕಟೇಶ್ವರಲು,** ಕುಲಪತಿ, ತುಮಕೂರು ವಿವಿ

> **ರಾಜ್ಯ ಸರ್ಕಾರದ ಸೂಚನೆಯನ್ನು ಧಿಕ್ಕರಿಸಿ ನಡೆಯುವ ಯಾವುದೇ ವಿಶ್ವವಿದ್ಯಾಲಯದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಹಾಗಾಗಿ, ಕೆಎಸ್‌ಒಯು ಏಕಸ್ವಾಮ್ಯವನ್ನು ಮೊಟಕುಗೊಳಿಸಲು ಒತ್ತಾಯಿಸಿದ್ದೇವೆ**
> **ರಮೇಶ್ ಬಾಬು,** ವಿಧಾನಪರಿಷತ್ ಸದಸ್ಯ

ಮಕ್ಕಳ ಸಂತೆ

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ಕಲಬುರಗಿ ರಂಗಾಯಣ ವತಿಯಿಂದ ಬೇಸಿಗೆ ರಂಗ ತರಬೇತಿ ಶಿಬಿರದಲ್ಲಿ ಮಂಗಳವಾರ 'ಮಕ್ಕಳ ಸಂತೆ' ನಡೆಯಿತು

1 ರಸ್ತೆ ಗುಂಡಿ ದುರಸ್ತಿಗೆ ₹1 ಲಕ್ಷ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ರಸ್ತೆಯ ಪ್ರತಿಯೊಂದು ಗುಂಡಿ ಮುಚ್ಚಲು ₹1 ಲಕ್ಷ ವೆಚ್ಚ ಮಾಡಲಾಗಿದೆ. ಆದರೆ, ಹೆಬ್ಬಾಳ ಕ್ಷೇತ್ರ ವ್ಯಾಪ್ತಿಯಲ್ಲಿ ₹1,231 ವೆಚ್ಚದಲ್ಲೇ ಗುಂಡಿಯೊಂದನ್ನು ಮುಚ್ಚಲಾಗಿದೆ.

ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಪ್ರತಿ ಗುಂಡಿ ಮುಚ್ಚಲು ಒಂದೊಂದು ರೀತಿಯಲ್ಲಿ ಹಣವನ್ನು ವೆಚ್ಚ ಮಾಡಲಾಗಿದೆ. ಆದರೆ, ಜಯನಗರ ಹಾಗೂ ಪದ್ಮನಾಭ ನಗರ ಕ್ಷೇತ್ರಗಳಲ್ಲಿ ಕ್ರಮವಾಗಿ 565 ಮತ್ತು 664 ಗುಂಡಿಗಳನ್ನು ದುರಸ್ತಿ ಮಾಡಿದ್ದರೂ 1 ಪೈಸೆಯೂ ವೆಚ್ಚವಾಗಿಲ್ಲ.

ಪ್ರತಿಯೊಂದು ವಿಧಾನಸಭೆ ಕ್ಷೇತ್ರ, ಪ್ರತಿ ನಗರ ಪಾಲಿಕೆಗಳ ವ್ಯಾಪ್ತಿಯ ರಸ್ತೆಗಳಲ್ಲಿ ಪ್ರತಿಯೊಂದು ಗುಂಡಿ ಮುಚ್ಚಲು ಸಾವಿರಾರು ರೂಪಾಯಿ ವೆಚ್ಚ ಮಾಡಲಾಗಿದೆ.

4A

41,150 ಒಟ್ಟು ರಸ್ತೆಗುಂಡಿಗಳು



39,887 ಮುಚ್ಚಲಾಗಿರುವ ಗುಂಡಿಗಳು (6 ತಿಂಗಳಲ್ಲಿ)

₹33.85 ಕೋಟಿ ಗುಂಡಿ ಮುಚ್ಚಲು ಒಟ್ಟು ವೆಚ್ಚ

₹8,486 ಸರಾಸರಿ ಒಂದು ಗುಂಡಿ ದುರಸ್ತಿ ವೆಚ್ಚ

₹1 ಲಕ್ಷ, ಚಾಮರಾಜಪೇಟೆ ಕ್ಷೇತ್ರದಲ್ಲಿ ಪ್ರತಿ ಗುಂಡಿ ಮುಚ್ಚಲು ಮಾಡಲಾಗಿರುವ ವೆಚ್ಚ

ಇಂಧನ ಬೆಲೆ ಹೆಚ್ಚಳ ಇಲ್ಲ: ಕೇಂದ್ರ



ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚಿಸುವ ಆಲೋಚನೆಯನ್ನು ಸರ್ಕಾರ ಹೊಂದಿಲ್ಲ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಮಂಗಳವಾರ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಭಾಗವಾದ ಮತದಾನವು ಬುಧವಾರ ಪೂರ್ಣಗೊಂಡ ನಂತರ ಇಂಧನ ಬೆಲೆ ಹೆಚ್ಚಿಸಲಾಗುತ್ತದೆ ಎಂಬ ಊಹಾಪೋಹಗಳನ್ನು ಅವರು ಅಲ್ಲಗಳೆದಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಯುದ್ಧ ಆರಂಭವಾದ ನಂತರದಲ್ಲಿ ಕಚ್ಚಾ ತೈಲದ ಬೆಲೆಯು ಶೇಕಡ 50ರಷ್ಟಕ್ಕಿಂತ ಹೆಚ್ಚಾಗಿದ್ದರೂ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಆಗಿಲ್ಲ.

10

'ಇರಾನ್ ಪ್ರಸ್ತಾವ ಪರಿಶೀಲನೆ'

ವಾಷಿಂಗ್ಟನ್/ದುಬೈ (ಎಪಿ/ಎಎಫ್‌ಪಿ): ಅಣ್ವಸ್ತ್ರ ಕಾರ್ಯಕ್ರಮವನ್ನು ಕೈಬಿಡದೇ, ಕೆಲ ಷರತ್ತುಗಳಿಗೆ ಒಳಪಟ್ಟು ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸುವ ಇರಾನ್‌ನ ಪ್ರಸ್ತಾವವನ್ನು ಪರಿಶೀಲಿಸಲಾಗುತ್ತಿದೆ ಎಂದು ಶ್ವೇತಭವನ ಮಂಗಳವಾರ ಹೇಳಿದೆ.

'ಈ ಪ್ರಸ್ತಾವದ ಬಗ್ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅತೃಪ್ತಿ ಹೊಂದಿದ್ದು, ಇದನ್ನು ಒಪ್ಪಿಕೊಳ್ಳುವ ಸಾಧ್ಯತೆ ಕಡಿಮೆ' ಎಂದು ಸಿಎನ್‌ಎನ್ ಸುದ್ದಿಸಂಸ್ಥೆ ವರದಿ ಮಾಡಿದೆ.

'ಅಣ್ವಸ್ತ್ರ ಕಾರ್ಯಕ್ರಮದ ವಿಚಾರವನ್ನು ಇತ್ಯರ್ಥಪಡಿಸದೆ ಹೊರ್ಮುಜ್ ಜಲಸಂಧಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಟ್ರಂಪ್ ಸಿದ್ಧರಿಲ್ಲ' ಎಂದು ಮೂಲಗಳನ್ನು ಉಲ್ಲೇಖಿಸಿ ಸಿಎನ್‌ಎನ್ ಹೇಳಿದೆ. ಹೀಗಾಗಿ, ಪಶ್ಚಿಮ ಏಷ್ಯಾ ಯುದ್ಧಕ್ಕೆ ಅಂತ್ಯ ಹಾಡುವ ಪ್ರಯತ್ನಗಳ ಮೇಲೆ ಅನಿಶ್ಚಿತತೆಯ ಕರಿನೆರಳು ಮುಂದುವರಿದಂತಾಗಿದೆ.

ಇರಾನ್‌ನ ಪ್ರಸ್ತಾವಗಳನ್ನು ಪಾಕಿಸ್ತಾನದ ಮೂಲಕ ಅಮೆರಿಕಕ್ಕೆ ರವಾನಿಸಿದ ಬಳಿಕ, ರಾಷ್ಟ್ರೀಯ ಭದ್ರತೆ ಮತ್ತು ವಿದೇಶಾಂಗ ನೀತಿಯ ಉನ್ನತ ಅಧಿಕಾರಿಗಳು ಹಾಗೂ ಸಲಹೆಗಾರರೊಂದಿಗೆ ಡೊನಾಲ್ಡ್ ಟ್ರಂಪ್ ಅವರು ಸೋಮವಾರ ಚರ್ಚಿಸಿದ್ದಾರೆ ಎಂದೂ ಮೂಲಗಳು ಹೇಳಿವೆ.

ಪ್ರಸ್ತಾವಿತ ಯೋಜನೆಯಂತೆ, ಇರಾನ್ ಹೊರ್ಮುಜ್ ಜಲಸಂಧಿಯ ಮೇಲಿನ ತನ್ನ ಬಿಗಿ ಹಿಡಿತವನ್ನು ಸಡಿಲಗೊಳಿಸಲಿದೆ. ಅಮೆರಿಕವು ಇರಾನ್ ಬಂದರುಗಳ ಮೇಲೆ ಹೇರಿರುವ ದಿಗ್ಬಂಧನವನ್ನು ತೆರವುಗೊಳಿಸಬೇಕು. ಇರಾನ್‌ನ ಅಣ್ವಸ್ತ್ರ ಕಾರ್ಯಕ್ರಮದಂತಹ ಸಂಕೀರ್ಣ ವಿಷಯಗಳ ಕುರಿತು ಮಾತುಕತೆಗಳು ಮುಂದುವರಿಯಬೇಕು.

ನಿರ್ಣಾಯಕ ಪರಿಹಾರ ಅಗತ್ಯ



ಇರಾನ್ ಮುಂದಿಟ್ಟಿರುವ ಪ್ರಸ್ತಾವದಂತೆ ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸುವ ಬಗ್ಗೆ ಕತಾರ್ ಎಚ್ಚರಿಕೆ ನೀಡಿದೆ.

'ಈ ಜಲಮಾರ್ಗದ ಬಿಕ್ಕಟ್ಟಿಗೆ ನಿರ್ಣಾಯಕ ಪರಿಹಾರ ಕಂಡುಹಿಡಿಯುವುದು ಅಗತ್ಯ. ಇಲ್ಲದೇ ಹೋದಲ್ಲಿ ಸಂಘರ್ಷ ಮುಂದುವರಿಯಲಿದೆ. ಯಾವುದೇ ಕ್ಷಣದಲ್ಲಿ ಆಕ್ರಮಣಗಳು ಮತ್ತೆ ಆರಂಭವಾಗಬಹುದು' ಎಂದು ಕತಾರ್‌ನ ವಿದೇಶಾಂಗ ಸಚಿವಾಲಯ ವಕ್ತಾರ ಮಜೀದ್ ಅಲ್ ಅನ್ಸಾರಿ ಹೇಳಿದ್ದಾರೆ. ಟ್ರಂಪ್ ಅವರು ಇರಾನ್ ಪ್ರಸ್ತಾವಗಳನ್ನು ಒಪ್ಪದೇ ಇರುವುದಕ್ಕೆ ಕತಾರ್‌ನ ಈ ಎಚ್ಚರಿಕೆಯೂ ಒಂದು ಕಾರಣ ಎನ್ನಲಾಗುತ್ತಿದೆ.

ಡಿಜಿಟಲ್ ಅರೆಸ್ಟ್ ವಿರುದ್ಧ ಕ್ರಮ: ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದ ಕೇಂದ್ರ

9,400 ವಾಟ್ಸ್‌ಆ್ಯಪ್ ಖಾತೆ ಸ್ಥಗಿತ



ನವದೆಹಲಿ (ಪಿಟಿಐ): 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ನಡೆದಿದ್ದ ಆನ್‌ಲೈನ್ ವಂಚನೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ 9,400 ಖಾತೆಗಳನ್ನು ವಾಟ್ಸ್‌ಆ್ಯಪ್ ಸ್ಥಗಿತಗೊಳಿಸಿದೆ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದೆ.

ಇದರ ಜೊತೆಗೆ ದೂರಸಂಪರ್ಕ ನಿಯಂತ್ರಕರು, ಸೇವಾ ಪೂರೈಕೆದಾರರು, ಆರ್‌ಬಿಐ, ಟೆಕ್ ಸಂಸ್ಥೆಗಳು, ಸಿಬಿಐ ಸಹ ಹೆಚ್ಚುತ್ತಿರುವ 'ಡಿಜಿಟಲ್ ಅರೆಸ್ಟ್' ಪ್ರಕರಣಗಳಿಗೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳುತ್ತಿವೆ ಎಂದು ತಿಳಿಸಿದೆ.

ದೇಶದಲ್ಲಿ ನಡೆಯುತ್ತಿರುವ ಡಿಜಿಟಲ್ ವಂಚನೆಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವಂತೆ ಸುಪ್ರೀಂ ಕೋರ್ಟ್ ಫೆಬ್ರುವರಿ 9ರಂದು ನಿರ್ದೇಶನ ನೀಡಿತ್ತು. ಈ ಬೆನ್ನಲ್ಲೇ, ಕೇಂದ್ರ ಗೃಹ ಸಚಿವಾಲಯದ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರವು ಈ ಕುರಿತು ಸಮಗ್ರವಾದ ಮಾಹಿತಿಯನ್ನು ಒಳಗೊಂಡ ಸ್ಥಿತಿಗತಿ ವರದಿಯನ್ನು ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ.

'ಡಿಜಿಟಲ್ ಅರೆಸ್ಟ್' ಸೇರಿದಂತೆ ಆನ್‌ಲೈನ್ ವಂಚನೆಗಳ ಬಗ್ಗೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ನೇತೃತ್ವದ ನ್ಯಾಯಪೀಠವು, ಇಂಥ ಪ್ರಕರಣಗಳನ್ನು ತಡೆಗಟ್ಟುವ ಸಂಬಂಧ ಚೌಕಟ್ಟು ರೂಪಿಸಲು ಜಂಟಿಯಾಗಿ ಸಭೆ ಸೇರುವಂತೆ ಆರ್‌ಬಿಐ, ದೂರಸಂಪರ್ಕ ಇಲಾಖೆ ಮತ್ತು ಸಂಬಂಧಿತ ಸಂಸ್ಥೆಗಳಿಗೆ ಸೂಚಿಸಿತ್ತು.

ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರ ಮೂಲಕ ಸದ್ಯ ಸಲ್ಲಿಸಿರುವ ವರದಿಯಲ್ಲಿ, ಟೆಕ್‌ದೈತ್ಯ ವಾಟ್ಸ್‌ಆ್ಯಪ್ ಈ ವರ್ಷ ಜನವರಿಯಿಂದ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸಲಾಗಿದೆ.

ವರದಿಯ ಇತರ ಅಂಶಗಳು

- ಬಳಕೆದಾರರ ರಕ್ಷಣೆಗಾಗಿ ಲೋಗೊ ಪತ್ತೆಹಚ್ಚುವಿಕೆ ವ್ಯವಸ್ಥೆಯನ್ನು ವಾಟ್ಸ್‌ಆ್ಯಪ್ ಜಾರಿ ಮಾಡಿದೆ. ಇದು ಡಿಪಿಯಲ್ಲಿ (ಡಿಸ್ಪ್ಲೇ ಪಿಕ್ಚರ್) ಪೊಲೀಸ್ ಮತ್ತು ಸರ್ಕಾರದ ಅಧಿಕೃತ ಚಿಹ್ನೆ ಇರುವ ಖಾತೆಗಳನ್ನು ಗುರುತಿಸಿ ಅದನ್ನು ಅಳಿಸಿಹಾಕಲಿದೆ
- ಹೊಸದಾಗಿ ರಚನೆಯಾದ ಖಾತೆಯಿಂದ ಕರೆ ಬಂದ ತಕ್ಷಣ ಬಳಕೆದಾರರನ್ನು ಎಚ್ಚರಿಸುವ ಹೊಸ ವ್ಯವಸ್ಥೆಯನ್ನು ವಾಟ್ಸ್‌ಆ್ಯಪ್ ನೀಡಿದೆ
- ಸಂಶಯಾಸ್ಪದ, ಅಪರಿಚಿತ ಕರೆಗಳ ಪ್ರೊಫೈಲ್ ಫೋಟೊವನ್ನು ಸ್ವಯಂಚಾಲಿತವಾಗಿ ಮರೆಮಾಡುವ ವ್ಯವಸ್ಥೆಯನ್ನು ಅಳವಡಿಸಿದೆ
- ನಾಲ್ಕರಿಂದ ಆರು ವಾರಗಳ ಒಳಗಾಗಿ ಸಿಮ್ ಬೈಂಡಿಂಗ್ ಮೆಕ್ಯಾನಿಸಮ್ (ನೋಂದಾಯಿತ ಸಿಮ್ ಕಾರ್ಡ್ ಸಕ್ರಿಯವಾಗಿದ್ದಾಗ ಮಾತ್ರ ಕಾರ್ಯನಿರ್ವಹಿಸುವ ವ್ಯವಸ್ಥೆ) ಅನುಷ್ಠಾನಗೊಳಿಸುವುದಾಗಿ ವಾಟ್ಸ್‌ಆ್ಯಪ್ ಭರವಸೆ ನೀಡಿದೆ

56,432 ಹುದ್ದೆಗಳಿಗೆ ಭರ್ತಿ ದಾರಿ ಸುಗಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಿ ಆದೇಶ ಹೊರಬಿದ್ದ ಬೆನ್ನಲ್ಲೇ, ಈಗಾಗಲೇ ಅನುಮೋದನೆ ನೀಡಿರುವ 56,432 ಹುದ್ದೆಗಳ ನೇರ ನೇಮಕಾತಿಗೆ ತುರ್ತು ಕ್ರಮಗಳನ್ನು ಕೈಗೊಳ್ಳುವಂತೆ ನೇಮಕಾತಿ ಪ್ರಾಧಿಕಾರಗಳಿಗೆ ರಾಜ್ಯ ಸರ್ಕಾರ ಸೂಚನೆ ನೀಡಿದೆ.

ಪರಿಶಿಷ್ಟ ಜಾತಿಗೆ ಲಭ್ಯ ಶೇ 15 ಮೀಸಲಾತಿಯಲ್ಲಿ ಪ್ರವರ್ಗ 'ಎ' (ಎಡಗೈ ಸಂಬಂಧಿತ ಜಾತಿಗಳು), ಪ್ರವರ್ಗ 'ಬಿ' (ಬಲಗೈ ಸಂಬಂಧಿತ ಜಾತಿಗಳು) ಮತ್ತು ಪ್ರವರ್ಗ 'ಸಿ'ಗೆ (ಸ್ಪೃಶ್ಯ, ಅತಿ ಸೂಕ್ಷ್ಮ, ಸೂಕ್ಷ್ಮ ಅಲೆಮಾರಿ ಜಾತಿಗಳು) ಕ್ರಮವಾಗಿ ಶೇ 5.25, 5.25, 4.50 ಪ್ರಮಾಣದಲ್ಲಿ ಒಳ ಮೀಸಲಾತಿ ನೀಡಲು ಏ.24ರಂದು ನಡೆದ ವಿಶೇಷ ಸಚಿವ ಸಂಪುಟ ಸಭೆ ತೀರ್ಮಾನ ಮಾಡಿತ್ತು. ಈ ಕುರಿತು ಅಧಿಕೃತ ಆದೇಶವನ್ನು ಸರ್ಕಾರ ಹೊರಡಿಸಿದೆ. ಹೀಗಾಗಿ, ನೇಮಕಾತಿಗೆ ಹುದ್ದೆ ಅಡೆ ತಡೆ ಸದ್ಯಕ್ಕೆ ನಿವಾರಣೆಯಾದಂತಾಗಿದೆ.

2025ರ ಸೆ. 3ರಂದು ಹೊರಡಿಸಿದ್ದ ಆದೇಶದ ಅನ್ವಯ ಒಳ ಮೀಸಲಾತಿ ಅಳವಡಿಸಿಕೊಂಡು ನೇಮಕಾತಿ ಪ್ರಕ್ರಿಯೆಯ ಹಂತದಲ್ಲಿರುವ ಅಥವಾ 2026ರ ಫೆ. 27ರ ಆದೇಶದ ಅನ್ವಯ ಒಳ ಮೀಸಲಾತಿ ಅಳವಡಿಸದೇ ಹೊರಡಿಸಿರುವ ನೇಮಕಾತಿ ಅಧಿಸೂಚನೆಗಳನ್ನು ಹಿಂಪಡೆಯಬೇಕು. ಅದರ ಬದಲಿಗೆ, ಪ್ರವರ್ಗ 'ಎ', ಪ್ರವರ್ಗ 'ಬಿ', ಪ್ರವರ್ಗ 'ಸಿ'ಗೆ ಕ್ರಮವಾಗಿ ಶೇ 5.25, 5.25, 4.50 ಒಳ ಮೀಸಲಾತಿ ಅಳವಡಿಸಿ ಪರಿಷ್ಕೃತ ನೇಮಕಾತಿ ಅಧಿಸೂಚನೆಯನ್ನು ತಕ್ಷಣ ಹೊರಡಿಸಬೇಕು ಎಂದೂ ಸರ್ಕಾರ ನಿರ್ದೇಶನ ನೀಡಿದೆ.

ಆದೇಶದಲ್ಲಿ ಏನಿದೆ?: ನೇಮಕಾತಿಗಳಲ್ಲಿ ಒಳ ಮೀಸಲಾತಿ ಜಾರಿಗೊಳಿಸಲು 400 ರೋಸ್ಟರ್ ಬಿಂದುಗಳ ವರ್ತುಲಗಳನ್ನು ಪಾಲಿಸಲಾಗುವುದು. ಯಾವುದೇ ವೃಂದದಲ್ಲಿ ಪರಿಶಿಷ್ಟ ಜಾತಿಯ ರೋಸ್ಟರ್ ಬಿಂದುಗಳು ಮೂರಕ್ಕಿಂತ ಕಡಿಮೆ ಇದ್ದರೆ, ಪರಿಶಿಷ್ಟ ಜಾತಿಗೆ ಮೀಸಲಾದ ಆ ಹುದ್ದೆಗಳನ್ನು 'ಪರಿಶಿಷ್ಟ ಜಾತಿ (ಸಾಮಾನ್ಯ)' ಎಂದು ಪರಿಗಣಿಸಿ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಆದೇಶ ವಿವರಿಸಿದೆ.

10

ಚಿನಕುರುಳಿ ಪ್ರಕಾಶ್ ಶೆಟ್ಟಿ



ಡೋಲಾ ಎನ್‌ಸಿಬಿ ವಶಕ್ಕೆ: ಅಮಿತ್ ಶಾ

ನವದೆಹಲಿ (ಪಿಟಿಐ): ಮಾದಕವಸ್ತು ಕಳ್ಳಸಾಗಣೆದಾರ ಮೊಹಮ್ಮದ್ ಸಲೀಂ ಡೋಲಾನನ್ನು (59) ಎನ್‌ಸಿಬಿ ಟರ್ಕಿಯಿಂದ ಕರೆತಂದಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

ವಿವರ 11

ಬಿಸಿಲು: ನರೇಗಾ ಕಾರ್ಮಿಕ ಸಾವು

ರಾಯಚೂರು: ಯಾಪಲದಿನ್ನಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸೋಮವಾರ ಬಿಸಿಲಿನಲ್ಲಿ ಮನರೇಗಾ ಕೂಲಿ ಕಾರ್ಮಿಕ ಹುಸೇನಪ್ಪ ಮಡಿವಾಳ (50) ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ವಿವರ 6

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಧ್ಯಾಹ್ನ ಅಥವಾ ಸಂಜೆ ವೇಳೆಗೆ ಮಳೆಯಾಗುವ ಸಾಧ್ಯತೆ ಇದೆ

ಚಿಟಿಕೆ ಸುದ್ದಿ

ದಾಬಸ್ ಪೇಟೆ ಸುತ್ತಮುತ್ತ ಮಳೆ

ದಾಬಸ್ ಪೇಟೆ: ದಾಬಸ್ ಪೇಟೆಯ ಸುತ್ತಮುತ್ತ ಗುಡುಗು, ಮಿಂಚು ಹಾಗೂ ಗಾಳಿಯೊಂದಿಗೆ ಮಂಗಳವಾರ ಸಾಧಾರಣ ಮಳೆಯಾಯಿತು.

ನಾಲ್ಕಾರು ತಿಂಗಳಿಂದ ಮಳೆ ಇಲ್ಲದೆ ಕಾದಿದ್ದ ಭೂಮಿಗೆ ಈ ಮಳೆ ತಂಪೆರೆಯಿತು. ಮಂಗಳವಾರ ಸಂಜೆ ನಾಲ್ಕು ಗಂಟೆಗೆ ಆರಂಭವಾದ ಮಳೆ ವಿರಾಮಗಳೊಂದಿಗೆ, ಸಂಜೆ 7ರವರೆಗೆ ತುಂತುರು ಮಳೆಯಾಯಿತು.

ಅರ್ಜಿ ಆಹ್ವಾನ

ಬೆಂಗಳೂರು: ಅಖಿಲ ಭಾರತೀಯ ಮರಾಠ ಮಹಾಸಂಘವು 'ರಾಜಮಾತಾ ಜೀಜಾಬಾಯಿ ರಾಷ್ಟ್ರೀಯ ಪ್ರಶಸ್ತಿ'ಗೆ ಅರ್ಜಿ ಆಹ್ವಾನಿಸಿದೆ.

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹಿಳಾ ಸಾಧಕರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಆಸಕ್ತರು dr.mhrdalvi@gmail.com ಅಥವಾ 99001 36495, 97429 35551ಗೆ ಸಂಪರ್ಕಿಸಿ, ಅರ್ಜಿ ಸಲ್ಲಿಸಬಹುದು. ಜುಲೈ 10ರಂದು ನಡೆಯುವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ.ಎಚ್.ಆರ್. ದಳವಿ ತಿಳಿಸಿದ್ದಾರೆ.

'ದೌರ್ಜನ್ಯ ಪ್ರಕರಣ: ಶಿಕ್ಷೆ ಪ್ರಮಾಣ ಕಡಿಮೆ'

ಭೂ ರಹಿತರಿಗೆ ಭೂಮಿ ಹಂಚಿಕೆ ಮಾಡಲು ಸರ್ಕಾರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ದಲಿತರ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿದ್ದು, ಪ್ರತಿ 40 ನಿಮಿಷಕ್ಕೊಂದು ಪ್ರಕರಣ ದಾಖಲಾಗುತ್ತಿದೆ. ಆದರೆ, ಶಿಕ್ಷೆಯ ಪ್ರಮಾಣ ಶೇಕಡ 32ರಿಂದ 34ರಷ್ಟು ಇದೆ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ (ಯುಎನ್‌ಎಚ್‌ಆರ್‌ಸಿ) ವಿಷಯ ತಜ್ಞೆ ಕೆ.ಪಿ.ಅಶ್ವಿನಿ ಹೇಳಿದರು.

ನಗರದಲ್ಲಿ ಮಂಗಳವಾರ ಪಯಣ ಕಾನೂನು ವೇದಿಕೆ, ಸ್ವ ಜನಾಂದೋಲನ ಕರ್ನಾಟಕ ಮತ್ತು ಸಂವಿಧಾನ ಸಂರಕ್ಷಣಾ ವೇದಿಕೆ, ಚಿಕ್ಕಮಗಳೂರು ಜಂಟಿಯಾಗಿ ಆಯೋಜಿಸಿದ್ದ 'ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡಗಳ (ಎಸ್‌ಟಿ) ಸಮುದಾಯಗಳ ಕಲ್ಯಾಣಕ್ಕೆ ಸಂಬಂಧಿಸಿದ ಕಾನೂನುಗಳ ಉತ್ತಮ ಅನುಷ್ಠಾನದ ಕಡೆಗೆ' ಸಮಾಲೋಚನಾ ಸಭೆಯಲ್ಲಿ ಮಾತನಾಡಿದರು.

ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿವೆ. ಆದರೆ, ಸಾಕ್ಷ್ಯಾಧಾರಗಳ ಕೊರತೆ ಕಾರಣಕ್ಕೆ ಆರೋಪಿಗಳು ಖುಲಾಸೆ ಆಗುತ್ತಿದ್ದಾರೆ. ಹಾಗಾಗಿ ಶಿಕ್ಷೆ ಪ್ರಮಾಣ ಕಡಿಮೆ ಆಗುತ್ತಿದೆ. ಹಾಗೆಂದ ಮಾತ್ರಕ್ಕೆ ಸುಳ್ಳು ಪ್ರಕರಣ ದಾಖಲಿಸಲಾಗುತ್ತಿದೆ ಎಂದು ಅಪಪ್ರಚಾರ ಮಾಡುವುದು ಸರಿಯಲ್ಲ ಎಂದು ಹೇಳಿದರು.

'ಉತ್ತರ ಭಾರತಕ್ಕೆ ಹೋಲಿಸಿದರೆ, ಕರ್ನಾಟಕದಲ್ಲಿ ಹಿಂದುಳಿದ ವರ್ಗದವರಿಗೆ ಕಾನೂನು ನೆರವು ಸಿಗುತ್ತಿದೆ. ಯಾವುದೇ ವಿಷಯದ ಬಗ್ಗೆ ಮಾತನಾಡಬೇಕಾದರೆ ದತ್ತಾಂಶ ಹೊಂದಿರಬೇಕು. ಸರ್ಕಾರ ಮತ್ತು ಶಿಕ್ಷಣ ಸಂಸ್ಥೆಗಳ ದತ್ತಾಂಶವನ್ನು ಅವಲಂಬಿಸಿದ್ದೇವೆ' ಎಂದರು.

'ಜಾತಿ ತಾರತಮ್ಯ ಗ್ರಾಮೀಣ ಪ್ರದೇಶದಲ್ಲಿ ಮಾತ್ರವಲ್ಲ, ನಗರ ಪ್ರದೇಶದಲ್ಲೂ ಇದೆ. ಜಾತಿ ತಾರತಮ್ಯ ಕಣ್ಣಿಗೆ ಕಾಣದಿರಬಹುದು. ಸಾಮಾಜಿಕ ಜಾಲತಾಣ, ವಿಶ್ವವಿದ್ಯಾಲಯಗಳಲ್ಲಿ ನೋಡಬಹುದು. ಜಾತಿ ನಿರ್ಮೂಲನೆ ಮಾಡಲು ನಮ್ಮ ಮನಸ್ಥಿತಿ ಬದಲಿಸಿಕೊಳ್ಳಬೇಕು' ಎಂದರು.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್.ಶಶಿಧರ ಶೆಟ್ಟಿ ಮಾತನಾಡಿ, 'ಜನರಿಗೆ ಮೊದಲು ಕಾನೂನು ಜಾಗೃತಿ ಮೂಡಿಸಬೇಕು. ಪ್ರಾಧಿಕಾರದ ವತಿಯಿಂದ 'ಜಾಗೃತಿ' ಯೋಜನೆ ಜಾರಿಗೆ ತರಲಾಗಿದೆ. ಸಂಘ ಸಂಸ್ಥೆಗಳು ಹಾಗೂ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಗ್ರಾಮ ಸಭೆಗಳಲ್ಲಿ ಕಾನೂನುಗಳ ಬಗ್ಗೆ ಮಾಹಿತಿ ಒದಗಿಸಲಾಗುತ್ತದೆ' ಎಂದು ವಿವರಿಸಿದರು.

ಮ್ಯಾನ್ಯುವಲ್ ಸ್ಕ್ಯಾವೆಂಜರ್ಸ್ ಕುರಿತ ಮರುಸಮೀಕ್ಷೆ ನಡೆಸಿ, ವರ್ಷದೊಳಗೆ ಪುನರ್ವಸತಿ ಕಲ್ಪಿಸಬೇಕು. ಎಸ್‌ಸಿ, ಎಸ್‌ಟಿ ಕುಟುಂಬಗಳಲ್ಲಿ ಶೇಕಡ 36ರಷ್ಟು ಕುಟುಂಬಗಳು ಭೂರಹಿತರಾಗಿದ್ದು, ಭೂಮಿ ಹಂಚಿಕೆ ಮಾಡಬೇಕು ಎಂದು ಸಭೆಯು ಸರ್ಕಾರವನ್ನು ಒತ್ತಾಯಿಸಿತು.

ಇದಕ್ಕೂ ಮುನ್ನ ಸಂಶೋಧಕ ಸಿದ್ಧಾರ್ಥ್ ಜೋಶಿ ಅವರು ಪರಿಶಿಷ್ಟ ಜಾತಿ, ಪಂಗಡಗಳ ಕಲ್ಯಾಣಕ್ಕೆ ಸಂಬಂಧಿಸಿದ ಕಾನೂನುಗಳ ಅನುಷ್ಠಾನ ಕುರಿತ ಸಂಶೋಧನಾ ವರದಿ ಮಂಡಿಸಿದರು.

ನಂತರ ನಡೆದ ಚರ್ಚೆಯಲ್ಲಿ ಸಫಾಯಿ ಕರ್ಮಚಾರಿ ಕಾವಲು ಸಮಿತಿ ಸಂಚಾಲಕ ಕೆ.ಬಿ.ಓಬಲೇಶ್, ಸಂಘಟನಾ ಸಂಚಾಲಕಿ ಎಂ.ಪದ್ಮಾ, ಪಿಟಿಸಿಎಲ್ ಕಾಯ್ದೆ ಭೂಮಿ ವಂಚಿತರ ಹೋರಾಟ ಸಮಿತಿ ಅಧ್ಯಕ್ಷ ಮಂಜುನಾಥ್, ಎಐಸಿಸಿಟಿಯು ಸಹ ಕಾರ್ಯದರ್ಶಿ ನಾಗರಾಜ ಪೂಜಾರ್, ತುಮಕೂರು ರೆಡ್ಸ್ ಸಂಸ್ಥೆ ಜಿಲ್ಲಾ ಸಂಯೋಜಕ ರಂಗಯ್ಯ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಡಿ.ರಂದೀಪ್, ಸಾವಿತ್ರಿ ಬಾಯಿ ಫುಲೆ ಮಹಿಳಾ ಸಂಘಟನೆ ಸಂಚಾಲಕಿ ಚಂದ್ರಮ್ಮ ಹಾಜರಿದ್ದರು.

> ದೌರ್ಜನ್ಯಕ್ಕೆ ಒಳಗಾದರೆ, ಅಸ್ಪೃಶ್ಯತೆ ಆಚರಿಸಿದರೆ ಪ್ರಾಧಿಕಾರ ಅಥವಾ ಸಂಬಂಧಪಟ್ಟವರ ಗಮನಕ್ಕೆ ತರಬೇಕು.
> **ಎಚ್.ಶಶಿಧರ ಶೆಟ್ಟಿ**, ಸದಸ್ಯ ಕಾರ್ಯದರ್ಶಿ, ಕಾನೂನು ಸೇವೆಗಳ ಪ್ರಾಧಿಕಾರ

> ಎಸ್‌ಸಿ, ಎಸ್‌ಟಿ ಸಮುದಾಯಗಳ ಸಾಂವಿಧಾನಿಕ ಹಕ್ಕುಗಳ ಉಲ್ಲಂಘನೆ ಪರಿಶೀಲಿಸಲು ಸರ್ಕಾರ ಡಿಸಿಆರ್‌ಇ ಪೊಲೀಸ್ ಠಾಣೆಗಳನ್ನು ಸ್ಥಾಪಿಸಿ, ಅಧಿಕಾರ ನೀಡಿದೆ.
> **ಅರುಣ್ ಜೆ. ಚಕ್ರವರ್ತಿ**, ಡಿಜಿಪಿ, ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ



ನಗರದ ಗಾಂಧಿ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಸಮಾಲೋಚನಾ ಸಭೆಯಲ್ಲಿ ಚಂದ್ರಮ್ಮ, ಕೆ.ಪಿ.ಅಶ್ವಿನಿ, ಎಚ್.ಶಶಿಧರ ಶೆಟ್ಟಿ, ಅರುಣ್ ಜೆ. ಚಕ್ರವರ್ತಿ, ಡಿ.ರಂದೀಪ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಅಂಗವಿಕಲ ಪ್ರಮಾಣಪತ್ರ ಸರ್ಕಾರಕ್ಕೆ ನೋಟಿಸ್

ಬೆಂಗಳೂರು: ದೊಡ್ಡಗುಬ್ಬಿ ಗ್ರಾಮದಲ್ಲಿನ 'ನ್ಯೂ ಆರ್ಕ್ ಮಿಷನ್ ಆಫ್ ಇಂಡಿಯಾ' ಸಂಸ್ಥೆಯಲ್ಲಿರುವ ಮನೋಸಾಮಾಜಿಕ ಅಂಗವಿಕಲರಿಗೆ ವೈಯಕ್ತಿಕ ಗುರುತಿನ ಚೀಟಿ ಹಾಗೂ ಅಂಗವಿಕಲ ಪ್ರಮಾಣ ಪತ್ರ ವಿತರಿಸಲು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಮಾನಸಿಕ–ಸಾಮಾಜಿಕ ಅಂಗವೈಕಲ್ಯ ಹೊಂದಿರುವ ಎಲ್ಲಾ ವ್ಯಕ್ತಿಗಳ ಗುರುತಿಸುವಿಕೆ ಮತ್ತು ಪ್ರಮಾಣೀಕರಿಸುವ ನಿಟ್ಟಿನಲ್ಲಿ; ಅಂಗವಿಕಲರ ಹಕ್ಕುಗಳ ಕಾಯ್ದೆ–2016ರ ಅನುಸಾರ ಅಂಗವಿಕಲ ಪ್ರಮಾಣಪತ್ರಗಳನ್ನು ನೀಡುವಂತೆ ಬೆಂಗಳೂರಿನ 'ನ್ಯೂ ಆರ್ಕ್ ಮಿಷನ್'ಗೆ ನಿರ್ದೇಶಿಸಬೇಕು ಎಂದು ಕೋರಲಾದ ರಿಟ್ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, ಕೇಂದ್ರ, ರಾಜ್ಯ ಸರ್ಕಾರ ಹಾಗೂ 'ನ್ಯೂ ಆರ್ಕ್ ಮಿಷನ್ ಆಫ್ ಇಂಡಿಯಾ' ಸೇರಿದಂತೆ ಎಲ್ಲಾ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಆಗಸ್ಟ್ 11ಕ್ಕೆ ಮುಂದೂಡಿತು.

ವೆಂಕಟೇಶ್‌ಗೆ ಸನ್ಮಾನ



ಬೆಂಗಳೂರು: ನಗರದ ಪಂಚಾಮೃತ ಸಂಗೀತ ಅಕಾಡಮಿ ವತಿಯಿಂದ 'ಇಂಚರ' ಕಾರ್ಯಕ್ರಮದಡಿ ಆಚಾರ್ಯತ್ರಯರ ಕುರಿತ ವರ್ಷದ ಸರಣಿ ಕಾರ್ಯಕ್ರಮ ನಡೆಯಿತು.

ಗಾಯಕ ವಿಜಯ ಹಾವನೂರ ಅವರು ಕಾರ್ಯಕ್ರಮ ಉದ್ಘಾಟಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಲೇಖಕ ಎಂ.ವೆಂಕಟೇಶ ಶೇಷಾದ್ರಿ, 'ರಸಪ್ರಶ್ನೆ ಕಾರ್ಯಕ್ರಮಗಳ ಮೂಲಕ ಜ್ಞಾನಾರ್ಜನೆ ಹೆಚ್ಚುತ್ತದೆ' ಎಂದರು.

ಪತ್ರಕರ್ತ ಎಸ್. ಆರ್. ರಾಮಸ್ವಾಮಿ, ಗಾಯಕಿ ಆಶಾ ಭೋಂಸ್ಲೆ, ಕಾದಂಬರಿಕಾರ ಗ. ರಾ. ಸುಬ್ರಹ್ಮಣ್ಯ ಅವರನ್ನು ಸ್ಮರಿಸಲಾಯಿತು.

ಪಿ. ನವ್ಯ ನೇತೃತ್ವದಲ್ಲಿ ಗಾಯಕರು ಶಂಕರರ ಮಹಾಗಣೇಶ ಪಂಚರತ್ನ ಸ್ತೋತ್ರ ಹಾಗೂ ಕನಕಧಾರಾ ಸ್ತೋತ್ರಗಳನ್ನು ಪ್ರಸ್ತುತಪಡಿಸಿದರು. ಅಪರ್ಣಾ ಪ್ರಸನ್ನ ಅವರ ತಂಡ ಶಂಕರರ ಭವಾನಿ ಭುಜಂಗಪ್ರಯಾತ ಸ್ತೋತ್ರ ಹಾಡಿದರು.

ಅಂಕಣಕಾರ ಶ್ರೀಕಂಠ ಬಾಳಗಂಚಿ, ಗಮಕ ಕಲಾವಿದರಾದ ಕಲಾಶ್ರೀ ಜಿ.ಎಸ್. ನಾರಾಯಣ್, ಗಾಯಕ ದಿವಾಕರ ಕಶ್ಯಪ್, ನರಸಿಂಹ ಹರೀಶ್, ಪ್ರತಿಭಾ ನಂದನ್, ಅಪರ್ಣಾ ಗೀತೆಗಳನ್ನು ಹಾಡಿದರು.

ಅಕಾಡಮಿ ಗೌರವಾಧ್ಯಕ್ಷ ಎ.ಎಂ.ಚಂದ್ರಶೇಖರ್, ಗೌರವ ಸಲಹೆಗಾರ ಕೆ.ಸಿ. ರಮೇಶ್, ಸಂಸ್ಥಾಪಕಿ ಗಾಯತ್ರಿ ಕೇಶವ್ ಹಾಜರಿದ್ದರು.

ವರ್ಗಾವಣೆ: ಮುಖ್ಯಮಂತ್ರಿಗೆ ಡಿ.ಕೆ.ಶಿವಕುಮಾರ್ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಎಂಜಿನಿಯರ್ ಪ್ರವೀಣ್ ಲಿಂಗಯ್ಯ ಅವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ವರ್ಗಾವಣೆ ಮಾಡುವಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಪ್ರಾಧಿಕಾರದ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ಅವರು ವಯೋನಿವೃತ್ತಿ ಹೊಂದಿದ್ದಾರೆ. ಆ ಸ್ಥಾನಕ್ಕೆ ಪ್ರವೀಣ್ ಲಿಂಗಯ್ಯ ಅವರನ್ನು ನೇಮಕ ಮಾಡುವಂತೆ ಕೋರಿದ್ದಾರೆ. ಪ್ರಸ್ತುತ ಅವರು ನಿಯೋಜನೆ ಮೇಲೆ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಚುನಾವಣೆ: ರಾಜ್ಯಪಾಲರ ಮಧ್ಯಪ್ರವೇಶಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಪಾಲಿಕೆಗಳಿಗೆ ಇದೇ ಜೂನ್ 30ರ ಒಳಗೆ ಚುನಾವಣೆ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿ' ಎಂದು ಜೆಡಿಎಸ್ ರಾಜ್ಯ ಕಾನೂನು ಘಟಕದ ಅಧ್ಯಕ್ಷ ಎ.ಪಿ.ರಂಗನಾಥ ಅವರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಮಾಡಿದ್ದಾರೆ.

ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಸಲ್ಲಿಸಿರುವ ಅವರು, 'ಹಿಂದಿನ ಬಿಬಿಎಂಪಿಗೆ 2015ರಲ್ಲಿ ಚುನಾವಣೆ ನಡೆದಿತ್ತು. ಆ ನಂತರ ಹಲವು ಬಾರಿ ಚುನಾವಣೆಗಳನ್ನು ರಾಜ್ಯ ಸರ್ಕಾರ ಮುಂದೂಡುತ್ತಾ ಬಂದಿದೆ. ಇದೇ ಜೂನ್ 30ರ ಒಳಗೆ ಚುನಾವಣೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಆದರೆ, ರಾಜ್ಯ ಸರ್ಕಾರವು ಗಡುವಿನೊಳಗೆ ಚುನಾವಣೆ ನಡೆಸುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ' ಎಂದು ಆರೋಪಿಸಿದ್ದಾರೆ.

'ಜಿಬಿಎ ವ್ಯಾಪ್ತಿಯ ಪಾಲಿಕೆಗಳಿಗೆ ಚುನಾವಣೆ ನಡೆಸಬೇಕಾದ ಗಡುವನ್ನು ಜೂನ್ 30ರಿಂದ ಸೆಪ್ಟೆಂಬರ್ 30ಕ್ಕೆ ವಿಸ್ತರಿಸಿ ಎಂದು ಕೋರಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ರಾಜ್ಯ ಚುನಾವಣಾ ಆಯೋಗಕ್ಕೆ ಈಚೆಗೆ ಪತ್ರ ಬರೆದಿದೆ. ರಾಜ್ಯದ ಒಟ್ಟು ಉತ್ಪನ್ನಕ್ಕೆ (ಜಿಎಸ್‌ಡಿಪಿ) ಶೇ 40ರಷ್ಟು ಕೊಡುಗೆ ನೀಡುವ ಬೆಂಗಳೂರಿನ ಸ್ಥಳೀಯ ಸಂಸ್ಥೆಗೆ ಜನಪ್ರತಿನಿಧಿಗಳು ಇಲ್ಲದೆ ಹಲವು ವರ್ಷ ಕಳೆದಿದೆ. ಇದು ನಗರದ ಅಭಿವೃದ್ಧಿಗೆ ಮಾರಕ' ಎಂದಿದ್ದಾರೆ.

ಟಿಡಿಆರ್ ಅಕ್ರಮ: ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 'ಸಾವಿರಾರು ಕೋಟಿ ಅವ್ಯವಹಾರ'
- 'ಟಿಡಿಆರ್ ತನಿಖೆ ಸಿಐಡಿಗೆ ವಹಿಸಿ'
- ಸಿ.ಎಂಗೆ ಪತ್ರ ಬರೆಯಲಾಗಿದೆ: ಬಿಜೆಪಿ ಮುಖಂಡ

ಬೆಂಗಳೂರು: 'ಬಿಬಿಎಂಪಿ ವತಿಯಿಂದ ಮೂರು ವರ್ಷಗಳ ಅವಧಿಯಲ್ಲಿ ನೀಡಿರುವ ಅಭಿವೃದ್ಧಿ ಹಕ್ಕು ವರ್ಗಾವಣೆ (ಟಿಡಿಆರ್) ಮಾಹಿತಿ, ಕಡತಗಳು ಕಾಣೆಯಾಗಿದ್ದು, ಇದಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಆಗ್ರಹಿಸಿದರು.

'ರಾಜ್ಯ ಸರ್ಕಾರವು 2017ರ ಏಪ್ರಿಲ್ 1ರಿಂದ ಭೂಸ್ವಾಧೀನ ಮತ್ತು ಟಿಡಿಆರ್ ವಿಭಾಗವನ್ನು ಬಿಬಿಎಂಪಿಯಿಂದ ಬಿಡಿಎಗೆ ವರ್ಗಾಯಿಸಿ ಆದೇಶಿಸಿತ್ತು. ಈಗ ಮತ್ತೆ, ಟಿಡಿಆರ್ ವಿಭಾಗವನ್ನು ಗ್ರೇಟರ್ ಬೆಂಗಳೂರು ವಿಭಾಗಕ್ಕೆ ವರ್ಗಾಯಿಸಿ ಆದೇಶಿಸಿದೆ. ಬಿಬಿಎಂಪಿಯಲ್ಲಿ ಟಿಡಿಆರ್ ವಿಭಾಗವಿದ್ದ 2014ರಿಂದ 2017ರವರೆಗಿನ ಕಡತಗಳು ನಾಪತ್ತೆಯಾಗಿವೆ. ಅವುಗಳನ್ನು ಪತ್ತೆಹಚ್ಚಲು ಕ್ರಮ ಕೈಗೊಳ್ಳಬೇಕು' ಎಂದು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಒತ್ತಾಯಿಸಿದರು.

'ಮೂರು ವರ್ಷಗಳ ದಾಖಲೆಗಳು ಕಾಣೆಯಾಗಲು ಕಾರಣರಾದ ಅಧಿಕಾರಿಗಳು ಮತ್ತು ಟಿಡಿಆರ್ ಮಾಫಿಯಾದವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ನ್ಯಾಯಾಂಗ ತನಿಖೆಗೆ ಅಥವಾ ಸಿಐಡಿ ತನಿಖೆಗೆ ವಹಿಸುವಂತೆ ಮುಖ್ಯಮಂತ್ರಿಯವರಿಗೆ ಪತ್ರ ಬರೆಯಲಾಗಿದೆ' ಎಂದು ತಿಳಿಸಿದರು.

'ರಸ್ತೆ ಅಭಿವೃದ್ಧಿ ಕಾರ್ಯಗಳು ಮತ್ತು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಅಗತ್ಯವಿರುವ ಭೂಮಿಯನ್ನು ಸಂಬಂಧಪಟ್ಟ ಭೂ ಮಾಲೀಕರಿಂದ ನಿಯಮಾನುಸಾರ ಸ್ವಾಧೀನಪಡಿಸಿಕೊಂಡು, ಅದರ ಬದಲಾಗಿ ನಿಗದಿತ ಮೊತ್ತದ ಪರಿಹಾರ ಧನ ಅಥವಾ ಟಿಡಿಆರ್ ನೀಡುವ ಪದ್ಧತಿ 2007-08ರಿಂದ ಕಾರ್ಯರೂಪಕ್ಕೆ ಬಂದಿತು. ಟಿಡಿಆರ್ ನಿಯಮಗಳಲ್ಲಿನ ಸಣ್ಣಪುಟ್ಟ ಲೋಪದೋಷಗಳನ್ನು ದುರ್ಬಳಕೆ ಮಾಡಿಕೊಂಡು, 'ಟಿಡಿಆರ್ ಮಾಫಿಯಾ' ಸೃಷ್ಟಿಯಾಗಿ ಸಾವಿರಾರು ಕೋಟಿ ಅವ್ಯವಹಾರ ನಡೆದಿದೆ' ಎಂದರು.

'2007-08 ರಿಂದ 2016-17ರ ಅವಧಿಯಲ್ಲಿ ಬಿಬಿಎಂಪಿಯ ಭೂಸ್ವಾಧೀನ ಮತ್ತು ಟಿಡಿಆರ್ ವಿಭಾಗ, ರಸ್ತೆಗಳ ಮೂಲಸೌಕರ್ಯಗಳ ವಿಭಾಗ ಮತ್ತು ನಗರ ಯೋಜನೆ ವಿಭಾಗಗಳಲ್ಲಿ ಕಾರ್ಯನಿರ್ವಹಿಸಿರುವ ಹಲವು ಅಧಿಕಾರಿಗಳು, ಟಿಡಿಆರ್ ಮಾಫಿಯಾದ ಜೊತೆ ಶಾಮೀಲಾಗಿ ಅಕ್ರಮ ನಡೆಸಿದ್ದಾರೆ' ಎಂದು ದೂರಿದರು.

'ಸಿ.ಎಂ ಕಚೇರಿಯಿಂದ ಮೊಬೈಲ್ ಸಂಖ್ಯೆ ದುರ್ಬಳಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಚೇರಿಯು ನನ್ನ ಮೊಬೈಲ್ ಸಂಖ್ಯೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ' ಎಂದು ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಅವರ ಸಲಹೆಗಾರರಾಗಿದ್ದ ಬೇಳೂರು ಸುದರ್ಶನ ಅವರು ದೂರಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ ತಮ್ಮ ಜಾಲತಾಣದಲ್ಲಿ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಸಿದ್ದರಾಮಯ್ಯ ಅವರೇ, 2023ರಲ್ಲಿ ತಾವು ಮುಖ್ಯಮಂತ್ರಿ ಆದ ಹೊಸತರಲ್ಲಿ ನನ್ನ ಮೊಬೈಲ್ ಸಂಖ್ಯೆಯನ್ನು ನಿಮ್ಮ ಹಿರಿಯ ಅಧಿಕಾರಿಯೊಬ್ಬರ (ಜಂಟಿ ಕಾರ್ಯದರ್ಶಿ) ಸಂಖ್ಯೆ ಎಂದು ತಪ್ಪಾಗಿ ಮಾಹಿತಿ ನೀಡಲಾಗಿತ್ತು. ಆಗ ನನಗೆ ನೂರಾರು ಕರೆಗಳು ಬಂದು ಸಮಸ್ಯೆಯಾಗಿತ್ತು. ಈಗ ಮತ್ತೆ ಆ ಸಮಸ್ಯೆ ಆರಂಭವಾಗಿದೆ' ಎಂದು ಬರೆದುಕೊಂಡಿದ್ದಾರೆ.

'ಈಗ ಮುಖ್ಯಮಂತ್ರಿ ಕಚೇರಿಯಿಂದ ಹೊರಡಿಸಲಾಗುವ ಮುಖ್ಯಮಂತ್ರಿ ಅವರ ಪ್ರವಾಸ ಕಾರ್ಯಕ್ರಮ ವೇಳಾಪಟ್ಟಿಯಲ್ಲಿ, ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಅವರ ಹೆಸರಿನ ಮುಂದೆ ನನ್ನ ಮೊಬೈಲ್ ಸಂಖ್ಯೆ ಹಾಕಲಾಗುತ್ತಿದೆ. ನನಗೆ ಪದೇ–ಪದೇ ಕರೆಗಳು, ವಾಟ್ಸ್‌ಆ್ಯಪ್ ಸಂದೇಶಗಳು ಬರುತ್ತಿವೆ. ಕೂಡಲೇ ನನ್ನ ಮೊಬೈಲ್ ಸಂಖ್ಯೆಯನ್ನು ತೆಗೆದುಹಾಕಲು ನಿಮ್ಮ ಕಚೇರಿ ಅಧಿಕಾರಿಗಳಿಗೆ ತಿಳಿಸಿ' ಎಂದಿದ್ದಾರೆ.

'2023ರಲ್ಲಿ ಈ ಸಮಸ್ಯೆ ತಲೆದೋರಿದಾಗ ನೀವು ನನ್ನನ್ನು ಜಂಟಿ ಕಾರ್ಯದರ್ಶಿಯಾಗಿ ನೇಮಕ ಮಾಡಿದ್ದರೆ, ಅದು ಮುಂದುವರಿಯುತ್ತಿರಲಿಲ್ಲ. ಈಗ ನನ್ನ ಸಂಖ್ಯೆಯನ್ನು ತೆಗೆದುಹಾಕಿಸಿ, ಇಲ್ಲವೇ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕನ ಹುದ್ದೆಯನ್ನಾದರೂ ಕೊಡಿ' ಎಂದು ಲೇವಡಿ ಮಾಡಿದ್ದಾರೆ.

ಬಿಜಿಎಸ್ ಯುನೈಟೆಡ್ ಶಾಲೆಗೆ ಶೇಕಡ 100 ಫಲಿತಾಂಶ

ಹೆಸರಘಟ್ಟ: ಸಮೀಪದ ತೋಟಗೆರೆ ಬಿಜಿಎಸ್ ಯುನೈಟೆಡ್ ಶಾಲೆಯು ಈ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶ ಪಡೆದುಕೊಂಡಿದೆ ಎಂದು ಪ್ರಾಂಶುಪಾಲ ಆನಂದ್ ಕುಮಾರ್ ತಿಳಿಸಿದ್ದಾರೆ.

ಯಶಸ್ವಿನಿ ಎನ್ 622 ಅಂಕ, ಶ್ರೀಹರಿಕೃಷ್ಣ ಎಸ್ 619, ಚಿನ್ಮಯಿ ಎಸ್ 617, ಭಾನುಪ್ರಿಯ ಎನ್. ಎಸ್. ಮತ್ತು ನಾಗವೈಷ್ಣವಿ ತಲಾ 616 ಅಂಕಗಳಿಸಿದ್ದಾರೆ. ಈ ಬಾರಿ ಶಾಲೆಯ 49 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 34 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಪಡೆದಿದ್ದಾರೆ ಎಂದಿದ್ದಾರೆ.


ಚಿನ್ಮಯಿ ಎಸ್


ಯಶಸ್ವಿನಿ ಎನ್


ಭಾನುಪ್ರಿಯ ಎನ್.ಎಸ್


ನಾಗವೈಷ್ಣವಿ


ಶ್ರೀಹರಿಕೃಷ್ಣ ಎಸ್

ಎಸ್‌ಎಸ್‌ಎಲ್‌ಸಿ ಸಾಧಕರು
ವಿಕಾಸ್ ಸೆಂಟ್ರಲ್ ಸ್ಕೂಲ್, ಜೆ.ಸಿ.ನಗರ


ಅಭಿನವ್ ಚಂದ್ರ (ಶೇ 97)


ಹರ್ಷವರ್ಧನ್ ಎಂ. (ಶೇ 97)

'ವಿಮಾನಯಾನ ವಲಯಕ್ಕೆ ಸಂಕಷ್ಟ'

ನವದೆಹಲಿ: ದೇಶದ ವಿಮಾನಯಾನ ವಲಯವು ತೀವ್ರ ಸಂಕಷ್ಟ ಎದುರಿಸುತ್ತಿದೆ, ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಬೇಕಾದ ಸ್ಥಿತಿಯು ಎದುರಾಗಿದೆ ಎಂದು ಹೇಳಿರುವ ಭಾರತೀಯ ವಿಮಾನಯಾನ ಕಂಪನಿಗಳ ಒಕ್ಕೂಟವು, ಇಂಧನ ಬೆಲೆಯನ್ನು ಪರಿಷ್ಕರಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಕೋರಿದೆ.


ಏರ್ ಇಂಡಿಯಾ, ಇಂಡಿಗೊ ಮತ್ತು ಸ್ಪೈಸ್‌ಜೆಟ್ ಕಂಪನಿಗಳು ಈ ಒಕ್ಕೂಟದ ಸದಸ್ಯರಾಗಿವೆ. ವಿಮಾನ ಇಂಧನ ಬೆಲೆಯನ್ನು ಅತಾರ್ಕಿಕವಾಗಿ ಹೆಚ್ಚು ಮಾಡಿರುವುದರಿಂದ ಕಂಪನಿಗಳಿಗೆ ನಷ್ಟ ಆಗುತ್ತದೆ ಎಂದು ಒಕ್ಕೂಟ ಎಚ್ಚರಿಸಿದೆ.

ನಗರದಲ್ಲಿ ಇಂದು

ಅನ್ನಪೂರ್ಣಾಂಬ ಸಮೇತ ನಗರೇಶ್ವಸ್ವಾಮಿಯ 142ನೇ ಬ್ರಹ್ಮ ರಥೋತ್ಸವ: ಬೆಳಿಗ್ಗೆ 7ಕ್ಕೆ ಮೂಲ ದೇವರಿಗೆ ಪಂಚಾಮೃತ ಅಭಿಷೇಕ, 10.30ಕ್ಕೆ ಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಫಲಸಮರ್ಪಣೆ, ಗಣಪತಿ ಪೂಜೆ, 7.30ಕ್ಕೆ ಧ್ವಜಾರೋಹಣ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ಬಿ.ಎ.ಎಸ್.ವಿ. (ನಗರ್ತ) ಸಮಿತಿ, ನಗರೇಶ್ವರಸ್ವಾಮಿ ದೇವಸ್ಥಾನದ ಆವರಣ, ನಗರ್ತಪೇಟೆ.

19ನೇ ಕಾಲೇಜು ವಾರ್ಷಿಕೋತ್ಸವ ಸಮಾರಂಭ: ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಅತಿಥಿಗಳು: ವತ್ಸಲಾ ಮೋಹನ್, ವೂಡೇ ಪಿ. ಕೃಷ್ಣ, ಮದನ್ ಕೆ.ಆರ್., ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9.30

ಎನ್.ಯು. ಆಸ್ಪತ್ರೆಯ ಉದ್ಘಾಟನೆ: ಅತಿಥಿಗಳು: ದಿನೇಶ್ ಗುಂಡೂರಾವ್, ಡಾ.ಸಿ. ಎನ್. ಮಂಜುನಾಥ್, ರಮೇಶ್ ಅರವಿಂದ್, ಎಂ.ಎ. ಸಲೀಂ, ಪಿ.ಸಿ. ಮೋಹನ್, ಉದಯ್ ಬಿ. ಗರುಡಾಚಾರ್, ಆಯೋಜನೆ: ಎನ್. ಯು. ಹಾಸ್ಪಿಟಲ್ಸ್, ಸ್ಥಳ: ಎನ್.ಯು. ಆಸ್ಪತ್ರೆ, ಮಿಷನ್ ರಸ್ತೆ, ಬೆಳಿಗ್ಗೆ 10


ರಮೇಶ್ ಅರವಿಂದ್

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ: ಅತಿಥಿಗಳು: ಜಿ.ಬಿ. ಹರೀಶ, ಜೆ. ಶ್ರೀದೇವಿ, ಆಯೋಜನೆ ಮತ್ತು ಸ್ಥಳ: ಕೇಂದ್ರೀಯ ವಿದ್ಯುತ್ ಸಂಶೋಧನಾ ಸಂಸ್ಥೆ, ಸರ್ ಸಿ.ವಿ. ರಾಮನ್ ರಸ್ತೆ, ಸದಾಶಿವನಗರ, ಮಧ್ಯಾಹ್ನ 2

ಬಿ.ಸಿ. ನಾಗೇಂದ್ರಕುಮಾರ್ ಅವರ 'ಅನುಸಂಧಾನ' ಪುಸ್ತಕ ಬಿಡುಗಡೆ: ಪುಟ್ಟಣ್ಣ, ಪುಸ್ತಕದ ಕುರಿತು: ಚಂದ್ರಶೇಖರ ವಿ. ನಂಗಲಿ, ಅಧ್ಯಕ್ಷತೆ: ಪಿ. ಶಿವಪ್ರಸಾದ್, ಉಪಸ್ಥಿತಿ: ವಸು ವತ್ಸಲೆ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಮಧ್ಯಾಹ್ನ 3

'ಕಲಾವಿದ' ಏಕವ್ಯಕ್ತಿ ನಾಟಕ ಪ್ರದರ್ಶನ: ಪ್ರಸ್ತುತಿ: ಬಿ.ಟಿ. ಸುನಿಲ್, ರಚನೆ, ನಿರ್ದೇಶನ: ಭವಾನಿ ಶಂಕರ್, ಸಾಹಿತ್ಯ, ಸಂಗೀತ: ವಿ. ಮನೋಹರ್, ಬೆಳಕಿನ ವಿನ್ಯಾಸ: ಆಕಾಶ್ ಜೋಶಿ, ನವೀನ್ ಎಂ.ಜಿ., ಸ್ಥಳ: ಕೆ.ಇ.ಎ ಪ್ರಭಾತ್ ಸಭಾಂಗಣ, ಬಸವೇಶ್ವರನಗರ, ಮಧ್ಯಾಹ್ನ 3.30 ಹಾಗೂ ಸಂಜೆ 7.15ಕ್ಕೆ


ಡಾ.ರಾಜ್‌ಕುಮಾರ್ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ: ಗಾಯನ: ಜಿ.ಎಸ್. ವೆಂಕಟೇಶ್, ಧನಲಕ್ಷ್ಮಿ, ಸ್ಥಳ: ಸಾಯಿ ಸದ್ಗುರು ಚಾರಿಟಬಲ್ ಟ್ರಸ್ಟ್, ಪಟ್ಟರೆಡ್ಡಿಪಾಳ್ಯ, ಕನಕಪುರ ರಸ್ತೆ, ಸಂಜೆ 4.30ರಿಂದ

'ವೈಭವ' ವಾರ್ಷಿಕೋತ್ಸವ ಸಮಾರಂಭ: ಅಧ್ಯಕ್ಷತೆ: ಬಿ.ಎಸ್. ರಾಗಿಣಿ ನಾರಾಯಣ್, ಅತಿಥಿಗಳು: ಎಂ.ಎಸ್. ಆಶಾದೇವಿ, ಸುಪ್ರೀತ್ ಫಾಲ್ಗುಣ, ಪಿ. ದಯಾನಂದ್ ಪೈ, ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಮಹಿಳಾ ಮಹಾವಿದ್ಯಾಲಯ, ಬಸವನಗುಡಿ, ಸಂಜೆ 5

ಸಾಮಾಜಿಕ ನಾಟಕೋತ್ಸವದ ಸಮಾರೋಪ: ಅತಿಥಿಗಳು: ರಾಮಚಂದ್ರ, ಬಿ. ನೀಲಮ್ಮ, ಸುಬ್ರಮಣಿ, ಬಿ. ರುದ್ರೇಶ್, 'ಒಂದೇ ಸಂಸಾರ', 'ಹೆಣ್ಣಿನ ಮನಸ್ಸು' ನಾಟಕಗಳ ಪ್ರದರ್ಶನ, ಆಯೋಜನೆ: ಏಕಲವ್ಯ ಫೌಂಡೇಷನ್, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ, ಸಂಜೆ 5.30ರಿಂದ

ವೀಣಾ ವಾದನ: ಸ್ಫೂರ್ತಿ ಗುರುಪ್ರಸಾದ್, ಮೃದಂಗ: ಗುರುಮೂರ್ತಿ, ತಾಳ: ವೆಂಕಟೇಶ್ ಪುರೋಹಿತ್, ಆಯೋಜನೆ ಮತ್ತು ಸ್ಥಳ: ದಿಗ್ವಿಜಯ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಉತ್ತರಾದಿ ಮಠ, ನ್ಯಾಷನಲ್ ಕಾಲೇಜಿನ ಎದುರು, ಬಸವನಗುಡಿ, ಸಂಜೆ 6.30

'ಸಂಧ್ಯಾ ಕಲರವ' ಕಾಲೇಜು ವಾರ್ಷಿಕೋತ್ಸವ: ಅತಿಥಿಗಳು: ಅರೇನಹಳ್ಳಿ ಧರ್ಮೇಂದ್ರ ಕುಮಾರ್, ಶ್ವೇತಾ ಶ್ರೀವಾತ್ಸವ್, ಪಿ.ಸಿ. ನಾರಾಯಣ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಸಂಜೆ ಕಾಲೇಜು, ಶೇಷಾದ್ರಿಪುರ, ಸಂಜೆ 5


ಶ್ವೇತಾ ಶ್ರೀವಾತ್ಸವ್

'ಒಳಚರಂಡಿ ಪುರಾಣ' ನಾಟಕ ಪ್ರದರ್ಶನ: ನಿರ್ದೇಶನ: ಅರ್ಚನಾ ಶ್ಯಾಮ್, ಆಯೋಜನೆ: ಅಂತರಂಗ ತಂಡ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಕೆ–ಜಿಐಎಸ್ 2.0 ರಾಜ್ಯಮಟ್ಟದ ಪ್ರದರ್ಶನ, 'ಭೂಮಿಯನ್ನು ನಿರ್ವಹಿಸುವ ತಂತ್ರಜ್ಞಾನಗಳು' ಎಂಬ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ಸ್ಪರ್ಧೆ: ಉದ್ಘಾಟನೆ: ಶಾಲಿನಿ ರಜನೀಶ್, ಅತಿಥಿಗಳು: ಪಂಕಜ್ ಕುಮಾರ್ ಪಾಂಡೆ, ರಾಜೇಶ್ ಎನ್.ಎಲ್., ಆಯೋಜನೆ ಮತ್ತು ಸ್ಥಳ: ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ದೂರ ಸಂವೇದಿ ಭವನ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ, ಬೆಳಿಗ್ಗೆ 11ರಿಂದ


ಶಾಲಿನಿ ರಜನೀಶ್

ವಿನಯ ಮನವಿಗೆ ಸಿಬಿಐ ವಿರೋಧ

ರಜಾಕಾಲದ ನ್ಯಾಯಪೀಠದಲ್ಲಿ ಅರ್ಜಿ ವಿಚಾರಣೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಅವರ ಮೇಲ್ಮನವಿಯನ್ನು ರಜಾಕಾಲದ (ಮೇ–ಬೇಸಿಗೆ ರಜೆ) ನ್ಯಾಯಪೀಠದಲ್ಲಿ ವಿಚಾರಣೆಗೆ ಒಳಪಡಿಸುವ ಸ್ವಾತಂತ್ರ್ಯಕ್ಕೆ ಸಿಬಿಐ ತೀವ್ರ ವಿರೋಧ ವ್ಯಕ್ತಪಡಿಸಿತು.

ಶಿಕ್ಷೆ ರದ್ದುಪಡಿಸುವಂತೆ ಕೋರಿ ವಿನಯ ಕುಲಕರ್ಣಿ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಮೊಹಮದ್ ನವಾಜ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ವಿನಯ ಕುಲಕರ್ಣಿ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್, 'ಮೇನಲ್ಲಿ ರಜಾಕಾಲದ ನ್ಯಾಯಪೀಠದ ಮುಂದೆ ಅರ್ಜಿ ವಿಚಾರಣೆಗೆ ಒಳಪಡಿಸಲು ಕೋರಲಾಗುವ ಸ್ವಾತಂತ್ರ್ಯಕ್ಕೆ ಅವಕಾಶ ನೀಡಬೇಕು' ಎಂದು ಮನವಿ ಮಾಡಿದರು.

ಇದಕ್ಕೆ ಸಿಬಿಐ ಪರ ಹಾಜರಿದ್ದ ಪಿ.ರಾಹುಲ್ ಕೃಷ್ಣಾರೆಡ್ಡಿ ತೀವ್ರ ವಿರೋಧ ವ್ಯಕ್ತಪಡಿಸಿ, 'ವಿಚಾರಣಾ ನ್ಯಾಯಾಲಯದ ತೀರ್ಪು ಹಲವು ಸಂಪುಟಗಳಲ್ಲಿದೆ. ಆಕ್ಷೇಪಣೆ ದಾಖಲಿಸಲು ಸಮಯಾವಕಾಶ ಬೇಕು. ಆದ್ದರಿಂದ, ಸಿಬಿಐ ಆಕ್ಷೇಪಣೆಯನ್ನು ಆಲಿಸದ ಹೊರತು ಇದಕ್ಕೆ ಅವಕಾಶ ನೀಡಬಾರದು' ಎಂದರು.

ಅಂತೆಯೇ, ಪ್ರಕರಣದ ಮತ್ತೊಬ್ಬ ಅಪರಾಧಿ ಚಂದ್ರಶೇಖರ ಇಂಡಿ ಪರ ಹಾಜರಾಗಿದ್ದ ಮದ್ರಾಸ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೂ ಆದ ಸದ್ಯ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಎಂ.ನಾಗಮುತ್ತು ಅವರು, '16ನೇ ಆರೋಪಿಯಾಗಿದ್ದ ಚಂದ್ರಶೇಖರ ಇಂಡಿ ವಿರುದ್ಧ ಯಾವುದೇ ಸಾಕ್ಷ್ಯಗಳಿಲ್ಲ. ಕೇವಲ ಪಿತೂರಿ ಆರೋಪಕ್ಕೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಆದ್ದರಿಂದ, ಶಿಕ್ಷೆ ಅಮಾನತು ಮಾಡಬೇಕು' ಎಂದು ಕೋರಿದರು.

ಸಿಬಿಐ ಹೇಳಿಕೆಯನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಈ ಅರ್ಜಿಗಳು ಇದೇ ಮೊದಲ ಬಾರಿ ವಿಚಾರಣೆಗೆ ಬರುತ್ತಿವೆ ಅಲ್ಲವೇ' ಎಂದು ಪ್ರಶ್ನಿಸಿ 'ಸದ್ಯ ಮೆರಿಟ್ ಮೇಲೆ ವಿಚಾರಣೆ ನಡೆಸುವುದಿಲ್ಲ' ಎಂದು ತಿಳಿಸಿ ಸಿಬಿಐಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಅಂತೆಯೇ, ರಜಾಕಾಲದ ನ್ಯಾಯಪೀಠದಲ್ಲಿ ಅರ್ಜಿದಾರರು ಕೋರುವ ಮನವಿಗೆ ಅವಕಾಶ ಕಲ್ಪಿಸಿ ವಿಚಾರಣೆ ಮುಂದೂಡಿತು. ವಿನಯ ಕುಲಕರ್ಣಿ ಪರ ಹೈಕೋರ್ಟ್ ವಕೀಲರಾದ ಎಸ್.ಸುನಿಲ್ ಕುಮಾರ್ ಮತ್ತು ಚಂದ್ರಶೇಖರ ಇಂಡಿ ಪರ ವಂದನಾ ರೆಡ್ಡಿ ವಕಾಲತ್ತು ವಹಿಸಿದ್ದಾರೆ.

ಪ್ರಕರಣ: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶಗೌಡ ಗೌಡರ ಅವರನ್ನು 2016ರಲ್ಲಿ ಕೊಲೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಒಟ್ಟು 21 ಆರೋಪಿಗಳ ಪೈಕಿ 17 ಜನರನ್ನು ಅಪರಾಧಿಗಳು ಎಂದು ತೀರ್ಮಾನಿಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ 16 ಜನರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿ ಆದೇಶಿಸಿದ್ದಾರೆ.

ಜನಗಣತಿಯಲ್ಲಿ ಭಾಗಿಯಾಗಲೇಬೇಕು: ಹೈಕೋರ್ಟ್

'ಜನಗಣತಿ ರಾಷ್ಟ್ರೀಯ ಕರ್ತವ್ಯವಾಗಿದ್ದು, ಇದಕ್ಕೆ ಸಂಬಂಧಿಸಿದವರೆಲ್ಲರೂ ಬದ್ಧರಾಗಿ ನಡೆದುಕೊಳ್ಳಬೇಕು' ಎಂದು ಎಚ್ಚರಿಸಿರುವ ಹೈಕೋರ್ಟ್, 'ರಜೆಯಲ್ಲಿರುವ ಖಾಸಗಿ ಶಾಲೆಯ ಶಿಕ್ಷಕರು ತಕ್ಷಣವೇ ಕರ್ತವ್ಯಕ್ಕೆ ಹಿಂದಿರುಗಿ ಗಣತಿ ಕಾರ್ಯದಲ್ಲಿ ಭಾಗಿಯಾಗುವಂತೆ ನೋಡಿಕೊಳ್ಳಬೇಕು' ಎಂದು ನಗರದ ಶಾಲಾ ಪ್ರಾಂಶುಪಾಲರೊಬ್ಬರಿಗೆ ನಿರ್ದೇಶಿಸಿದೆ.

ಜನಗಣತಿಗೆ ಶಿಕ್ಷಕರನ್ನು ನಿಯೋಜನೆ ಮಾಡದ ಕಾರಣದಿಂದ ಜೆ.ಪಿ.ನಗರದ 7ನೇ ಹಂತದಲ್ಲಿರುವ 'ದಿ ಬ್ರಿಗೇಡ್' ಶಾಲೆಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಪ್ರಧಾನ ಜನಗಣತಿ ಅಧಿಕಾರಿ ಇದೇ 9ರಂದು ಆದೇಶಿಸಿದ್ದರು.

ಇದನ್ನು ಪ್ರಶ್ನಿಸಿ ಶಾಲೆಯ ಪ್ರಾಂಶುಪಾಲರಾದ ಶುಭ್ರಾ ಜೈನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ರಜೆಯಲ್ಲಿರುವ ಶಿಕ್ಷಕರು ಮುಂದಿನ ಒಂದು ವಾರದಲ್ಲಿ ಹಿಂದಿರುಗುವಂತೆ ಸೂಚನೆ ನೀಡಿ, ಜನಗಣತಿ ಅಧಿಕಾರಿ ಮುಂದೆ ವರದಿ ಮಾಡಿಕೊಳ್ಳುವುದನ್ನು ಖಾತರಿಪಡಿಸಬೇಕು' ಎಂಬ ಷರತ್ತಿನೊಂದಿಗೆ ಶಾಲೆಯ ಪ್ರಾಂಶುಪಾಲರ ವಿರುದ್ಧ ಜನಗಣತಿ ಕಾಯ್ದೆಯ ಕಲಂ 11ರ ಅಡಿಯಲ್ಲಿ ಎಫ್ಐಆರ್ ದಾಖಲಿಸುವಂತಹ ಕ್ರಮಕ್ಕೆ ಮುಂದಾಗಬಾರದು ಎಂದು ತಿಳಿಸಿದೆ.

'ಜನಗಣತಿ 10 ವರ್ಷಗಳಿಗೊಮ್ಮೆ ನಡೆಯುತ್ತದೆ. ಪ್ರತಿ ಮನೆಗೂ ಭೇಟಿ ನೀಡಿ ಮಾಹಿತಿ ಪಡೆದು ವಿವರಗಳನ್ನು ಲಿಖಿತವಾಗಿ ದಾಖಲಿಸಿಕೊಳ್ಳಬೇಕಾಗುತ್ತದೆ. ಹೀಗಿರುವಾಗ, ಶಾಲೆಯ ಮುಖ್ಯಸ್ಥರೇ ಈ ರೀತಿಯಲ್ಲಿ ವರ್ತಿಸಲು ಪ್ರಾರಂಭಿಸಿದರೆ, ಸರ್ಕಾರ ಗಣತಿ ಕಾರ್ಯ ಪೂರ್ಣಗೊಳಿಸುವುದಾದರೂ ಹೇಗೆ' ಎಂದು ಖಾರವಾಗಿ ಪ್ರಶ್ನಿಸಿದ ನ್ಯಾಯಪೀಠ, 'ಮುಂದಿನ ವಿಚಾರಣೆ ವೇಳೆಗೆ ಅರ್ಜಿದಾರರ ಶಾಲೆಯಲ್ಲಿ ಲಭ್ಯವಿರುವ ಶಿಕ್ಷಕರ ಪಟ್ಟಿ ಒದಗಿಸಬೇಕು' ಎಂದು ತಾಕೀತು ಮಾಡಿ ನೀಡಿ ವಿಚಾರಣೆ ಮುಂದೂಡಿದೆ.

ಕಾಮಧೇನು ಲೋಕ ಗೋಶಾಲೆ



ಲೋಕ ಭವನದಲ್ಲಿ ನೂತನವಾಗಿ ನಿರ್ಮಿಸಿರುವ ಕಾಮಧೇನು ಲೋಕ ಗೋಶಾಲೆ ಹಾಗೂ ನವೀಕೃತ ಸ್ವಾಗತ ಕೇಂದ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಾಲ್ಗೊಂಡಿದ್ದರು

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಒತ್ತಾಯ

'ಒಳಮೀಸಲಾತಿ ವರ್ಗೀಕರಣ ಅನ್ಯಾಯ ತಕ್ಷಣ ಸರಿಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿಗಾಗಿ ಮಾಡಿರುವ ವರ್ಗೀಕರಣದಿಂದ ಬಂಜಾರ, ಭೋವಿ, ಕೊರಚ, ಕೊರಮ ಸೇರಿ ಹಲವು ಸೂಕ್ಷ್ಮ ಸಮುದಾಯಗಳಿಗೆ ಅನ್ಯಾಯವಾಗಿದೆ. ಇದನ್ನು ಕೂಡಲೇ ಸರಿಪಡಿಸಬೇಕು' ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಒತ್ತಾಯಿಸಿದ್ದಾರೆ.

ಬಂಜಾರ, ಭೋವಿ, ಕೊರಚ, ಕೊರಮ ಸೇರಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಹಲವು ಸಮುದಾಯಗಳ ಮುಖಂಡರು ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಮತ್ತು ಸರ್ದಾರ್ ಸೇವಾಲಾಲ್ ಸ್ವಾಮೀಜಿ ನೇತೃತ್ವದಲ್ಲಿ ಮಂಗಳವಾರ ಸಭೆ ನಡೆಸಿದರು.

'ಇದೇ 24ರಂದು ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ವರ್ಗೀಕರಣ ಮಾಡಲಾಗಿದೆ. ಯಾರನ್ನೋ ಓಲೈಸುವ ಸಲುವಾಗಿ ಸೂಕ್ಷ್ಮ ಸಮುದಾಯಗಳಿಗೆ ಅನ್ಯಾಯ ಮಾಡಲಾಗಿದೆ. ಇದನ್ನು ನಾವು ವಿರೋಧಿಸುತ್ತೇವೆ' ಎಂದು ಸಭೆಯ ನಂತರ ಅವರು ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಒಕ್ಕೂಟವು, 'ಒಂದೇ ಸ್ವರೂಪದ ಜಾತಿ ಸಮುದಾಯಗಳನ್ನು, ಒಂದೇ ಪ್ರವರ್ಗಕ್ಕೆ ಸೇರಿಸಬೇಕಿತ್ತು. ಆದರೆ 'ಸಿ' ಪ್ರವರ್ಗದಲ್ಲಿ ಎಡಗೈ ಸಮುದಾಯದ ಒಂಬತ್ತು ಜಾತಿಗಳು ಮತ್ತು ಬಲಗೈ ಸಮುದಾಯದ 16 ಜಾತಿಗಳನ್ನೂ ಸೇರಿಸಲಾಗಿದೆ. ಈ ಪ್ರಮಾದವನ್ನು ಸರಿಪಡಿಸಬೇಕು. ಅತಿ ಹಿಂದುಳಿದಿರುವ 64 ಜಾತಿಗಳು ಇರುವ ಪ್ರವರ್ಗ 'ಸಿ'ಗೆ ಶೇ 5ರಷ್ಟು ಒಳಮೀಸಲಾತಿ ಒದಗಿಸಬೇಕು. ನ್ಯಾಯಬದ್ಧವಾಗಿ 'ಸಿ' ಪ್ರವರ್ಗವನ್ನೇ ಮೊದಲ ಗುಂಪನ್ನಾಗಿ ಘೋಷಿಸಬೇಕು. ನೇಮಕಾತಿ ರೋಸ್ಟರ್ ಬಿಂದುವಿನಲ್ಲಿ ಈ ಸಮುದಾಯಗಳಿಗೆ ಅನ್ಯಾಯವಾಗಬಾರದು' ಎಂದು ಒತ್ತಾಯಿಸಿದೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಈ ವಿಷಯವನ್ನು ಮನವರಿಕೆ ಮಾಡಿಕೊಡಲಾಗುವುದು. ಇಲ್ಲದಿದ್ದಲ್ಲಿ ಕಾನೂನು ಹೋರಾಟ ನಡೆಸಲಾಗುವುದು' ಎಂದು ತಿಳಿಸಿದೆ.

ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವ ನಾಯ್ಕ, ಕರ್ನಾಟಕ ಕೊರಚ ಮಹಾಸಭಾದ ಅಧ್ಯಕ್ಷ ಆದರ್ಶ ಯಲ್ಲಪ್ಪ, ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಕಾರ್ಯಾಧ್ಯಕ್ಷ ರಾಘವೇಂದ್ರ ನಾಯ್ಕ, ಮಾಜಿ ಶಾಸಕ ಭೀಮಾನಾಯ್ಕ್ ಸೇರಿದಂತೆ ಹಲವು ಸಮುದಾಯಗಳ ಮುಖಂಡರು ಸಭೆಯಲ್ಲಿ ಭಾಗಿಯಾಗಿದ್ದರು.



ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಸಭೆಯಲ್ಲಿ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಮಾತನಾಡಿದರು. ಸರ್ದಾರ್ ಸೇವಾಲಾಲ್ ಸ್ವಾಮೀಜಿ ಮತ್ತು ವಿವಿಧ ಸಮುದಾಯಗಳ ಮುಖಂಡರು ಉಪಸ್ಥಿತರಿದ್ದರು

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ



ಸಹಸ್ರ ಕಮಲಗಳಿಂದ ಅಲಂಕೃತ ಮಹಾಲಕ್ಷ್ಮೀ ದೇವರು

ಸಹಸ್ರ ಕಮಲ ಪುಷ್ಪಯಾಗ ಸಂಪನ್ನ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು ಲಕ್ಕೂರು ಗ್ರಾಮದ ಮಹಾಲಕ್ಷ್ಮೀ ದೇವಾಲಯದಲ್ಲಿ 15ನೇ ವರ್ಷದ ಸಹಸ್ರ ಕಮಲ ಪುಷ್ಪಾರ್ಚನೆ ಹಾಗೂ ಸಹಸ್ರ ಕಮಲ ಪುಷ್ಪಯಾಗ ಮಹೋತ್ಸವ ಮತ್ತು ಮಹಾಲಕ್ಷ್ಮೀಯವರ ಪ್ರಾಕಾರೋತ್ಸವ ಧಾರ್ಮಿಕ ಕಾರ್ಯಗಳೊಂದಿಗೆ ಮಂಗಳವಾರ ಸಂಪನ್ನಗೊಂಡಿತು.


ಮೂಲ ದೇವರನ್ನು ಸಹಸ್ರ ಕಮಲಗಳಿಂದ ಅಲಂಕರಿಸಲಾಗಿತ್ತು. ದೇವಾಲಯದ ಮುಂಭಾಗ ಹೋಮ ನೆರವೇರಿತು. ಮಂಗಳ ವಾದ್ಯಗಳೊಂದಿಗೆ ಉತ್ಸವ ಮೂರ್ತಿ ಮೆರವಣಿಗೆ ನಡೆಯಿತು. ಭಕ್ತರಿಗೆ ಊಟ, ಲಾಡು ಹಾಗೂ ಕಮಲದ ಹೂ ಪ್ರಸಾದ ನೀಡಲಾಯಿತು.

ವೈದ್ಯರ ಅಪಾಯಿಂಟ್‌ಮೆಂಟ್ ಮತ್ತು ರೋಗಲಕ್ಷಣಗಳ ಪರಿಶೀಲನೆಯಂಥ ವಿಷಯಗಳಲ್ಲಿ ಚಾಟ್‌ಬಾಟ್‌ಗಳ ಬಳಕೆ ಹೆಚ್ಚಾಗಿದೆಯಂತೆ!



ಬಂಗಾಳಕೊಲ್ಲಿಯಲ್ಲಿ ಟೈಮ್ ಮಷಿನ್

ಭಾರತದ ಉಪಖಂಡವು ಆಫ್ರಿಕಾದಿಂದ ಹೇಗೆ ಬೇರ್ಪಟ್ಟು ನೈಋತ್ಯಕ್ಕೆ ಚಲಿಸಿತು ಎಂಬ ದಶಕಗಳ ಕಾಲದ ಭೌಗೋಳಿಕ ಗೊಂದಲಕ್ಕೆ ಉತ್ತರ ನೀಡಿದೆ



• ಸುಧೀರ ಎಚ್.ಎಸ್.

ಬಂಗಾಳಕೊಲ್ಲಿಯ ಆಳದಲ್ಲಿ ಅಡಗಿರುವ ರಹಸ್ಯವೊಂದನ್ನು ಪುಣೆಯ ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ (IISER) ವಿಜ್ಞಾನಿಗಳು ಬಯಲಿಗೆಳೆದಿದ್ದಾರೆ.

ನಮ್ಮ ಕಣ್ಣಿಗೆ ಕಾಣುವ ಸಮುದ್ರದ ಅಲೆಗಳ ಅಡಿಯಲ್ಲಿ, ಅಂದರೆ ಸುಮಾರು ಒಂಬತ್ತು ಕೋಟಿ ಇಪ್ಪತ್ತು ಲಕ್ಷ ವರ್ಷಗಳಷ್ಟು ಹಳೆಯದಾದ ಭೂಮಿಯ ಪದರವೊಂದು ಪತ್ತೆಯಾಗಿದೆ. ಈ ಮಹತ್ವದ ಸಂಶೋಧನೆಯು ಭಾರತದ ಉಪಖಂಡವು ಆಫ್ರಿಕಾದಿಂದ ಹೇಗೆ ಬೇರ್ಪಟ್ಟು ನೈಋತ್ಯಕ್ಕೆ ಚಲಿಸಿತು ಎಂಬ ದಶಕಗಳ ಕಾಲದ ಭೌಗೋಳಿಕ ಗೊಂದಲಕ್ಕೆ ಉತ್ತರ ನೀಡಿದೆ.

ಸಾಮಾನ್ಯವಾಗಿ ವಿಜ್ಞಾನಿಗಳು ಸಮುದ್ರದ ಆಳದಲ್ಲಿರುವ ಭೂಮಿಯ ವಯಸ್ಸನ್ನು ಅಲ್ಲಿನ ಶಿಲೆಗಳಲ್ಲಿ ಅಡಗಿರುವ ಕಾಂತೀಯ ಪಟ್ಟಿಗಳ (Magnetic Stripes) ಮೂಲಕ ಅಳೆಯುತ್ತಾರೆ. ಭೂಮಿಯ ಒಳಗಿನಿಂದ ಲಾವಾರಸವು ಮೇಲೆ ಬಂದು ತಣ್ಣಗಾದಾಗ, ಅದರಲ್ಲಿರುವ ಖನಿಜಗಳು ಆ ಸಮಯದಲ್ಲಿ ಭೂಮಿಯ ಕಾಂತೀಯ ದಿಕ್ಕಿಗೆ ತಕ್ಕಂತೆ ಜೋಡಣೆಯಾಗುತ್ತವೆ. ಭೂಮಿಯ ಕಾಂತೀಯ ಉತ್ತರ ಮತ್ತು ದಕ್ಷಿಣ ಧ್ರುವಗಳು ಕಾಲಕಾಲಕ್ಕೆ ಅದಲುಬದಲಾಗುತ್ತಿರುತ್ತವೆ. ಹೀಗಾಗಿ ಸಮುದ್ರದ ತಳವು ಒಂದು ದೊಡ್ಡ ಟೇಪ್ ರೆಕಾರ್ಡರ್ ನಂತೆ ಕೆಲಸ ಮಾಡುತ್ತದೆ ಮತ್ತು ಅಲ್ಲಿನ ಕಾಂತೀಯ ಬದಲಾವಣೆಗಳನ್ನು ನೋಡಿ ಆ ಪದರ ಎಷ್ಟು ಹಳೆಯದು ಎಂದು ಹೇಳಬಹುದು.

ಆದರೆ ಬಂಗಾಳಕೊಲ್ಲಿಯ ವಿಷಯದಲ್ಲಿ ಇದು ಅಷ್ಟು ಸುಲಭವಾಗಿರಲಿಲ್ಲ. ಇಲ್ಲಿನ ಭೂಮಿಯ ಪದರವು 'ಕ್ರಿಟೇಶಿಯಸ್ ನಾರ್ಮಲ್ ಸೂಪರ್‌ಕ್ರಾನ್' ಎಂಬ ಕಾಲಘಟ್ಟದಲ್ಲಿ ನಿರ್ಮಾಣವಾಗಿತ್ತು. ಸುಮಾರು 12 ಕೋಟಿಯಿಂದ 8 ಕೋಟಿ 30 ಲಕ್ಷ ವರ್ಷಗಳ ಹಿಂದಿನ ಈ ಅವಧಿಯಲ್ಲಿ ಈ ಭಾಗದಲ್ಲಿ ಭೂಮಿಯ ಕಾಂತೀಯ ಧ್ರುವಗಳು ಯಾವುದೇ ಬದಲಾವಣೆ ಕಾಣದೆ ಸ್ಥಿರವಾಗಿದ್ದವು. ಇದರಿಂದಾಗಿ ವಿಜ್ಞಾನಿಗಳಿಗೆ ಯಾವುದೇ 'ಬಾರ್‌ಕೋಡ್' ಅಥವಾ ಕಾಂತೀಯ ಪಟ್ಟಿಗಳು ಸಿಗದೆ ಗೊಂದಲ ಉಂಟಾಗಿತ್ತು. ಇದರ ಜೊತೆಗೆ ಹಿಮಾಲಯದಿಂದ ಹರಿದು ಬಂದ ಬೃಹತ್ ಪ್ರಮಾಣದ ಹೂಳು (ಸೆಡಿಮೆಂಟ್) ಮತ್ತು ಜ್ವಾಲಾಮುಖಿಯ ಚಟುವಟಿಕೆಗಳು ಈ ಹಳೆಯ ಪದರವನ್ನು ಸುಮಾರು 18 ಕಿಲೋಮೀಟರ್ ದಪ್ಪದ ಮಣ್ಣಿನ ಅಡಿಯಲ್ಲಿ ಹೂತುಹಾಕಿದ್ದವು.

ಈ ಸವಾಲನ್ನು ಎದುರಿಸಲು ಐಐಎಸ್‌ಇಆರ್ ಪುಣೆಯ ಸಂಶೋಧಕರಾದ ಮೊಹಮ್ಮದ್ ಇಸ್ಮಾಯಿಲ್ ಮತ್ತು ಕೊಳ್ಳೂರು ಶ್ರೀಕೃಷ್ಣ ಅವರು ಹೊಸ ಹಾದಿ ಹಿಡಿದರು. ಅವರು ಕಾಂತೀಯ ದಿಕ್ಕಿನ ಬದಲಾವಣೆಗಾಗಿ ಹುಡುಕುವ ಬದಲು, ಕಾಂತೀಯ ಕ್ಷೇತ್ರದ ತೀವ್ರತೆಯಲ್ಲಿ ಉಂಟಾಗುವ ಅತ್ಯಂತ ಸಣ್ಣ ಏರಿಳಿತವೊಂದನ್ನು ಗಮನಿಸಿದರು. ಇದನ್ನು ವಿಜ್ಞಾನದ ಭಾಷೆಯಲ್ಲಿ 'Q1' ಎಂದು ಕರೆಯಲಾಗುತ್ತದೆ. ಇದು ಧ್ರುವಗಳ ಬದಲಾವಣೆಯಲ್ಲ ಬದಲಾಗಿ ಕಾಂತೀಯ ಶಕ್ತಿಯಲ್ಲಿ ಉಂಟಾಗುವ ಒಂದು ಕ್ಷಣಿಕ ಸ್ಪಂದನ ಅಥವಾ ಮಿಡಿತ ಎನ್ನಬಹುದು.

ಸಂಶೋಧಕರು ಸಂಶೋಧನಾ ಹಡಗುಗಳ ಮೂಲಕ ಕಾಂತೀಯ ಸಂವೇದಕಗಳನ್ನು ಬಳಸಿ ದತ್ತಾಂಶವನ್ನು ಸಂಗ್ರಹಿಸಿದರು. ನಂತರ ಇದನ್ನು ಸ್ಯಾಟಲೈಟ್ ಮಾಡೆಲ್‌ಗಳು ಮತ್ತು ಭೂಮಿಯ ಒಳಗಿನ ಚಿತ್ರಣ ನೀಡುವ 'ಸೀಸ್ಮಿಕ್ ರಿಫ್ಲೆಕ್ಷನ್ ಇಮೇಜಿಂಗ್' ತಂತ್ರಜ್ಞಾನದೊಂದಿಗೆ ಹೋಲಿಸಿ ನೋಡಿದರು. ಈ ಸಂಶೋಧನೆಯ ಫಲವಾಗಿ ಬಂಗಾಳಕೊಲ್ಲಿಯ ಮಧ್ಯಭಾಗದಲ್ಲಿ, ಅಂದರೆ ಸುಮಾರು 12 ಡಿಗ್ರಿ ಉತ್ತರ ಅಕ್ಷಾಂಶದಲ್ಲಿ, ಎರಡು ಬೃಹತ್ ಜಲಂತರ ಪರ್ವತ ಶ್ರೇಣಿಗಳ ನಡುವೆ ಈ 'Q1' ಸಂಕೇತವನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾದರು. ಇದು ಈ ಭಾಗದ ಭೂಮಿಯ ಪದರವು ಸರಿಯಾಗಿ 9 ಕೋಟಿ 20 ಲಕ್ಷ ವರ್ಷಗಳಷ್ಟು ಹಳೆಯದು ಎಂಬುದನ್ನು ಸಾಬೀತುಪಡಿಸಿದೆ.

ಈ ಸಂಶೋಧನೆಯು ಕೇವಲ ಒಂದು ಸಂಖ್ಯೆಯಲ್ಲ, ಇದು ಭೂಮಿಯ ಇತಿಹಾಸದ ಬಗ್ಗೆ ತಿಳಿಸಿಕೊಡುವ ಒಂದು ಪ್ರಮುಖ ಅಂಶ. ಕೋಟ್ಯಂತರ ವರ್ಷಗಳ ಹಿಂದೆ ಭೂಮಿಯ ಮೇಲಿನ ಎಲ್ಲ ಖಂಡಗಳೂ 'ಗೊಂಡ್ವಾನ' ಎಂಬ ಒಂದೇ ಬೃಹತ್ ಖಂಡದ ಭಾಗವಾಗಿದ್ದವು. ಕಾಲಕ್ರಮೇಣ ಇವು ಬೇರ್ಪಡಲು ಆರಂಭಿಸಿದವು. ಈಗಿನ ಕರ್ನಾಟಕವನ್ನೊಳಗೊಂಡ ಭಾರತದ ಭಾಗವು ಆಫ್ರಿಕಾದಿಂದ ಬೇರ್ಪಟ್ಟು ನೈಋತ್ಯ ದಿಕ್ಕಿನಲ್ಲಿ ಚಲಿಸಿ ಏಷ್ಯಾದೊಂದಿಗೆ ವಿಲೀನವಾಯಿತು. ಈ ಚಲನೆ ಮತ್ತು ಪಲ್ಲಟಗಳು ಯಾವಾಗ ನಡೆದವು ಎಂಬ ನಿಖರವಾದ ಕಾಲಸೂಚಿಯನ್ನು ಈ ಒಂಬತ್ತು ಕೋಟಿ ಇಪ್ಪತ್ತು ಲಕ್ಷ ವರ್ಷಗಳ ಹಳೆಯ ಭೂಮಿಯ ಪದರವು ಒದಗಿಸಿದೆ. ಭಾರತದ ಭಾಗವು ಏಷ್ಯಾಖಂಡದ ಜೊತೆ ವಿಲೀನವಾದಾಗಲೇ ಹಿಮಾಲಯ ಪರ್ವತಶ್ರೇಣಿಗಳು ಮೂಡಿದವು.

ನಮ್ಮ ಕರ್ನಾಟಕದ ಪಶ್ಚಿಮ ಕರಾವಳಿ ಮತ್ತು ದಖನ್ ಪ್ರಸ್ಥಭೂಮಿಯ ರಚನೆಯ ಹಿಂದೆಯೂ ಇಂತಹದ್ದೇ ಜ್ವಾಲಾಮುಖಿ ಮತ್ತು ಪ್ಲೇಟ್ ಟೆಕ್ಟೋನಿಕ್ಸ್ ಎಂಬ ಭೂಪದರಗಳ ಚಲನೆಯ ಇತಿಹಾಸವಿದೆ. ಹಾಗೆಯೇ ನಮ್ಮ ಪಶ್ಚಿಮಘಟ್ಟ ಹಾಗು ಅಲ್ಲಿನ ನದಿಗಳಾದ ಕಾವೇರಿ, ತುಂಗೆ, ಭದ್ರ ಎಲ್ಲವೂ ಹಿಮಾಲಯಕ್ಕಿಂತ ಪ್ರಾಚೀನವಾದದ್ದು. ಬಂಗಾಳಕೊಲ್ಲಿಯಲ್ಲಿ ದೊರೆತಿರುವ ಈ ಪುರಾವೆಯು ಒಟ್ಟಾರೆ ಭಾರತೀಯ ಭೂಭಾಗದ ವಿಕಾಸವನ್ನು ಅರ್ಥಮಾಡಿಕೊಳ್ಳಲು ದಾರಿದೀಪವಾಗಿದೆ. ಸಂಶೋಧಕರು ಇನ್ನೂ ಹಳೆಯದಾದ ಅಂದರೆ 10 ಕೋಟಿ 80 ಲಕ್ಷ ವರ್ಷಗಳಷ್ಟು ಹಳೆಯ 'Q2' ಎಂಬ ಸಂಕೇತಕ್ಕಾಗಿ ಹುಡುಕಾಟ ನಡೆಸಿದ್ದರು. ಆದರೆ ಜ್ವಾಲಾಮುಖಿಯ ಪ್ರಭಾವದಿಂದ ಅದು ಅಸ್ಪಷ್ಟವಾಗಿ ಉಳಿದಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ತಂತ್ರಜ್ಞಾನ ಬಳಸಿ ಈ ರಹಸ್ಯವನ್ನೂ ಭೇದಿಸಬಹುದು ಎಂಬ ಭರವಸೆ ವಿಜ್ಞಾನಿಗಳದ್ದಾಗಿದೆ.

ಒಟ್ಟಿನಲ್ಲಿ ಸಮುದ್ರದ ತಳದಲ್ಲಿನ ಈ ಸಂಶೋಧನೆಯು ನಮ್ಮ ಭೂಮಿಯ ರಚನೆಯ ಹಿಂದಿನ ರಹಸ್ಯವನ್ನು ಬಿಚ್ಚಿಟ್ಟಿದೆ. ವಿಜ್ಞಾನಿಗಳ ಈ ಸಾಧನೆಯು ಭೂಗರ್ಭ ಶಾಸ್ತ್ರದ ನಕ್ಷೆಯಲ್ಲಿ ಭಾರತಕ್ಕೆ ಒಂದು ಮಹತ್ವದ ಸ್ಥಾನ ತಂದುಕೊಟ್ಟಿದೆ. ನಮ್ಮ ಕಾಲು ಕೆಳಗಿರುವ ಮಣ್ಣು ಮತ್ತು ನಾವು ವಾಸಿಸುವ ಭೂಮಿ ಹೇಗೆ ರೂಪುಗೊಂಡಿತು ಎಂಬ ಕುತೂಹಲಕ್ಕೆ ಈ ಸಂಶೋಧನೆ ಒಂದು ಸ್ಪಷ್ಟ ಉತ್ತರ ನೀಡಿದೆ. ❖

ರೈತರ ರಕ್ಷಾಕವಚ ಕಿಸಾನ್ ಮಿತ್ರಛಡಿ



• ಪೃಥ್ವಿರಾಜ್

ನಡುರಾತ್ರಿಯ ನಿಶ್ಯಬ್ದದಲ್ಲಿ, ಕಗ್ಗತ್ತಲನ್ನು ಸೀಳಿಕೊಂಡು ಪ್ರಾಣದ ಹಂಗು ತೊರೆದು ಹೊಲಕ್ಕೆ ತೆರಳುವ ರೈತನ ಕಷ್ಟಗಳು ವರ್ಣನಾತೀತ. ಸಾಲದ್ದಕ್ಕೆ ವಿದ್ಯುತ್ ಕಣ್ಣಾಮುಚ್ಚಾಲೆಯ ಕಾಟ. ಕತ್ತಲಲ್ಲಿ ಹೇಗೆ ಹೆಜ್ಜೆ ಇಡುವುದೊ ತಿಳಿಯದು, ಪೊದೆಗಳಲ್ಲಿ ಹಾವು ಎಲ್ಲಿ ಅಡಗಿದೆಯೋ ಅರ್ಥವಾಗದು. ಇನ್ನು ಕಾಡು ಪ್ರಾಣಿಗಳ ಭೀತಿಯಂತೂ ನಿರಂತರ...

ದೇಶದ ಬೆನ್ನೆಲುಬಾಗಿ ನಿಲ್ಲುವ ರೈತರಿಗೆ ಇಂತಹ ಸಂಕಟಗಳು ಹಲವಾರು. ಮುಖ್ಯವಾಗಿ ವಿಷಜಂತುಗಳ ಹಾವಳಿಯೇ ಹೆಚ್ಚು. ಒಂದಷ್ಟು ವರದಿಗಳ ಪ್ರಕಾರ, ನಮ್ಮ ದೇಶದಲ್ಲಿ ಪ್ರತಿವರ್ಷ 46 ಸಾವಿರದಿಂದ 60 ಸಾವಿರ ಜನರು ಹಾವು ಕಚ್ಚಿ ಸಾವನ್ನಪ್ಪುತ್ತಿದ್ದಾರೆ. ಇದರಲ್ಲಿ ಹೆಚ್ಚಿನವರು ರಾತ್ರಿ ವೇಳೆ ಹೊಲಕ್ಕೆ ನೀರು ಹರಿಸಲು ಹೋಗುವ ರೈತರು ಮತ್ತು ಕೃಷಿ ಕಾರ್ಮಿಕರೇ ಆಗಿದ್ದಾರೆ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾಗಿ ಕೇಂದ್ರ ಸರ್ಕಾರವು ಒಂದು ನವೀನ ಅಸ್ತ್ರವನ್ನು ಸಿದ್ಧಪಡಿಸಿದೆ. ಅದೇ 'ಕಿಸಾನ್ ಮಿತ್ರಛಡಿ' (Kisan Mitra Chadi). ಇದು ಕೇವಲ ಒಂದು ಕೈಬೆತ್ತವಲ್ಲ, ರೈತರ ಪ್ರಾಣ ಕಾಯುವ ರಕ್ಷಾಕವಚ.

ಏನಿದು ಕಿಸಾನ್ ಮಿತ್ರಛಡಿ?

ಮಧ್ಯಪ್ರದೇಶದ ರೈಸೇನ್‌ನಲ್ಲಿ ಈಚೆಗೆ ಆಯೋಜಿಸಲಾಗಿದ್ದ ರಾಷ್ಟ್ರೀಯ ಕೃಷಿ ಮೇಳದಲ್ಲಿ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಈ ಸಾಧನವನ್ನು ಅನಾವರಣಗೊಳಿಸಿದರು. ನೋಡಲು ಸಾಮಾನ್ಯ ಕೈಬೆತ್ತದಂತೆ ಕಾಣುವ ಈ 'ಕಿಸಾನ್ ಮಿತ್ರ ಛಡಿ' ವಾಸ್ತವವಾಗಿ 'ಇಂಟರ್ನೆಟ್ ಆಫ್ ಥಿಂಗ್ಸ್' (IoT) ತಂತ್ರಜ್ಞಾನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ. ಇದು ರೈತರಿಗಾಗಿ ವಿಶೇಷವಾಗಿ ತಯಾರಿಸಲಾದ ಮಲ್ಟಿ-ಫಂಕ್ಷನಲ್ ಎಲೆಕ್ಟ್ರಾನಿಕ್ ಸ್ಟಿಕ್. ಹೊಲದಲ್ಲಿ ಕೆಲಸ ಮಾಡುವಾಗ ಎದುರಾಗುವ ಅಪಾಯಗಳನ್ನು ಎದುರಿಸಲು ಇದರಲ್ಲಿ ಅತ್ಯಾಧುನಿಕ ಫೀಚರ್‌ಗಳನ್ನು ಅಳವಡಿಸಲಾಗಿದೆ.

ವೈಶಿಷ್ಟ್ಯಗಳು–ಪ್ರಯೋಜನಗಳು

ಹೈ-ಪವರ್ ಟಾರ್ಚ್ ಲೈಟ್: ರಾತ್ರಿ ಸಮಯದಲ್ಲಿ ಹೊಲದ ಬದುಗಳ ಮೇಲೆ ನಡೆಯುವಾಗ ದಾರಿ ಸ್ಪಷ್ಟವಾಗಿ ಕಾಣಲು ಇದರಲ್ಲಿ ಶಕ್ತಿಯುತವಾದ ಎಲ್.ಇ.ಡಿ (LED) ಲೈಟ್ ಅಳವಡಿಸಲಾಗಿದೆ.

ಅಲ್ಟ್ರಾ ಸಾನಿಕ್ ಸೌಂಡ್: ಮನುಷ್ಯರ ಕಿವಿಗೆ ಕೇಳಿಸದ, ಆದರೆ ಹಾವುಗಳು, ಕಾಡುಹಂದಿಗಳು ಮತ್ತು ಕೋತಿಗಳಂತಹ ಪ್ರಾಣಿಗಳಿಗೆ ಕಿರಿಕಿರಿ ಉಂಟುಮಾಡುವ ವಿಶೇಷ ಶಬ್ದಗಳು ಇದರಿಂದ ಹೊರಡುತ್ತವೆ. ಹೀಗಾಗಿ ಅವು ರೈತರ ಹತ್ತಿರ ಸುಳಿಯದೆ ದೂರ ಓಡಿಹೋಗುತ್ತವೆ.

ಎಲೆಕ್ಟ್ರಿಕ್ ಶಾಕ್ ಫೀಚರ್: ಆಕಸ್ಮಿಕವಾಗಿ ಯಾವುದೇ ಕಾಡು ಪ್ರಾಣಿ ದಾಳಿ ಮಾಡಲು ಯತ್ನಿಸಿದರೆ, ಆತ್ಮರಕ್ಷಣೆಯಾಗಿ ಇದರಲ್ಲಿ ಕಡಿಮೆ ತೀವ್ರತೆಯ (ಪ್ರಾಣಾಪಾಯವಿಲ್ಲದ) ಎಲೆಕ್ಟ್ರಿಕ್ ಶಾಕ್ ನೀಡುವ ವ್ಯವಸ್ಥೆ ಇದೆ.

ತುರ್ತು ಸೈರನ್: ರೈತರು ಯಾವುದಾದರೂ ಅಪಾಯದಲ್ಲಿ ಸಿಲುಕಿದಾಗ ಅಥವಾ ಅನಾರೋಗ್ಯಕ್ಕೆ ಒಳಗಾದಾಗ, ಈ ಬೆತ್ತದಲ್ಲಿರುವ ಬಟನ್ ಒತ್ತಿದರೆ ದೊಡ್ಡ ಶಬ್ದದೊಂದಿಗೆ ಸೈರನ್ ಮೊಳಗುತ್ತದೆ. ಇದು ಸುಮಾರು ಒಂದು ಕಿಲೋಮೀಟರ್ ದೂರದವರೆಗೆ ಕೇಳಿಸುವುದರಿಂದ ಸುತ್ತಮುತ್ತಲಿನವರನ್ನು ಎಚ್ಚರಿಸಬಹುದು.

ಮೊಬೈಲ್ ಚಾರ್ಜಿಂಗ್ ಸೌಲಭ್ಯ: ಹೊಲದಲ್ಲಿರುವಾಗ ಮೊಬೈಲ್ ಬ್ಯಾಟರಿ ಖಾಲಿಯಾದರೆ, ಈ ಛಡಿಯನ್ನು 'ಪವರ್ ಬ್ಯಾಂಕ್' ಆಗಿ ಬಳಸಿಕೊಂಡು ಚಾರ್ಜ್ ಮಾಡಿಕೊಳ್ಳಬಹುದು.



ಎಐ ಚಿತ್ರ: ಹಳೇಮನಿ

ರೇಡಿಯೊ ಸೌಲಭ್ಯ: ಹೊಲದಲ್ಲಿರುವಾಗ ರೈತರಿಗೆ ಮನೋರಂಜನೆ ಮತ್ತು ವಾರ್ತೆಗಳನ್ನು ನೀಡಲು ಇದರಲ್ಲಿ ಎಫ್.ಎಮ್ (FM) ರೇಡಿಯೊ ಕೂಡ ಇದೆ.

ತಾಂತ್ರಿಕ ವಿವರಗಳು: ಈ ಸಾಧನವನ್ನು ಹಗುರವಾದ ಅಲ್ಯೂಮಿನಿಯಂ ಹಾಗೂ ಗಟ್ಟಿಯಾದ ಪ್ಲಾಸ್ಟಿಕ್‌ನಿಂದ ತಯಾರಿಸಲಾಗಿದೆ. ಇದನ್ನು ಸೌರಶಕ್ತಿ (Solar) ಅಥವಾ ವಿದ್ಯುತ್ ಮೂಲಕ ರೀಚಾರ್ಜ್ ಮಾಡಬಹುದು. ಒಮ್ಮೆ ಚಾರ್ಜ್ ಮಾಡಿದರೆ 8 ರಿಂದ 10 ಗಂಟೆಗಳ ಕಾಲ ನಿರಂತರವಾಗಿ ಕೆಲಸ ಮಾಡುತ್ತದೆ.

ರೈತರಿಗೆ ಆಸರೆ: ಪ್ರಸ್ತುತ ಕೃಷಿ ಕೇವಲ ಶ್ರಮದಾಯಕ ಕೆಲಸವಷ್ಟೇ ಅಲ್ಲ, ಅಪಾಯಕಾರಿಯೂ ಆಗಿ ಪರಿಣಮಿಸಬಲ್ಲದು. ಇಂತಹ ಸಂದರ್ಭದಲ್ಲಿ 'ಕಿಸಾನ್ ಮಿತ್ರಛಡಿ'ಯಂತಹ ಸಾಧನಗಳು ರೈತರ ನಿಜವಾದ ಗೆಳೆಯರಾಗುತ್ತಿವೆ. ಸರ್ಕಾರಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು ಈ ಸಾಧನವನ್ನು ಸಾಮಾನ್ಯ ರೈತರಿಗೆ ಕಡಿಮೆ ದರದಲ್ಲಿ ತಲುಪಿಸಿದರೆ ಇನ್ನೂ ಅನೇಕ ಪ್ರಾಣಗಳನ್ನು ಉಳಿಸಲು ಸಾಧ್ಯವಾಗುತ್ತದೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ವಿಜ್ಞಾನ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ನೀರಿನ ವಿದ್ಯುದ್ವಿಭಜನೆಯ ಕ್ರಿಯೆಯಲ್ಲಿ ಕ್ಯಾಥೋಡ್‌ನಲ್ಲಿ ಬಿಡುಗಡೆಯಾಗುವ ಅನಿಲ

ಎ) ಆಕ್ಸಿಜನ್ ಬಿ) ಹೈಡ್ರೋಜನ್
ಸಿ) ಕ್ಲೋರಿನ್ ಡಿ) ನೈಟ್ರೋಜನ್

ಉತ್ತರ:– (ಬಿ) ಹೈಡ್ರೋಜನ್ (ಏಪ್ರಿಲ್ 2022 ಮಾಡೆಲ್)

2) $Si + C \longrightarrow SiC$

ಮೇಲಿನ ರಾಸಾಯನಿಕ ಕ್ರಿಯೆಯು ಇದಕ್ಕೆ ಉದಾಹರಣೆಯಾಗಿದೆ.

ಎ) ಬಹಿರುಷ್ಣಕ ಕ್ರಿಯೆ ಬಿ) ಅಂತರುಷ್ಣಕ ಕ್ರಿಯೆ
ಸಿ) ವಿಭಜನೆ ಕ್ರಿಯೆ ಡಿ) ಸ್ಥಾನಪಲ್ಲಟ ಕ್ರಿಯೆ

ಉತ್ತರ (ಡಿ) ಸ್ಥಾನಪಲ್ಲಟ ಕ್ರಿಯೆ (ಏಪ್ರಿಲ್ 2016 ಮಾಡೆಲ್)

2) ಚಿಪ್ಸ್ ತಯಾರಕರು ಚಿಪ್ಸ್‌ನ ಪೊಟ್ಟಣಗಳಲ್ಲಿ ನೈಟ್ರೋಜನ್ ನಂತಹ ಅನಿಲ ಹಾಯಿಸಲು ಕಾರಣ, ಚಿಪ್ಸ್...............

ಎ) ಸಂಕ್ಷಾರಣಗೊಳ್ಳದಂತೆ ತಡೆಗಟ್ಟಲು
ಬಿ) ಉತ್ಕರ್ಷಣೆಗೊಳ್ಳುವುದನ್ನು ತಡೆಗಟ್ಟಲು
ಸಿ) ಕಮಟುವಿಕೆ ಹೊಂದುವಂತೆ ಮಾಡಲು
ಡಿ) ಅಪಕರ್ಷಣೆಗೊಳ್ಳುವುದನ್ನು ತಡೆಗಟ್ಟಲು

ಉತ್ತರ:– (ಬಿ) ಉತ್ಕರ್ಷಣೆಗೊಳ್ಳುವುದನ್ನು ತಡೆಗಟ್ಟಲು (ವಾರ್ಷಿಕ ಪರೀಕ್ಷೆ: ಜೂನ್– 2023)

3) ಆಹಾರ ಪದಾರ್ಥಗಳು ವಾತಾವರಣಕ್ಕೆ ತೆರೆದಿದ್ದಾಗ ಕಮಟುವಿಕೆಗೊಳಗಾಗುವುದಕ್ಕೆ ಕಾರಣವಾದ ಕ್ರಿಯೆ

ಎ) ಉತ್ಕರ್ಷಣೆ ಬಿ) ಅಪಕರ್ಷಣೆ
ಸಿ) ನಶಿಸುವಿಕೆ ಡಿ) ಹೈಡ್ರೋಜನೀಕರಣ

ಉತ್ತರ:– (ಎ) ಉತ್ಕರ್ಷಣೆ (ವಾರ್ಷಿಕ ಪರೀಕ್ಷೆ: ಜೂನ್– 2018)

4) ರಾಸಾಯನಿಕ ಕ್ರಿಯೆ ನಡೆದಿದೆ ಎನ್ನಲು ಈ ಕೆಳಗಿನ ಯಾವುದೆಲ್ಲವೂ ಸಹಾಯ ಮಾಡುತ್ತದೆ?

1) ಸ್ಥಿತಿ ಬದಲಾವಣೆ
2) ಬಣ್ಣದಲ್ಲಿ ಬದಲಾವಣೆ
3) ಅನಿಲದ ಬಿಡುಗಡೆ
4) ತಾಪದಲ್ಲಿ ಬದಲಾವಣೆ

ಮೇಲಿನ ಯಾವೆಲ್ಲವೂ ಸರಿಯಾಗಿದೆ?

ಉತ್ತರ ಸಂಕೇತಗಳು

ಎ) 1 ಮಾತ್ರ ಬಿ) 2 ಮತ್ತು 3 ಮಾತ್ರ
ಸಿ) 1 ಮತ್ತು 4 ಮಾತ್ರ ಡಿ) 1 ರಿಂದ 4ರ ತನಕ ಎಲ್ಲವೂ

ಉತ್ತರ:– (ಡಿ) 1 ರಿಂದ 4ರ ತನಕ ಎಲ್ಲವೂ

5) ಉತ್ಪನ್ನಗಳೊಂದಿಗೆ ಉಷ್ಣ ಬಿಡುಗಡೆಯಾಗುವ ಕ್ರಿಯೆಗಳನ್ನು ಏನೆಂದು ಕರೆಯುವರು?

.ಎ) ಬಹಿರುಷ್ಣ ಕ್ರಿಯೆ ಬಿ) ಅಂತರುಷ್ಣ ಕ್ರಿಯೆ
ಸಿ) ಸ್ಥಾನಪಲ್ಲಟ ಕ್ರಿಯೆ ಡಿ) ಪ್ರಕ್ಷೇಪನ ಕ್ರಿಯೆ.

ಉತ್ತರ:– (ಎ) ಬಹಿರುಷ್ಣ ಕ್ರಿಯೆ

6) ಕ್ರಿಯೆಗಳಿಂದ ವಸ್ತುಗಳು ಆಕ್ಸಿಜನ್ ಕಳೆದುಕೊಳ್ಳುವುದು ಅಥವಾ ಹೈಡ್ರೋಜನ್ ಪಡೆದುಕೊಳ್ಳುವುದಕ್ಕೆ ಏನೆಂದು ಕರೆಯುವರು?

ಎ) ಉತ್ಕರ್ಷಣ ಬಿ) ಅಪಕರ್ಷಣ
ಸಿ) ದ್ವಿಸ್ಥಾನಪಲ್ಲಟ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಬಿ) ಅಪಕರ್ಷಣ

7) ಕಬ್ಬಿಣದ ಚೂರುಗಳಿಗೆ ಸಾರಯುಕ್ತ ಹೈಡ್ರೋಕ್ಲೋರಿಕ್ ಆಮ್ಲವನ್ನು ಸೇರಿಸಿದಾಗ ಏನಾಗುತ್ತದೆ? ಸರಿಯಾದ ಉತ್ತರವನ್ನು ಗುರುತು ಹಾಕಿ

ಎ) ಹೈಡ್ರೋಜನ್ ಅನಿಲ ಮತ್ತು ಕಬ್ಬಿಣದ ಕ್ಲೋರೈಡ್ ಉಂಟಾಗುತ್ತದೆ
ಬಿ) ಕ್ಲೋರಿನ್ ಅನಿಲ ಮತ್ತು ಕಬ್ಬೀನದ ಹೈಡ್ರಾಕ್ಸೈಡ್ ಉಂಟಾಗುತ್ತದೆ.
ಸಿ) ಯಾವುದೇ ಕ್ರಿಯೆ ನಡೆಯುವುದಿಲ್ಲ
ಡಿ) ಕಬ್ಬಿಣದ ಲವಣ ಮತ್ತು ನೀರು ಉಂಟಾಗುತ್ತವೆ

ಉತ್ತರ:– (ಎ) ಹೈಡ್ರೋಜನ್ ಅನಿಲ ಮತ್ತು ಕಬ್ಬಿಣದ ಕ್ಲೋರೈಡ್ ಉಂಟಾಗುತ್ತದೆ

8) ಕ್ಯಾಲ್ಸಿಯಂ ಕಾರ್ಬೋನೇಟ್ ಅನ್ನು ಕಾಯಿಸಿದಾಗ .... ಮತ್ತು ....ಆಗಿ ವಿಭಜನೆಗೊಳ್ಳುವುದು

ಎ) ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್
ಬಿ) ಕ್ಯಾಲ್ಸಿಯಂ ಕ್ಲೋರೈಡ್ ಮತ್ತು ಆಕ್ಸಿಜನ್
ಸಿ) ಮ್ಯಾಂಗನಿಸ್ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್
ಡಿ) ಕಾರ್ಬನ್ ಮೊನಾಕ್ಸೈಡ್ ಮತ್ತು ಹೈಡ್ರೋಜನ್

ಉತ್ತರ:–(ಎ) ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್

9) ಕಬ್ಬಿಣವು ತಾಮ್ರದ ಸಲ್ಫೇಟ್‌ನಲ್ಲಿರುವ ತಾಮ್ರವನ್ನು ಸ್ಥಾನಪಲ್ಲಟಗೊಳಿಸಿ ಕಬ್ಬಿಣದ ಸಲ್ಫೇಟ್ ಆಗುವುದರಿಂದ ದ್ರಾವಣದ.................. ಆಗುವುದು

ಎ) ಅಳತೆ ಬದಲಾವಣೆ ಬಿ) ಕಿಣ್ವಗಳು ನಾಶವಾಗುವುದು
ಸಿ) ಬಣ್ಣ ಬದಲಾವಣೆ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:–(ಸಿ) ಬಣ್ಣ ಬದಲಾವಣೆ

10) $Fe_2o_2 + 2Al \longrightarrow Al_2 + 2\,Fe$

ಮೇಲಿನ ಕ್ರಿಯೆಯು ಇದಕ್ಕೆ ಉದಾಹರಣೆಯಾಗಿದೆ.

ಎ) ಸಂಯೋಗ ಕ್ರಿಯೆ ಬಿ) ದ್ವಿ ಸ್ಥಾನಪಲ್ಲಟ ಕ್ರಿಯೆ
ಸಿ) ವಿಭನೆ ಕ್ರಿಯೆ ಡಿ) ಸ್ಥಾನಪಲ್ಲಟ ಕ್ರಿಯೆ

ಉತ್ತರ (ಡಿ) ಸ್ಥಾನಪಲ್ಲಟ ಕ್ರಿಯೆ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ರಾಸಾಯನಿಕ ಕ್ರಿಯೆ ಎಂದರೇನು?

ಉತ್ತರ:– ಒಂದು ವಸ್ತುವಿನ ರಾಸಾಯನಿಕ ಗುಣಗಳಲ್ಲಿ ಬದಲಾವಣೆ ಉಂಟು ಮಾಡುವ ಕ್ರಿಯೆಯನ್ನು ರಾಸಾಯನಿಕ ಕ್ರಿಯೆ ಎನ್ನುವರು.

2) ಕಬ್ಬಿಣದ ವಸ್ತುಗಳಿಗೆ ಬಣ್ಣವನ್ನು ಏಕೆ ಹಚ್ಚುತ್ತಾರೆ?

ಉತ್ತರ:– ತುಕ್ಕು ಹಿಡಿಯುವುದನ್ನು ತಡೆಗಟ್ಟಲು ಕಬ್ಬಿಣದ ವಸ್ತುಗಳಿಗೆ ಬಣ್ಣ ಚ್ಚುತ್ತಾರೆ.

3) ಪ್ರಕ್ಷೇಪನ ಕ್ರಿಯೆ ಎಂದರೇನು?

ಉತ್ತರ:– ರಾಸಾಯನಿಕ ಕ್ರಿಯೆಯಲ್ಲಿ ಜಲ ವಿಲೀನಗೊಳ್ಳದ ವಸ್ತು ಉಂಟಾಗುವುದನ್ನು ಪ್ರಕ್ಷೇಪನ ಕ್ರಿಯೆ ಎನ್ನುವರು

4) ಯಾವುದನ್ನು ಉತ್ಕರ್ಷಣ ಮತ್ತು ಅಪಕರ್ಷಣ ಕ್ರಿಯೆ ಎನ್ನುವರು?

ಉತ್ತರ:– ರಾಸಾಯನಿಕ ಕ್ರಿಯೆಯಲ್ಲಿ ವಸ್ತುವೊಂದು ಆಕ್ಸಿಜನ್ ಪಡೆದುಕೊಂಡರೆ ಅದು ಉತ್ಕರ್ಷಣಗೊಂಡಿದೆ ಎನ್ನುತ್ತೇವೆ.

ರಾಸಾಯನಿಕ ಕ್ರಿಯೆಯಲ್ಲಿ ವಸ್ತುವೊಂದು ಆಕ್ಸಿಜನ್ ಕಳೆದುಕೊಂಡರೆ ಅದು ಅಪಕರ್ಷಣಗೊಂಡಿದೆ ಎನ್ನುತ್ತೇವೆ.

5) ರೆಡಾಕ್ಸ್ ಕ್ರಿಯೆಗಳ ಬಗ್ಗೆ ಬರೆಯಿರಿ

ಉತ್ತರ:– ರಾಸಾಯನಿಕ ಕ್ರಿಯೆಯಲ್ಲಿ ಒಂದು ಪ್ರತಿವರ್ತಕವು ಉತ್ಕರ್ಷಣಗೊಂಡರೆ ಮತ್ತೊಂದು ಪ್ರತಿವರ್ತಕವು ಅಪಕರ್ಷಣ ಗೊಳ್ಳುತ್ತದೆ ಇಂತಹ ಕ್ರಿಯೆಗಳನ್ನು ಉತ್ಕರ್ಷಣ–ಅಪಕರ್ಷಣ ಅಥವಾ ರೆಡಾಕ್ಸ್ ಕ್ರಿಯೆಗಳು ಎನ್ನುವರು

6) ಒಂದೊಂದು ಉದಾಹರಣೆಯೊಂದಿಗೆ ಇವುಗಳನ್ನು ವಿವರಿಸಿ

ಅ) ನಶಿಸುವಿಕೆ ಬ) ಕಮಟುವಿಕೆ

ಉತ್ತರ:– ನಶಿಸುವಿಕೆ:– ಲೋಹಗಳು ತಮ್ಮ ಸುತ್ತಲಿನ ತೇವಾಂಶ, ಆಮ್ಲಗಳ ಪರಿಣಾಮ ತಮ್ಮ ಹೊಳಪನ್ನು ಕಳೆದುಕೊಂಡು ಕ್ರಮೇಣ ನಾಶವಾಗಲು ಆರಂಭಿಸುತ್ತವೆ ಈ ಪ್ರಕ್ರಿಯೆಗೆ ನಶಿಸುವಿಕೆ ಎನ್ನುವರು.

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ — CHEMISTRY

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Types of Solutions

1. Write a brief note on solution.

Ans:- A solution may contain two or more substances also called components or constituents. A solution which has two components is known as binary solution (e.g a solution of NaCl in water) while a solution with three components is called ternary solution (e.g. a solution of NaCI and KCI in water). Similarly even more than three components may also be present.

2. Express the Concentration of Solutions

Ans:- Concentration of a solution implies the amount of the solute present in a given quantity of the solution or the solvent. Thus, while expressing the concentration of a solution, only the relative amounts of the components are considered. The concentration of a binary solution can be expressed in a number of ways.

(i) Mass percentage (w/w): The mass percentage of a component of a solution is defined as:

Mass % of a component =

$$= \frac{\text{Mass of the component in the solution}}{\text{Total mass of the solution}} \times 100$$

(ii) Volume percentage (V/V): The volume percentage is defined as:

$$\text{Volume \% of a component} = \frac{\text{Volume of the component}}{\text{Total volume of solution}} \times 100$$

(iii) Mass by volume percentage (w/V): It is commonly used in medicine and pharmacy. It is mass by volume percentage.

It is the mass of solute dissolved in 100 mL of the solution.

(iv) Parts per million: When a solute is present in trace quantities, it is convenient to express concentration in parts per million (ppm) and is defined as:

Parts per million =

$$\frac{\text{Number of parts of the component}}{\text{Total number of parts of all components of the solution}} \times 10^6$$

(v) Mole fraction: Commonly used symbol for mole fraction is x and subscript used on the right hand side of x denotes the component. It is defined as:

Mole fraction of a component =

$$\frac{\text{Number of moles of the component}}{\text{Total number of moles of all the components}}$$

Mole fraction unit is very useful in relating some physical properties of solutions, say vapour pressure with the concentration of the solution and quite useful in describing the calculations involving gas mixtures.

vi) Molarity: Molarity (M) is defined as number of moles of solute dissolved in one litre (or one cubic decimetre) of solution,

$$\text{Molarity} = \frac{\text{Moles of solute}}{\text{Volume of solution in litre}}$$

= Moles of solute Molarity Volume of solution in litre (2.8)

(vii) Molality: Molality (m) is defined as the number of moles of the solute per kilogram (kg) of the solvent and is expressed as:

$$\text{Molality (m)} = \frac{\text{Moles of solute}}{\text{Mass of solvent in kg}}$$

Multiple Choice Questions:-

1. Which of the following is dependent on temperature?

a) Molarity b) Mole fraction
c) Weight percentage d) Molality

Ans:- a) Molarity

2. Which of the following compounds can be used as antifreeze in automobile radiators?

a) Methyl alcohol b) Nitrophenol
c) Glycol d) Ethyl alcohol

Ans:- C) Glycol

3. The dissolution of gas is in a liquid is governed

a) Raoult's law b) Henry's law
c) Dalton's law of pressure
d) van't Hoff factor

Ans:- b) henrys law

4. The mole fraction of the solute in one molal aqueous solution is

a) 0.009 b) 0.018
c) 0.027 d) 0.036

Ans: b) 0.018

5. Out of following which one is not an example of a solution.

a) Air b) Brass
c) amalgam d) benzene in water

Ans:- d) benzene in water

6. Which of the following units is useful in relating concentration of solution with its vapour pressure?

a) mole fraction b) parts per million
c) mass percentage d) molality

Ans:- a)mole fraction

7. On dissolving sugar in water at room temperature, solution feels cool to touch. Under which of the following cases dissolution of sugar will be most rapid?

a) Sugar crystals in cold water.
b) Sugar crystals in hot water.
c) Powdered sugar in cold water.
d) Powdered sugar in hot water.

Ans:- d)powdered sugar in hot water

8. At equilibrium the rate of dissolution of a solid solute in a volatile liquid solvent is................

a) less than the rate of crystallization
b) greater than the rate of crystallization
c) equal to the rate of crystallization
d) Zero

Ans:- C)equal to the rate of crystallization

9. A breaker contains a solution of substance 'A'. Precipitation of substance 'A' takes place when small amount of 'A' is added to the solution. The solution is -

a) saturated b) supersaturated
c) unsaturated d) concentrated

Ans:- b) supersaturated

Fill in the blanks by choosing the appropriate word from those given in the brackets

(Plasmolysis, mole fraction, Reverse osmosis, Solid, Liquid, Molarity)

1) Desalination of water is based on ________
Ans: **Reverse osmosis.**

2) The shrinking of a plant cell due to overflow of water is called________
Ans: **Plasmolysis**

3) Hydrated salts are solutions of ________ in solid.
Ans: **Liquid**

4) 22 carat gold is an example of solid in ______ solution.
Ans: **Solid**

5) According to Henry's law the plot of equilibrium pressure versus_________ is linear with slope equal to K_H.
Ans: **mole fraction**


ಏರ್ ಶೋ ಜಾಗ ವಾಪಸ್‌ಗೆ ಕ್ರಮ

ಅರಣ್ಯ ಇಲಾಖೆಗೆ ಸೇರಿದ ಜಾಗ ಸಚಿವ ಈಶ್ವರ ಖಂಡ್ರೆ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂತರರಾಷ್ಟ್ರೀಯ ವೈಮಾನಿಕ ಪ್ರದರ್ಶನ(ಏರ್ ಶೋ) ನಡೆಯುವ ಯಲಹಂಕದ ವಾಯು ನೆಲೆಯ ಜಾಗ ಅರಣ್ಯ ಇಲಾಖೆಗೆ ಸೇರಿದ್ದು, ಅದನ್ನು ಹಿಂದಕ್ಕೆ ಪಡೆಯಲು ಕ್ರಮ ವಹಿಸಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಅಸರ್ ಸೋಷಿಯಲ್ ಇಂಪ್ಯಾಕ್ಟ್ ಅಡ್ವೈಸರ್ ಸಂಸ್ಥೆಯ ಸಹಯೋಗದಲ್ಲಿ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಬೆಂಗಳೂರು ಬಿಸಿಲು ಮತ್ತು ಅದರ ಪರಿಣಾಮ ಕುರಿತ ಮಾಧ್ಯಮ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.



ಏರ್ ಶೋ ಸಂಗ್ರಹ ಚಿತ್ರ

'ಗಂಟಿಗಾನಹಳ್ಳಿ ಗ್ರಾಮದ 159 ಎಕರೆ ಪ್ರದೇಶ ಸರ್ಕಾರಿ ಕಾಯ್ದಿಟ್ಟ ಅರಣ್ಯ ಪ್ರದೇಶವಾಗಿದ್ದು, ಪಹಣಿ ಮತ್ತು ಮ್ಯುಟೇಶನ್ ಅರಣ್ಯ ಇಲಾಖೆಯ ಹೆಸರಿನಲ್ಲಿದೆ. ಈ ಜಮೀನು ಕೂಡ ಭೂ ಪರಿವರ್ತನೆ ಆಗಿಲ್ಲ. ತೀರುವಳಿ ಪ್ರಸ್ತಾವ ಸಲ್ಲಿಸಲಾಗುವುದು. ಪರ್ಯಾಯ ಭೂಮಿ ನೀಡಿ, ಆ ಜಾಗವನ್ನು ನಾವೇ ಪಡೆದುಕೊಳ್ಳುತ್ತೇವೆ' ಎಂದರು.

'ನಗರದಲ್ಲಿ ಕಟ್ಟಡಗಳ ಸಂಖ್ಯೆ ಹೆಚ್ಚಾಗಿದ್ದು ಹಸಿರು ಪ್ರಮಾಣ ಗಣನೀಯವಾಗಿ ಕುಸಿದಿದೆ. ಬೆಂಗಳೂರನ್ನು ಕಾಂಕ್ರೀಟ್ ಕಾಡನ್ನಾಗಿ ಬದಲಾಯಿಸಿದ ಪರಿಣಾಮವಾಗಿ ಉಷ್ಣಾಂಶ ಏರಿಕೆಯಾಗಿದೆ. ಹಸಿರು ಹೊದಿಕೆ ಹೆಚ್ಚಿಸಲು ಸಸಿ ನೆಟ್ಟು ಶ್ವಾಸತಾಣ ರಕ್ಷಿಸಿಕೊಳ್ಳುವುದು ನಮ್ಮ ಮುಂದಿರುವ ಆದ್ಯತೆ' ಎಂದು ತಿಳಿಸಿದರು.

ಹವಾಮಾನ ಕುರಿತು ಉಪನ್ಯಾಸ ನೀಡಿದ ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರದ ನಿರ್ದೇಶಕ ಎಂ.ಎಸ್.ದಿವಾಕರ್, 'ಹಿಂದೆಲ್ಲಾ ಏಪ್ರಿಲ್‌ನಲ್ಲಿ ತಂಪಾಗಿರುತ್ತಿದ್ದ ನಗರ ಈಗ ಅಭಿವೃದ್ಧಿ ವೇಗದಲ್ಲಿ ಬದಲಾಗಿದ್ದು, ದಿನದ ಏಳು ಗಂಟೆಗೂ ಹೆಚ್ಚು ಕಾಲ ಬಿಸಿಲು ಇರುವುದರಿಂದ ಉಷ್ಣಾಂಶ ಹೆಚ್ಚಾಗಿದೆ. ಈ ವಿಚಾರದಲ್ಲಿ ಐಐಎಸ್‌ಸಿ ಸಹಭಾಗಿತ್ವದಲ್ಲಿ ಸಂಶೋಧನೆ ನಡೆದಿದೆ' ಎಂದರು.

ಅಕಾಡೆಮಿ ಕಾರ್ಯದರ್ಶಿ ಎಂ.ಸಹನಾ, ಅಸರ್ ಸೋಶಿಯಲ್ ಇಂಪ್ಯಾಕ್ಟ್ ಅಡ್ವೈಸರ್ಸ್ ಸಂಸ್ಥೆಯ ಮುಖ್ಯ ಸಂವಹನಾಧಿಕಾರಿ ಬ್ರಿಕೇಶ್ ಸಿಂಗ್ ಉಪಸ್ಥಿತರಿದ್ದರು.



ಕರ್ನಾಟಕ ಮಾಧ್ಯಮ ಅಕಾಡೆಮಿಯು ಅಸರ್ ಸಂಸ್ಥೆ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ಬೆಂಗಳೂರು ಬಿಸಿಲು ಮತ್ತು ಅದರ ಪರಿಣಾಮ ಕುರಿತ ವಿಚಾರ ಸಂಕಿರಣವನ್ನು ಸಚಿವ ಈಶ್ವರ ಖಂಡ್ರೆ ಉದ್ಘಾಟಿಸಿದರು. ಎಂ.ಸಹನಾ, ಎಂ.ಎಸ್. ದಿವಾಕರ, ಬ್ರಿಕೇಶ್ ಸಿಂಗ್, ಆಯೇಷಾ ಖಾನಂ ಹಾಜರಿದ್ದರು – ಪ್ರಜಾವಾಣಿ ಚಿತ್ರ

ಬಿಸಿಲ ಬವಣೆ ತೆರೆದಿಟ್ಟ ಕಾಯಕ ಬಂಧುಗಳು

ನಗರದಲ್ಲಿ ಹೆಚ್ಚುತ್ತಿರುವ ಬಿಸಿಲಿನ ನಡುವೆಯೂ ಕಾರ್ಯನಿರ್ವಹಿಸುತ್ತಿರುವ ಗಿಗ್ ಕಾರ್ಮಿಕರು, ಸ್ವಚ್ಛತಾ ಸೇನಾನಿ ಹಾಗೂ ಆಶಾ ಕಾರ್ಯಕರ್ತೆ ತಮ್ಮ ಸಂಕಷ್ಟಗಳನ್ನು ಬಿಡಿಸಿಟ್ಟರು.

ಆಶಾ ಕಾರ್ಯಕರ್ತೆ ಫರ್ಹಾನ, 'ಬೇಸಿಗೆ ಬವಣೆ ನಡುವೆಯೂ ಕೆಲಸ ಮಾಡುತ್ತಿದ್ದೇವೆ. ವೇತನವೂ ಸರಿಯಾಗಿ ಸಿಗುತ್ತಿಲ್ಲ' ಎಂದರು.

ಸ್ವಚ್ಛತಾ ಸಿಬ್ಬಂದಿ ಮನ್ಸೂರ್ ಮಾತನಾಡಿ, 'ನಾವು ತಂಡವಾಗಿ ಬೆಳಿಗ್ಗೆ 6ರಿಂದ ಕಸ ವಿಂಗಡಣೆಗೆ ಇಳಿಯುತ್ತೇವೆ. ಕುಡಿಯಲು ನೀರು, ಶೌಚಾಲಯ ವ್ಯವಸ್ಥೆಯೂ ಇಲ್ಲ. ಕಸ ವಿಂಗಡಣೆಯಿಂದಲೇ ಆದಾಯ ಮಾಡಿಕೊಳ್ಳಬೇಕು. ಕಾರ್ಮಿಕರಿಗೆ ಸರ್ಕಾರದಿಂದ ಇನ್ನಷ್ಟು ಸೌಲಭ್ಯ ಸಿಗಬೇಕು' ಎಂದು ಹೇಳಿದರು.

ಆಹಾರ ವಿತರಿಸುವ ಕಾರ್ಮಿಕ ಲಿಂಗರಾಜು, 'ತ್ವರಿತವಾಗಿ ಆಹಾರ ಸರಬರಾಜು ಮಾಡುವ ಹೊಣೆ ಇರುತ್ತದೆ. ಈ ವೇಳೆ ನಮ್ಮ ದೇಹಬಾಧೆ ತೀರಿಸಿಕೊಳ್ಳಲು ಹೆಣಗಾಡುವ ಸ್ಥಿತಿಯಿದೆ. ಸೌಲಭ್ಯಕ್ಕಾಗಿ ಹೋರಾಟ ಮಾಡಿದ್ದರೂ ಉಪಯೋಗವಾಗಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ರಸ್ತೆ ಗುಂಡಿ ದುರಸ್ತಿಗೆ ಮಾಡಿರುವ ವೆಚ್ಚ

(ವಿಧಾನಸಭೆಯಲ್ಲಿ 1367ನೇ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ 2026ರ ಮಾರ್ಚ್ 10ರಂದು ನೀಡಿರುವ ಮಾಹಿತಿಯಂತೆ)

ಪಾಲಿಕೆ	ವಿಧಾನ ಸಭಾ ಕ್ಷೇತ್ರ	ರಸ್ತೆ ಗುಂಡಿಗಳ ಸಂಖ್ಯೆ	ಮುಚ್ಚಲಾಗಿರುವ ರಸ್ತೆ ಗುಂಡಿಗಳ ಸಂಖ್ಯೆ	ರಸ್ತೆ ಗುಂಡಿ ಮುಚ್ಚಲು ಖರ್ಚು ಮಾಡಿರುವ ಮೊತ್ತ	ಬಾಕಿ ಗುಂಡಿಗಳು	ಒಂದು ಗುಂಡಿ ದುರಸ್ತಿಗಾಗಿರುವ ವೆಚ್ಚ
ಕೇಂದ್ರ	ಸಿವಿ ರಾಮನ್ ನಗರ	715	699	₹1.4 ಕೋಟಿ	16	₹20,028
	ಶಾಂತಿ ನಗರ	650	638	₹1.4 ಕೋಟಿ	12	₹21,943
	ಗಾಂಧಿನಗರ	450	438	₹1.4 ಕೋಟಿ	12	₹31,963
	ಶಿವಾಜಿನಗರ	250	232	₹1.4 ಕೋಟಿ	18	₹60,344
	ಚಾಮರಾಜಪೇಟೆ	150	140	₹1.4 ಕೋಟಿ	10	₹1,00,000
	ಚಿಕ್ಕಪೇಟೆ	520	510	₹90 ಲಕ್ಷ	10	₹17,647
	ಒಟ್ಟು	2735	2657	₹7.90 ಕೋಟಿ	78	
ಪೂರ್ವ	ಮಹದೇವಪುರ	5,635	5,462	₹1.9 ಕೋಟಿ	173	₹3,478
	ಕೆ.ಆರ್.ಪುರ	1,705	1,473	₹70.93 ಲಕ್ಷ	232	₹4,815
	ಒಟ್ಟು	7340	6935	₹2.60 ಕೋಟಿ	405	
ಪಶ್ಚಿಮ	ರಾಜರಾಜೇಶ್ವರಿ ನಗರ	1,192	1,148	₹1.85 ಕೋಟಿ	44	₹16,114
	ಯಶವಂತಪುರ	3,109	3,109	₹1.6 ಕೋಟಿ	0	₹5,146
	ದಾಸರಹಳ್ಳಿ	516	497	₹1.2 ಕೋಟಿ	19	₹24,144
	ಮಹಾಲಕ್ಷ್ಮಿ ಲೇಔಟ್	438	438	₹1.6 ಕೋಟಿ	0	₹36,529
	ಮಲ್ಲೇಶ್ವರ	745	735	₹1.4 ಕೋಟಿ	10	₹19,047
	ರಾಜಾಜಿನಗರ	352	332	₹90 ಲಕ್ಷ	20	₹27,108
	ಗೋವಿಂದರಾಜನಗರ	374	366	₹1.8 ಕೋಟಿ	8	₹49,180
	ವಿಜಯನಗರ	403	382	₹1.8 ಕೋಟಿ	21	₹47,120
	ಬಸವನಗುಡಿ	612	605	₹90 ಲಕ್ಷ	7	₹14,876
	ಪದ್ಮನಾಭನಗರ	454	452	₹1 ಕೋಟಿ	2	₹22,123
	ಒಟ್ಟು	8,195	8,064	₹14.05 ಕೋಟಿ	131	
ಉತ್ತರ	ಬ್ಯಾಟರಾಯನಪುರ	1,673	1,351	₹1.2 ಕೋಟಿ	322	₹8,882
	ಸರ್ವಜ್ಞನಗರ	1,369	1,321	₹1.5 ಕೋಟಿ	48	₹11,355
	ಪುಲಕೇಶಿನಗರ	862	862	₹1.05 ಕೋಟಿ	0	₹12,180
	ಯಲಹಂಕ	380	350	₹30 ಲಕ್ಷ	30	₹8,571
	ದಾಸರಹಳ್ಳಿ	13,150	13,092	₹2.6 ಕೋಟಿ	58	₹1,985
	ಹೆಬ್ಬಾಳ	812	812	₹10 ಲಕ್ಷ	0	₹1,231
	ಒಟ್ಟು	18,246	17,788	₹6.75 ಕೋಟಿ	458	
ದಕ್ಷಿಣ	ಜಯನಗರ	588	565	₹0	23	0
	ಪದ್ಮನಾಭನಗರ	689	664	₹0	25	0
	ಬೆಂಗಳೂರು ದಕ್ಷಿಣ	2,240	2,151	₹1.12 ಕೋಟಿ	89	₹5,222
	ಬೊಮ್ಮನಹಳ್ಳಿ	742	719	₹89.24 ಲಕ್ಷ	23	₹12,411
	ಬಿಟಿಎಂ ಲೇಔಟ್	375	344	₹53.24 ಲಕ್ಷ	31	₹15,476
	ಒಟ್ಟು	4,634	4,443	₹2.54 ಕೋಟಿ	191	

1 ರಸ್ತೆ ಗುಂಡಿ ದುರಸ್ತಿಗೆ ₹1 ಲಕ್ಷ

ಒಂದನೇ ಪುಟದಿಂದ...

ದಾಸರಹಳ್ಳಿ ವಿಧಾನಸಭೆ ಕ್ಷೇತ್ರ ಎರಡು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿದ್ದು, ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿಯೊಂದು ಗುಂಡಿ ದುರಸ್ತಿಗೆ ₹24,144 ವೆಚ್ಚ ಮಾಡಲಾಗಿದ್ದರೆ, ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿಯೊಂದು ಗುಂಡಿ ಮುಚ್ಚಲು ₹1,985 ವ್ಯಯ ಮಾಡಲಾಗಿದೆ. ಪದ್ಮನಾಭನಗರ ವಿಧಾನಸಭೆ ಕ್ಷೇತ್ರದಲ್ಲಿ ಪ್ರತಿಯೊಂದು ಗುಂಡಿ ಮುಚ್ಚಲು ಪಶ್ಚಿಮ ನಗರ ಪಾಲಿಕೆ ₹22,123 ವೆಚ್ಚ ಮಾಡಿದ್ದರೆ, ಅದೇ ಕ್ಷೇತ್ರದಲ್ಲಿ ದಕ್ಷಿಣ ನಗರ ಪಾಲಿಕೆ 1 ಪೈಸೆಯನ್ನೂ ವೆಚ್ಚ ಮಾಡದೆ 664 ಗುಂಡಿಗಳನ್ನು ಮುಚ್ಚಿದೆ.

ಬಿಜೆಪಿಯ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ವಿಧಾನಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೀಡಿರುವ ಉತ್ತರದಲ್ಲಿ ಈ ಅಂಕಿ–ಅಂಶ ನೀಡಲಾಗಿದೆ. 2026ರ ಮಾರ್ಚ್ 10ರಂದು ಈ ಉತ್ತರವನ್ನು ನೀಡಲಾಗಿದೆ. ಆರು ತಿಂಗಳ ಅವಧಿಯಲ್ಲಿ 39 ಸಾವಿರಕ್ಕೂ ಹೆಚ್ಚು ಗುಂಡಿಗಳನ್ನು ಮುಚ್ಚಲಾಗಿದ್ದು, ಅದಕ್ಕಾಗಿ ₹33.85 ಕೋಟಿ ವೆಚ್ಚ ಮಾಡಲಾಗಿದೆ ಎಂದು ಮಾಹಿತಿ ನೀಡಲಾಗಿದೆ.

ಈ ಮಾಹಿತಿಯನ್ನು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಉಲ್ಲೇಖಿಸಿದ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು, 'ಒಂದೊಂದು ಗುಂಡಿ ಮುಚ್ಚಲು ಲಕ್ಷಗಟ್ಟಲೆ ಖರ್ಚು ಮಾಡಿದ್ದರೂ, ಗುಂಡಿಗಳು ಮಾತ್ರ ಹಾಗೆಯೇ ಉಳಿದಿವೆ' ಎಂದು ಟೀಕಿಸಿದರು.

'ಮುಚ್ಚಿದ ಗುಂಡಿಗಳೆಲ್ಲವೂ ಈಗ ತೆರೆದುಕೊಂಡಿವೆ. ಹಾಗಿದ್ದರೆ ಇವರು ಮುಚ್ಚಿದ್ದೇನು? ₹33 ಕೋಟಿ ಗುಂಡಿಯಲ್ಲೇ ಮುಚ್ಚಿ ಹೋಗಿದೆಯೇ ಎಂಬುದನ್ನು ತಿಳಿಸಬೇಕು' ಎಂದರು.

'ಸರ್ಕಾರದವರು ಗುಂಡಿ ಮುಚ್ಚಿರುವುದರ ಸಂಬಂಧ ಇರುವ ದಾಖಲೆಗಳನ್ನು ತೆಗೆದುಕೊಂಡು ಸ್ಥಳಕ್ಕೇ ಹೋಗೋಣ, ಅಲ್ಲಿ ಏನಾಗಿದೆ ಎಂಬುದು ಗೊತ್ತಾಗುತ್ತದೆ. ಗುಂಡಿಗಳು ತೆರೆದೇ ಇರುವುದರಿಂದ ರಸ್ತೆ ಅಪಘಾತಗಳು ಸಂಭವಿಸುತ್ತಿವೆ. ಜನ ಸರ್ಕಾರಕ್ಕೆ ಶಾಪ ಹಾಕುತ್ತಿದ್ದಾರೆ' ಎಂದು ಅವರು ಹೇಳಿದರು.

ಮಂಗಳೂರು ಪೀಠ: ಶಿವಮೊಗ್ಗ ಸೇರ್ಪಡೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಂಗಳೂರಿನಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆ ಮತ್ತು ಇದರ ವ್ಯಾಪ್ತಿಗೆ ಶಿವಮೊಗ್ಗ ಜಿಲ್ಲೆಯನ್ನೂ ಒಳಪಡಿಸಲಾಗುವುದು ಎಂಬ ಪ್ರಸ್ತಾವಕ್ಕೆ ಸದಾ ವಿರೋಧವಿದೆ' ಎಂದು 'ಶಿವಮೊಗ್ಗ ಜಿಲ್ಲೆಯ ಬೆಂಗಳೂರು ನಿವಾಸಿ ವಕೀಲರ ವೇದಿಕೆ' ಸ್ಪಷ್ಟಪಡಿಸಿದೆ.

ಈ ಬಗ್ಗೆ ವೇದಿಕೆಯ ವಕೀಲರು ಮಂಗಳವಾರ ಕ್ಯಾಪಿಟಲ್ ಹೋಟೆಲ್‌ನಲ್ಲಿ ತುರ್ತು ಸಭೆ ನಡೆಸಿದರು.

'ಹೈಕೋರ್ಟ್‌ನ ಯಾವುದೇ ಸಂಚಾರಿ ಪೀಠ ರಚನೆ ಮಾಡುವ ಮುನ್ನ ಏನೆಲ್ಲಾ ಮಾನದಂಡಗಳನ್ನು ಅನುಸರಿಸಬೇಕು ಎಂಬುದಕ್ಕೆ ಜಸ್ವಂತ್ ಸಿಂಗ್ ವರದಿಯಲ್ಲಿ ಉತ್ತರವಿದೆ. ಇದರ ಅನುಸಾರ ವರದಿಯಲ್ಲಿನ 21 ಮಾನದಂಡಗಳನ್ನು ಅಧ್ಯಯನ ಮಾಡಿದ ನಂತರವೇ ಸೂಕ್ತ ತೀರ್ಮಾನ ಕೈಗೊಳ್ಳಬೇಕು ಮತ್ತು ಈ ದಿಸೆಯಲ್ಲಿ ಸೂಕ್ತ ಅಧ್ಯಯನ ನಡೆಸಬೇಕು' ಎಂದು ಸಮಿತಿ ತೀರ್ಮಾನಿಸಿತು. ವರದಿ ಸಲ್ಲಿಸಲು ಹೈಕೋರ್ಟ್‌ನ ಹಿರಿಯ ವಕೀಲ ಶ್ರೀರಂಗ ಸುಬ್ಬಣ್ಣ ಅವರ ನೇತೃತ್ವದಲ್ಲಿ ಉಪಸಮಿತಿ ರಚಿಸಲಾಯಿತು. ವೇದಿಕೆಯ ಸಂಚಾಲಕರನ್ನಾಗಿ ಹೈಕೋರ್ಟ್ ವಕೀಲ ಎಂ.ಚಾಮರಾಜ ಅವರನ್ನು ನೇಮಿಸಲಾಗಿದೆ.

ದೊಮ್ಮಲೂರಿನಲ್ಲಿ ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ

ಉಮರ್ ಖಾಲಿದ್ ಕುರಿತ ಪುಸ್ತಕ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆಯಡಿ (ಯುಎಪಿಎ) ಬಂಧನಕ್ಕೆ ಒಳಗಾಗಿ ತಿಹಾರ್ ಜೈಲಿನಲ್ಲಿರುವ ಉಮರ್ ಖಾಲಿದ್ ಕುರಿತ ಪುಸ್ತಕ ಬಿಡುಗಡೆಗೆ ಸರ್ಕಾರ ಅವಕಾಶ ನೀಡಿದ್ದನ್ನು ವಿರೋಧಿಸಿ ಬಿಜೆಪಿ ರಾಜ್ಯ ಯುವ ಮೋರ್ಚಾದ ಸದಸ್ಯರು ದೊಮ್ಮಲೂರಿನ ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್ ಬಳಿ ಮಂಗಳವಾರ ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು. ಬಳಿಕ ಸ್ಥಳದಲ್ಲಿದ್ದ ಪೊಲೀಸರು, ಪ್ರತಿಭಟನಕಾರರನ್ನು ವಶಕ್ಕೆ ಪಡೆದು ಬಿಡುಗಡೆ ಮಾಡಿದರು.

ಸಂಸದ ಪಿ.ಸಿ.ಮೋಹನ್ ಮಾತನಾಡಿ, 'ದೇಶದ್ರೋಹಿ ಉಮರ್ ಖಾಲಿದ್ 2020ರಲ್ಲಿ ದೆಹಲಿಯಲ್ಲಿ ನಡೆದ ದಂಗೆಯ ಪ್ರಮುಖ ಆಪಾದಿತ. ಆಗ ನಡೆದಿದ್ದ ಸ್ಫೋಟದಲ್ಲಿ ಸಾವು–ನೋವು ಸಂಭವಿಸಿತ್ತು. ಆಸ್ತಿ–ಪಾಸ್ತಿಗೆ ಹಾನಿಯಾಗಿದೆ. ಜೈಲುಶಿಕ್ಷೆ ಅನುಭವಿಸುತ್ತಿರುವ ಆರೋಪಿಯನ್ನು ವೈಭವೀಕರಿಸುವ ಅಗತ್ಯ ಏನು?' ಎಂದರು.

'ಕಾರ್ಯಕ್ರಮದ ಆಯೋಜಕರು ದೇಶದ್ರೋಹಿಗಳಾದ ಕಸಬ್, ಸಂಸತ್ ಮೇಲಿನ ದಾಳಿಕೋರರನ್ನು ವೈಭವೀಕರಿಸುವ ಕೆಲಸ ಮಾಡುತ್ತಿದ್ದಾರೆ. ಬೇರೆ ರಾಜ್ಯಗಳಲ್ಲಿ ಇಂತಹ ಕಾರ್ಯಕ್ರಮಕ್ಕೆ ಅನುಮತಿ ಸಿಗುವುದಿಲ್ಲ. ಆದರೆ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಇರುವುದರಿಂದ ಇಂತಹ ಭಯೋತ್ಪಾದಕರ ಬಗ್ಗೆ ಸರ್ಕಾರ ಮೃದುಧೋರಣೆ ಹೊಂದಿದೆ. ಆದ್ದರಿಂದಲೇ ಇಲ್ಲಿ ಕಾರ್ಯಕ್ರಮ ಆಯೋಜನೆಯಾಗಿದೆ' ಎಂದರು.

ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, 'ದೆಹಲಿ ಗಲಭೆ ಪ್ರಕರಣದಲ್ಲಿ ಯುಎಪಿಎ ಅಡಿಯಲ್ಲಿ ಬಂಧಿತನಾಗಿರುವ ಉಮರ್ ಖಾಲಿದ್ ಹಾಗೂ ಶಾರ್ಜಿಲ್ ಇಮಾಮ್ ಕುರಿತ ಪುಸ್ತಕ ಬಿಡುಗಡೆಗೆ ಭಾರತೀಯ ಜನತಾ ಪಕ್ಷದ ವಿರೋಧವಿದೆ' ಎಂದರು.

ಆರ್. ಅಶೋಕ ಎಚ್ಚರಿಕೆ

'ಉಮರ್ ಖಾಲಿದ್ ಕುರಿತ ಕಾರ್ಯಕ್ರಮಕ್ಕೆ ಸರ್ಕಾರ ಅನುಮತಿ ನೀಡಿದ್ದು ಕಾಂಗ್ರೆಸ್ ದೇಶದ್ರೋಹಿಗಳ ಪರವೊ, ದೇಶಪ್ರೇಮಿಗಳ ಪರವೊ ಎಂದು ಇದರಿಂದಲೇ ಗೊತ್ತಾಗುತ್ತದೆ. ದೇಶದ್ರೋಹದ ಆರೋಪದ ಪ್ರಕರಣದಲ್ಲಿ ಜೈಲಿನಲ್ಲಿರುವ ಆತನನ್ನು ವೈಭವೀಕರಿಸಬೇಕಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಎಚ್ಚರಿಕೆ ನೀಡಿದರು.

'ಕುಕ್ಕರ್ ಬಾಂಬ್ ಸ್ಫೋಟ ಮಾಡಿದ ಭಯೋತ್ಪಾದಕನಿಗೆ ಗಲ್ಲು ಶಿಕ್ಷೆ ವಿಧಿಸಬೇಕಿತ್ತು. ಆತ ಜೈಲಿನಿಂದ ಹೊರಗೆ ಬಂದರೆ ಮತ್ತೆ ಅದೇ ಕೆಲಸವನ್ನು ಮುಂದುವರಿಸುತ್ತಾನೆ. ಸರ್ಕಾರ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ ಹೆಚ್ಚು ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಕಾಂಗ್ರೆಸ್ ಅವರೊಂದಿಗೆ ಶಾಮೀಲಾಗಿದೆ ಎಂದು ಭಾವಿಸಬೇಕಾಗುತ್ತದೆ. ನಾವು ಕೂಡ ಮೇಲ್ಮನವಿ ಸಲ್ಲಿಸುತ್ತೇವೆ' ಎಂದು ಹೇಳಿದರು.

ಯುವತಿ ಸಾವು: ಕಾರಣ ನಿಗೂಢ

ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಜಾರ್ಖಂಡ್‌ನ ಪೂಜಾ ದತ್ತಾ

ಪ್ರಜಾವಾಣಿ ವಾರ್ತೆ



ಪೂಜಾ ದತ್ತಾ

ಬೆಂಗಳೂರು: ಆಡುಗೋಡಿಯ ಬಾಡಿಗೆ ಮನೆಯಲ್ಲಿ ಜಾರ್ಖಂಡ್‌ನ ಪೂಜಾ ದತ್ತಾ (34) ಎಂಬ ಯುವತಿಯ ಅನುಮಾನಾಸ್ಪದ ಸಾವಿನ ಕಾರಣವು ನಿಗೂಢವಾಗಿದ್ದು, ಆಡುಗೋಡಿ ಠಾಣೆಯ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಆತ್ಮಹತ್ಯೆ, ಕೊಲೆ ಆಯಾಮಗಳಲ್ಲಿ ತನಿಖೆ ನಡೆಸಲಾಗುತ್ತಿದೆ. ಇದುವರೆಗೂ ಪೂಜಾ ಸಾವಿಗೆ ಕಾರಣ ಗೊತ್ತಾಗಿಲ್ಲ ಎಂದು ಪೊಲೀಸರು ಹೇಳಿದರು.

‘ಮನೆಯ ಮಾಲೀಕರಿಂದ ಹೇಳಿಕೆ ಪಡೆದುಕೊಳ್ಳಲಾಗಿದೆ. ಜಾರ್ಖಂಡ್‌ನಿಂದ ಕುಟುಂಬಸ್ಥರು ಬುಧವಾರ ಬರಲಿದ್ದಾರೆ. ಅವರು ಬಂದ ಮೇಲೆ ಹೇಳಿಕೆ ಪಡೆದು ತನಿಖೆ ಮುಂದುವರಿಸಲಾಗುವುದು’ ಎಂದು ಪೊಲೀಸರು ಹೇಳಿದರು.

ಮೃತದೇಹವನ್ನು ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಇರಿಸಲಾಗಿದ್ದು, ಅವರ ಪೋಷಕರು ಬೆಂಗಳೂರಿಗೆ ಬಂದ ನಂತರ ಮರಣೋತ್ತರ ಪರೀಕ್ಷೆ ನಡೆಸಲಾಗುವುದು. ಮರಣೋತ್ತರ ಪರೀಕ್ಷೆಯ ವರದಿ ಬಂದ ಮೇಲೆ ಪೂಜಾ ಸಾವಿಗೆ ಕಾರಣ ಗೊತ್ತಾಗಲಿದೆ ಎಂದು ಪೊಲೀಸರು ಹೇಳಿದರು.

ಹೊಸೂರು ರಸ್ತೆಯಲ್ಲಿರುವ ಸಾಫ್ಟ್‌ವೇರ್ ಕಂಪನಿಯಲ್ಲಿ ಪೂಜಾ ದತ್ತಾ ಕೆಲಸ ಮಾಡುತ್ತಿದ್ದರು. ಆಡುಗೋಡಿ ಬಳಿಯ ಮುನಿಕೃಷ್ಣಪ್ಪ ಲೇಔಟ್‌ನ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಕಳೆದೊಂದು ವಾರದಿಂದ ಕೆಲಸಕ್ಕೆ ಹೋಗದೇ ಮನೆಯಲ್ಲಿ ಇದ್ದ ಅವರು, ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ. ಸೋಮವಾರ ಸಂಜೆ ಮನೆಯಿಂದ ದುರ್ನಾತ ಬರುತ್ತಿರುವುದನ್ನು ಗಮನಿಸಿ ಮನೆಯ ಮಾಲೀಕರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರು ಬಂದು ಬಾಗಿಲು ಒಡೆದು ಪರಿಶೀಲನೆ ನಡೆಸಿದಾಗ ಅರೆನಗ್ನ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿತ್ತು.

‘ಪೂಜಾ, ಯುವಕನೊಬ್ಬನನ್ನು ಪ್ರೀತಿಸುತ್ತಿದ್ದರು. ಆ ಯುವಕ ಆಗಾಗ್ಗೆ ಪೂಜಾ ಅವರ ಮನೆಗೆ ಬಂದು ಹೋಗುತ್ತಿದ್ದ ಎಂದು ನೆರೆಹೊರೆಯವರ ವಿಚಾರಣೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ಪೂಜಾ ಅವರು ದಿನಚರಿ ಬರೆಯುವ ಹವ್ಯಾಸ ಹೊಂದಿದ್ದರು. ದೈನಂದಿನ ಖರ್ಚು–ವೆಚ್ಚ, ವ್ಯಕ್ತಿಗಳ ಭೇಟಿ, ಕಚೇರಿಯ ಕಾರ್ಯ ಚಟುವಟಿಕೆಗಳು ಸೇರಿದಂತೆ ಎಲ್ಲಾ ಸಂಗತಿಗಳನ್ನು ಡೈರಿಯಲ್ಲಿ ಬರೆದಿದ್ದಾರೆ. ಡೈರಿಗಳನ್ನು ವಶಕ್ಕೆ ಪಡೆದುಕೊಂಡು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಪೂಜಾ ಬಳಸುತ್ತಿದ್ದ ಮೊಬೈಲ್ ಮನೆಯಲ್ಲೇ ಪತ್ತೆಯಾಗಿದೆ. ವಶಕ್ಕೆ ಪಡೆದು ಪರಿಶೀಲನೆ ನಡೆಸಲಾಗುತ್ತಿದೆ. ಮೊಬೈಲ್ ಕರೆಗಳ ವಿವರ, ವಾಟ್ಸ್‌ಆ್ಯಪ್ ಸಂದೇಶಗಳ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ತನಿಖಾಧಿಕಾರಿ ಹೇಳಿದರು.

ಮನೆಯ ತುಂಬಾ ಕಸದ ರಾಶಿ

ಪೂಜಾ ವಾಸವಿದ್ದ ಮನೆಯ ಗೋಡೆಗಳ ತುಂಬೆಲ್ಲಾ ಇಂಗ್ಲಿಷ್ – ಹಿಂದಿ ಭಾಷೆಯಲ್ಲಿ ಬರೆದ ಚೀಟಿಗಳನ್ನು ಅಂಟಿಸಲಾಗಿದೆ. ಚಿತ್ರಗಳನ್ನು ಬಿಡಿಸಿ ಗೋಡೆಗೆ ಹಾಕಲಾಗಿದೆ. ಮನೆಯ ಒಂದು ಕೊಠಡಿಯ ತುಂಬಾ ಕಸ ಮತ್ತು ಹರಿದ ಕಾಗದಗಳನ್ನು ತುಂಬಿಸಿಡಲಾಗಿದೆ. ಐದಾರು ಮೂಟೆಯಷ್ಟು ಹಳೆಯ ಕಾಗದಗಳು ಮನೆಯಲ್ಲಿ ಪತ್ತೆ ಆಗಿವೆ ಎಂದು ಅಧಿಕಾರಿಯೊಬ್ಬರು ಹೇಳಿದರು.

ಅಪರಾಧ ಸುದ್ದಿ

ಅಗ್ನಿ ದುರಂತ: 12 ಶೆಡ್ ಭಸ್ಮ

ಬೆಂಗಳೂರು: ಸೋಮಸಂದ್ರಪಾಳ್ಯದ ಖಾಲಿ ಪ್ರದೇಶದಲ್ಲಿ ಪಶ್ಚಿಮ ಬಂಗಾಳದ ಕಾರ್ಮಿಕರು ಹಾಕಿಕೊಂಡಿದ್ದ ಶೆಡ್‌ಗಳಲ್ಲಿ ಬೆಂಕಿ ಅವಘಡ ಸಂಭವಿಸಿ, 12 ಶೆಡ್‌ಗಳು ಭಸ್ಮವಾಗಿವೆ.

ಎಚ್‌ಎಸ್‌ಆರ್ ಬಡಾವಣೆಯ ಎರಡನೇ ವಲಯದ ಒಂದನೇ ಮುಖ್ಯರಸ್ತೆಯಲ್ಲಿ ಇರುವ ಪ್ರಕಾಶ್ ಎಂಬುವರಿಗೆ ಸೇರಿದ ಜಾಗದಲ್ಲಿ ಕಾರ್ಮಿಕರು ಶೆಡ್ ನಿರ್ಮಿಸಿಕೊಂಡಿದ್ದರು. ಭಾನುವಾರ ನಸುಕಿನಲ್ಲಿ ಅವಘಡ ಸಂಭವಿಸಿದೆ.

ಅವಘಡದಲ್ಲಿ ಒಂದು ಫ್ರಿಜ್, ಎರಡು ಹಳೇ ಸ್ಕೂಟರ್ ಹಾಗೂ ಎರಡು ಸೈಕಲ್ ಸೇರಿ ಶೆಡ್‌ನಲ್ಲಿದ್ದ ವಸ್ತುಗಳು ಭಸ್ಮವಾಗಿವೆ.

ಶೆಡ್‌ಗಳಲ್ಲಿ ಪಶ್ಚಿಮ ಬಂಗಾಳದ ಕಾರ್ಮಿಕರು ವಾಸವಿದ್ದರು. ಚುನಾವಣೆಯಲ್ಲಿ ಮತದಾನ ಮಾಡಲು ಕಾರ್ಮಿಕರು ತಮ್ಮ ರಾಜ್ಯಕ್ಕೆ ತೆರಳಿದ್ದರು. ಹೀಗಾಗಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಗಾಂಜಾ ವ್ಯಸನಿಗಳು ಶೆಡ್‌ಗಳಿಗೆ ಬೆಂಕಿ ಹಾಕಿರುವ ಶಂಕೆ ಇದೆ. ಸ್ವಯಂಪ್ರೇರಿತ ಪ್ರಕರಣ ದಾಖಲು ಮಾಡಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ವೇಶ್ಯಾವಾಟಿಕೆ: ಆರು ಮಂದಿ ವಶ

ಬೆಂಗಳೂರು: ಕೋರಮಂಗಲ ಪೊಲೀಸ್ ಠಾಣೆ ವ್ಯಾಪ್ತಿಯ ಮಡಿವಾಳ ಚೆಕ್‌ಪೋಸ್ಟ್ ಬಳಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಆರೋಪದ ಅಡಿ ವಿದೇಶದ ಆರು ಮಹಿಳೆಯರನ್ನು ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ.

ಚೆಕ್‌ಪೋಸ್ಟ್ ಬಳಿಯ ಬಸ್ ನಿಲ್ದಾಣದ ಪಾದಚಾರಿ ಮಾರ್ಗದಲ್ಲಿ ವಿದೇಶಿ ಮಹಿಳೆಯರು ನಿಂತುಕೊಂಡು ಅದೇ ರಸ್ತೆಯಲ್ಲಿ ಓಡಾಟ ನಡೆಸುವ ಪುರುಷರನ್ನು ವೇಶ್ಯಾವಾಟಿಕೆಗೆ ಪ್ರಚೋದಿಸುತ್ತಿದ್ದಾರೆ ಎನ್ನುವ ಮಾಹಿತಿ ಬಂದಿತ್ತು. ಆ ಮಾಹಿತಿ ಆಧರಿಸಿ ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಅಧಿಕಾರಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ, ವಿದೇಶದ ಆರು ಮಹಿಳೆಯರು ರಸ್ತೆಯಲ್ಲಿ ಓಡಾಡುತ್ತಿರುವ ಪುರುಷರನ್ನು ವೇಶ್ಯಾವಾಟಿಕೆಗೆ ಪ್ರಚೋದಿಸುತ್ತಾ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿರುವುದು ಕಂಡುಬಂದಿತ್ತು. ತಕ್ಷಣವೇ ಕಾರ್ಯಪ್ರವೃತ್ತರಾದ ಸಿಬ್ಬಂದಿ, ಆರು ಮಹಿಳೆಯರನ್ನು ವಶಕ್ಕೆ ಪಡೆದರು ಎಂದು ಮೂಲಗಳು ಹೇಳಿವೆ.

ವಶಕ್ಕೆ ಪಡೆದವರನ್ನು ವಿಚಾರಣೆ ನಡೆಸಿದಾಗ, ಪಾಸ್‌ಪೋರ್ಟ್–ವೀಸಾ ಕುರಿತು ಸರಿಯಾದ ಮಾಹಿತಿ ನೀಡಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕಾಳಸಂತೆಯಲ್ಲಿ ಐಪಿಎಲ್ ಟಿಕೆಟ್ ಮಾರಾಟ: 24 ಮಂದಿ ಸೆರೆ



ಬೆಂಗಳೂರು: ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಪಂದ್ಯಾವಳಿಯ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಅಧಿಕ ಬೆಲೆಗೆ ಮಾರಾಟ ಮಾಡುತ್ತಿದ್ದವರ ವಿರುದ್ಧ ಒಂದು ತಿಂಗಳಲ್ಲಿ ನಡೆದ ಕಾರ್ಯಾಚರಣೆಯಲ್ಲಿ 24 ಮಂದಿಯನ್ನು ಬಂಧಿಸಲಾಗಿದೆ.

ಆರೋಪಿಗಳ ವಿರುದ್ಧ ಒಟ್ಟು 17 ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರೋಪಿಗಳಿಂದ ಒಟ್ಟು 37 ಐಪಿಎಲ್ ಟಿಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ 16 ಪ್ರಕರಣಗಳು ದಾಖಲಾಗಿದ್ದು, ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಒಂದು ಪ್ರಕರಣ ದಾಖಲಾಗಿದೆ ಎಂದು ಬೆಂಗಳೂರು ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಮಚೀಂದ್ರ ತಿಳಿಸಿದರು.

ಐಪಿಎಲ್ ಪಂದ್ಯಗಳ ಟಿಕೆಟ್‌ಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದವರ ವಿರುದ್ಧ ಸಿಸಿಬಿ ಪೊಲೀಸರು, ಕಬ್ಬನ್‌ಪಾರ್ಕ್ ಹಾಗೂ ಹಲಸೂರು ಗೇಟ್ ಠಾಣೆ ಪೊಲೀಸರ ನೇತೃತ್ವದಲ್ಲಿ ಜಂಟಿ ಕಾರ್ಯಾಚರಣೆ ನಡೆಸಲಾಯಿತು. ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ)–ಗುಜರಾತ್ ಟೈಟನ್ಸ್ , ಆರ್‌ಸಿಬಿ– ಡೆಲ್ಲಿ ಕ್ಯಾಪಿಟಲ್ಸ್, ಆರ್‌ಸಿಬಿ–ಎಲ್‌ಎಸ್‌ಜಿ ತಂಡಗಳ ನಡುವೆ ನಡೆದ ಐಪಿಎಲ್ ಪಂದ್ಯಗಳ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲಾಗಿತ್ತು. ಕ್ರೀಡಾಂಗಣದ ಸುತ್ತಮುತ್ತ ಸೇರಿದಂತೆ ಬೇರೆ ಸ್ಥಳಗಳಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆರ್‌ಸಿಬಿ ಹಾಗೂ ಎಲ್‌ಎಸ್‌ಜಿ ನಡುವಿನ ಪಂದ್ಯದ ವೇಳೆ ಟಿಕೆಟ್ ಮಾರುತ್ತಿದ್ದ ಆರೋಪದಡಿ ಚಿನ್ನಸ್ವಾಮಿ ಕ್ರೀಡಾಂಗಣದ ಲಕ್ಷ್ಮಿ ಕ್ಯಾಂಟೀನ್‌ನ ನೌಕರ ಪಿ.ಚಂದ್ರಶೇಖರ್ ಎಂಬಾತನನ್ನು ಬಂಧಿಸಲಾಗಿದೆ. ಕೆಎಸ್‌ಸಿಎ ಸದಸ್ಯನೆಂದು ಹೇಳಿಕೊಂಡು ಚಂದ್ರಶೇಖರ್ ಅವರಿಗೆ ಟಿಕೆಟ್ ನೀಡಿದ್ದ ವ್ಯಕ್ತಿಯ ಪತ್ತೆ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ರೀಲ್ಸ್’: ಕ್ಷಮೆ ಕೇಳಿದ ರಜತ್

ಬೆಂಗಳೂರು: ಬಿಗ್‌ಬಾಸ್ ಮಾಜಿ ಸ್ಪರ್ಧಿ, ಕಿರುತೆರೆ ನಟ ರಜತ್ ಕಿಶನ್ ಅವರು ಪೆಟ್ರೋಲ್ ಬಾಂಬ್ ಮಾದರಿಯ ವಸ್ತುಗಳನ್ನು ರಸ್ತೆಯಲ್ಲಿಟ್ಟು ಸ್ಫೋಟಿಸಿ ‘ರೀಲ್ಸ್’ ಚಿತ್ರೀಕರಣ ಮಾಡಿದ್ದು, ಅದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

‘ಈ ರೀತಿಯ ವಿಡಿಯೊದ ಮೂಲಕ ಸಮಾಜಕ್ಕೆ ಯಾವ ಸಂದೇಶ ನೀಡುತ್ತಿದ್ದೀರಿ’ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ ಬೆನ್ನಲ್ಲೇ ರಜತ್ ಕಿಶನ್ ಕ್ಷಮೆ ಕೇಳಿದ್ದಾರೆ. ವಿಡಿಯೊ ಕುರಿತು ಸ್ಪಷ್ಟನೆ ಸಹ ನೀಡಿದ್ದಾರೆ.

‘ಪ್ರಮೋಷನಲ್ ವಿಡಿಯೊ ಮಾಡಿದ್ದೆವು. ಅದು ಸುದ್ದಿಯಾಗಿದೆ. ಯಾರಿಗೂ ನೋವನ್ನುಂಟು ಮಾಡುವ ಉದ್ದೇಶ ಇಲ್ಲ. ನಾನು ಕಲಾವಿದನಾಗಿ ಆ ರೀಲ್ಸ್‌ನಲ್ಲಿ ಕಾಣಿಸಿಕೊಂಡಿದ್ದೆ. ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹಾಕಿರುವುದು ಗೊತ್ತಾದ ತಕ್ಷಣವೇ ತಂಡದ ಸದಸ್ಯರಿಗೆ ತಿಳಿಸಿ ಡಿಲೀಟ್ ಮಾಡಿಸಿದ್ದೇನೆ’ ಎಂದು ರಜತ್ ಸ್ಪಷ್ಟನೆ ನೀಡಿದ್ದಾರೆ.

‘ಎಲ್ಲ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲಾಗಿತ್ತು. ಯಾರಿಗೂ ಹಾನಿ ಆಗದಂತೆ ಕ್ರಮ ತೆಗೆದುಕೊಳ್ಳಲಾಗಿತ್ತು. ಕನಕಪುರ ರಸ್ತೆಯ ಬಳಿ ವಿಡಿಯೊ ಚಿತ್ರೀಕರಿಸಿದ್ದೆವು. ಆ ಊರಿನ ಮುಖಂಡರ ಅನುಮತಿಯನ್ನೂ ಪಡೆದುಕೊಂಡಿದ್ದೆವು’ ಎಂದರು. ಈ ಹಿಂದೆಯೂ ಸಾರ್ವಜನಿಕ ಸ್ಥಳದಲ್ಲಿ ಮಾರಕಾಸ್ತ್ರ ಹಿಡಿದು ‘ರೀಲ್ಸ್’ ಮಾಡಿ ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದ ರಜತ್ ಹಾಗೂ ವಿನಯ್ ಗೌಡ ಅವರನ್ನು ಬಸವೇಶ್ವರ ನಗರ ಠಾಣೆಯ ಪೊಲೀಸರು ಬಂಧಿಸಿದ್ದರು.

ಮಕ್ಕಳ ಮೇಲೆ ಹಲ್ಲೆ: ‘ಕೈ’ ಮುಖಂಡ ಸೆರೆ

ಬೆಂಗಳೂರು: ಮಕ್ಕಳ ಮೇಲೆ ಹಲ್ಲೆ ನಡೆಸಿದ ಆರೋಪದಡಿ ಮಹಾಲಕ್ಷ್ಮಿ ಲೇಔಟ್‌ನ ಕಾಂಗ್ರೆಸ್ ಮುಖಂಡ ಆನಂದ್ ನಾಯ್ಡು ಅವರನ್ನು ಅನ್ನಪೂರ್ಣೇಶ್ವರಿ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನಾಪತ್ತೆಯಾದ ಮತ್ತೊಬ್ಬ ಆರೋಪಿಗೆ ಶೋಧ ನಡೆಸಲಾಗುತ್ತಿದೆ. ಮಕ್ಕಳ ಕೈ ಹಾಗೂ ಕಾಲಿಗೆ ರಾಡಿನಿಂದ ಹಲ್ಲೆ ನಡೆಸಲಾಗಿದೆ. ಆರೋಪಿಯ ವಿರುದ್ಧ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಂಡು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಹಿಳೆಯ ಜತೆಗೆ ಆನಂದ್ ನಾಯ್ಡುಗೆ ಸಲುಗೆ ಇತ್ತು. ಈ ಸಂಬಂಧವನ್ನು ಮಹಿಳೆಯ ಪತಿ ಪ್ರಶ್ನಿಸಿದ್ದರು. ಪ್ರಶ್ನಿಸಿದ್ದಕ್ಕೆ ಕುಪಿತಗೊಂಡಿದ್ದ ಆರೋಪಿ ಆನಂದ ನಾಯ್ಡು, ತಂದೆ ಮನೆಯಲ್ಲಿ ಇಲ್ಲದ ವೇಳೆ ಮನೆಗೆ ನುಗ್ಗಿ ಮಕ್ಕಳ ಮೇಲೆ ಹಲ್ಲೆ ನಡೆಸಿದ್ದ’ ಎಂದು ಪೊಲೀಸರು ಹೇಳಿದರು.

ಬೈಕ್ ಮೆಕ್ಯಾನಿಕಲ್: ಸಮಾವೇಶ



ಬೆಂಗಳೂರು: ಕಾರ್ಮಿಕ ದಿನಾಚರಣೆಯ ಅಂಗವಾಗಿ ಕರ್ನಾಟಕ ದ್ವಿಚಕ್ರ ವಾಹನ ಕಾರ್ಯಾಗಾರ ಮಾಲೀಕರು ಮತ್ತು ತಂತ್ರಜ್ಞರ ಸಂಘದಿಂದ ಮೇ 1ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಲ್ ಇಂಡಿಯಾ ಬೈಕ್ ಮೆಕ್ಯಾನಿಕಲ್ ಅಸೋಸಿಯೇಷನ್ ಸಮಾವೇಶ ಆಯೋಜಿಸಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಕೆ.ಎಸ್. ಪ್ರಸನ್ನ ಕುಮಾರ್ ಗೌಡ, ‘ದೇಶದ ವಿವಿಧ ಭಾಗಗಳಿಂದ 12,500ಕ್ಕೂ ಅಧಿಕ ಮೆಕ್ಯಾನಿಕ್‌ಗಳು ಭಾಗವಹಿಸುವ ನಿರೀಕ್ಷೆಯಿದೆ. ದ್ವಿಚಕ್ರ ವಾಹನಗಳ ಅತ್ಯಾಧುನಿಕ ಪರಿಕರಗಳ ಪ್ರದರ್ಶನ ಇರಲಿದೆ’ ಎಂದರು.

ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದರು.



ಕರ್ನಾಟಕ ಕಲಾದರ್ಶಿನಿ ತಂಡ ಹಮ್ಮಿಕೊಂಡಿರುವ ಬೇಸಿಗೆ ಶಿಬಿರದ ಭಾಗವಾಗಿ ಬಾಲ ಕಲಾವಿದರು ‘ಹಿರಣ್ಯಾಕ್ಷ ವಧೆ ಭಕ್ತ ಪ್ರಹ್ಲಾದ’ ಯಕ್ಷಗಾನ ಪ್ರಸಂಗವನ್ನು ಇತ್ತೀಚೆಗೆ ಗಿರಿನಗರದ ರಾಮಚಂದ್ರಾಪುರ ಮಠದಲ್ಲಿ ಪ್ರಸ್ತುತಪಡಿಸಿದರು

ಚಲನಚಿತ್ರ ವಾಣಿಜ್ಯ ಮಂಡಳಿ ಎದುರು ಪ್ರತಿಭಟನೆ

ಚೇತನ್ ಸದಸ್ಯತ್ವ ರದ್ದತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಚೇತನ್ ಸದಸ್ಯತ್ವ ರದ್ದು ಮಾಡುವಂತೆ ಆಗ್ರಹಿಸಿ ಚಲನಚಿತ್ರ ವಾಣಿಜ್ಯ ಮಂಡಳಿ ಎದುರು ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್ ಶೆಟ್ಟಿ ಬಣದಿಂದ ಪ್ರತಿಭಟನೆ ನಡೆಸಲಾಯಿತು.

ಪ್ರವೀಣ್ ಶೆಟ್ಟಿ ಹಾಗೂ ಸಾ.ರಾ ಗೋವಿಂದ್ ನೇತೃತ್ವದಲ್ಲಿ ಜಮಾಯಿಸಿದ ಕಾರ್ಯಕರ್ತರು, ಚೇತನ್ ವಿರುದ್ಧ ಘೋಷಣೆ ಕೂಗಿದರು.

‘ರಾಜ್‌ಕುಮಾರ್ ಅವರ ಬಗ್ಗೆ ಚೇತನ್ ಹೇಳಿಕೆ ನೀಡಿರುವುದು ಸರಿಯಲ್ಲ. ಮಹಾನ್ ನಾಯಕರ ಬಗ್ಗೆ ಮಾತನಾಡಿರುವುದು ಎಷ್ಟರ ಮಟ್ಟಿಗೆ ಸರಿ’ ಎಂದು ಪ್ರತಿಭಟನಕಾರರು ಪ್ರಶ್ನಿಸಿದರು.

ಕೂಡಲೇ ವಾಣಿಜ್ಯ ಮಂಡಳಿ ಸಭೆ ಸೇರಿ, ಅವರ ಸದಸ್ಯತ್ವ ರದ್ದುಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದರು.

‘ನಾವು ರಾಜ್‌ಕುಮಾರ್ ಅವರನ್ನು ಒಬ್ಬ ಮಹಾನ್ ಕಲಾವಿದರಾಗಿ ಗೌರವಿಸುತ್ತೇವೆ. ಆದರೆ, ಬೆಂಗಳೂರು ನಗರದ ಮಧ್ಯದಲ್ಲಿ, 2006ರಲ್ಲಿ ಒಬ್ಬ ನಟನ ಸಮಾಧಿ ಕಾಂಪ್ಲೆಕ್ಸ್‌ಗಾಗಿ 2.5 ಎಕರೆ ಭೂಮಿಯನ್ನು ನೀಡುವುದು ತಿಳಿವಳಿಕೆಯ ನಿರ್ಧಾರವಾಗಿತ್ತೇ ಎಂಬುದನ್ನು ಪ್ರಶ್ನಿಸಬೇಕಾಗಿದೆ’ ಎಂದು ಚೇತನ್ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು.

‘ಬೆಂಕಿ ಹಚ್ಚುವ ಕೆಲಸ’: ‘ಚೇತನ್ ಮಾತನಾಡಿರುವುದು ತಪ್ಪು. ಅವರಿಗೆ ರಾಜ್‌ಕುಮಾರ್ ಅವರ ಬಗ್ಗೆ ಮಾತನಾಡಲು ಯಾವ ಅಧಿಕಾರವೂ ಇಲ್ಲ. ಉದ್ವಿಗ್ನ ಸ್ಥಿತಿ ಉಂಟಾಗಲಿ ಎಂದು ಈ ರೀತಿ ಮಾಡುತ್ತಿದ್ದಾರೆ. ಬೆಂಕಿ ಹಚ್ಚುವ ಕೆಲಸವನ್ನು ಮಾಡಿದ್ದಾರೆ’ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ಹೇಳಿದ್ದಾರೆ.

ರಕ್ಷಣಾ ವೇದಿಕೆ ಮನವಿ ಸ್ವೀಕರಿಸಿ ಮಾತನಾಡಿದ ಅವರು, ‘ಚೇತನ್ ಒಂದೊಂದು ಸಲ ಒಂದೊಂದು ಹೇಳಿಕೆ ನೀಡುತ್ತಿದ್ದಾರೆ. ಅವರ ಬಗ್ಗೆ ಬಹಳ ಕೋಪವಿದೆ. ಅವರು ಭಾರತೀಯ ಪೌರತ್ವ ಹೊಂದಿದವರಲ್ಲ. ಸರ್ಕಾರಕ್ಕೆ ಪತ್ರ ಬರೆದು ಚೇತನ್ ಅವರನ್ನು ಗಡಿಪಾರು ಮಾಡಲು ಮನವಿ ನೀಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಜಿ. ಪರಮೇಶ್ವರ ಜೊತೆ ಮಾತನಾಡುತ್ತೇವೆ. ಶೀಘ್ರದಲ್ಲಿಯೇ ಚೇತನ್ ಅವರನ್ನೂ ಕರೆಯಿಸಿ ಮಾತನಾಡುತ್ತೇವೆ’ ಎಂದರು.



ನಟ ಚೇತನ್ ಸದಸ್ಯತ್ವ ರದ್ದುಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ಚಲನ ಚಿತ್ರ ವಾಣಿಜ್ಯ ಮಂಡಳಿ ಎದುರು ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದಿಂದ ಪ್ರತಿಭಟನೆ ನಡೆಸಲಾಯಿತು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED MATHEMATICS and PE TEACHER for High School. Clerk for PUC. 'DVS INSTITUTION', Magadi Main Road, Sunkadakatte. 9535305299.

VIDHYODAYA PUBLIC ENGLISH HIGH SCHOOL
No 34, 31st Main Road, Nandini Layout, Bengaluru -96
WANTED TEACHERS
Head Mistress - MA / M Sc with B.Ed/M.Ed
Asst. Mistress - Math B.Sc with B.Ed
Asst. Mistress - Kannada MA with B.Ed
Asst. Mistress - Science B.Sc P.cm C.bz
Asst. Mistress - English /Social science /Hindi
Gmail: Vidhyodayapublicenglishschool@gmail.com
Phone No.: 9481476037, 8310456547

Wanted Experienced Lady Teachers with excellent communication skills in English
1. Lower Primary
Graduate with B.Ed./D.Ed.
2. Higher Primary
Graduate with a B.Ed. to teach Mathematics
Walk-in Interview
Thursday, 30th April 2026
Between: 9:30 am-11:30 am
Or Email your resume to info@florence.edu.in for an appointment.
Florence High School
3rd Block, 3rd Stage, Basaveshwaranagar, Bengaluru-560 079
Tel : 080-23236160/41536695

JUNIOR ACCOUNTANT (Female) B.Com, Experience 2 years ESI, PF, Salary, Tally. AUTOCAD DESIGNER (Female) Coreldraw+ Solid works. Experience. 2 years for Industry in Peenya. 9972410541, 9845915484 infusilindia@infusil.in

SARVODAYA NATIONAL PUBLIC SCHOOL
(Affiliated to CISCE [KA-152], New Delhi)
No. 12, 10th Main Road, Binny Layout, Vijayanagar, Bangalore - 560040
Ph.: 080-23148310 / 23506790 www.sarvodayanps.com
Join Our Team Hiring Teachers for the Year 2026-27
We are currently seeking dedicated and enthusiastic teachers for various subjects across all levels. Competitive salary, supportive work environment, modern teaching facilities are some of the things you will have at Sarvodaya.
Current open positions:
- Middle School
  - English
  - History, Civics and Geography
  - ATL – Candidate should have B E / B Tech in Electronics, knowledge and experience in Robotics and AI
- Primary School
  - Mathematics

Teachers across all levels must possess:
- B.Ed, Post Graduation Degree in respective subjects.
- 3+ years of experience in ICSE/CBSE schools.

Send your updated resume to sarvodayacareers@gmail.com
OR
Walk in for an interview on **04th MAY 2026**

BISHOP COTTON BOYS' SCHOOL
BENGALURU
REQUIRES
JUNIOR SCHOOL
FRENCH TEACHER (PART-TIME) : Diploma from Indian or foreign universities or A 2 level certificate examination from Alliance Franchaise or Level 2 certificate in French from the institute of foreign languages, Hyderabad.
ISC
ACCOUNTANCY TEACHER : M.Com., B.Ed with specialization in Accountancy and good command over English.
Apply to: The Principal,
BISHOP COTTON BOYS' SCHOOL
Residency Road, Bangalore – 560 025.
E-mail: bcbs@bishopcottonboysschool.edu.in
Last date for submission of applications: Friday, the 8th May 2026 before 3.00 p.m.
ROUNAQH

WANTED TEACHER SOCIAL & ENGLISH Male or Female Primary & High School, Mathikere, Yeshwanthpur, Bangalore. Contact: No:- 9379191544.

DTP OPERTOR with experience Coral-Draw in design photo shop ETC 2 person required. Urgent. 9986647943/ 9611921742.

THIRUPATHI EDUCATION SOCIETY (R)
CMN INSTITUTE OF TECHNOLOGY
(Affiliated to VTU-Belagavi, Recognized by GOK and Approved by AICTE - New Delhi)
18, Lingadhiranahalli, D Group Employess Layout, Herohalli, Vishwaneedam Post, Off Magadi Main Road, Bengaluru - 560 091 | Call : 9480339078
RECRUITMENT OF TEACHING & NON-TEACHING STAFF
The above society proposes to establish a new engineering institute titled "CMN INSTITUTE OF TECHNOLOGY" with a vision "To inculcate discipline, dedication, and determination in every step of life" from the academic year 2026-27 with the approval from All India Council for Technical Education New Delhi, affiliation from Visvesvaraya Technological University Belagavi, and recognition from Government of Karnataka. The Proposed institute is named after late SRI C.M. NAGARAJ Founder of East West Group Institutions and former Mayor of Bengaluru, The new institute intends of focus on developing innovative, adaptable, and ethical engineers ready for global challenges by emphasizing interdisciplinary learning with a culture of innovation, entrepreneurship, and social responsibility. The institute will offer programs such as BE in Computer Science and Engineering / Artificial Intelligence & Machine Learning / Electronics & Communication Engineering / Electronics & Computer Engineering / Masters of Business Administration / Master of Computer Applications.
TEACHING
The new institute invites applications from the competent candidates, with a passion for teaching (Preferably with industry / Research experience) for appointment as
PROFESSORS, ASSOCIATE PROFESSORS, ASSISTANT PROFESSORS, AND FACULTY OF PRACTICE (Who will be responsible for effective teaching, scholarly pursuits, mentoring students, providing concurrent learning experience and ensuring institution well being) in Physics, Chemistry, Mathematics, English, Environmental Science, CSE / AIML / ECE / ECSE / MBA / MCA.
The candidates who have retired from institutions of eminence, reputed industries, and national / global Scientific Research Labs (active and self-driven with less than 70 years of age) are eligible to apply. Preference will be given to PhD candidate with teaching, industry and / or research experience.
7th PAY COMMISSION SCALES
are offered to the deserving candidates and higher start may be considered for accomplished candidates with proven track record
NON-TEACHING
The institute is also inviting applications from the candidates with relevant qualification and experience for recruitment for the position of Librarian, Sports director, accountants, HR Executive, Admission Managers, Instructors, Drivers, Attenders, and System Admins. Salary shall Commensurate with Qualification, Experience and IT Skills.
Interested candidates can mail their resumes to : careers@cmnit.org mentioning the "position applied for" in the subject line within 10 days from the date of advertisement
Ref: TES/CMNIT/HR/2025-26/002
Sri C.N. Shashikiran, Secretary, Thirupathi Education Society (R)

ARVIND RESIDENTIAL SCHOOL & PU COLLEGE
Kunigal. Ph: 08132-210000/ 01.
Mob: 9945210041/ 9483683002.
Website: www.arvindinternationalschool.com, www.arvindpucollege.com
REQUIRES DEDICATED & PASSIONATE PROFESSIONALS WITH GOOD COMMUNICATION SKILLS
▸ PRINCIPAL ▸ VICE PRINCIPAL
▸ CO-ORDINATOR ▸ ICSE Maths (H/S)
Experienced in ICSE, CBSE, STATE syllabus
(Preferably Karnataka residents only)
Send your resume with recent passport size photo to airsjobs@gmail.com within 5 days

SESHADRIPURAM INSTITUTIONS
27, Nagappa Street, Seshadripuram Bengaluru-560 020. Phone: 22955350
Website: www.set.edu.in E-mail : set.edu.in@gmail.com
Require
LECTURERS
for Pre-University Colleges at Bengaluru
• PHYSICS • CHEMISTRY • STATISTICS • ENGLISH • COMPUTER SCIENCE
Eligibility: Master's Degree in the relevant subject with at least 55% marks in the aggregate and at least two years teaching experience.
ACCOUNTANT
B.Com with at least 2 years experience with Computer knowledge and Tally.
WALK-IN-INTERVIEW
on Saturday the 2nd May 2026 @ 9.30 a.m.
Venue: Seshadripuram Educational Trust, 27, Nagappa Street, Seshadripuram, Bengaluru-560 020.
Eligible candidates should bring handwritten application along with resume, photos & copies of testimonials at the time of Interview
N. R. Pandith Aradhya, President — Dr. Wooday P. Krishna, Honorary General Secretary

REQUIRED EXPERIENCED Female Academic Supervisor having 3- 5 years experience, also Primary and High school teachers with B.A., M.A./ B.Ed/ B.Sc., M.Sc./ B.Ed. for Social Science & English. Walk in Interview. Contact: Max Muller Public School, Mahalakshmi Layout, B'lore-96. Mobile: 080-23376050/ 51. Email Id :maxmullerpublicschool.mlayout@gmail.com.

CAMLIN HIGH SCHOOL, 6th 'C' Main, 4th Cross, Next to 7th Main Hampinagar Bus Stop, Vijayanagar 2nd Stage, Bangalore-560104, WANTED TRAINED TEACHER in M.Sc./ B.Sc., B.Ed (CBZ) for High School. WALK-IN Interview between 10.00a.m. to 12.30p.m. For immediate appointment. Contact: 23301363

HOLY ANGEL'S High School, Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2026-27 for Higher Primary & High School Ist Language English, Mathematics, Science, SocialScience & Hindi. STATE & ICSE. Qualification: B.A./B.Sc., B.Ed/ M.A./M.Sc, M.Ed. Only English Medium Candidates need to apply.

GURUKULA INTERNATIONAL SCHOOL, Requires English, Science and Computer Teachers for Primary. 7829338292 Near Magadi Road Metro Station, Bangalore-23

HERITAGE PUBLIC SCHOOL Konanakunte requires HIGH SCHOOL TEACHERS for Physics Chemistry Biology PRIMARY TEACHERS for all subjects and KG-COORDINATOR WhatsApp/email resume to: Mob:9901733776 heritagepublicschoolkk@gmail.com

MIRANDA COMPOSITE P.U College, H.A.L 3rd stage Bengaluru Requires Experienced Principal for P.U College. Experienced Teachers in Kannada and social science for High school Clerk (B.Com) Kannada and English typing Contact:- 9844214780/ 080-25281760

NIRMAN INTERNATIONAL PUBLICSCHOOL-CBSE,7th Block, Vishweshwaraiah Layout, Bangalore-91 Requires Nursery, English and Social Science TEACHERS for all classes. Walk-in all working days. Contact: 8123030731/ 9986055970 Mail: nirmaninfo24@gmail.com

Marketing & Sales

WANTED SALES Managers, Sales Executives, Telecallers. Opportunity to earn up to 40,000 P.M. Contact 8867627879

Graphic Designers

REQUIRED GRAPHIC Designer- Photoshop/ Corel Draw/ Illustrator Experience 1 Year or above in around Rajajinagar. Contact: 9108458798/ 9845579620

Receptionist/ Secretary

HAEID @ Rajajinagar Requires Full/Part Time Experienced Front Office Executive with exposure to Accounts, Computers, Secretarial tasks for Immediate Placement. Handsome Salary. WhatsApp +919880007134.

Multiple Vacancy

WANTED: MANAGER, FIELD OFFICERS for Hoskote, Doddaballapur, Bidadi Areas SECURITY OFFICER/ SUPERVISOR/ GUARDS, in and around Bangalore for SHASHI DETECTIVE SERVICES Pvt.Ltd. Rajajinagar, Bangalore. Ph:23133633/ 23134876/ 9880495755. contact@shashisecurity.com

WANTED: ITI/ Diploma Holders Fitter, Turner, Painter, Plumber, Welders, S.K RESOURCE SOLUTIONS Tumkur. Call: 7795415960/ 9611158327/9880495755, admin@sksolutions.in

HRD & Admin

WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

General

JUPITER HOSPITALS Arishinakunte Required Front Office Executives & Admin, Computer & Good English, Accommodation provided. Contact: 9341220446

PUBLIC NOTICE

ಸಾರ್ವಜನಿಕ ಪ್ರಕಟಣೆ

ನಾನು, ಹರಿ ಸುಬ್ರಮಣಿಯನ್ ಅಯ್ಯರ್ ಬಿನ್ ಸುಬ್ರಮಣಿಯನ್ ದೇವರಾಜ ಅಯ್ಯರ್, ವಯಸ್ಸು 61 ವರ್ಷ, ವಿಳಾಸ "ಬ್ಲೆಸ್ಸಿಂಗ್ಸ್", 138/1, 1ನೇ ಮುಖ್ಯರಸ್ತೆ, ವಿವೇಕನಗರ, ಬೆಂಗಳೂರು-560047,ಕರ್ನಾಟಕ, ಈ ಮೂಲಕ ಹೊರಡಿಸುವ ಸಾರ್ವಜನಿಕ ಪ್ರಕಟಣೆ ಕೆಳಗಿನಂತಿರುತ್ತದೆ:

ಉಪ ನೋಂದಣಿ ಕಚೇರಿ, ಶಿವಾಜಿನಗರ, ಬೆಂಗಳೂರು ನಗರ, ಕರ್ನಾಟಕ ಇವರಲ್ಲಿ ಡಾಕ್ಯೂಮೆಂಟ್ ನಂ. 2836/95-96 ಮುಖೇನ ನೋಂದಣಿಯಾಗಿರುವ ದಿನಾಂಕ ನವೆಂಬರ್ 03, 1995ರ ಕ್ರಯಪತ್ರದಲ್ಲಿ, ನನ್ನ ಹೆಸರು ಹರಿನಾರಾಯಣನ್ ಎಸ್. ಎಂಬುದರ ಬದಲಾಗಿ, ಪ್ರಮಾದವಶಾತ್ ಹರಿನಾರಾಯಣ ಎಸ್. ಎಂದು ದಾಖಲಾಗಿರುತ್ತದೆ.

ಅನುಕ್ರಮವಾಗಿ, ನಾನು ನನ್ನ ಹೆಸರು ಹರಿನಾರಾಯಣನ್ ಎಸ್. ಎಂಬುದನ್ನು ಹರಿ ಸುಬ್ರಮಣಿಯನ್ ಅಯ್ಯರ್ ಎಂದು, ಎಲ್ಲಾ ಉದ್ದೇಶಗಳಿಗಾಗಿ ಬದಲಾಯಿಸಿಕೊಂಡಿರುತ್ತೇನೆ.

ಇದೀಗ, ಹರಿನಾರಾಯಣ ಎಸ್., ಹರಿನಾರಾಯಣನ್ ಎಸ್., ಮತ್ತು ಹರಿ ಸುಬ್ರಮಣಿಯನ್ ಅಯ್ಯರ್ ಎಂಬ ಎಲ್ಲಾ ಹೆಸರುಗಳು ಒಂದೇ ಆಗಿರುತ್ತವೆ ಮತ್ತು ನನಗೆ ಮಾತ್ರ ಸಂಬಂಧಿಸಿರುತ್ತವೆ ಎಂದು ಈ ಮೂಲಕ ಘೋಷಿಸುತ್ತಿದ್ದೇನೆ.

ದಿನಾಂಕ ಜನವರಿ 14, 2026 ರಂದು ಭಾರತ ಸರ್ಕಾರ ಅನುಮೋದಿತ (ನೋಟರಿ ಸಂಖ್ಯೆ 12329) ಆಗಿರುವ, ಬೆಂಗಳೂರಿನ ಸುಮಿತ್ರಾ ಎನ್., ಎಂಬ ವಕೀಲರ ಸಮ್ಮುಖದಲ್ಲಿ ಸದರಿ ಘೋಷಣೆಯನ್ನು ಪ್ರಮಾಣೀಕರಿಸಿರುತ್ತೇನೆ.

BUSINESS

Business Offers

Machinery & Tools

FURNITURE MANUFACTURING Machineries For Sale Unit is in Tumkur KIADB Shed Contact Owner: 9845048193/ 9972417196

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

GARMENT FACTORY AVAILABLE FOR RENT ON CONCESSIONAL RATE

No	Description of Machinery	Qtty
1	Flat Bed Single Head Embroidery Machinery	01
2	Sewing Machinery-Single Needle	25
3	Single Needle Lock Stitch Machinery	20
4	6/8-Inch Cloth Cutting Machinery	01
5	Double Needle Lock Stitch Machinery	01
6	Button Hole Making Machinery	01
7	Button/Button Hole Stitching Machinery	01
8	Hot Fusing Press Machinery	01
9	Industrial Grade Garments Washing Machine	01
10	Industrial Grade Tumbler Dryer	01
11	Flat Bed Steam Iron Press Machinery	02
12	216-Spindled T.F.O Machinery	03
13	288-Spindled Imported T.F.O Machinery	06
14	Silk Twisting Machinery	01
15	300-KG/H Steam Boiler Machinery	01
16	Silk Yarn Soaking Machinery	01

HIGHLIGHTS:-
• Around 30-Kms from Kempagowda International Airport. • All Machineries are imported with State of the Art Facilities. • Available Area is around 10,000.00-SQ.FT. • Free for the First Year. • Ideal for Silk Yarn Twisting. • Ideal for Readymade Garments Manufacturing. • Skilled Work Force Available Nearby.
Contact :- Nagaraja Gandhi : + 91 94480 59673
Naresh Nagaraj : + 91 97397 18001

RENTAL PROPERTIES

Accommodation Available

Commercial

COMMERCIAL SPACE FOR RENT / LEASE
North facing Commercial Building Rent/Lease suitable for Bank & Office with all amenities ready to Occupy BTM 2nd Stage Near Silk Board Metro station on Main Road, stilt floor, 2nd & 3rd Each Floor 2000 Sq Plug and Play 4th Floor 1600 Sq with Mosaic Floor, With Sufficient Parking
Contact: 9845017944, 9901117711

Industrial And Factory

AVAILABLE INDUSTRIAL Warehouse 160000 sqft Vijipura Hoskote Contact: 9341234288/ 9663224353/ 9845417487.

REAL ESTATE SELLING

Residential/ Commercial

Davangere

ONLY 9 Sites on Pune Bangalore highway. Invest. Basava jayanti 10% discount extended to April 30. 7019251118

House

Vidyaranyapura

INDEPENDENT 60'X40' 4 BHK Duplex BEL Layout 2nd Stage S/F- Prime Location 16500/- sq.ft: 9844264852

Industrial & Factory

Tumkur Road

SALE 30 Acres Land Suitable for Industry, Warehouse, Residential School University Apartment. Dabaspet. NAIK: 9141326819

PERSONAL

Change of Name

CHANGE OF NAME
I, SIDDARAM C JERATAGI and SIDDARAM C JERATGI, residing at # 45/1-10, Flat 203, Lalehzar Apts, Palace Road, Vasanthnagar, Bengaluru- 560001, declare that the above name pertain to me only. Henceforth I shall be known as **SIDDARAM C JERATAGI** for all documents purpose, vide affidavit dated 28-04-2026 sworn before notary C.Venkatapathy, Bengaluru.

CHANGE OF NAME
I, Samir Kayiparambil Vasudevan, residing at Flat No. F01, Rich Bouquet, Hutchins Road, 2nd Cross, C.K. Garden St Thomas Town Post, Bangalore-560084, have changed our minor Son's name from ADHITYA SAMIR to **ADITHYA SAMIR** vide affidavit dated 27-04-2026 before notary C Santhosh, Bengaluru

Lost

LOST
I, G.VEDAVATHI resident of No.279, MS Ramaiah City, JP Nagar, Bangalore have lost Original Property bearing Sy. No. 75/2, 3 Acres 26 Guntas Sompura Kaval, Yadiyur, Hobli, Kunigal Taluk, Tumkur Dist. Sale Deed Document No. 3399/52-53. While traveling on 10/04/2026 at Yediyur. If found contact nearest police station or Call: 7899907777

EDUCATION CORNER

ಬೆಂಗಳೂರುಬ್ಲೇಜ್ ಹೆಣ್ಣುಮಕ್ಕಳ ಪ್ರೌಢಶಾಲೆ
ನಂ.9, 1ನೇ 'ಎ' ಮುಖ್ಯ ರಸ್ತೆ, ನಾಗರಭಾವಿ, ಬೆಂಗಳೂರು- 560072
ಎಸ್. ಎಸ್. ಎಲ್.ಸಿ. ಪರೀಕ್ಷೆ – 2026 ರ ಫಲಿತಾಂಶ


ಕಾವ್ಯಾ ಜಿ. 97.12%

ನಮ್ಮ ಶಾಲೆಯಿಂದ ಪರೀಕ್ಷೆಗೆ ಹಾಜಾರಾದ 48 ವಿದ್ಯಾರ್ಥಿನಿಯರಲ್ಲಿ 11 ವಿದ್ಯಾರ್ಥಿನಿಯರು ಶೇಕಡ 90 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ಈ ಸಾಧಕ ವಿದ್ಯಾರ್ಥಿನಿಯರನ್ನು ಮತ್ತು ನಮ್ಮ ಶಾಲೆಯಿಂದ ತೇರ್ಗಡೆಯಾದ ಎಲ್ಲ ವಿದ್ಯಾರ್ಥಿನಿಯರನ್ನು ಶಾಲಾ ಆಡಳಿತ ಮಂಡಳಿಯವರು, ಪ್ರಾಂಶುಪಾಲರು, ಶಿಕ್ಷಕರು ಹಾಗೂ ಪೋಷಕರು ಅಭಿನಂದಿಸಿದ್ದಾರೆ.


ಅಕ್ಷತ ಬಿ. ಸಿ. 96.32% · ಅಮೀನ ಕೌಸರ್ 96.32% · ಭೂಮಿಕ ಪಿ. 96.16% · ಸ್ನೇಹ ಎಮ್ 96.16% · ಶಿಲ್ಪ ವಿ. 95.68%
ಇಂದಿರ 95.36% · ನಿತ್ಯಪ್ರಿಯ ಎಸ್. 94.40% · ನಮಿತ 91.68% · ಅಕ್ಷಾ ಲಾಂಬಾ 90.72% · ಭೂಮಿಕಾ ಎ.ಎಸ್. 90.40%

ಸಂಹಿತಾ ಇಂಗ್ಲೀಷ್ ಸ್ಕೂಲ್
ಜೆ.ಸಿ.ನಗರ, ಬೆಂಗಳೂರು – 560086.
SSLC TOPPERS - 2025-26


ಅಯೇಷಾ ಬಾನು 97% · ಕಿಶನ್ ರಾವ್ 96% · ಲಹರಿಶ್ರೀ ಎನ್ 95%
ವರುಣ್ ವಿ 94% · ಲಿಂಗರಾಜು ಆರ್ 93% · ಅಲಿಯಾ ಖಾನಂ 93% · ತನುಶ್ರೀ ಡಿ.ಪಿ. 93%
ಇಸ್ರಬಾನು 93% · ಅಮೃತ ಎಸ್ 92% · ಕರಿಶ್ಮ 92% · ದೀಪಾಂಶ ಆರ್ 91%

ಶ್ರೀ ಶಾರದಾ ವಿದ್ಯಾ ಮಂದಿರ
ಟಿ. ದಾಸರಹಳ್ಳಿ, ಬೆಂಗಳೂರು – 560057.


ಡಾ. ಕೆ. ವೇಣುಗೋಪಾಲ್ ಪ್ರಾಂಶುಪಾಲರು

SSLC TOPPERS 2025-26



ಮೌಲ್ಯಶ್ರೀ . ಎ 99.36% · ಚೈತನ್ಯ .ಆರ್ 96.48% · ರೇಷ್ಮಾ 94.24% · ಮಿಲನ್ . ಎನ್ 93.92%
ಮೇಹೆಕ್ ಬಾನು .ಎನ್ 92.96% · ಐಶ್ವರ್ಯ ರಂಜನ ಗಿರಿ 92.16% · ಬಾನು ಮತಪಲ್ಲಿ 91.52% · ಜ್ಞಾನವಿ .ಪಿ 91.04%
ಮೊಹಮ್ಮದ್ ವಸೀಮ್. 89.44% · ಅಂಕಿತ.ಡಿ.ವಿ. 89.44% · ಶ್ರೀರಕ್ಷಾ .ಐ.ಎ 87.52% · ದರ್ಶನ .ಎಸ್ 86.08%
ದೀಕ್ಷಿತ್ ನಾಯಕ 84.64% · ಸಹನ .ಎಂ. ಅಜಗೊಂಡ್ 83.20% · ಪುಷ್ಪ. ಡಿ 81.60% · ದೀಕ್ಷಿತ್ .ಸಿ .ವೈ 80%

RAJIV GANDHI MEMORIAL POLYTECHNIC
Near Dr. Ambedkar Institute of Technology, Kengunte Circle, Mallathahally, Nagarabhavi, Bengaluru-560056
Phone: 080-23213282
ADMISSION OPEN - COURSES OFFERED
♦ Computer Science & Engg ♦ Mechanical Engg
♦ Electronics & Commn Engg ♦ Civil Engineering
♦ Electrical & Electronics Engg
RGMP-26701
For details contact Mobile: 8553344666, 9448865597

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
RES-26701
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466

ರಾಹುಲ್ ಗಾಂಧಿ ಕಡೆಗೆ ಇಬ್ಬಣಗಳ ಆಸೆಗಣ್ಣು

ಮುಖ್ಯಮಂತ್ರಿ ಬದಲಾವಣೆ ಹಾಗೂ ಸಚಿವ ಸಂಪುಟ ವಿಸ್ತರಣೆ ವಿಚಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಚ ರಾಜ್ಯಗಳ ಚುನಾವಣಾ ಫಲಿತಾಂಶಕ್ಕೆ ದಿನಗಣನೆ ಆರಂಭವಾಗುತ್ತಿದ್ದಂತೆ ಕರ್ನಾಟಕ ಕಾಂಗ್ರೆಸ್ ಪಾಳಯದಲ್ಲಿ ಚಟುವಟಿಕೆ ಗರಿಗೆದರಿದೆ. ಮುಖ್ಯಮಂತ್ರಿ ಬದಲಾವಣೆ ಹಾಗೂ ಸಚಿವ ಸಂಪುಟ ವಿಸ್ತರಣೆ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತೀರ್ಮಾನ ತೆಗೆದುಕೊಳ್ಳಬಹುದು ಎಂದು ಇಬ್ಬಣಗಳ ನಾಯಕರು ಆಸೆಗಣ್ಣಿನಿಂದ ನಿರೀಕ್ಷಿಸುತ್ತಿದ್ದಾರೆ.

ಕಳೆದ ಆರು ತಿಂಗಳಿಂದ ಬಹು ಚಾಲ್ತಿಯಲ್ಲಿರುವ ನಾಯಕತ್ವ ಗೊಂದಲಕ್ಕೆ ಮೇ ಅಂತ್ಯದೊಳಗೆ ಪರಿಹಾರ ಸಿಗಬಹುದು ಎಂಬುದು ಎರಡೂ ಬಣಗಳ ಅಪೇಕ್ಷೆ. ಮುಖ್ಯಮಂತ್ರಿ ಬದಲಾವಣೆಗೆ ರಾಹುಲ್ ಒಪ್ಪಿಗೆ ಸೂಚಿಸಿದ್ದಾರೆ ಎಂಬುದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣದ ಆಸೆಯಾಗಿದ್ದರೆ, ಸಂಪುಟ ಪುನರ್ ರಚನೆಗೆ ಅಧಿನಾಯಕ ಹಸಿರು ನಿಶಾನೆ ತೋರಲಿದ್ದಾರೆ ಎಂಬುದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣದ ವಿಶ್ವಾಸ. ಇದಕ್ಕಾಗಿ ಒತ್ತಡ ಹೇರಿ ಭೂಮಿಕೆ ಸಿದ್ಧಪಡಿಸುವ ಕಾರ್ಯದಲ್ಲಿ ಎರಡೂ ಬಣಗಳು ತೊಡಗಿವೆ.

'ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ ಮೇ 4ಕ್ಕೆ ಪ್ರಕಟವಾಗಲಿದೆ. ಮೇ 10ರ ಬಳಿಕ ರಾಜ್ಯದ ವಿದ್ಯಮಾನಗಳ ಬಗ್ಗೆ ಹೈಕಮಾಂಡ್ ಗಮನ ಹರಿಸಬಹುದು. ಶುರುವಿನಲ್ಲಿ ಹೈಕಮಾಂಡ್ ನಾಯಕರು ಸಭೆ ನಡೆಸಿ ರಾಜ್ಯದ ವಿಷಯಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಆ ಬಳಿಕ ಸಿದ್ದರಾಮಯ್ಯ ಅವರನ್ನು ಕರೆಸಿಕೊಂಡು ಮನದಿಂಗಿತ ಅರಿಯಲಿದ್ದಾರೆ. ಆ ನಂತರವಷ್ಟೇ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರನ್ನು ಕರೆಸಿಕೊಂಡು ಮಾತುಕತೆ ನಡೆಸಲಿದ್ದಾರೆ. ಮೇ ಅಂತ್ಯದೊಳಗೆ ರಾಜ್ಯದ ಬಿಕ್ಕಟ್ಟು ಬಗೆಹರಿಯಬಹುದು' ಎಂದು ಹಿರಿಯ ನಾಯಕರೊಬ್ಬರು ವಿಶ್ವಾಸ ವ್ಯಕ್ತಪಡಿಸಿದರು.

'ಜೂನ್‌ನಲ್ಲಿ ನಾಲ್ಕು ರಾಜ್ಯಸಭಾ ಸ್ಥಾನಗಳಿಗೆ ಚುನಾವಣೆ ಹಾಗೂ ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಆ ಬಳಿಕವಷ್ಟೇ, ನಾಯಕತ್ವ ಬದಲಾವಣೆ ಹಾಗೂ ಸಂಪುಟ ಪುನರ್ ರಚನೆ ಕುರಿತು ವರಿಷ್ಠರು ತೀರ್ಮಾನ ತೆಗೆದುಕೊಳ್ಳಲಿದ್ದಾರೆ' ಎಂದು ಇನ್ನೊಬ್ಬ ನಾಯಕರು ಅಭಿಪ್ರಾಯಪಟ್ಟರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ದೆಹಲಿಯಲ್ಲಿ ಕಳೆದ ವಾರ ಭೇಟಿ ಮಾಡಿದ್ದ ಡಿ.ಕೆ. ಶಿವಕುಮಾರ್ ಮತ್ತು ಡಿ.ಕೆ. ಸುರೇಶ್ ಸುದೀರ್ಘವಾಗಿ ಮಾತುಕತೆ ನಡೆಸಿದ್ದರು. ಅಲ್ಲಿಂದ ಬಂದು, 'ಏನೇನು ತೀರ್ಮಾನ ಆಗಿದೆಯೊ ಅವು ಚಾಲ್ತಿಗೆ ಬರಲಿವೆ' ಎಂದು ಶಿವಕುಮಾರ್ ಹೇಳಿದ್ದರು. ಆದಾದ ಬಳಿಕ, ಮುಖ್ಯಮಂತ್ರಿ ಆಪ್ತ ಸಚಿವರು ಹಾಗೂ ಶಾಸಕರು ರಾಷ್ಟ್ರ ರಾಜಧಾನಿಗೆ ದೌಡಾಯಿಸಿ ಹೈಕಮಾಂಡ್ ಮೇಲೆ ಒತ್ತಡ ಹೇರುವ ಪ್ರಯತ್ನ ಮಾಡಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹಾಗೂ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರು ಖರ್ಗೆ ಅವರನ್ನು ಸೋಮವಾರ ರಾತ್ರಿ ಭೇಟಿ ಮಾಡಿ ಆದಷ್ಟು ಬೇಗ ನಾಯಕತ್ವ ಗೊಂದಲ ಬಗೆಹರಿಸುವಂತೆ ಒತ್ತಾಯಿಸಿದರು.

ಮಹದೇವಪ್ಪ ಅವರು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಮಂಗಳವಾರ ಬೆಳಿಗ್ಗೆ ಭೇಟಿ ಮಾಡಿ ಚರ್ಚಿಸಿದರು. 'ಮುಖ್ಯಮಂತ್ರಿ ಬದಲಾವಣೆ ವಿಷಯದಲ್ಲಿ ಆತುರದ ಕ್ರಮ ಕೈಗೊಳ್ಳಬಾರದು' ಎಂದು ಮನವಿ ಮಾಡಿದರು.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರು ಖರ್ಗೆ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿದರು. ರಾಜ್ಯದಲ್ಲಿ ಒಳಮೀಸಲಾತಿ ಜಾರಿ ಮಾಡಲು ಸಹಕಾರ ನೀಡಿದ್ದಕ್ಕೆ ಧನ್ಯವಾದ ಹೇಳಿದರು. 'ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ನಿತ್ಯ ಚರ್ಚೆಯಾಗುತ್ತಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ. ಈ ಗೊಂದಲವನ್ನು ಶೀಘ್ರ ಬಗೆಹರಿಸಬೇಕು' ಎಂದು ಕೋರಿದರು. ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಅವರು ಖರ್ಗೆ ಹಾಗೂ ವೇಣುಗೋಪಾಲ್ ಅವರನ್ನು ಕಂಡು ಗೊಂದಲಕ್ಕೆ ಕೊನೆ ಹಾಡುವಂತೆ ಒತ್ತಾಯಿಸಿದರು.

ಹರಿಯಾಣ ರಾಜ್ಯದ ಉಸ್ತುವಾರಿಯೂ ಆಗಿರುವ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಖರ್ಗೆ ಅವರನ್ನು ಭೇಟಿಯಾಗಿ ಸಮಾಲೋಚಿಸಿದರು. 'ಹರಿಯಾಣದ ಪಕ್ಷ ಸಂಘಟನೆ ಬಗ್ಗೆ ಅಧ್ಯಕ್ಷರಿಗೆ ಮಾಹಿತಿ ನೀಡಿದ್ದೇನೆ. ಕರ್ನಾಟಕದ ವಿಷಯಗಳ ಕುರಿತು ಚರ್ಚಿಸಿಲ್ಲ' ಎಂದು ಹರಿಪ್ರಸಾದ್ ಸ್ಪಷ್ಟಪಡಿಸಿದರು. ಈ ನಡುವೆ, ಸಂಸದ ಸುನೀಲ್ ಬೋಸ್ ಮನೆಯಲ್ಲಿ ಎಚ್.ಸಿ.ಮಹದೇವಪ್ಪ, ಹರಿಪ್ರಸಾದ್ ಮತ್ತಿತರರು ಭೋಜನಕೂಟದ ನೆಪದಲ್ಲಿ ಮುಂದಿನ ಕಾರ್ಯತಂತ್ರಗಳ ಕುರಿತು ಮಂತ್ರಾಲೋಚನೆ ನಡೆಸಿದರು.

'ನಾಯಕತ್ವ ಗೊಂದಲ ಬಗೆಹರಿಸಿ'



ಕರ್ನಾಟಕ ಕಾಂಗ್ರೆಸ್ ಸರ್ಕಾರದ ನಾಯಕತ್ವ ಗೊಂದಲವನ್ನು ತಕ್ಷಣ ಬಗೆಹರಿಸಬೇಕೆಂದು ಪಕ್ಷಕ್ಕೆ ಮನವಿ ಮಾಡಿದ್ದೇನೆ ಎಂದು ಕೆ.ಎಚ್. ಮುನಿಯಪ್ಪ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ತಡ ಮಾಡಬಾರದು. ಏನಾದರೂ ಒಂದು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದರು.

'ಮುಖ್ಯಮಂತ್ರಿ ಬದಲಾವಣೆ ಮಾಡಬೇಕೇ ಅಥವಾ ಬೇಡವೇ ಎಂಬುದು ಹೈಕಮಾಂಡ್‌ಗೆ ಬಿಟ್ಟಿದ್ದು. ಈ ವಿಷಯದಲ್ಲಿ ಮೇ ಅಂತ್ಯದೊಳಗೆ ಹೈಕಮಾಂಡ್ ತೀರ್ಮಾನ ಪ್ರಕಟಿಸುವ ವಿಶ್ವಾಸ ಇದೆ' ಎಂದರು.

ಪದತ್ಯಾಗಕ್ಕೂ ಸಿದ್ದರಾಮಯ್ಯ ಸಿದ್ಧ- ರಾಜಣ್ಣ

ಬೆಂಗಳೂರು: 'ರಾಹುಲ್ ಗಾಂಧಿಯ ನಿರ್ದೇಶನ ಪಾಲಿಸಬೇಕು ಎನ್ನುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನಸ್ಥಿತಿ. ಅಧಿಕಾರದಲ್ಲಿ ಮುಂದುವರಿಯಲು ಮತ್ತು ಪದತ್ಯಾಗ ಎರಡಕ್ಕೂ ಅವರು ಸಿದ್ಧರಾಗಿದ್ದಾರೆ' ಎಂದು ಮಧುಗಿರಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ಎನ್. ರಾಜಣ್ಣ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಗೊಂದಲ ಮುಂದುವರಿಯಲು ಹೈಕಮಾಂಡ್ ಅವಕಾಶ ನೀಡದೆ, ಬಗೆಹರಿಸಿದರೆ ರಾಜ್ಯಕ್ಕೆ ಒಳ್ಳೆಯದು' ಎಂದರು.

'ಹೈಕಮಾಂಡ್ ಏನು ಹೇಳುತ್ತದೆಯೊ ಅದಕ್ಕೆ ಸಿದ್ದರಾಮಯ್ಯ ಬದ್ಧರಾಗಿದ್ದಾರೆ. ಹಾಗೆಂದು, 'ಇದು ಆತುರದಲ್ಲಿ ತೆಗೆದುಕೊಳ್ಳುವ ನಿರ್ಧಾರ ಅಲ್ಲ. ಇದರಲ್ಲಿ ಪಕ್ಷದ ಭವಿಷ್ಯ ಅಡಗಿರುತ್ತದೆ. ಹೀಗಾಗಿ, ಸೂಕ್ತವಾದ ನಿರ್ಧಾರವನ್ನು ಹೈಕಮಾಂಡ್ ತೆಗೆದುಕೊಳ್ಳುವ ವಿಶ್ವಾಸವಿದೆ' ಎಂದರು.

'ಸಿದ್ದರಾಮಯ್ಯನವರ ಜೊತೆಗೆ ಚರ್ಚೆ ಮಾಡಿದಾಗ, ಅವರು ಮುಕ್ತ ಮನಸ್ಸು ಹೊಂದಿರುವುದು ತಿಳಿಯಿತು. ರಾಹುಲ್ ಗಾಂಧಿಯ ಸೂಚನೆ ಪಾಲನೆ ಮಾಡುತ್ತೇವೆ, ಆಗ ನಿಮ್ಮೆಲ್ಲರ ಸಹಕಾರ ಇರಬೇಕೆಂದು ಅವರು ತಮ್ಮ ಅಭಿಮತ ವ್ಯಕ್ತಪಡಿಸಿದ್ದಾರೆ' ಎಂದರು.



ಕೆ.ಎನ್. ರಾಜಣ್ಣ

'ಅಧಿಕಾರ ಶಾಶ್ವತವಲ್ಲ. ಅಧಿಕಾರ ಕಳೆದುಕೊಂಡವರು ಮತ್ತೆ ಗಳಿಸುತ್ತಾರೆ. ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಮುಂದುವರಿಯಬೇಕು ಎಂಬ ಬಗ್ಗೆ ನಾವೆಲ್ಲರೂ ನಮ್ಮ ಅಭಿಪ್ರಾಯವನ್ನು ಹೈಕಮಾಂಡ್‌ಗೆ ತಿಳಿಸಿದ್ದೇವೆ' ಎಂದು ರಾಜಣ್ಣ ಪ್ರತಿಕ್ರಿಯಿಸಿದರು.

'ದಲಿತ ಮುಖ್ಯಮಂತ್ರಿ ಆಗಬೇಕು ಎಂಬುದಕ್ಕೆ ನಾನು ಈಗಲೂ ಬದ್ಧ. ಅಹಿಂದ ವರ್ಗ ನಿಜವಾಗಿಯೂ ಸಮಾಧಾನವಾಗಿಲ್ಲ. 2013-18ರ ಸಿದ್ದರಾಮಯ್ಯ ಈಗಿನ 2023-28ರ ಸಿದ್ದರಾಮಯ್ಯನಿಗೂ ಬಹಳ ವ್ಯತ್ಯಾಸವಿದೆ. ಮುಂದಿನ ಚುನಾವಣೆ ನಡೆಯಲು ಎರಡು ವರ್ಷವಿದೆ. ಮುಂದಿನ ರಾಜಕೀಯ ಹೀಗೇ ಆಗಬಹುದು ಎಂಬುದನ್ನು ಹೇಳಲು ಈಗಲೇ ಸಾಧ್ಯವೂ ಇಲ್ಲ. ರಾಜಕಾರಣದಲ್ಲಿ ಬಹಳಷ್ಟು ನೀರು ಹರಿಯಬೇಕಾದ ಸಮಯವೂ ಇದೆ' ಎಂದು ಸೂಚ್ಯವಾಗಿ ಹೇಳಿದರು.

'ರಾಜಕೀಯದಲ್ಲಿ ಸೋಲು-ಗೆಲುವು ಇದ್ದಿದ್ದೇ. ಈ ಹಿಂದೆ ಎಸ್.ಎಂ. ಕೃಷ್ಣ ಕಾಲದಲ್ಲಿ ಐವತ್ತಕ್ಕೆ ಸಚಿವರು ಸೋತರು. ಸ್ವತಃ ಕೃಷ್ಣ ಅವರು ಮದ್ದೂರಿನಿಂದ ಚಾಮರಾಜಪೇಟೆ ಕ್ಷೇತ್ರಕ್ಕೆ ಹೋದರು. ಹೀಗೇ ಆಗುತ್ತದೆ ಎಂದು ಈಗಲೇ ಏನೂ ಹೇಳಲು ಆಗುವುದಿಲ್ಲ. ರಾಜಕೀಯ ದಿಕ್ಸೂಚಿ ಹೇಳಲು ಕಾಲ ಪಕ್ವವಾಗಿಲ್ಲ' ಎಂದೂ ರಾಜಣ್ಣ ಅಭಿಪ್ರಾಯಪಟ್ಟರು.

'ಮೇ 15ಕ್ಕೆ ಡಿಕೆಶಿ ಸಿ.ಎಂ ಆಗೋದು ಫಿಕ್ಸ್'



ರಾಮನಗರ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೇ 15ಕ್ಕೆ ಮುಖ್ಯಮಂತ್ರಿ ಆಗೋದು ಫಿಕ್ಸ್ ಆಗಿದೆ ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಹೇಳಿದ್ದಾರೆ.

'ಈ ಹಿಂದೆ ನಾನು ಎರಡ್ಮೂರು ದಿನಾಂಕ ಹೇಳಿದ್ದೆ. ವಿವಿಧ ಕಾರಣಕ್ಕೆ ಆಗಲಿಲ್ಲ. ಈಗ ನಾನು ಅಂತಿಮ ದಿನಾಂಕ ಹೇಳುತ್ತಿದ್ದೇನೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗೇ ಆಗುತ್ತಾರೆ' ಎಂದರು.

ತಾಲ್ಲೂಕಿನ ಕೆಂಚೇನಹಳ್ಳಿಯಲ್ಲಿ ಮಂಗಳವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಮೇ 15 ರಂದು ನಮ್ಮ ನಾಯಕನ ಜನ್ಮದಿನವಿದ್ದು ಅಂದು ಮುಖ್ಯಮಂತ್ರಿ ಹುದ್ದೆಯ ಉಡುಗೊರೆ ಸಿಗಲಿದೆ. ಈ ಅವಧಿಯಲ್ಲೇ ಅವರು ಸಿ.ಎಂ ಆಗಬೇಕು ಮತ್ತು ಅವರ ನಾಯಕತ್ವದಲ್ಲಿ ಮತ್ತಷ್ಟು ಅಭಿವೃದ್ಧಿ ಕೆಲಸ ಆಗಬೇಕು ಎಂಬುದು ಎಲ್ಲರ ಬಯಕೆಯಾಗಿದೆ' ಎಂದರು.

ಸುದ್ದಿ 2 ನಿಮಿಷ

ಉಗ್ರರ ಬೆಂಬಲಿಸಿದ ಡಿಕೆಶಿಗೆ ಸತ್ಯದರ್ಶನ: ಆರ್. ಅಶೋಕ

ಬೆಂಗಳೂರು: 'ಉಗ್ರ ಚಟುವಟಿಕೆಯಲ್ಲಿ ತೊಡಗಿಕೊಂಡವರನ್ನು ನಾಲ್ಕು ವೋಟುಗಳಿಗಾಗಿ ಬ್ರದರ್ಸ್ ಎಂದು ಸಮರ್ಥನೆ ಮಾಡಿಕೊಳ್ಳುವ ಸ್ವಾರ್ಥಿಗಳು ನಾಡಿನ ಮುಖ್ಯಮಂತ್ರಿ ಆಗಲು ಹೊರಟಿರುವುದು ಕರ್ನಾಟಕದ ದುರಂತ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

'ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟವನ್ನು ಕೇವಲ 'ಡೈವರ್ಶನ್ ಪಾಲಿಟಿಕ್ಸ್' ಎಂದು ಲೇವಡಿ ಮಾಡಿ ಉಗ್ರರ ಪರ ನಿಂತಿದ್ದ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ನಾಯಕರಿಗೆ ಈಗ ಸತ್ಯದ ದರ್ಶನವಾಗಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಉಗ್ರ ಶಾರೀಕ್‌ನ ಕೃತ್ಯ ಸಾಬೀತಾಗಿದೆ. ಎನ್‌ಐಎ ನ್ಯಾಯಾಲಯ ಆತನಿಗೆ 10 ವರ್ಷಗಳ ಕಠಿಣ ಶಿಕ್ಷೆ ವಿಧಿಸಿದೆ. ರಾಷ್ಟ್ರೀಯ ಭದ್ರತೆಯಂತಹ ಗಂಭೀರ ವಿಚಾರದಲ್ಲೂ ತುಷ್ಟೀಕರಣ ಮತ್ತು ಓಲೈಕೆ ರಾಜಕಾರಣ ಮಾಡುವ ಕಾಂಗ್ರೆಸ್‌ನ ನೈಜ ಮುಖವಾಡ ಕಳಚಿದೆ' ಎಂದು ಹೇಳಿದ್ದಾರೆ.



'ಕಾಂಗ್ರೆಸ್‌ಗೆ ದೇಶದ ಭದ್ರತೆಗಿಂತ ವೋಟ್ ಬ್ಯಾಂಕ್ ರಾಜಕಾರಣವೇ ಮುಖ್ಯವಾಗಿದೆ. ಕಾಂಗ್ರೆಸ್ ಇನ್ನಾದರೂ ಮತಾಂಧರನ್ನು ತಮ್ಮ ಬ್ರದರ್ಸ್ ಎಂದು ಸಮರ್ಥನೆ ಮಾಡಿಕೊಳ್ಳುವುದನ್ನು ಬಿಡಬೇಕಿದೆ' ಎಂದೂ ತಿಳಿಸಿದ್ದಾರೆ.

3 ಬಾರಿ ಶಾಸಕನಾಗಿದ್ದೇನೆ ಸಚಿವ ಸ್ಥಾನ ಬೇಕು: ಹಿಟ್ನಾಳ

ಕೊಪ್ಪಳ: 'ಸತತವಾಗಿ ಮೂರು ಬಾರಿ ಶಾಸಕನಾಗಿದ್ದೇನೆ. ನನಗೂ ಸಚಿವ ಸ್ಥಾನ ಕೊಡಬೇಕು' ಎಂದು ಕೊಪ್ಪಳ ಕ್ಷೇತ್ರದ ಶಾಸಕ ರಾಘವೇಂದ್ರ ಹಿಟ್ನಾಳ ಅವರು ಪ್ರತಿಪಾದಿಸಿದರು.

ತಾಲ್ಲೂಕಿನ ಹುಲಿಗಿಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮನೆಗೆ ಬಂದು ಯಾರೂ ಸಚಿವ ಸ್ಥಾನ ಕೊಡುವುದಿಲ್ಲ. ಹೀಗಾಗಿ ದೆಹಲಿಗೆ ಹೋಗಿ ನಾನೇ ಕೇಳಿದ್ದೇನೆ. ಅಧಿಕಾರ ಹಂಚಿಕೆ ಹಾಗೂ ಸಚಿವ ಸಂಪುಟ ವಿಸ್ತರಣೆ ಏನೇ ಆಗಬೇಕಾದರೂ ಪಕ್ಷದ ನಾಯಕರು ತೀರ್ಮಾನ ಕೈಗೊಳ್ಳುತ್ತಾರೆ. ನಮ್ಮ ಹೈಕಮಾಂಡ್ ಗಟ್ಟಿಯಾಗಿದೆ' ಎಂದರು.

'ಹಲವು ಶಾಸಕರು ಸೇರಿ ದೆಹಲಿಗೆ ಹೋಗಿದ್ದೆವು. ಎಐಸಿಸಿ ಅಧ್ಯಕ್ಷರು ನಮ್ಮ ರಾಜ್ಯದವರೇ ಇದ್ದು ಅವರನ್ನು ಭೇಟಿಯಾಗಿದ್ದೇವೆ. ಸದ್ಯಕ್ಕೆ ಮುಖ್ಯಮಂತ್ರಿ ಕುರ್ಚಿ ಖಾಲಿಯಿಲ್ಲ. ಸಿದ್ದರಾಮಯ್ಯ ಅವರು ಉತ್ತಮ ಆಡಳಿತ ನೀಡುತ್ತಿದ್ದಾರೆ. ಉಪಮುಖ್ಯಮಂತ್ರಿ ಸೇರಿದಂತೆ ಎಲ್ಲ ಸಚಿವರು ಹಾಗೂ ಶಾಸಕರು ಸಿ.ಎಂ. ಜೊತೆಗಿದ್ದೇವೆ' ಎಂದರು.

ಸಂಸದ ರಾಜಶೇಖರ ಹಿಟ್ನಾಳ ಮಾತನಾಡಿ, 'ರಾಘವೇಂದ್ರ ಹಿಟ್ನಾಳ ಮೂರು ಬಾರಿ ಶಾಸಕರಾಗಿದ್ದು, ಆಡಳಿತದಲ್ಲಿ ಅನುಭವ ಹೊಂದಿದ್ದಾರೆ. ನಮ್ಮ ಸಮುದಾಯಕ್ಕೆ ಸಚಿವ ಸ್ಥಾನ ಕೊಡಬೇಕು ಎಂದು ಒತ್ತಾಯ ಮಾಡುತ್ತಿದ್ದೇವೆ' ಎಂದರು.

ವರಿಷ್ಠರ ಭೇಟಿ ತಪ್ಪಲ್ಲ: ಸಚಿವ ಸಂಪುಟದಲ್ಲಿ ಬದಲಾವಣೆ ಮಾಡಿದರೂ ಜನರ ಆಶೀರ್ವಾದದಿಂದ ಸಚಿವನಾಗಿ ಮುಂದುವರಿಯುತ್ತೇನೆ. ಸಚಿವ ಸ್ಥಾನದ ಆಕಾಂಕ್ಷಿಗಳು ವರಿಷ್ಠರನ್ನು ಭೇಟಿಯಾಗಿದ್ದರಲ್ಲಿ ತಪ್ಪೇನಿಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಲಲಿತಕಲಾ ಅಕಾಡೆಮಿ: 20 ಕಲಾವಿದರಿಗೆ 'ವರ್ಣಶ್ರೀ ಪ್ರಶಸ್ತಿ' ಘೋಷಣೆ

ಆರು ಕಲಾ ಸಾಧಕರಿಗೆ 'ಗೌರವ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ



ಶಶಿಕಲಾ ಹೂಗಾರ್ | ಸಿ.ಚಿಕ್ಕಣ್ಣ | ಬಿ.ಎಸ್. ದೇಸಾಯಿ | ಕೆ.ಸಿ.ಎಸ್. ಪ್ರಸನ್ನ | ಎಂ.ಜಿ. ದೊಡ್ಡಮನಿ | ಬಾಬು ಜತ್ತಕರ್

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯ 2024-2025 ಮತ್ತು 2025-26ನೇ ಸಾಲಿನ 'ಗೌರವ ಪ್ರಶಸ್ತಿ'ಗೆ ಆರು ಕಲಾ ಸಾಧಕರು ಆಯ್ಕೆಯಾಗಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ಹಾಗೂ ರಿಜಿಸ್ಟ್ರಾರ್ ಎನ್. ನಮ್ರತ ಅವರು ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಬಿಡುಗಡೆ ಮಾಡಿದರು.

2024-2025ನೇ ಸಾಲಿನ 'ಗೌರವ ಪ್ರಶಸ್ತಿ'ಗೆ ಬಾಗಲಕೋಟೆಯ ಬಾಬು ಜತ್ತಕರ್, ಕಲಬುರಗಿಯ ಎಂ.ಜಿ. ದೊಡ್ಡಮನಿ, ತುಮಕೂರಿನ ಕೆ.ಸಿ.ಎಸ್. ಪ್ರಸನ್ನ, 2025-26ನೇ ಸಾಲಿಗೆ ಹಾಸನದ ಬಿ.ಎಸ್. ದೇಸಾಯಿ, ವಿಜಯಪುರದ ಶಶಿಕಲಾ ಹೂಗಾರ್ ಹಾಗೂ ಮೈಸೂರಿನ ಸಿ.ಚಿಕ್ಕಣ್ಣ ಭಾಜನರಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಒಳಗೊಂಡಿದೆ.

'ವರ್ಣಶ್ರೀ' ಪ್ರಶಸ್ತಿ: 2023-24 ಹಾಗೂ 2024-25ನೇ ಸಾಲಿಗೆ ತಲಾ 10 ಕಲಾವಿದರನ್ನು 'ವರ್ಣಶ್ರೀ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ. ಗದಗದ ವಿಜಯ ಕಿರಸೂರ, ಶಿರಸಿಯ ರವಿ ಗುಣಗ, ಹಾವೇರಿಯ ಕುಮಾರ ಕಾಟೇನಹಳ್ಳಿ, ಧಾರವಾಡದ ದಯಾನಂದ ಕೆ. ಕಾಮಕರ್, ವಿಜಯಪುರದ ಸರೋಜ ಮುಂಡೇವಾಡಿ, ಕೊಡಗಿನ ಜಿ.ಎಸ್. ಭವಾನಿ, ಉಡುಪಿಯ ರಾಘವೇಂದ್ರ ನಾಯ್ಕ, ಮಂಡ್ಯದ ಶಿವಕುಮಾರ್ ಎಚ್., ಮಂಗಳೂರಿನ ಮೋಹನ್ ಕುಮಾರ್ ಬಿ.ಪಿ. ಹಾಗೂ ಚಾಮರಾಜನಗರದ ಮಹದೇವ ಎಚ್. ಅವರು 2023-24ನೇ ಸಾಲಿನ 'ವರ್ಣಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದಾರೆ.

2024-25ನೇ ಸಾಲಿಗೆ ಯಾದಗಿರಿಯ ಮೇಘನಾಥ ಅಬ್ರಾಹಂ ಬೆಳ್ಳಿ, ರಾಯಚೂರಿನ ಹೇಮರೆಡ್ಡಿ ಎನ್., ಬೀದರ್‌ನ ವೈಶಾಲಿಬಾಯಿ ಕಾಂಬಳೆ, ಕೊಪ್ಪಳದ ತಿರುಪತಿ ಶಿವನಗುತ್ತಿ, ಬಳ್ಳಾರಿಯ ಎ. ಮಹಮದ್ ರಫಿ, ದಾವಣಗೆರೆಯ ಉದಯ್ ಕುಮಾರ್ ಡಿ. ಜೈನ್, ಚಿತ್ರದುರ್ಗದ ದಿನೇಶ್ ಬಿ., ಬೆಂಗಳೂರಿನ ಎಸ್.ಎಫ್. ಹುಸೇನಿ, ರಾಮನಗರದ ಗಂಗಾಧರಮೂರ್ತಿ ಹಾಗೂ ಬೆಂಗಳೂರಿನ ಪೂರ್ಣಿಮಾ ಯಲ್ಲಾಪುರಕರ್ ಅವರು 'ವರ್ಣಶ್ರೀ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಒಳಗೊಂಡಿದೆ.

2024-25ನೇ ಸಾಲಿನ 53ನೇ ವಾರ್ಷಿಕ ಕಲಾ ಬಹುಮಾನಕ್ಕೆ ಹತ್ತು ಕಲಾವಿದರ ಕಲಾಕೃತಿಗಳು ಆಯ್ಕೆಯಾಗಿವೆ. ಈ ಬಹುಮಾನ ತಲಾ ₹25 ಸಾವಿರ ನಗದು ಹೊಂದಿದೆ.

'ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅವರ ಜತೆಗೆ ಚರ್ಚಿಸಿ, ಪ್ರಶಸ್ತಿ ಪ್ರದಾನ ದಿನಾಂಕ ಹಾಗೂ ಸ್ಥಳವನ್ನು ನಿಗದಿ ಮಾಡಲಾಗುವುದು' ಎಂದು ಪ.ಸ. ಕುಮಾರ್ ತಿಳಿಸಿದರು.

ಕಲಾ ಬಹುಮಾನಕ್ಕೆ ಆಯ್ಕೆಯಾದವರು

ಕಲಾವಿದರು	ಕಲಾಕೃತಿಯ ವಿವರ	ಮಾಧ್ಯಮ
ಅಶೋಕ ಬಿ. ಮನಸೂರ (ಧಾರವಾಡ)	ಕ್ಯಾಮೆರಾ ಇಲ್ಲದೆ ಜನರು ಹೇಗೆ ನೋಡಬೇಕೆಂದು ಕಲಿಸುವ ಸಾಧನ ಕ್ಯಾಮೆರಾ	ಛಾಯಾಚಿತ್ರ
ಸಂದೀಪ ಸಜ್ಜನ ಶೆಟ್ಟಿ (ಬೀದರ್)	ಭಾವಚಿತ್ರ-2	ಜಲವರ್ಣ
ಹರೀಶ್ ನಾಯ್ಕ (ಉಡುಪಿ)	ಶೀರ್ಷಿಕೆ ಇಲ್ಲದ	ಅಕ್ರಿಲಿಕ್
ಅಕ್ಷಯ ಭಟ್ (ಬೆಂಗಳೂರು)	ಕ್ಷೇತ್ರ	ಎಚ್ಚಿಂಗ್
ಲೋಹಿತ್ ಪತ್ತಾರ (ಬೆಂಗಳೂರು)	ಲೆಟ್ ದಿ ನೇಚರ್ ಬ್ರೆತ್	ಎಚ್ಚಿಂಗ್
ನೂರ್‌ಜಾನ್ ಎಂ. ದಫೇದಾರ (ಬಾಗಲಕೋಟೆ)	ಮುಖವಾಡ ಭಾವನೆಗಳನ್ನು ಮರೆಮಾಚುವುದು	ಅಕ್ರಿಲಿಕ್
ಜೀವನ್ ಸಾಲಿಯಾನ್ (ದಕ್ಷಿಣ ಕನ್ನಡ)	ಪರಾಗಸ್ಪರ್ಶ-24 ಸೆಲ್ಸಿಯಸ್	ಅಕ್ರಿಲಿಕ್
ಜಲಜಾಕ್ಷಿ ಕುಲಕರ್ಣಿ (ಕಲಬುರಗಿ)	ನನ್ನ ಸುತ್ತಮುತ್ತಲಿನ ವಾತಾವರಣ	ಅಕ್ರಿಲಿಕ್
ಮೀನಾಕ್ಷಿ (ಕಲಬುರಗಿ)	ವೇಗ	ಮಿಶ್ರ ಮಾಧ್ಯಮ
ದುಂಡಪ್ಪಾ ಎಸ್. ಲೋಲಸೂರಿ (ಬೆಳಗಾವಿ)	ಶಿಲ್ಪಕಲೆಯ ಸೌಂದರ್ಯವನ್ನು ನೋಡುವುದು	ಅಕ್ರಿಲಿಕ್

18 ವಿದ್ಯಾರ್ಥಿಗಳು ಹಾಸ್ಟೆಲ್‌ನಿಂದ ಹೊರಕ್ಕೆ

ಹಾಸನ: ರ್‍ಯಾಗಿಂಗ್ ಸಂಬಂಧ ನಗರದ ಚಿಕ್ಕಹೊನ್ನೇನಹಳ್ಳಿಯ ಪಶುವೈದ್ಯಕೀಯ ಕಾಲೇಜಿನ ಹಾಸ್ಟೆಲ್‌ನಲ್ಲಿ ಹಿರಿಯ ಹಾಗೂ ಕಿರಿಯ ವಿದ್ಯಾರ್ಥಿಗಳ ನಡುವೆ ಗಲಾಟೆಯಾಗಿದ್ದು, 18 ಹಿರಿಯ ವಿದ್ಯಾರ್ಥಿಗಳನ್ನು ಹಾಸ್ಟೆಲ್‌ನಿಂದ ಹೊರಹಾಕಲಾಗಿದೆ.

ರ್‍ಯಾಗಿಂಗ್ ವಿರೋಧಿಸಿ ಕಿರಿಯರು, ಹಿರಿಯ ವಿದ್ಯಾರ್ಥಿಗಳನ್ನು ಪ್ರಶ್ನಿಸಿದ ಕಾರಣಕ್ಕೆ ಜಗಳ ಪ್ರಾರಂಭವಾಗಿದ್ದು, ಕೈಕೈ ಮಿಲಾಯಿಸುವ ಮಟ್ಟಕ್ಕೆ ತಲು ಪಿತ್ತು. ಹಿರಿಯರು ಕಿರಿಯರ ಮೇಲೆ ಹಲ್ಲೆ ಮಾಡಿದ್ದರು. ಹಲವರು ಗಾಯಗೊಂಡಿದ್ದಾರೆ.

'ಕಾಲೇಜಿನ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗಿದೆ ' ಎಂದು ಪ್ರಾಂಶುಪಾಲ ಡಾ.ನಟರಾಜ್ ತಿಳಿಸಿದರು.

8 ಸಾವಿರ ಕಾನ್‌ಸ್ಟೆಬಲ್ ನೇಮಕ ವಾರದಲ್ಲಿ ಅಧಿಸೂಚನೆ: ಗೃಹ ಸಚಿವ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಒಳಮೀಸಲಾತಿ ವಿವಾದ ಬಗೆಹರಿದಿದ್ದು, ಒಂದು ವಾರದಲ್ಲಿ 8 ಸಾವಿರ ಕಾನ್‌ಸ್ಟೆಬಲ್‌ಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗುವುದು' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು, '545 ಪಿಎಸ್‌ಐಗಳು ಪೊಲೀಸ್ ಇಲಾಖೆಗೆ ಸೇರ್ಪಡೆಯಾಗಿದ್ದು, ಒಟ್ಟು 600 ಪಿಎಸ್‌ಐಗಳನ್ನು ನೇಮಕ ಮಾಡಿಕೊಳ್ಳಲಾಗುವುದು. ಖಾಲಿ ಹುದ್ದೆಗಳ ಪೈಕಿ 8 ಸಾವಿರ ಕಾನ್‌ಸ್ಟೆಬಲ್‌ಗಳ ನೇಮಕಾತಿ ಶೀಘ್ರ ನಡೆಯಲಿದೆ. 56,834 ಹುದ್ದೆಗಳನ್ನು ನೇಮಕ ಮಾಡಿಕೊಳ್ಳುವುದಾಗಿ ಈಗಾಗಲೇ ಮುಖ್ಯಮಂತ್ರಿ ಪ್ರಕಟಿಸಿದ್ದಾರೆ. ಅದರಲ್ಲಿ ಕಾನ್‌ಸ್ಟೆಬಲ್ ಹುದ್ದೆಗಳೂ ಸೇರಿವೆ' ಎಂದರು.

'ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅಗತ್ಯಕ್ಕೆ ತಕ್ಕಂತೆ ಹೊಸ ಪೊಲೀಸ್ ಠಾಣೆಗಳನ್ನು ಆರಂಭಿಸಲಾಗುವುದು. ಕಲಬುರಗಿ ಜಿಲ್ಲೆಯಲ್ಲಿಯೂ ಹೊಸ ಠಾಣೆಗಳಿಗೆ ಬೇಡಿಕೆ ಬಂದಿದೆ. ಪ್ರಸಕ್ತ ವರ್ಷ ರಾಜ್ಯದಲ್ಲಿ 12 ಪೊಲೀಸ್ ಠಾಣೆಗಳನ್ನು ಆರಂಭಿಸಲಾಗುವುದು' ಎಂದು ತಿಳಿಸಿದರು.

'ರಾಜ್ಯದಲ್ಲಿ ಡಿಜಿಟಲ್ ಅರೆಸ್ಟ್, ವಂಚನೆ ಪ್ರಕರಣ ಹೆಚ್ಚುತ್ತಿರುವ ಕಾರಣ, ಸೈಬರ್ ಅಪರಾಧಗಳ ಮೇಲ್ವಿಚಾರಣೆಗಾಗಿ ಡಿಜಿಪಿ ಹುದ್ದೆ ಸೃಷ್ಟಿಸಲಾಗಿದೆ. 24 ಸಾವಿರ ಪ್ರಕರಣಗಳ ಪೈಕಿ 10 ಸಾವಿರ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ' ಎಂದರು.



ಕಲಬುರಗಿಯಲ್ಲಿ ನಡೆದ ಪಿಎಸ್‌ಐ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನದಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಅವರು ಸರ್ವೋತ್ತಮ ಪ್ರಶಿಕ್ಷಣಾರ್ಥಿಯಾಗಿ ಹೊರಹೊಮ್ಮಿದ ಬೆಳಗಾವಿ ಜಿಲ್ಲೆಯ ಪ್ರೊಬೇಷನರಿ ಪಿಎಸ್‌ಐ (ಸಿವಿಲ್) ಅರುಣ ಕಲ್ಲಪ್ಪ ಮೇಟಿ ಅವರಿಗೆ ಮುಖ್ಯಮಂತ್ರಿಗಳ ಸ್ವೋರ್ಡ್ (ಖಡ್ಗ) ನೀಡಿದರು. ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ, ಎಡಿಜಿಪಿ (ತರಬೇತಿ) ದೇವಜ್ಯೋತಿ ರೇ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

> ಸಚಿವರು ತಮ್ಮ ಇಲಾಖೆ ಕೆಲಸಕ್ಕೆ ದೆಹಲಿಗೆ ಹೋದಾಗ ಎಐಸಿಸಿ ಕಚೇರಿಗೂ ಭೇಟಿ ಕೊಡುತ್ತಾರೆ. ಕಾಂಗ್ರೆಸ್ ಕಚೇರಿ ನಮ್ಮ ಪಾಲಿಗೆ ದೇವಸ್ಥಾನವಿದ್ದಂತೆ. ಇಲಾಖೆ ಕೆಲಸದ ಜೊತೆಗೆ ರಾಜಕೀಯ ಮಾಡುವುದರಲ್ಲಿ ತಪ್ಪೇನಿದೆ?
> **ಡಾ.ಜಿ. ಪರಮೇಶ್ವರ,** ಸಚಿವ

ಬಿಸಿಲು: ನರೇಗಾ ಕಾರ್ಮಿಕ ಸಾವು



ಹುಸೇನಪ್ಪ ಮಡಿವಾಳ

ರಾಯಚೂರು: ತಾಲ್ಲೂಕಿನ ಯಾಪಲದಿನ್ನಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸೋಮವಾರ ಮಧ್ಯಾಹ್ನದ ಬಿಸಿಲಿನಲ್ಲಿ ಮನರೇಗಾ ಕೂಲಿ ಕಾರ್ಮಿಕ ಹುಸೇನಪ್ಪ ಮಡಿವಾಳ (50) ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ಗ್ರಾಮದಲ್ಲಿ ರಾಳ್ಳಕುಂಟಾ ಕೆರೆ ಅಭಿವೃದ್ಧಿ ಕಾಮಗಾರಿ ಕೆಲಸದ ಹಾಜರಾತಿ ಫೋಟೊ ತೆಗೆಯುವಾಗ ಕುಸಿದು ಬಿದ್ದಿದ್ದಾರೆ. ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯದಲ್ಲಿ ಅವರು ಕೊನೆಯುಸಿರೆಳೆದಿದ್ದಾರೆ.

'ಬಿಸಿಲಿನಿಂದಾಗಿಯೇ ಹುಸೇನಪ್ಪ ಮೃತಪಟ್ಟಿದ್ದು, ಸರ್ಕಾರ ತಕ್ಷಣ ಪರಿಹಾರ ಕೊಡಬೇಕು' ಎಂದು ಮಡಿವಾಳಪ್ಪ ಕುಟುಂಬದವರು ಒತ್ತಾಯಿಸಿದ್ದಾರೆ.

'ಮರಣೋತ್ತರ ಪರೀಕ್ಷೆಗೆ ಕುಟುಂಬದ ಸದಸ್ಯರು ಅವಕಾಶ ನೀಡಿಲ್ಲ. ಮಂಗಳವಾರ ಮಧ್ಯಾಹ್ನ ಗ್ರಾಮದಲ್ಲಿ ಹುಸೇನಪ್ಪ ಅವರ ಶವ ಸಂಸ್ಕಾರ ಮಾಡಲಾಗಿದೆ' ಎಂದು ಗ್ರಾಮಸ್ಥರು ಹೇಳಿದ್ದಾರೆ.

'ಶವ ಪರೀಕ್ಷೆ ನಡೆಸಿದರೆ ಮಾತ್ರ ನಿಖರ ಕಾರಣ ಗೊತ್ತಾಗುತ್ತದೆ. ಬಿಸಿಲಾಘಾತದಿಂದಲೇ ಮೃತಪಟ್ಟಿದ್ದಾರೆ ಎಂದು ತಕ್ಷಣಕ್ಕೆ ನಿರ್ಧಾರಕ್ಕೆ ಬರಲಾಗದು' ಎಂದು ರಿಮ್ಸ್ ಮೆಡಿಸನ್ ವಿಭಾಗದ ಮುಖ್ಯಸ್ಥ ಡಾ.ಬಸವರಾಜ್ ತಿಳಿಸಿದ್ದಾರೆ.

ಭ್ರೂಣಲಿಂಗ ಪತ್ತೆ; ಮೂವರು ವೈದ್ಯರ ಬಂಧನ

ಪ್ರಜಾವಾಣಿ ವಾರ್ತೆ



ಡಾ.ಹರ್ಷಿತ್ | ಡಾ.ದಿವ್ಯಾ | ಡಾ.ಹರೀಶ್

ಮಂಡ್ಯ: ಭ್ರೂಣಲಿಂಗ ಪತ್ತೆಗಾಗಿ 31 ಬಾಲಗರ್ಭಿಣಿಯರಿಗೆ ಕಾನೂನು ಬಾಹಿರವಾಗಿ ಸ್ಕ್ಯಾನಿಂಗ್ ಮಾಡಿರುವ ಆರೋಪದ ಮೇರೆಗೆ ಮೂವರು ವೈದ್ಯರನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕೆ.ಆರ್.ಪೇಟೆಯ ಚೇತನ ಮೆಟರ್ನಿಟಿ ಸೆಂಟರ್‌ನ ಡಾ.ದಿವ್ಯಾ ಚೇತನ, ನಾವಿ ಡಯಾಗ್ನಸ್ಟಿಕ್ ಸೆಂಟರ್ ಡಾ.ಹರ್ಷಿತ್ ಮತ್ತು ಕುಶಾಲ್ ಡಯಾಗ್ನಸ್ಟಿಕ್ ಸೆಂಟರ್‌ನ ಡಾ.ಹರೀಶ್ ಬಂಧಿತರು. ಇಲ್ಲಿನ ಸರ್ಕಾರಿ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಪ್ರಿಯಾಂಕಾ ತಲೆಮರೆಸಿ ಕೊಂಡಿದ್ದು, ಪೊಲೀಸರು ಶೋಧ ಮುಂದುವರಿಸಿದ್ದಾರೆ.

ಪಟ್ಟಣ ಮತ್ತು ಗ್ರಾಮಾಂತರ ಠಾಣೆಗಳಲ್ಲಿ ಒಟ್ಟು 17 ಆರೋಪಿಗಳ ವಿರುದ್ಧ 12 ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ. ಸರ್ಕಾರಿ ವೈದ್ಯೆ, ಮೂವರು ಖಾಸಗಿ ವೈದ್ಯರು, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಆಶಾ ಕಾರ್ಯಕರ್ತೆ ಹಾಗೂ ಖಾಸಗಿ ವ್ಯಕ್ತಿಗಳ ವಿರುದ್ಧ ದೂರು ದಾಖಲಾಗಿದೆ. ಲೋಕಾಯುಕ್ತ ಸಂಸ್ಥೆಯಲ್ಲೂ ಸ್ವಯಂಪ್ರೇರಿತ ಪ್ರಕರಣ ದಾಖಲಾಗಿದೆ.

ಪ್ರಕರಣದ ವಿವರ: ಪಟ್ಟಣದ ಎರಡು ಡಯಾಗ್ನಸ್ಟಿಕ್ ಸೆಂಟರ್‌ಗಳಲ್ಲಿ ಭ್ರೂಣಲಿಂಗ ಪತ್ತೆಗಾಗಿ ಸ್ಕ್ಯಾನಿಂಗ್ ಮಾಡಿರುವುದನ್ನು ಲೋಕಾಯುಕ್ತ ಪೊಲೀಸರು ಈಚೆಗೆ ಪತ್ತೆ ಮಾಡಿದ್ದರು.

ನಾವಿ ಡಯಾಗ್ನಾಸ್ಟಿಕ್ ಸೆಂಟರ್‌ನಲ್ಲಿ 2024ನೇ ಸಾಲಿನಲ್ಲಿ 19 ಮತ್ತು 2025ನೇ ಸಾಲಿನಲ್ಲಿ 5 ಸೇರಿದಂತೆ ಒಟ್ಟು 24 ಬಾಲಗರ್ಭಿಣಿಯರಿಗೆ ಸ್ಕ್ಯಾನಿಂಗ್ ಮಾಡಲಾಗಿದೆ. ಕುಶಾಲ್ ಡಯಾಗ್ನಾಸ್ಟಿಕ್ ಸೆಂಟರ್‌ನಲ್ಲೂ 7 ಬಾಲಗರ್ಭಿಣಿಯರಿಗೆ ಸ್ಕ್ಯಾನಿಂಗ್ ಮಾಡಿರುವ ಆರೋಪವಿದೆ.

ವಿಐಟಿಇಇಇ2026 ಪ್ರವೇಶ ಪರೀಕ್ಷೆ ಪ್ರಾರಂಭ

ಭಾರತದ 129 ನಗರಗಳು ಸೇರಿದಂತೆ ವಿದೇಶಗಳಲ್ಲಿ ಒಟ್ಟು 9 ಕಡೆ ಪ್ರವೇಶ ಪರೀಕ್ಷೆ ಆರಂಭ, ಆಂದ್ರದ ಅಮರಾವತಿ ವಿಐಟಿ ಕ್ಯಾಂಪಸ್‌ನಲ್ಲೂ ಪ್ರವೇಶ ಪರೀಕ್ಷೆ

ಬೆಂಗಳೂರು: ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆ (ವಿಐಟಿಇಇಇ)-2026 ಆಂದ್ರಪ್ರದೇಶದ ಅಮರಾವತಿಯ ವಿಐಟಿ-ಎಪಿ ವಿಶ್ವವಿದ್ಯಾಲಯದಲ್ಲಿ ಆರಂಭಗೊಂಡಿದೆ. ವಿಐಟಿಇಇಇ ಪ್ರವೇಶ ಪರೀಕ್ಷೆ ದೇಶದಲ್ಲೇ ಅತ್ಯಂತ ಬೇಡಿಕೆಯ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳಲ್ಲಿ ಒಂದಾಗಿದೆ. ಈ ಕಂಪ್ಯೂಟರ್ ಆಧಾರಿತ ಪರೀಕ್ಷೆಯು ವೆಲ್ಲೂರು, ಚೆನ್ನೈ, ಅಮರಾವತಿ ಮತ್ತು ಭೋಪಾಲ್‌ನಲ್ಲಿರುವ ವಿಐಟಿ ಕ್ಯಾಂಪಸ್‌ಗಳ ಬಿ.ಟೆಕ್ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತಾ ಪರೀಕ್ಷೆಯಾಗಿದೆ. ಭಾರತದ 129 ನಗರಗಳ 212 ಕೇಂದ್ರಗಳಲ್ಲಿ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಜತೆಗೆ, ಸಿಂಗಾಪುರ, ಕತಾರ್, ಮಸ್ಕತ್, ದುಬೈ, ಕುವೈತ್, ಅಲ್ ಮನಾಮಾ, ಅಬುಧಾಬಿ, ಮಲೇಷ್ಯಾ ಮತ್ತು ಶಾರ್ಜಾ ಸೇರಿದಂತೆ ಒಟ್ಟು 9 ಅಂತರಾಷ್ಟ್ರೀಯ ಸ್ಥಳಗಳಲ್ಲಿಯೂ ಪರೀಕ್ಷೆಗಳು ನಡೆಯುತ್ತಿವೆ. ಈ ಪರೀಕ್ಷೆ ಮೇ.3ರವರೆಗೆ ನಡೆಯಲಿವೆ ಎಂದು ಕುಲಪತಿ ಡಾ.ಪಿ.ಅರುಳ್ಮೊಳಿವರ್ಮನ್ ತಿಳಿಸಿದ್ದಾರೆ. ಪರೀಕ್ಷೆಯ ಫಲಿತಾಂಶಗಳು ಮೇ ತಿಂಗಳ 2ನೇ ವಾರದಲ್ಲಿ ಪ್ರಕಟವಾಗುವ ಸಾಧ್ಯತೆಯಿದೆ. ಈ ಪರೀಕ್ಷೆಯಲ್ಲಿ 1.5ಲಕ್ಷದವರೆಗೆ ರ್‍ಯಾಂಕ್ ಪಡೆಯುವ ಅಭ್ಯರ್ಥಿಗಳು ಮೇ–ಜೂನ್ ತಿಂಗಳಲ್ಲಿ ನಡೆಯುವ ವಿಐಟಿ-ಎಪಿ ಆನ್‌ಲೈನ್ ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ ಎಂದು ಪ್ರವೇಶ ವಿಭಾಗದ ಉಪ ನಿರ್ದೇಶಕ ಡಾ.ಜಾನ್ ಪ್ರದೀಪ್ ತಿಳಿಸಿದ್ದಾರೆ.




ಅಮರಾವತಿಯ ವಿಐಟಿ-ಎಪಿ ಕ್ಯಾಂಪಸ್‌ನಲ್ಲಿ ವಿಐಟಿಇಇಇ-2026 ಪರೀಕ್ಷೆಗೆ ಹಾಜರಾಗಲು ಸರದಿ ಸಾಲಿನಲ್ಲಿ ನಿಂತಿರುವ ವಿದ್ಯಾರ್ಥಿಗಳು.

ವಿಐಟಿಇಇಇ ಜತೆಗೆ ರಿಸರ್ಚ್, ಎಂ.ಟೆಕ್, ಲಾ ಮತ್ತು ಎಂಬಿಎ ಕೋರ್ಸ್‌ಗಳಿಗೆ ಏ.28 ಮತ್ತು ಮೇ.3ರಂದು ಪರೀಕ್ಷೆಗಳನ್ನು ನಡೆಸಲಾಗುತ್ತಿದೆ ಎಂದು ರಿಜಿಸ್ಟ್ರಾರ್ ಡಾ.ಜಗದೀಶ್ ಚಂದ್ರ ಮಾಹಿತಿ ನೀಡಿದ್ದಾರೆ. ಅಭ್ಯರ್ಥಿಗಳ ಸುಗಮ ಪ್ರಯಾಣಕ್ಕಾಗಿ ವಿಜಯವಾಡ ಮತ್ತು ಗುಂಟೂರು ನಗರಗಳಿಂದ ವಿಶೇಷ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಪರೀಕ್ಷೆಯ ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್ www.vit.ac.in ಗೆ ಭೇಟಿ ನೀಡಬಹುದು.

ನಿಧನ ವಾರ್ತೆ

ಮಧುಕರ್ ನಿಂಬಾಳ್ಕರ್



ಬೆಳಗಾವಿ: ಮಹಾರಾಷ್ಟ್ರದ ಕೊಲ್ಹಾಪುರದ ನಿವಾಸಿ ಮಧುಕರ್ ಬಲವಂತರಾವ್ ನಿಂಬಾಳ್ಕರ್ (85) ಅವರು ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಇದ್ದಾರೆ. ಮಧುಕರ್ ಅವರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್ ಅವರ ತಂದೆ.

ಬುಧವಾರ (ಏ.29) ಕೊಲ್ಹಾಪುರದ ಪೇಟೆಯ ಪಂಚಗಂಗಾ ಮುಕ್ತಿಧಾಮದಲ್ಲಿ ಅಂತ್ಯಕ್ರಿಯೆ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಕೌಟುಂಬಿಕ ವ್ಯಾಜ್ಯ: ಹೈಕೋರ್ಟ್ ಅಭಿಪ್ರಾಯ

'ಮಕ್ಕಳ ಶೈಕ್ಷಣಿಕ ವೆಚ್ಚ ತಂದೆಯದ್ದೇ ಹೊಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೌಟುಂಬಿಕ ವ್ಯಾಜ್ಯ ಎದುರಿಸುತ್ತಿರುವ ದಂಪತಿಯ ಪ್ರಕರಣವೊಂದರಲ್ಲಿ ಹೈಕೋರ್ಟ್, 'ತಾಯಿಯ ಜೊತೆಗಿರುವ ಇಬ್ಬರು ಮಕ್ಕಳ ಸಂಪೂರ್ಣ ಶೈಕ್ಷಣಿಕ ವೆಚ್ಚವನ್ನು ಭರಿಸಲು ತಂದೆ ಬದ್ಧನಾಗಿರಬೇಕು ಮತ್ತು ಇಂತಹ ಸಂಗತಿಗಳಲ್ಲಿ ನಿರ್ದಿಷ್ಟ ಮಿತಿಯ ಹೇರಿಕೆ ಸಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ತನ್ನ ಇಬ್ಬರು ಅಪ್ರಾಪ್ತ ವಯಸ್ಸಿನ ಮಕ್ಕಳ ಪಾಲನೆ, ನಿರ್ವಹಣಾ ವೆಚ್ಚ ಹಾಗೂ ಜೀವನಾಂಶಕ್ಕೆ ಸಂಬಂಧಿಸಿದಂತೆ ಪತ್ನಿ (44) ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಮನ್ಮಥರಾವ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಬೆಂಗಳೂರಿನ 1ನೇ ಹೆಚ್ಚುವರಿ ಪ್ರಧಾನ ಕೌಟುಂಬಿಕ ನ್ಯಾಯಾಲಯ ಮಧ್ಯಂತರ ಅರ್ಜಿಗೆ ಸಂಬಂಧಿಸಿದಂತೆ 2024ರ ಜುಲೈ 2ರಂದು ನೀಡಿದ್ದ ಆದೇಶವನ್ನು ಮಾರ್ಪಾಡು ಮಾಡಿದೆ.



'ಪತಿಯು (49) ತನ್ನ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಪ್ರತಿ ತಿಂಗಳೂ ₹15 ಸಾವಿರ ಮತ್ತು ಹೆಂಡತಿಗೆ ₹40 ಸಾವಿರದಂತೆ ಜೀವನಾಂಶ ಪಾವತಿಸಬೇಕು. ಅರ್ಜಿ ಸಲ್ಲಿಸಿದ ದಿನಾಂಕದಿಂದ ತಿಂಗಳಿಗೆ ₹70 ಸಾವಿರದವರೆಗೆ ಪಾವತಿ ಮಾಡಬೇಕು. ಹೆಚ್ಚುವರಿಯಾಗಿ, ಪತಿಯು ಮಕ್ಕಳ ಸಂಪೂರ್ಣ ಶೈಕ್ಷಣಿಕ ವೆಚ್ಚವನ್ನು ಆಯಾ ಶಾಲೆ ಅಥವಾ ಶಿಕ್ಷಣ ಸಂಸ್ಥೆಗಳು ಕೇಳಿದ ಸಮಯದಲ್ಲಿ ಯಾವುದೇ ಹಣಕಾಸಿನ ಮಿತಿಯಿಲ್ಲದೆ ನೇರವಾಗಿ ಪಾವತಿ ಮಾಡಬೇಕು' ಎಂದು ಪತಿಗೆ ನಿರ್ದೇಶಿಸಿದೆ.

'ಒಂದು ವೇಳೆ ಪತ್ನಿ ಈಗಾಗಲೇ ಮಕ್ಕಳ ಶೈಕ್ಷಣಿಕ ವೆಚ್ಚವನ್ನು ಭರ್ತಿ ಮಾಡಿದ್ದರೆ ಮತ್ತು ಸಂಬಂಧಪಟ್ಟ ಶಾಲೆ ಅಥವಾ ಶಿಕ್ಷಣ ಸಂಸ್ಥೆಗಳಿಗೆ ಪಾವತಿಸಿದ್ದರೆ, ಅಂತಹ ಪಾವತಿಯ ಪುರಾವೆಯನ್ನು ಹಾಜರುಪಡಿಸಿದ ನಂತರ ಪತಿಯು ಅದನ್ನು ಹೆಂಡತಿಗೆ ಮರು ಪಾವತಿಸಬೇಕು' ಎಂದು ಸೂಚಿಸಿದೆ.

'ಮಕ್ಕಳ ಪಠ್ಯೇತರ ಚಟುವಟಿಕೆಗಳು, ಪುಸ್ತಕಗಳು, ಸಮವಸ್ತ್ರಗಳು, ವೈದ್ಯಕೀಯ ಅಗತ್ಯಗಳಿಗೆ ಸಂಬಂಧಿಸಿದ ವೆಚ್ಚಗಳನ್ನೂ ಪತಿಯೇ ಭರಿಸಬೇಕು. ಅಂತೆಯೇ, ಮೊಕದ್ದಮೆ ವೆಚ್ಚಗಳಿಗಾಗಿ ₹25 ಸಾವಿರ ಪಾವತಿಸುವ ನಿರ್ದೇಶನದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣ: ಬೆಂಗಳೂರಿನ ನಿವಾಸಿಗಳಾದ ಅರ್ಜಿದಾರ ದಂಪತಿ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದ್ದು 2005ರಲ್ಲಿ ಚೆನ್ನೈನಲ್ಲಿ ಮದುವೆಯಾಗಿದ್ದರು. ನಂತರ ಅಮೆರಿಕಕ್ಕೆ ತೆರಳಿದ್ದರು. ದಂಪತಿಗೆ 12 ಮತ್ತು 17 ವರ್ಷದ ಇಬ್ಬರು ಅಪ್ರಾಪ್ತ ವಯಸ್ಸಿನ ಗಂಡು ಮಕ್ಕಳಿದ್ದಾರೆ. ಪರಸ್ಪರ ಭಿನ್ನಾಭಿಪ್ರಾಯದ ಪರಿಣಾಮ ಪತ್ನಿ 2022ರಲ್ಲಿ ತವರು ಮನೆಗೆ ಮರಳಿ ಬಂದಿದ್ದಾರೆ.

ಏತನ್ಮಧ್ಯೆ, ದಾಂಪತ್ಯ ಹಕ್ಕುಗಳ ಪುನರ್‌ಸ್ಥಾಪನೆಗೆ ಪತಿ ಅರ್ಜಿ ಸಲ್ಲಿಸಿದ್ದರೆ, ತನ್ನ ಜೀವನಾಂಶ, ಮಕ್ಕಳ ನಿರ್ವಹಣೆ, ಶಿಕ್ಷಣ ವೆಚ್ಚ ಭರ್ತಿಗೆ ಪರಿಹಾರ ಕೋರಿ ಪತ್ನಿಯು ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿದ್ದಾರೆ. 'ಪತ್ನಿ ಹೆಚ್ಚು ಅರ್ಹತೆ ಹೊಂದಿದ್ದಾಳೆ, ಹಣಕಾಸು ಮತ್ತು ಲೆಕ್ಕಪತ್ರದಲ್ಲಿ ಉನ್ನತ ಪದವಿಗಳನ್ನು ಹೊಂದಿದ್ದಾಳೆ. ತನ್ನನ್ನು ತಾನು ನಿರ್ವಹಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದಾಳೆ' ಎಂಬುದು ಪತಿಯ ವಾದ.

‘ಪ್ರತಿ ಕ್ಷೇತ್ರಕ್ಕೂ ₹10 ಕೋಟಿ ಕೊಡಿ’

ಕುಡಿಯುವ ನೀರು ಸಮಸ್ಯೆ ಉಲ್ಬಣ, ರಾಜ್ಯ ವ್ಯಾಪಿ ಬರದ ಛಾಯೆ: ವಿಪಕ್ಷ ನಾಯಕ



ಕಾಂಗ್ರೆಸ್‌ನ ನಾಯಕತ್ವ ಧಿಕ್ಕರಿಸಿ ಶಾಸಕರು ದೆಹಲಿಗೆ ಹೋಗುತ್ತಿದ್ದಾರೆ. ಇದರರ್ಥ ಸಿದ್ದರಾಮಯ್ಯನವರ ನಾಯಕತ್ವಕ್ಕೆ ಮೂರು ಕಾಸಿನ ಬೆಲೆಯಿಲ್ಲ
ಆರ್. ಅಶೋಕ, ವಿರೋಧಪಕ್ಷದ ನಾಯಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬರಗಾಲ ಸ್ಥಿತಿ ನಿರ್ಮಾಣವಾಗುತ್ತಿದ್ದು, ಕುಡಿಯುವ ನೀರಿಗಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೂ ತಲಾ ₹10 ಕೋಟಿ ಅನುದಾನ ಬಿಡುಗಡೆ ಮಾಡಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಬರದ ಪರಿಸ್ಥಿತಿ ತೀವ್ರವಾಗಿದೆ. ಅದರ ಬಗ್ಗೆ ಲಕ್ಷ್ಯ ಕೊಡದ ಸಚಿವರು ಅಧಿಕಾರಕ್ಕಾಗಿ ದೆಹಲಿ ಪ್ರವಾಸ ಮಾಡುತ್ತಿದ್ದಾರೆ ಎಂದರು.

ರಾಜ್ಯದ ಬಹುತೇಕ ಕಡೆ ನೀರಿಗಾಗಿ ಹಾಹಾಕಾರ ಹೆಚ್ಚಾಗಿದೆ. ಕುಡಿಯುವ ನೀರಿಗಾಗಿ ಸರ್ಕಾರದಿಂದ ನಯಾಪೈಸೆ ಬಿಡುಗಡೆ ಮಾಡಿಲ್ಲ. ತೆಲಂಗಾಣ ಮತ್ತು ಹಿಮಾಚಲ ಪ್ರದೇಶದಲ್ಲಿ ನೌಕರರ ಸಂಬಳ ಕಡಿತ ಮಾಡಲಾಗಿದೆ. ಕರ್ನಾಟಕಕ್ಕೂ ಅದೇ ಸ್ಥಿತಿ ಬರುವ ಲಕ್ಷಣ ಕಾಣುತ್ತಿದೆ’ ಎಂದು ಹೇಳಿದರು.

ಕೂಡಲೇ ಗೋಶಾಲೆಗಳನ್ನು ನಿರ್ಮಿಸಿ, ಜಾನುವಾರುಗಳಿಗೆ ಮೇವು ಪೂರೈಸಬೇಕು. ಹವಾಮಾನ ಇಲಾಖೆ ವರದಿ ಪ್ರಕಾರ ಈ ಬಾರಿ ಮಳೆ ಕಡಿಮೆ ಇರಲಿದೆ. ಬರದ ಸ್ಥಿತಿ ನಿರ್ವಹಣೆ ಮಾಡಲು ಆಗದಿದ್ದರೆ ಸಚಿವರು ದೆಹಲಿಯಲ್ಲೇ ಇರಲಿ ಎಂದರು.

ಜನಿವಾರ ಪ್ರಕರಣ: ‘ಕೃಪಾನಿಧಿ ಕಾಲೇಜಿನಲ್ಲಿ ಜನಿವಾರ ಕಿತ್ತುಹಾಕಿರುವ ಪ್ರಕರಣ ನಡೆದಿದೆ. ಈ ಹಿಂದೆಯೂ ಅಲ್ಲಿ ಇಂತಹ ಘಟನೆ ನಡೆದಿತ್ತು, ಆಗಲೇ ಕಟ್ಟುನಿಟ್ಟಿನ ಆದೇಶ ಮಾಡಬೇಕಿತ್ತು. ಅದು ಮಾಡಿಲ್ಲ. ಕಾಂಗ್ರೆಸ್ ಪಕ್ಷದಲ್ಲಿರುವವರೇ ಜನಿವಾರ ತೆಗೆಯುವುದರ ವಿರುದ್ಧ ಮಾತನಾಡಿದ್ದಾರೆ. ಆದರೆ, ಸರ್ಕಾರ ತಲೆ ಕೆಡಿಸಿಕೊಂಡಿಲ್ಲ. ಕಾಂಗ್ರೆಸ್ ಇಂತಹ ಘಟನೆಗಳಿಗೆ ಪ್ರೋತ್ಸಾಹ ಬೆಂಬಲ ನೀಡುತ್ತಿದೆ’ ಎಂದು ಅಶೋಕ ದೂರಿದರು.

ಅನುತ್ತೀರ್ಣರಾದವರ ನೋಂದಣಿ: ಸಚಿವ ಮಧು ಪತ್ರ



ಮಧು ಬಂಗಾರಪ್ಪ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಎಲ್ಲ ಮಕ್ಕಳನ್ನು ಕಡ್ಡಾಯವಾಗಿ ಪರೀಕ್ಷೆ–2ಗೆ ನೋಂದಣಿ ಮಾಡಿಸುವಂತೆ ಶಾಲಾ ಶಿಕ್ಷಣ ಇಲಾಖೆಯ ಎಲ್ಲ ಉಪ ನಿರ್ದೇಶಕರಿಗೆ ಸಚಿವ ಮಧು ಬಂಗಾರಪ್ಪ ಪತ್ರ ಬರೆದಿದ್ದಾರೆ.

ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಶೇ 94.01ರಷ್ಟು ಮಕ್ಕಳು ತೇರ್ಗಡೆಯಾಗುವ ಮೂಲಕ ದಾಖಲೆ ನಿರ್ಮಿಸಿದ್ದಾರೆ. ಕಳೆದ ಸಾಲಿನ ಫಲಿತಾಂಶಕ್ಕೆ ಹೋಲಿಸಿದರೆ (80.4) ಶೇ 13.7ರಷ್ಟು ಫಲಿತಾಂಶ ಹೆಚ್ಚಳವಾಗಿದೆ. ಎಲ್ಲ ವಿಷಯಗಳಲ್ಲೂ ಅನುತ್ತೀರ್ಣರಾದ 1,716 ಮಕ್ಕಳು ಸೇರಿ 45,415 ಮಕ್ಕಳು ಅನುತ್ತೀರ್ಣರಾಗಿದ್ದಾರೆ. ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ಭವಿಷ್ಯ ಉಜ್ವಲಗೊಳಿಸುವುದು ಸರ್ಕಾರ, ಶಿಕ್ಷಣ ಇಲಾಖೆ ಹಾಗೂ ಎಲ್ಲರ ಹೊಣೆ. ಅನುತ್ತೀರ್ಣರಾದವರು ಒಬ್ಬರೂ ಮುಂದಿನ ಶಿಕ್ಷಣವನ್ನು ನಿಲ್ಲಿಸಬಾರದು. ಹಾಗಾಗಿ, ಎಲ್ಲ ವಿದ್ಯಾರ್ಥಿಗಳನ್ನೂ ನೋಂದಾಯಿಸಿ, ಅವರಿಗೆ ಸೂಕ್ತ ಪರಿಹಾರ ಬೋಧನೆ ಒದಗಿಸಿ, ಪರೀಕ್ಷೆಗೆ ಸಜ್ಜುಗೊಳಿಸಬೇಕು ಎಂದು ನಿರ್ದೇಶಿಸಿದ್ದಾರೆ.

ಅನುತ್ತೀರ್ಣರಾದ ವಿದ್ಯಾರ್ಥಿಗಳ ಪರೀಕ್ಷೆ–2ರ ಸಂಪೂರ್ಣ ಶುಲ್ಕ ಮನ್ನಾ ಮಾಡಲಾಗಿದೆ. ಎಲ್ಲರ ಶುಲ್ಕವನ್ನು ಸರ್ಕಾರವೇ ಭರಿಸಲಿದೆ. ಹಾಗಾಗಿ, ಪ್ರತಿ ವಿದ್ಯಾರ್ಥಿಯೂ ನೋಂದಣಿ ಮಾಡಿಕೊಂಡು, ಸಿದ್ಧತೆಯೊಂದಿಗೆ ಪರೀಕ್ಷೆ ಬರೆಯಬೇಕು. ಕಡಿಮೆ ಅಂಕ ಬಂದವರು ಪರೀಕ್ಷೆ–2 ತೆಗೆದುಕೊಂಡು ಫಲಿತಾಂಶ ಉತ್ತಮಪಡಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ಶಿಕ್ಷಕರು–ಸಿಬ್ಬಂದಿ ಹಾಜರಾತಿಗೆ ‘ಕರ್ತವ್ಯ’ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಕರು ಮತ್ತು ಶಿಕ್ಷಣ ಇಲಾಖೆಯ ಸಿಬ್ಬಂದಿಯ ಹಾಜರಾತಿ ವ್ಯವಸ್ಥೆಯ ಬದಲಾಗಿ ಕೃತಕ ಬುದ್ಧಿಮತ್ತೆ ಆಧಾರಿತ ‘ಕರ್ತವ್ಯ’ ಮೊಬೈಲ್ ಅಪ್ಲಿಕೇಶನ್ ಮೂಲಕ ಹಾಜರಾತಿ ದಾಖಲಿಸುವುದನ್ನು ಕಡ್ಡಾಯಗೊಳಿಸಿ ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ರಾಜ್ಯ ಸರ್ಕಾರವು ಎಲ್ಲಾ ಇಲಾಖೆಗಳಲ್ಲಿ ‘ಕಾವ್ಯ’ (ಕರ್ನಾಟಕ ಹಾಜರಾತಿ ನಿರ್ವಹಣಾ ವ್ಯವಸ್ಥೆ) ಜಾರಿಗೊಳಿಸಲು ಸೂಚಿಸಿದೆ. ಸರ್ಕಾರಿ ಶಾಲೆ ಹಾಗೂ ಕಾಲೇಜುಗಳ ಶಿಕ್ಷಕರು, ಮುಖ್ಯಶಿಕ್ಷಕರು, ಉಪನ್ಯಾಸಕರು, ಪ್ರಾಂಶುಪಾಲರು ಸೇರಿದಂತೆ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ತಮ್ಮ ಮೊಬೈಲ್‌ನಲ್ಲಿ ‘ಕರ್ತವ್ಯ’ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಹಾಜರಾತಿ ದಾಖಲಿಸಬೇಕು. ಈ ಆ್ಯಪ್ ಮುಖ ಚಹರೆ ಮತ್ತು ಜಿಐಎಸ್ (ಭೌಗೋಳಿಕ) ತಂತ್ರಜ್ಞಾನವನ್ನು ಬಳಸಿಕೊಂಡು ಸಿಬ್ಬಂದಿ ಹಾಜರಾತಿಯನ್ನು ಖಚಿತಪಡಿಸಿಕೊಳ್ಳುತ್ತದೆ. ಪ್ರತಿದಿನ ಕೆಲಸದ ಸ್ಥಳದಲ್ಲಿ ಕಡ್ಡಾಯವಾಗಿ ಎರಡು ಬಾರಿ (ಬರುವಾಗ ಮತ್ತು ಹೋಗುವಾಗ) ಹಾಜರಾತಿ ದಾಖಲಿಸಬೇಕು. ತರಬೇತಿ, ಮೌಲ್ಯಮಾಪನದಲ್ಲೂ ಬಳಸಬೇಕು ಎಂದು ಸೂಚಿಸಲಾಗಿದೆ.

ಬಹಿಷ್ಕಾರ: ಮಾತನಾಡಿದರೆ ₹5 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಕೊಂಡಸಕೊಪ್ಪ ಗ್ರಾಮದಲ್ಲಿ ಕುರುಬ ಸಮಾಜದ ಕುಟುಂಬವೊಂದರ ಮೇಲೆ ಅದೇ ಸಮಾಜದವರು ಸಾಮಾಜಿಕ ಬಹಿಷ್ಕಾರ ಹಾಕಿರುವ ಘಟನೆ ನಡೆದಿದೆ.

ಈ ಕುಟುಂಬದೊಂದಿಗೆ ಯಾರಾದರೂ ಮಾತನಾಡಿದರೆ ಅವರಿಗೆ ₹5 ಸಾವಿರ ದಂಡ, ಮಾತನಾಡಿದ ವಿಷಯ ತಿಳಿಸಿದವರಿಗೆ ₹1 ಸಾವಿರ ಬಹುಮಾನ ಕೂಡ ಘೋಷಣೆ ಮಾಡಲಾಗಿದೆ.

ಈ ಬಗ್ಗೆ ಖುದ್ದಾಗಿ ಕುಟುಂಬದವರು ಹಿರೇಬಾಗೇವಾಡಿ ಠಾಣೆಗೆ 10 ಮಂದಿಯ ವಿರುದ್ಧ ಲಿಖಿತ ದೂರು ನೀಡಿದ್ದಾರೆ. ಆದರೆ, ಇದುವರೆಗೆ ಎಫ್‌ಐಆರ್ ದಾಖಲಾಗಿಲ್ಲ ಎಂದು ಬಹಿಷ್ಕಾರಕ್ಕೆ ಒಳಗಾದ ರೇಣುಕಾ ನರಸೋಜಿ ಸಾಂಬ್ರೇಕರ್ ತಿಳಿಸಿದ್ದಾರೆ.

‘2021ರಲ್ಲಿ ನರಸೋಜಿ ಅವರೊಂದಿಗೆ ನನ್ನ ಮದುವೆಯಾಗಿದೆ. ಮದುವೆಗೂ ಮುನ್ನ ಪರಿಶಿಷ್ಟ ಜಾತಿಯ ಯುವಕನೊಬ್ಬ ನನ್ನನ್ನು ಪ್ರೀತಿಸುತ್ತಿರುವುದಾಗಿ ಅಪಪ್ರಚಾರ ಮಾಡಿದ್ದ, ಅದನ್ನು ಮುಂದಿಟ್ಟುಕೊಂಡು ಕುರುಬ ಸಮಾಜದ ಮುಖಂಡರು ಮದುವೆ ಮುರಿಯಲು ಮುಂದಾದರು. ಕಾನೂನು ಪ್ರಕಾರ ನೋಂದಣಾಧಿಕಾರಿ ಕಚೇರಿಯಲ್ಲಿ ಮದುವೆಯಾಗಿದ್ದೇವೆ. ನಮ್ಮ ಕುಟುಂಬ ನೆಮ್ಮದಿಯಿಂದ ಇದೆ. ಆದರೆ, ಪಂಚರು ಸಹಿಸಿಕೊಳ್ಳುತ್ತಿಲ್ಲ. ಇದೇ ನೆಪದಲ್ಲಿ ಬಹಿಷ್ಕಾರ ಹಾಕಿದ್ದಾರೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಬಹಿಷ್ಕಾರದ ನಂತರ ನೋವಾಗಿದೆ. ಊರಿನಲ್ಲಿ ಯಾರೂ ಮದುವೆ, ಉತ್ಸವ, ಶವಸಂಸ್ಕಾರಕ್ಕೂ ಕರೆಯದ ರೀತಿ ಮಾಡಿದ್ದಾರೆ. 5 ವರ್ಷದ ಮಗನ ಜೊತೆ ಶಾಲೆ ಮಕ್ಕಳು ಆಟವಾಡದ ರೀತಿ ಮಾಡಿದ್ದಾರೆ. ಈ ಬಗ್ಗೆ ಕರೆದು ಮಾತನಾಡಿದಾಗ ಕೇವಲ ರಾತ್ರಿ ಮನೆ ಮೇಲೆ ಕಲ್ಲು ತೂರಿದ್ದಾರೆ’ ಎಂದು ಈ ಸಂಬಂಧ ಸುದ್ದಿಗಾರರ ಬಳಿ ಅಳಲು ತೋಡಿಕೊಂಡರು.

‘ಲಿಖಿತ ದೂರು ನೀಡಿದ ಮೇಲೂ ಪೊಲೀಸರು ಕುಟುಂಬಕ್ಕೆ ಭದ್ರತೆ ಒದಗಿಸಿಲ್ಲ. ಆರೋಪಿತರ ವಿಚಾರಣೆ, ಗ್ರಾಮದಲ್ಲಿ ಶಾಂತಿ ಸಭೆ, ಕಾನೂನು ಕ್ರಮ ಕೈಗೊಂಡಿಲ್ಲ’ ಎಂದು ತಿಳಿಸಿದ್ದಾರೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–3 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560052.

ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/01/2026–27 ದಿನಾಂಕ: 28.04.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1. **ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಉಪ ಪ್ರಧಾನ ವ್ಯವಸ್ಥಾಪಕರು–3** ಅವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಿದ ಕಾಮಗಾರಿಗಳಿಗೆ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸುತ್ತಿದ್ದಾರೆ. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ವೆಬ್‌ಸೈಟ್ **(https://kppp.karnataka.gov.in)** ನಿಂದ ಪ್ರತಿ ಕಾರ್ಯದ ವಿರುದ್ಧ ಉಲ್ಲೇಖಿತ ಶುಲ್ಕವನ್ನು (ಮರುಪಾವತಿಸಲಾಗದ) ಪಾವತಿಸುವ ಮೂಲಕ ಇ–ಪೇಮೆಂಟ್ ರೂಪದಲ್ಲಿ ಡೌನ್‌ಲೋಡ್ ಮಾಡಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿ ಹೆಸರು	ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ, ಜಿಎಸ್‌ಟಿ ಹೊರತುಪಡಿಸಿ)	ಇಎಂಡಿ (ರೂ.ಗಳಲ್ಲಿ)	ಒಪ್ಪಂದ ಅವಧಿ
1	Mitigation of Fly infestation, protection of public health and development of basic Infrastructure in nearby villages around 5 processing plants in Yeshwanthapura Assembly Constituency.	5604.00	5610000/–	11 ತಿಂಗಳು

ಟೆಂಡರ್‌ನ ಕಾರ್ಯಸೂಚಿ: 1. ಬಿಡ್ ಪೂರ್ವ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 07.05.2026 ರಿಂದ ಮಧ್ಯಾಹ್ನ 3.00 ರವರೆಗೆ (ಕೆಪಿಪಿ ಪೋರ್ಟಲ್‌ನಲ್ಲಿ)**. 2. ಬಿಡ್ ಪೂರ್ವ ಸಭೆ: **08.05.2026 ರಂದು ಮಧ್ಯಾಹ್ನ 3.00 ಗಂಟೆಗೆ,** ಸಿಇ ಮತ್ತು ಸಿಜಿಎಂ–2 **(ಟೆಕ್) ಕಛೇರಿ,** ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು. 3. ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 19.05.2026 ರಿಂದ ಸಂಜೆ 4.00 ರವರೆಗೆ.** 4. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 20.05.2026 ರಂದು ಬೆಳಿಗ್ಗೆ 10.30 ಗಂಟೆಗೆ.** 5. ಹಣಕಾಸು ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹತೆ ಪಡೆದ ಟೆಂಡರ್‌ದಾರರಿಗೆ ತಿಳಿಸಲಾಗುವುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–3
ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/ಎಎಎ/402/2026–27

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ:ಉನಸ:ಬಿ2:ಸಿಆರ್:2026–27 ದಿನಾಂಕ: 24.04.2026

ಟೆಂಡರು ಪ್ರಕಟಣೆ

2026–27ನೇ ಸಾಲಿನ ನಗರಸಭಾ ನಿಧಿ, 2022–23 & 2023–24ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನ (ಉಳಿಕೆ ಮೊತ್ತ) ಮತ್ತು 2025–26ನೇ ಸಾಲಿನ ನಗರಸಭಾ ನಿಧಿಯಡಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standard Bid Document K.W -1 ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

(1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 08.05.2026 ಸಂಜೆ 5.00 ಗಂಟೆಗೆ (2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: 11.05.2026 ಪೂರ್ವಾಹ್ನ 11.00 ಗಂಟೆಗೆ

ಕ್ರ. ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ	ಕಾಮಗಾರಿ ಪೂರ್ತಿಗೊಳಿಸುವ ಅವಧಿ
	2026–27ನೇ ಸಾಲಿನ ನಗರಸಭಾ ನಿಧಿ			
1	DMA/2026-27/OW/WORK_INDENT57638	145000.00	3625.00	1 ತಿಂಗಳು
2	DMA/2026-27/RD/WORK_INDENT57639	100000.00	2500.00	1 ತಿಂಗಳು
3	DMA/2026-27/RD/WORK_INDENT57640	100000.00	2500.00	1 ತಿಂಗಳು
	ಮರು ಟೆಂಡರು			
	2022–23ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನ (ಉಳಿಕೆ ಮೊತ್ತ)			
4	DMA/2026-27/RD/WORK_INDENT57101/CALL-2	250000.00	6250.00	1 ತಿಂಗಳು
	2023–24ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನ (ಉಳಿಕೆ ಮೊತ್ತ)			
5	DMA/2026-27/RD/WORK_INDENT57107/CALL-2	150000.00	3750.00	1 ತಿಂಗಳು
	2025–26ನೇ ಸಾಲಿನ ನಗರಸಭಾ ನಿಧಿ			
6	DMA/2025-26/OW/WORK_INDENT56308/CALL-3	1600000.00	40000.00	2 ತಿಂಗಳು
7	DMA/2025-26/OW/WORK_INDENT50870/CALL-3	1080000.00	27000.00	2 ತಿಂಗಳು

ಸಹಿ/– ಪೌರಾಯುಕ್ತರು,
ಉಡುಪಿ ನಗರಸಭೆ

ವಾಸಾಇ/ಸನಿಉ/ಕೆಎಸ್‌ಎಂಸಿಎ/64/26–27 ದಿ: 28.04.2026

ಕರ್ನಾಟಕ ಸರ್ಕಾರ

ರಾಯಚೂರು ಮಹಾನಗರ ಪಾಲಿಕೆ

E-mail:itstaff_ulb_raichurn@yahoo.com Website:-www.raichurcity.gov.in
Phone No:08532-226768 Fax No:08532-226316

ಸಂ.ರಾಮಪ/ತಾಂತ್ರಿಕ/ಕಾ/ಅ/2026–27 ದಿನಾಂಕ:27–04–2026.

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ದತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗೆ ಕೆ.ಪಿ.ಪಿ.ಪಿ 2.0 ಪದ್ದತಿ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್ WWW.raichurcity. mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಕ್ರ. ಸಂ	ಅನುದಾನದ ವಿವರ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	2020–21 ,2022–23, 2024–25 ಎಸ್.ಎಫ್.ಸಿ (ಮ.ನಿ) ಉಳಿತಾಯ 2019–20 ರಿಂದ 2024–25 ಎಸ್.ಎಫ್.ಸಿ 7.25% ಉಳಿತಾಯ, 2026–27ಎಸ್.ಎಫ್.ಸಿ (ಮುನಿ)ಮಹಾನಗರ ಪಾಲಿಕೆ ಅನುದಾನದಲ್ಲಿ	Construction of Anganwadi Building at Leprocy Colony Near RTO Circle In Ward No 13 Raichur City. Estimate Cost Rs.22,00,000/-	DMA/2026-27/ BD/ WORK_ INDENT57451
2	ಮಹಾನಗರ ಪಾಲಿಕೆ ಅನುದಾನದಲ್ಲಿ	Renovation work of Karnataka Sangh Building in Raichur City. Estimate Cost Rs.30,50,000/-	DMA/2026-27/ BD/ WORK_ INDENT57548
3	ಮಹಾನಗರ ಪಾಲಿಕೆ ಅನುದಾನದಲ್ಲಿ	Engaging Of Manpower On Outsource Basis For Pump Operator Water Supply at City Corporation Raichur. Estimate Cost Rs. 51,20,000/-	DMA/2025-26/ SE7600/ Call-2
4	ಕೆ.ಕೆ.ಆರ್.ಡಿ.ಬಿ ಅನುದಾನದಲ್ಲಿ	Providing Street lights from Askihal to Bypass junction on SH 20, Lingasur road In Raichur City. Estimate Cost Rs. 1,00,00,000/-	DMA/2026-27/ EL/ WORK_ INDENT56984

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.

DIP/RCR/46KSMCA/48/2026-27

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಡಳಿತ ವೈದ್ಯಾಧಿಕಾರಿಯವರ ಕಛೇರಿ, ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ, ಕುಂದಾಪುರ, 576201

ದೂರವಾಣಿ ಸಂಖ್ಯೆ: (08254) 230333/234808 ಇ–ಮೇಲ್: ghkundapura@yahoo.com

ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ: ಸಂಖ್ಯೆ: ನಂ:ಸಾಆಕು/ಪ್ರ.ರಾ/12026–27 2026–27ನೇ ಸಾಲಿನಲ್ಲಿ ಔಷದ ಖರೀದಿಗಾಗಿ ಇ–ಟೆಂಡರ್ ಆಹ್ವಾನ ದಿನಾಂಕ 28–04–2026, ಟೆಂಡರ್ ವಿವರ: 2026–27ನೇ ಸಾಲಿನಲ್ಲಿ ಔಷದ ಖರೀದಿಗಾಗಿ ಇ–ಟೆಂಡರ್ ಆಹ್ವಾನ ದಿನಾಂಕ 28–04–2026, ಟೆಂಡರ್ ಅಂದಾಜು ಮೊತ್ತ: ರೂ. 80,00,000/–, ಇ.ಎಂ.ಡಿ ಮೊತ್ತ: ರೂ. 2,00,000/–, ಟೆಂಡರ್ ಆರಂಭ ದಿನಾಂಕ: 28–04–2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 12–05–2026 ಅಪರಾಹ್ನ 4.30 ರವರೆಗೆ, ಟೆಂಡರ್ ತೆರೆಯಲು ದಿನಾಂಕ ಮತ್ತು ಸಮಯ: 13–05–2026 ಅಪರಾಹ್ನ 4.30 ಗಂಟೆಯ ನಂತರ, ಟೆಂಡರ್ ತೆರೆಯಲು ಸ್ಥಳ: ಆಡಳಿತ ವೈದ್ಯಾಧಿಕಾರಿ, ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ, ಕುಂದಾಪುರ

ಸಹಿ/– ಆಡಳಿತ ವೈದ್ಯಾಧಿಕಾರಿ,
ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ,
ಕುಂದಾಪುರ–576201, ಉಡುಪಿ ಜಿಲ್ಲೆ

ವಾಸಾಇ/ಸನಿಉ/ಕೆಎಸ್‌ಎಂಸಿಎ/70/26–27 ದಿ: 28.04.2026

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN-U04010KA2002SGC030438

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆವಿಕಂ, **ವಿಚಾರಣೆ ಸಂ. ಬೆವಿಕಂ/2026–27/ಐಎನ್‌ಡಿ0252** ರ ಅನ್ವಯ ಸೇಫ್ಟಿ ಶೂಸ್ ಖರೀದಿಗಾಗಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **30.04.2026ರಿಂದ.** ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **15.05.2026, ಸಂಜೆ 5.00 ಗಂಟೆಯವರೆಗೆ.** ಬಿಡ್ ತೆರೆಯುವ ದಿನಾಂಕ: **16.05.2026, ಸಂಜೆ 5.15 ಗಂಟೆಗೆ.**

ಬಿಡ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು. ಆಸಕ್ತ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ: (+91-8046010000, +91-8068948777, 09240214000 & 09240214001) ನ್ನು ಸಂಪರ್ಕಿಸಿ ಅಥವಾ ಇ-ಮೇಲ್: support@eprochelpdesk.com

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿದ್ಯುತ್),
ಖರೀದಿ, ಬೆವಿಕಂ, ಬೆಂಗಳೂರು–560 001.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

“ಜ್ಞಾನ ಸಂಗಮ”, ಬೆಳಗಾವಿ – 590018, ಕರ್ನಾಟಕ, ಭಾರತ

ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ./2026–27/ಐ.ಎಫ್.ಟಿ. ನಂ.12/343 ದಿನಾಂಕ: 23–04–2026

ಟೆಂಡರ್ ಪ್ರಕಟಣೆ (2ನೇ ಕರೆ) (ದ್ವಿ–ಲಕೋಟೆ ಪದ್ಧತಿ) (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ. ರ ಪ್ರಕಾರ ಕೆ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: **ವಿತಾವಿಯ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿಯ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಕಟ್ಟಡದ ನವೀಕರಣ ಮಾಡುವ ಕಾಮಗಾರಿ ಮೊತ್ತ ರೂ. 1,40,17,570/– (ತೆರಿಗೆ ರಹಿತ).** ಇದೇ ತೆರನಾದ ಕಾಮಗಾರಿಯನ್ನು ನಿರ್ವಹಿಸಿದ ಕುರಿತು ಪ್ರಮಾಣ ಪತ್ರವನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವುದು. ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: **24–04–2026** ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ವಾಸಾಸಂಇ/ಬೆಳಗಾವಿ/165/ಅಡ್ವರ್ಟೋರ್/2026–27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಳ್ಳಾರಿ.

ಬಳ್ಳಾರಿ–ಬೆಂಗಳೂರು ರಸ್ತೆ, ಬಂಡಿಮೋಟ್, ಬಳ್ಳಾರಿ–583101
ಇಮೇಲ್–apmcballari@gmail.com, ದೂ:08392–250442 ಫ್ಯಾಕ್ಸ್:08392–250890

ಸಂ: ಕೃಮಾಇ/ ಕೃಉಮಾಸ/ಬ/ ಅಭಿಕೆ/40/2026–27 ದಿನಾಂಕ:15/04/2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಲೋಕೋಪಯೋಗಿ ಇಲಾಖೆಯಿಂದ ಅರ್ಹ ಗುತ್ತಿಗೆದಾರರಿಂದ 2025–26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಮಂಜೂರಾದ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಹಾಗೂ ನಿಯಾಮಗಳು 1999–2000 ರನ್ವಯ ಇ–ಪ್ರೊಕ್ಯೂರಮೆಂಟ್ ಟೆಂಡರ್‌ಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ http://kppp.karnataka.gov.in ನಲ್ಲಿ ಸ್ಪರ್ಧಾತ್ಮಕ ಧ'ರವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿರುತ್ತದೆ.

ಎಪಿಎಂಸಿ/2025–26/OW/ವರ್ಕ್_ಇಂಡೆಂಟ್ 933
ಎಪಿಎಂಸಿ/2025–26/OW/ವರ್ಕ್_ಇಂಡೆಂಟ್ 942

01)ಬಿಡ್ ಪೂರ್ವಭಾವಿ ಸಭೆ ದಿನಾಂಕ: **21–05–2026 @12:00**
02)ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ದಿನಾಂಕ: **25–05–2026 @16:00**
03)ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **27–05–2026 @11:00**
04)ಆರ್ಥಿಕ ಬಿಡ್ ತೆರೆಯುವ ದಿನಾಂಕ(ತಾಂತ್ರಿಕ ಬಿಡ್ ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರು): **29–05–2026 @11:00**

ಇ ಎಂ ಡಿ ಹಣವನ್ನು ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಬ್ಯಾಂಕಿನಲ್ಲಿ ಹೊಂದಿರುವ ಕರ್ನಾಟಕ ಸರ್ಕಾರ ಸೆಂಟ್ರಲ್ ಪೋಲಿಂಗ್ ಅಕೌಂಟಿನಲ್ಲಿ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ತಿಳಿಸಿರುವ ಯಾವುದಾದರೊಂದು ಮಾದರಿಯಲ್ಲಿ ಸಂದಾಯ ಮಾಡುವುದು.

ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಸಮಿತಿ ಕಛೇರಿ ವೇಳೆಯಲ್ಲಿ ಅಥವಾ ಮೇಲೆ ಸೂಚಿಸಿರುವ ವೆಬ್ ಸೈಟ್ ನಲ್ಲಿ http://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೃ.ಉ.ಮಾ.ಸ ಬಳ್ಳಾರಿ ಸಹಾಯವಾಣಿ ಸಂ:08392–250442ರವರಿಂದ ಪಡೆಯಬಹುದಾಗಿದೆ. ಟೆಂಡರ್ ನಿಯಮಾವಳಿಗಳಿಗಾಗಿ ಇ–ಪ್ರಕ್ಯೂರ್‌ಮೆಂಟ್ ವೆಬ್ ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ ಬಿಡ್ ಡಾಕ್ಯೂಮೆಂಟ್‌ಗಳನ್ನು ನೋಡುವುದು.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ., ಬಳ್ಳಾರಿ.
ಸಹಿ/– ಅಧ್ಯಕ್ಷರು, ಕೃ.ಉ.ಮಾ.ಸ., ಬಳ್ಳಾರಿ.

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/96

ಲೋಕೋಪಯೋಗಿ ಇಲಾಖೆ

ಕಾರ್ಯನಿವಾಹಕ ಇಂಜನೀಯರವರ ಕಛೇರಿ, ಧಾರವಾಡ ವಿಭಾಗ,
ಧಾರವಾಡ. ದೂ.: 0836–2747944, ಇ–ಮೇಲ್: eepwddha@gmail.com

ಕ್ರಸಂ : ಕಾನಿಇಂಧಾ/ಗುತ್ತಿಗೆ/ಪಿ.ಬಿ.1/2026–27/381 ದಿನಾಂಕ: 27.04.2026

ಟೆಂಡರ್ ಪ್ರಕಟಣೆ

I.F.T – KW –1,3,4
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ ಡಬ್ಲ್ಯೂ–1,3,4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. **(kppp.karnataka.gov.in)** ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ದತಿಯಲ್ಲಿ **ಕನಿಷ್ಠ ರೂ.2.28 ಲಕ್ಷಗಳಿಂದ ಗರಿಷ್ಠ ರೂ.300.00 ಲಕ್ಷಗಳ ವರೆಗೆ, 4216–01–700–2–01–386 ನಿವಾಸಿ ಕಟ್ಟಡಗಳ ನಿರ್ಮಾಣ, 2025–26ನೇ ಸಾಲಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಲೆಕ್ಕಶೀರ್ಷಿಕೆ 4059–80–051–0–60–132 ಮೂಲ ಸೌಕರ್ಯ ಬಂಡವಾಳ ವೆಚ್ಚ ಅಡಿ ಹಾಗೂ 3054–03–337–0–05–200 ರಾಜ್ಯ ಹೆದ್ದಾರಿ ನಿರ್ವಹಣೆ 4059–80–051–0–60–132 ಇಲಾಖಾ ಕಟ್ಟಡಗಳು, 4059–SCP ಲೆಕ್ಕ ಶೀರ್ಷಿಕೆ ಅಡಿ ಬರುವ ಕಾಮಗಾರಿಗಳಿಗೆ ಟೆಂಡರನ್ನು ಆಹ್ವಾನಿಸಲಾಗಿದೆ.** ಕಾಮಗಾರಿಯ ವಿವರ ಈ ಕೆಳಗಿನಂತಿದೆ.

1. Calender of Events: ಸಾಮಾನ್ಯ
1. PWD/2026-27/SE1189 2. PWD/2025-26/RD/WORK_INDENT30736/CALL-3 (Extension) 3. PWD/2025-26/RD/WORK_INDENT35121 4. PWD/2025-26/RD/WORK_INDENT35092
1) ಆಕ್ಷೇಪಣೆ–ಸಂದೇಹ ದಿನಾಂಕ: 05–05–2026 (ಬೆಳಿಗ್ಗೆ 12:30 ಗಂಟೆಯವರೆಗೆ) 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 06–05–2026 (ಸಾಯಂಕಾಲ 16:00 ಗಂಟೆಯವರೆಗೆ) 3) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 07–05–2026 (ಸಾಯಂಕಾಲ 16:30 ಗಂಟೆಯ ನಂತರ) 4) ಆರ್ಥಿಕ ಬಿಡ್‌ತೆರೆಯುವ ದಿನಾಂಕ: 08–05–2026 (ಸಾಯಂಕಾಲ 16:30 ಗಂಟೆಯ ನಂತರ)

2. Calender of Events: ಸಾಮಾನ್ಯ
1.PWD/2025-26/RD/WORK_INDENT31546/CALL-3
2. PWD/2025-26/BD/WORK_INDENT27630/CALL-5
1) ಆಕ್ಷೇಪಣೆ–ಸಂದೇಹ ದಿನಾಂಕ: 08–05–2026 (ಬೆಳಿಗ್ಗೆ 12:30 ಗಂಟೆಯವರೆಗೆ) 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 11–05–2026 (ಸಾಯಂಕಾಲ 16:00 ಗಂಟೆಯವರೆಗೆ) 3) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 12–05–2026 (ಸಾಯಂಕಾಲ 16:30 ಗಂಟೆಯ ನಂತರ) 4) ಆರ್ಥಿಕ ಬಿಡ್‌ತೆರೆಯುವ ದಿನಾಂಕ: 13–05–2026 (ಸಾಯಂಕಾಲ 16:30 ಗಂಟೆಯ ನಂತರ)

ಕಾಮಗಾರಿಗಳಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ **http://www.kppp.karnataka.gov.in** ದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ ಧಾರವಾಡ ವಿಭಾಗ ಕಚೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ಡಿಐಪಿಆರ್/ಧಾರವಾಡ/99/ಮಣಿಪಾಲ್/2026–27

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಬೆವಿಕಂ ಇವರು ಕೆಪಿಪಿ ಪೋರ್ಟಲ್ ಮೂಲಕ ಟಿ&ಪಿ ಮತ್ತು 11ಕೆವಿ/ಎಲ್‌ಟಿ ಮಾರ್ಗ ಸಾಮಗ್ರಿಗಳ ಪೂರೈಕೆಗಾಗಿ ಟೆಂಡರ್ ಆಹ್ವಾನಿಸಿದೆ.

ಕ್ರ.ಸಂ.	ವಿಚಾರಣೆ / ಇಂಡೆಂಟ್ ಸಂಖ್ಯೆ	ಟೆಂಡರ್ ಹೆಸರು
1	ಬೆವಿಕಂ/2026–27/ ಐಎನ್‌ಡಿ0244	ಆ್ಯಂಕರ್ ರಾಡ್‌ಗಳು/ಗೈರಾಡ್‌ಗಳು ಜಿಐ–12 ಮಿ.ಮೀ. ರೌಂಡ್ಸ್ ಬಳಕೆ.
2	ಬೆವಿಕಂ/2026–27/ ಐಎನ್‌ಡಿ0247	ಅರ್ಥಿಂಗ್/ಗ್ರೌಂಡಿಂಗ್ ಪೈಪ್ ಜಿಐ

ಬಿಡ್ ದಸ್ತಾವೇಜುಗಳ ಲಭ್ಯ: **30.04.2026, 17.00 ಗಂಟೆಯಿಂದ.** ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **16.05.2026, 17.15 ಗಂಟೆ.** ಬಿಡ್ ದಸ್ತಾವೇಜುಗಳನ್ನು ತೆರೆಯುವ ದಿನಾಂಕ: **18.05.2026, 11.00 ಗಂಟೆಗೆ.** ಬಿಡ್ ದಸ್ತಾವೇಜುಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: **http://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆಸಕ್ತಿಯುಳ್ಳ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಬಿಡ್ಡುದಾರರು ಹೆಚ್ಚಿನ ವಿವರ ಹಾಗೂ ಸಹಾಯಕ್ಕಾಗಿ ಕೆಪಿಪಿ ಹೆಲ್ಪ್‌ಡೆಸ್ಕ್ ಸಂಪರ್ಕ ಸಂಖ್ಯೆ: +91 8046010000, +91 8068948777ಗೆ ಕರೆಮಾಡಿ ಅಥವಾ ಇ–ಮೇಲ್: **support@eprochelpdesk.com** ಮೂಲಕ ಪಡೆಯಬಹುದು.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು, ವಿದ್ಯುತ್, ಖರೀದಿ ಶಾಖೆ, ಬೆವಿಕಂ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912 ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಮಕ್ಕಳ ರಕ್ಷಣಾ ನಿರ್ದೇಶನಾಲಯ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಿವಮೊಗ್ಗ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್(KPPP)
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

2026–27ನೇ ಸಾಲಿಗೆ ಮಕ್ಕಳ ರಕ್ಷಣಾ ನಿರ್ದೇಶನಾಲಯ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಿವಮೊಗ್ಗ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಬಾಲಕರ ಬಾಲಮಂದಿರ, ಸರ್ಕಾರಿ ಬಾಲಕಿಯರ ಬಾಲಮಂದಿರ, ಸರ್ಕಾರಿ ವೀಕ್ಷಣಾಲಯ ಹಾಗೂ ಸರ್ಕಾರಿ ವಿಶೇಷ ದತ್ತು ಸಂಸ್ಥೆಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಇ-ಪ್ರಕ್ಯೂರ್‌ಮೆಂಟ್ ಟೆಂಡರ್‌ನ್ನು ಅನುಬಂಧ–1ರಲ್ಲಿ ಲಗತ್ತಿಸಿರುವ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KPPP) 1999 ನಿಯಮಗಳು 2000ರ ಪ್ರಕಾರ ಒಂದು ವರ್ಷದ ಅವಧಿಗೆ KPPP ವೆಬ್‌ಸೈಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಟೆಂಡರ್‌ದಾರರು ಟೆಂಡರ್ ಬಿಡ್‌ನ್ನು ದಿನಾಂಕ:27–04–2026 ರಿಂದ 04–05–2026 ರವರೆಗೆ ಸಂಜೆ:4.00 ಗಂಟೆಯೊಳಗೆ https://Kppp.Karnataka.gov.in ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರಕ್ಯೂರ್ ಮೆಂಟ್ ಟೆಂಡರ್ ಸಂಖ್ಯೆ: DCP/2026-27/SE0261 ದಿನಾಂಕ: 27–04–2026.

ಹೆಚ್ಚಿನ ಮಾಹಿತಿಗಾಗಿ: ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಆಲ್ಕೋಳ, ಶಿವಮೊಗ್ಗಕ್ಕೆ ದೂರವಾಣಿ – ಸಂಖ್ಯೆ:08182–295709ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/129/04/144

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, “ಸಂಪರ್ಕ ಸೌಧ”, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫೋನ್ : 080–22024000
ಇ–ಮೇಲ್: mdkrdcl@gmail.com ವೆಬ್‌ಸೈಟ್: http://www.krdcl.in

ಸಂ. ಕರಅನಿನಿ/ಸ್ವನಿ. ಪ್ರಕಟಣೆ/2026–27/278 ದಿನಾಂಕ: 28–04–2026

ಪ್ರಕಟಣೆ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (KRDCL) ತನ್ನ ಮಂಡಳಿಯಲ್ಲಿ **ಸ್ವತಂತ್ರ ನಿರ್ದೇಶಕರಾಗಿ** (Independent Director) ನೇಮಕಗೊಳ್ಳಲು ಅರ್ಹ ಮತ್ತು ನುರಿತ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಕಂಪನಿಯು ಇಬ್ಬರು (2) ಸ್ವತಂತ್ರ ನಿರ್ದೇಶಕರನ್ನು ನೇಮಿಸಲು ಪ್ರಸ್ತಾಪಿಸಿದ್ದು, ಒಬ್ಬರು ತಾಂತ್ರಿಕ ಪರಿಣತಿಯನ್ನು ಹೊಂದಿರಬೇಕು (ಪ್ರಮುಖವಾಗಿ ಮೂಲಸೌಕರ್ಯ/ರಸ್ತೆ ಅಭಿವೃದ್ಧಿ ಅಥವಾ ಸಂಬಂಧಿತ ಕ್ಷೇತ್ರಗಳಲ್ಲಿ) ಮತ್ತು ಇನ್ನೊಬ್ಬರು ಆರ್ಥಿಕ ಪರಿಣತಿಯನ್ನು ಹೊಂದಿರಬೇಕು.

ಅಭ್ಯರ್ಥಿಯು ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 149 ರ ಪ್ರಕಾರ ಸ್ವತಂತ್ರ ಮಾನದಂಡಗಳನ್ನು ಪೂರೈಸಬೇಕು ಮತ್ತು ಈ ಕಾಯ್ದೆಯ ಸೆಕ್ಷನ್ 164 ರ ಅಡಿಯಲ್ಲಿ ಅನರ್ಹರಾಗಿರಬಾರದು.

ಅರ್ಜಿದಾರರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ವ್ಯವಹಾರಗಳ ಸಂಸ್ಥೆ (IICA) ನಿರ್ವಹಿಸುವ ಸ್ವತಂತ್ರ ನಿರ್ದೇಶಕರ ಡೇಟಾ ಬ್ಯಾಂಕ್‌ನಲ್ಲಿ ನೋಂದಾಯಿಸಲ್ಪಟ್ಟಿರಬೇಕು ಮತ್ತು ಅಗತ್ಯವಿರುವ ಎಲ್ಲಾ ಆನ್‌ಲೈನ್ ಪ್ರಾವೀಣ್ಯತೆಯ ಸ್ವಯಂ–ಮೌಲ್ಯಮಾಪನ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಒಳಗೊಂಡಂತೆ ಅನ್ವಯವಾಗುವ ಎಲ್ಲಾ ನಿಯಮಗಳನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ.

ಸರ್ಕಾರಿ ಕಂಪನಿಗಳು, ಸಾರ್ವಜನಿಕ ವಲಯದ ಉದ್ಯಮಗಳ ಮಂಡಳಿಗಳಲ್ಲಿ ಪೂರ್ವ ಅನುಭವ ಹೊಂದಿರುವ ಹಾಗೂ ಮೂಲಸೌಕರ್ಯ ಮತ್ತು ರಸ್ತೆ ಅಭಿವೃದ್ಧಿ ಯೋಜನೆಗಳಲ್ಲಿ ಪರಿಚಿತರಾಗಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಆಸಕ್ತ ಅಭ್ಯರ್ಥಿಗಳು ತಮ್ಮ ವಿವರವಾದ ಸ್ವ–ವಿವರದ ಜೊತೆಗೆ ಅರ್ಹತೆಗಳು, ಅನುಭವ, DIN ಮತ್ತು ಸಂಪರ್ಕ ವಿವರಗಳ ಪುರಾವೆ, IICA ಯಿಂದ ಸ್ವತಂತ್ರ ನಿರ್ದೇಶಕರ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರಮಾಣಪತ್ರ ಸೇರಿದಂತೆ ಪೂರಕ ದಾಖಲೆಗಳನ್ನು **ದಿನಾಂಕ: 15–05–2026ರ ಒಳಗೆ** ಕೆಳಗೆ ತಿಳಿಸಲಾದ ವಿಳಾಸ/ಇಮೇಲ್‌ಗೆ ಸಲ್ಲಿಸಬಹುದು:

ಇಮೇಲ್: **mdkrdcl@gmail.com**

ವಿಳಾಸ: ಸಂಪರ್ಕ ಸೌಧ, ಸರ್ವೆ ಸಂಖ್ಯೆ. 8, ಬಿಇಪಿ ಆವರಣ, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1 ನೇ ಬ್ಲಾಕ್, ಬೆಂಗಳೂರು 560010, ಬೆಂಗಳೂರು, ಕರ್ನಾಟಕ.

ಈ ಸೂಚನೆಯನ್ನು ನಿರೀಕ್ಷಿತ ಅಭ್ಯರ್ಥಿಗಳಿಂದ ಅರ್ಜಿಗಳ ಆಹ್ವಾನಕ್ಕಾಗಿ ಮತ್ತು ಮಾಹಿತಿಗಾಗಿ ನೀಡಲಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕರಅನಿನಿ ಬೆಂಗಳೂರು

DIPR/CP/YC/374/2026-27

ಕರ್ನಾಟಕ ಸರಕಾರ

ಯಮಸಂಧಿ ಶ್ರೀ ವೈ.ಡಿ ನಂಜೇಗೌಡ ಮತ್ತು ಶ್ರೀಮತಿ ಮಂಜಮ್ಮ ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ಸಾರ್ವಜನಿಕ ಆಸ್ಪತ್ರೆ, ಬೇಲೂರು, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ–573115.

Phone No:08177-222246 E-mail ID: ghbelur@gmail.com

ಸಂಖ್ಯೆ: ತಾ.ಸಾ.ಆ.ಬೇ/ಟೆಂಡರ್/02/03/10/2025–26
ದಿನಾಂಕ:27/04/2026

“ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ”

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಬೇಲೂರು ಇಲ್ಲಿಗೆ 2026–27 ನೇ ಸಾಲಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ 1999 ಮತ್ತು 2000 ನಿಯಮದಂತೆ ದ್ವಿ–ಲಕೋಟೆ ಪದ್ದತಿಯಲ್ಲಿ ಅರ್ಹ ಅದೀಕೃತ ಸರಬರಾಜುದಾರರಿಂದ, ಸರ್ಕಾರದಿಂದ ಮಾನ್ಯತೆ ಪಡೆದ ಅಧೀಕೃತ ಸಂಸ್ಥೆ ಮತ್ತು ಅದೀಕೃತ ಮೂಲ ತಯಾರಕರಿಂದ ಕೆ.ಪಿ.ಪಿ ಪೋರ್ಟ್‌ಲ್ ನಲ್ಲಿ ಈ ಕೆಳಕಂಡ ವಿವರದಂತೆ ಇ–ಟೆಂಡರ್ ಅಹ್ವಾನಿಸಲಾಗಿದ್ದು. ಆಸಕ್ತಿಯುಳ್ಳ ಅದೀಕೃತ ಸರಬರಾಜುದಾರು, ಸರ್ಕಾರದಿಂದ ಮಾನ್ಯತೆ ಪಡೆದ ಅಧೀಕೃತ ಸಂಸ್ಥೆ ಮತ್ತು ಅದೀಕೃತ ಮೂಲ ತಯಾರಕರು ಇ–ಪ್ರಕ್ಯೂರ್‌ಮೆಂಟ್ (http://kppp.karnataka.gov.in) ಮುಖಾಂತರ ಪರಿಶೀಲಿಸಿ ದೃಢೀಕೃತ ಸೂಕ್ತ ದಾಖಲಾತಿಗಳು ಮತ್ತು ತಮ್ಮ ದರಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಗಳಿದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ ಕೆ.ಪಿ.ಪಿ.ಪೋರ್ಟ್‌ಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಕ್ರ.ಸಂ.ಇ–ಪೋರ್ಟಲ್‌ನಲ್ಲಿನ ಟೆಂಡರ್ ಇಂಡೆಂಟ್ 1)DHFWS/202627/IND2433 ಟೆಂಡರ್‌ನ ವಿವರ ಔಷಧಿ ಮತ್ತು ಸಾಮಗ್ರಿಗಳು ಟೆಂಡರ್ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)60.00 ಇಎಂಡಿ ಮೊತ್ತ (ರೂ ಗಳಲ್ಲಿ)1,50,000 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 22.05.2026 ರ ಸಂಜೆ 4.30 2)DHFWS/202627/IND2426 ಟೆಂಡರ್‌ನ ವಿವರ ಪ್ರಯೋಗಶಾಲಾ ರಾಸಾಯನಿಕಗಳು ಮತ್ತು ಸಾಮಗ್ರಿಗಳು ಟೆಂಡರ್ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)25.00 ಇಎಂಡಿ ಮೊತ್ತ (ರೂ ಗಳಲ್ಲಿ)62,500 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 22.05.2026 ರ ಸಂಜೆ 4.30 3)DHFWS/202627/IND2427 ಟೆಂಡರ್‌ನ ವಿವರ ಸ್ವಚ್ಛತಾ ಸಾಮಾಗ್ರಿಗಳನ್ನು ಒಳಗೊಂಡಂತೆ ಅವಶ್ಯಕ ವಸ್ತುಗಳು ಟೆಂಡರ್ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)10.00 ಇಎಂಡಿ ಮೊತ್ತ (ರೂ ಗಳಲ್ಲಿ)25,000 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 15.05.2026 ರ ಸಂಜೆ 4.30

ಸಹಿ/–ಆಡಳಿತ ವೈದ್ಯಾಧಿಕಾರಿಗಳು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಬೇಲೂರು ತಾ. ಹಾಸನ ಜಿಲ್ಲೆ

ವಾಸಾಸಂಇ/ಹಿಸನಿ/ಹಾಸನ/75/ಕೆಎಸ್‌ಎಂಸಿಎ/2025–26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

‘ಭಾಷೆ’ ಬೆಳೆಯುವುದೆಂದರೆ ‘ಭಾವನೆ’ಗಳು ಬೆಳೆಯುವುದೆಂದೇ ಅರ್ಥ.

–ಟಿ.ಎಸ್. ಎಲಿಯಟ್

ಸಂಪಾದಕೀಯ

ಏಳು ರಾಜ್ಯಸಭಾ ಸದಸ್ಯರ ವಲಸೆ ಎಎಪಿಗೆ ಹಿನ್ನಡೆ, ಅಸ್ತಿತ್ವದ ಸವಾಲು

ಆಮ್ ಆದ್ಮಿ ಪಕ್ಷದ (ಎಎಪಿ) 10 ರಾಜ್ಯಸಭಾ ಸದಸ್ಯರಲ್ಲಿ 7 ಮಂದಿ ರಾಜೀನಾಮೆ ನೀಡಿರುವುದು ಆ ಪಕ್ಷಕ್ಕೆ ದೊಡ್ಡ ಹಿನ್ನಡೆ ಉಂಟುಮಾಡುವ ಬೆಳವಣಿಗೆ. ಸಾಂಸ್ಥಿಕವಾಗಿ ಹಾಗೂ ಸೈದ್ಧಾಂತಿಕವಾಗಿ ಎಎಪಿ ಎಷ್ಟು ದುರ್ಬಲವಾಗಿದೆ ಎನ್ನುವುದನ್ನು ಈ ಬೆಳವಣಿಗೆ ಸೂಚಿಸುವಂತಿದೆ. ಎಎಪಿಯಿಂದ ಹೊರಬಂದವರು ಬಿಜೆಪಿಗೆ ಸೇರ್ಪಡೆ ಆಗಿರುವುದು ಅಚ್ಚರಿಯ ಸಂಗತಿಯೇನಲ್ಲ. ಈ ಮೊದಲೂ ಇತರ ಪಕ್ಷಗಳಿಂದ ಹೊರಬಂದವರನ್ನು ವೈಯಕ್ತಿಕ ನೆಲೆಯಲ್ಲಿ ಅಥವಾ ಸಾಮೂಹಿಕವಾಗಿ ಯಾವುದೇ ಪರಿಶೀಲನೆ ನಡೆಸದೆ ಹಾಗೂ ಹಿಂಜರಿಕೆಯಿಲ್ಲದೆ ಬಿಜೆಪಿ ಬರಮಾಡಿಕೊಂಡಿದೆ. ಎಎಪಿಯಿಂದ ಹೊರಗೆ ಬಂದಿರುವವರಲ್ಲಿ ತೀರಾ ಇತ್ತೀಚಿನವರೆಗೂ ರಾಜ್ಯಸಭೆಯಲ್ಲಿ ಪಕ್ಷದ ಉಪನಾಯಕರಾಗಿ ಕಾರ್ಯ ನಿರ್ವಹಿಸಿದ್ದ ರಾಘವ್ ಚಡ್ಡಾ ಅವರೊಂದಿಗೆ, ಪಕ್ಷದ ಇತರ ಪ್ರಮುಖ ನಾಯಕರಾದ ಸಂದೀಪ್ ಪಾಠಕ್, ಅಶೋಕ್ ಮಿತ್ತಲ್ ಸೇರಿದ್ದಾರೆ. ವಿಪರ್ಯಾಸದ ಸಂಗತಿಯೆಂದರೆ, ರಾಜ್ಯಸಭೆಯಲ್ಲಿ ಪಕ್ಷದ ಉಪನಾಯಕ ಸ್ಥಾನದಿಂದ ಚಡ್ಡಾ ಅವರನ್ನು ಕಿತ್ತುಹಾಕಿದಾಗ ಆ ಸ್ಥಾನಕ್ಕೆ ಮಿತ್ತಲ್ ಅವರನ್ನು ನೇಮಿಸಲಾಗಿತ್ತು. ಅರವಿಂದ್ ಕೇಜ್ರಿವಾಲ್ ಅವರೊಂದಿಗೆ ತಳಕು ಹಾಕಿಕೊಂಡ ಪಕ್ಷದ ನಾಯಕತ್ವದೊಂದಿಗೆ ಚಡ್ಡಾ ಅವರು ಇತ್ತೀಚಿನ ದಿನಗಳಲ್ಲಿ ಸುಮಧುರ ಸಂಬಂಧವನ್ನೇನೂ ಹೊಂದಿರಲಿಲ್ಲ. ದೆಹಲಿ ಅಬಕಾರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಒಳಗೆ ಮತ್ತು ಹೊರಗೆ ಕೇಜ್ರಿವಾಲ್ ಮತ್ತು ಇತರ ಮುಖಂಡರು ಹೋರಾಟ ನಡೆಸುತ್ತಿದ್ದಾಗ ಅವರೊಂದಿಗೆ ಚಡ್ಡಾ ಕಾಣಿಸಿಕೊಂಡಿರಲಿಲ್ಲ. ಪಕ್ಷದ ಎಲ್ಲ ವೇದಿಕೆಗಳಿಂದಲೂ ಅವರು ತಮ್ಮಷ್ಟಕ್ಕೆ ಅಂತರ ಕಾಯ್ದುಕೊಂಡಿದ್ದರು. ಹಾಗಾಗಿ, ಅವರ ನಿರ್ಗಮನ ಆಶ್ಚರ್ಯಕರ ಅಲ್ಲವಾದರೂ, ಅವರೊಂದಿಗಿನ ಸಾಮೂಹಿಕ ವಲಸೆ ಅನಿರೀಕ್ಷಿತವಾದುದು.



ಏಳು ರಾಜ್ಯಸಭಾ ಸದಸ್ಯರು ಆಮ್ ಆದ್ಮಿಯಿಂದ ಹೊರಬಿದ್ದಿದ್ದಾರೆ. ಈ ಬೆಳವಣಿಗೆ, ಎಎಪಿಯ ಸೈದ್ಧಾಂತಿಕ ದೌರ್ಬಲ್ಯ ಹಾಗೂ ಬಿಜೆಪಿಯ ಸೈದ್ಧಾಂತಿಕ ಭ್ರಷ್ಟತೆಗೆ ನಿದರ್ಶನದಂತಿದೆ.

ಎಎಪಿ ತನ್ನ ಮೂಲ ಸಿದ್ಧಾಂತದಿಂದ ದೂರಸರಿದಿದೆ ಎಂದು ಹೇಳುವ ಮೂಲಕ, ಪಕ್ಷದಿಂದ ಹೊರಬಂದಿರುವುದನ್ನು ಚಡ್ಡಾ ಸಮರ್ಥಿಸಿಕೊಂಡಿದ್ದಾರೆ. ಸಾರ್ವಜನಿಕ ಸೇವೆಗಿಂತಲೂ ಸ್ವಹಿತಾಸಕ್ತಿಯಲ್ಲಿಯೇ ಪಕ್ಷದ ನಾಯಕತ್ವ ಮುಳುಗಿ ಹೋಗಿದೆ ಎಂದು ಅವರು ಹಾಗೂ ಅವರ ಸಹವರ್ತಿಗಳು ಆಪಾದಿಸಿದ್ದಾರೆ. ಆದರೆ, ಇಡೀ ಪ್ರಕರಣ ಸಿನಿಮೀಯವಾಗಿದೆ ಹಾಗೂ ಪಕ್ಷಾಂತರಿಗಳ ಉದ್ದೇಶಗಳ ಬಗ್ಗೆ ಅನುಮಾನ ಉಂಟುಮಾಡುವಂತಿದೆ; ಎಎಪಿಯ ಮೂಲ ಸಿದ್ಧಾಂತಗಳು ಹಾಗೂ ಪ್ರಸಕ್ತ ವಿದ್ಯಮಾನದಲ್ಲಿನ ಬಿಜೆಪಿ ಪಾತ್ರದ ಬಗ್ಗೆಯೂ ಪ್ರಶ್ನೆಗಳಿವೆ. ಚಡ್ಡಾ ಅವರ ಸದ್ಯದ ನಡೆ ದಿಢೀರ್ ತೀರ್ಮಾನ ಆಗಿರದೆ, ತಿಂಗಳುಗಳ ಕಾಲದ ಯೋಜನೆಯಾಗಿದೆ ಹಾಗೂ ಅವರು ಬಿಜೆಪಿಯನ್ನು ಅಪ್ಪಿಕೊಂಡಿರುವುದರ ಹಿಂದೆಯೂ ಅನೇಕ ಅಂಶಗಳು ಅಡಗಿವೆ. ಎಎಪಿಯಲ್ಲಿದ್ದಾಗ ಚಡ್ಡಾ ಬಿಜೆಪಿಯ ಕಟು ವಿಮರ್ಶಕರಲ್ಲಿ ಒಬ್ಬರಾಗಿದ್ದರು. ಟೀಕಿಸುತ್ತಿದ್ದ ಪಕ್ಷವನ್ನೇ ಸೇರಿಕೊಂಡಿರುವ ಅವರ ನಿರ್ಧಾರ, ಮೌಲ್ಯಗಳೊಂದಿಗಿನ ಬದ್ಧತೆಯೊಂದಿಗೆ ಮಾಡಿಕೊಂಡಿರುವ ರಾಜಿಯಾಗಿದೆ. ಇಡೀ ಪ್ರಹಸನದಲ್ಲಿ ಬಿಜೆಪಿ ಪಾತ್ರವೇ ಹೆಚ್ಚು ಸಹಜವಾಗಿದೆ. ಪಕ್ಷಾಂತರಿಗಳನ್ನು ತಾರತಮ್ಯವಿಲ್ಲದೆ ಸ್ವಾಗತಿಸುವ ತನ್ನ ದಾಖಲೆಗೆ ಅದು ಬದ್ಧವಾಗಿದೆ. ಇತರ ಪಕ್ಷಗಳನ್ನು ಒಡೆಯುವುದು, ದುರ್ಬಲಗೊಳಿಸುವುದು ಅದರ ಏಕಮಾತ್ರ ಗುರಿಯಾಗಿದೆ. ದೀರ್ಘ ಕಾಲದಲ್ಲಿ ಈ ತಂತ್ರವು ಪಕ್ಷ ಮತ್ತು ರಾಜಕೀಯದ ಮೇಲೆ ಉಂಟುಮಾಡಬಹುದಾದ ಪರಿಣಾಮವನ್ನು ಕಾದು ನೋಡಬೇಕಾಗಿದೆ.

ಏಳು ರಾಜ್ಯಸಭಾ ಸದಸ್ಯರ ನಿರ್ಗಮನದಿಂದ ಎಎಪಿ ಅಸ್ತಿತ್ವದ ಬಿಕ್ಕಟ್ಟನ್ನು ಎದುರಿಸಬೇಕಾಗಬಹುದು. ಪಕ್ಷದಿಂದ ಇನ್ನಷ್ಟು ಜನ ಹೊರಹೋಗಲಿದ್ದಾರೆ ಎನ್ನುವ ವರದಿಗಳಿವೆ. ಯುಪಿಎ ಸರ್ಕಾರದ ವಿರುದ್ಧ ನಡೆದ ಭ್ರಷ್ಟಾಚಾರ ವಿರೋಧಿ ಆಂದೋಲನದ ಮೂಲಕ ಜನ್ಮತಾಳಿದ ಪಕ್ಷ, ಈಗಾಗಲೇ ಅಸ್ತಿತ್ವದಲ್ಲಿರುವ ರಾಜಕೀಯ ಪಕ್ಷಗಳಿಗೆ ತನ್ನನ್ನು ನೈತಿಕ ಪರ್ಯಾಯದ ರೂಪದಲ್ಲಿ ಬಿಂಬಿಸಿಕೊಂಡಿತು. ಆದರೆ, ಅದರ ಸೈದ್ಧಾಂತಿಕ ನಿಲುವುಗಳು ಅಸ್ಪಷ್ಟವಾಗಿವೆ ಹಾಗೂ ಅನೇಕ ವಿಷಯಗಳಲ್ಲಿ ಎಎಪಿ ಮತ್ತು ಬಿಜೆಪಿ ನಿಲುವುಗಳಲ್ಲಿ ಸಾಮ್ಯತೆ ಕಂಡುಬಂದಿದೆ. ವ್ಯಕ್ತಿ ಆಧಾರಿತ ನಿರ್ದೇಶನದಲ್ಲಿ ಮುನ್ನಡೆಯುತ್ತಿರುವ ಈ ಪಕ್ಷ, ಸಂಸ್ಥಾಪಕ ಸದಸ್ಯರೂ ಸೇರಿದಂತೆ ಹಲವು ನಾಯಕರ ವಲಸೆಯನ್ನು ಆರಂಭದಿಂದಲೂ ಕಾಣುತ್ತಾ ಬಂದಿದೆ. ಕ್ಷಿಪ್ರ ಅವಧಿಯಲ್ಲಿಯೇ ಗಮನಾರ್ಹ ಬೆಳವಣಿಗೆಯನ್ನು ಸಾಧಿಸಿದ ಎಎಪಿ ಈಗ ಗಂಭೀರ ಸವಾಲು ಎದುರಿಸುತ್ತಿದೆ. ಅದು ಅಧಿಕಾರದಲ್ಲಿ ಇರುವ ಪಂಜಾಬ್‌ನಲ್ಲಿ 2027ರಲ್ಲಿ ಚುನಾವಣೆ ನಡೆಯುತ್ತಿದ್ದು, ಆ ರಾಜ್ಯದಲ್ಲಿಯೇ ಪಕ್ಷ ಬಿಕ್ಕಟ್ಟಿಗೆ ಸಿಲುಕಿಕೊಂಡಿದೆ.

ಅಕ್ಷರ ಚೋರತನ



ವಿಶ್ವವಿದ್ಯಾಲಯದಂತಹ ಜ್ಞಾನದ ಗುಡಿಗಳಲ್ಲಿ ಒಂದು ಸ್ವತಂತ್ರ ಸಂಶೋಧನಾ ಲೇಖನವನ್ನೂ ಬರೆಯಲಾರದ ಕೆಲವು ದಡ್ಡ ಶಿಖಾಮಣಿಗಳು ಸೇರಿಕೊಂಡಿದ್ದಾರೆ. ನಕಲಿ ಪಿಎಚ್.ಡಿ, ಎಂ.ಫಿಲ್ ಪ್ರಮಾಣಪತ್ರ ಸಲ್ಲಿಸಿ ಅನೇಕ ಜನ ಉದ್ಯೋಗ ಪಡೆದಿದ್ದಾರೆ. ಈಗಿನ ಬಹಳಷ್ಟು ಸಂಶೋಧನಾ ಪ್ರಬಂಧಗಳು ಅಕ್ಷರ ಚೋರತನದಿಂದ ಕೂಡಿವೆ.

ವಡ್ಡಗೆರೆ ನಾಗರಾಜಯ್ಯ, ಸಾಹಿತಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಮಂಗಳೂರಿನ ಕುಕ್ಕರ್ ಬಾಂಬ್ ಸ್ಫೋಟದ ಆರೋಪಿಗೆ ನ್ಯಾಯಾಲಯವು ಶಿಕ್ಷೆ ವಿಧಿಸಿದೆ. ಈ ಆರೋಪಿಯನ್ನು ‘ನಮ್ಮ ಬ್ರದರ್’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕರೆದಿದ್ದರು. ಕುಕ್ಕರ್ ಬಾಂಬ್ ಬಳಸುವ ವ್ಯಕ್ತಿಗಳನ್ನು ಕುಟುಂಬದವರಂತೆ ಪರಿಗಣಿಸುವ ಪಕ್ಷವನ್ನು ಭಾರತ ಎಂದಿಗೂ ಸ್ವೀಕರಿಸುವುದಿಲ್ಲ.

ಪ್ರಲ್ಹಾದ ಜೋಶಿ, ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 29-4-2001

• ಮೌಲ್ಯವರ್ಧಿತ ತೆರಿಗೆ ಮುಂದಿನ ವರ್ಷದಿಂದ ಜಾರಿ

ಬೆಂಗಳೂರು, ಏ. 28–ಮುಂದಿನ ಹಣಕಾಸು ವರ್ಷದ ಪ್ರಾರಂಭದಿಂದಲೇ ರಾಜ್ಯದಲ್ಲಿ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು ಎಂದು ಹಣಕಾಸು ಖಾತೆ ರಾಜ್ಯ ಸಚಿವ ಎಂ. ಶಿವಣ್ಣ ಇಂದು ಇಲ್ಲಿ ತಿಳಿಸಿದರು.

ತಮ್ಮನ್ನು ಭೇಟಿ ಮಾಡಿದ ವರದಿಗಾರರ ಜತೆಗೆ ಮಾತನಾಡಿದ ಅವರು, ಈ ಕುರಿತು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದರು.

ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತರಲು ಪಶ್ಚಿಮ ಬಂಗಾಳದ ಹಣಕಾಸು ಸಚಿವ ಅಸೀಂದಾಸ್ ಗುಪ್ತ ಅವರ ಅಧ್ಯಕ್ಷತೆಯಲ್ಲಿ ಈಚೆಗೆ ದೆಹಲಿಯಲ್ಲಿ ಒಂದು ಸಭೆ ನಡೆಯಿತು. ಆ ಸಭೆಯಲ್ಲಿ ತಾವೂ ಭಾಗವಹಿಸಿದ್ದಾಗಿ ತಿಳಿಸಿದ ಸಚಿವರು, ಅಲ್ಲಿ ಸುದೀರ್ಘ ಚರ್ಚೆ ನಡೆಯಿತು ಎಂದರು.

• ವಿಷಪೂರಿತ ಆಹಾರ ಸೇವಿಸಿ ಐವರ ಸಾವು

ಬೆಂಗಳೂರು, ಏ. 28– ಕಾಡುಸೀಗೆ ಸೊಪ್ಪಿನ ಸಾರು ಮತ್ತು ರಾಗಿಮುದ್ದೆ ಉಂಡ ಒಂದೇ ಮನೆಯ ಮೂವರು ಮಕ್ಕಳು, ವೃದ್ಧೆ ಸೇರಿದಂತೆ ಐವರು ಶುಕ್ರವಾರ ಮಧ್ಯಾಹ್ನ ಕನಕಪುರ ತಾಲ್ಲೂಕಿನ ರಾಮದೇವರ ದೊಡ್ಡಿಯಲ್ಲಿ ಮೃತಪಟ್ಟಿದ್ದಾರೆ.

ಕೂಲಿ ಕೆಲಸ ಮಾಡುವ ಗೋಪಾಲ ಎಂಬುವರ ಮನೆಯಲ್ಲಿ ಈ ಘಟನೆ ಸಂಭವಿಸಿದೆ. ಈ ಸಂದರ್ಭದಲ್ಲಿ ಗೋಪಾಲ ಅವರು ಮೇಕೆ ಖರೀದಿ ಮಾಡಲು ಮರಳವಾಡಿ ಸಂತೆಗೆ ಹೋಗಿದ್ದರು.

75 ವರ್ಷಗಳ ಹಿಂದೆ

ಭಾನುವಾರ, 29-4-1951


• ಐ.ಎ.ಎಸ್.ನಲ್ಲಿ ಹರಿಜನರ ತೇರ್ಗಡೆ

ನವದೆಹಲಿ, ಏ. 28– ಗೃಹ ಸಚಿವ ಸಿ. ರಾಜಗೋಪಾಲಚಾರಿಯವರು ಇಂದು ಪಾರ್ಲಿಮೆಂಟಿನಲ್ಲಿ ಐ.ಎ.ಎಸ್ ಪರೀಕ್ಷೆಯಲ್ಲಿ ಒಬ್ಬ ಹರಿಜನರು ತೇರ್ಗಡೆ ಹೊಂದಿರುವರೆಂದೂ, ಅವರು ಸಾರ್ವತ್ರಿಕ ಪಟ್ಟಿಯಲ್ಲಿ 48ನೇ ರ‍್ಯಾಂಕ್ ಪಡೆದಿರುವರೆಂದೂ, ಐ.ಎ.ಎಸ್. ಪ್ರಕಾರ ನೇಮಕವಾಗಿರುವರೆಂದೂ ತಿಳಿಸಿದರು.

ಐ.ಎ.ಎಸ್., ಐ.ಎಫ್.ಎಸ್ ಮತ್ತು ಪ್ರಥಮ ದರ್ಜೆಯ ಕೇಂದ್ರ ನೌಕರಿಗೆ ಬಂದಿದ್ದ ಉಮೇದುದಾರರಲ್ಲಿ 240 ಮಂದಿ ಅರ್ಹರಾಗಿರುವರೆಂದೂ ಸಚಿವರು ಹೇಳಿದರು.

ಚುನಾವಣಾ ಕ್ಷೇತ್ರ ನಿರ್ಧಾರದ ಅಧಿಕಾರಕ್ಕೆ ಸಂಬಂಧಿಸಿದ ವಿ.ಕೆ. ರೆಡ್ಡಿಯವರ ಪ್ರಶ್ನೆಗೆ ಉತ್ತರಕೊಡುತ್ತ, ನ್ಯಾಯಾಂಗ ಸಚಿವರು 1950ರ ರಾಜ್ಯಾಂಗ (ಜನಸಂಖ್ಯಾ ನಿರ್ಧಾರ) ಆಜ್ಞೆಯ ಕಡೆ ಗಮನಸೆಳೆದರು.

ಇನ್ನೀಗ ಭಿನ್ನಮತದ ಸಮಯ!



ಅನುಸಂಧಾನ

ರವೀಂದ್ರ ಭಟ್ಟ

ರಾಜ್ಯ ಕಾಂಗ್ರೆಸ್‌ನಲ್ಲಿನ ಕುರ್ಚಿ ಕದನವು ಭಿನ್ನಮತದ ರೂಪು ಪಡೆದುಕೊಂಡು ಪಕ್ಷವನ್ನೇ ಸುಡುವ ಸ್ವರೂಪ ಪಡೆದುಕೊಳ್ಳುತ್ತಿದೆ. ಭಿನ್ನಮತದ ಸಂದರ್ಭದಲ್ಲಿ ವರಿಷ್ಠರ ಮೌನ ಬಂಗಾರವಲ್ಲ ಎನ್ನುವುದು ರಾಜಸ್ಥಾನ, ಪಂಜಾಬ್‌ನಲ್ಲಿ ಸಾಬೀತಾಗಿದೆ, ಪಕ್ಷ ಕೈಕಚ್ಚಿಸಿಕೊಂಡಿದೆ. ಆದರೂ, ಕಾಂಗ್ರೆಸ್ ವರಿಷ್ಠರು ಇನ್ನೂ ‘ಮೌನದ ಹುತ್ತ’ದಲ್ಲಿಯೇ ಹುದುಗಿಕೊಂಡಿದ್ದಾರೆ.

ಕರ್ನಾಟಕದ ಕಾಂಗ್ರೆಸ್ ಪಕ್ಷದ ರಾಜಕೀಯ ಹವಾಮಾನ ಮುನ್ಸೂಚನೆ ಪ್ರಕಾರ ಮೇ 4ರ ನಂತರ ರಾಜ್ಯದಲ್ಲಿ ಹಗುರದಿಂದ ಸಾಧಾರಣ ಭಿನ್ನಮತದ ಗಾಳಿ ಬೀಸಲಿದೆ. ಮೇ 10ರ ನಂತರ ಅದು ಹೆಚ್ಚಾಗಬಹುದು. ಮಾಸಾಂತ್ಯದ ವೇಳೆಗೆ ಬಿರುಗಾಳಿ, ಸುಂಟರಗಾಳಿಯಾಗಿಯೂ ಪರಿವರ್ತನೆಯಾಗಬಹುದು. ಅಲ್ಲಲ್ಲಿ ಚದುರಿದಂತೆ ಗುಡುಗು, ಸಿಡಿಲು ಸಹಿತ ಭಾರೀ ಮಳೆಯೂ ಸುರಿಯಬಹುದು. ಇದರ ಭೂಮಿಕೆ ಈಗಾಗಲೇ ಸಿದ್ಧವಾಗಿದೆ. ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭೆ ಉಪಚುನಾವಣೆಯ ಮತದಾನ ನಡೆದ ಕೆಲವೇ ದಿನಗಳಲ್ಲಿ ಕೆಲವು ವಿಕೆಟ್‌ಗಳು ಪತನವಾಗಿವೆ. ಒಂದಿಷ್ಟು ಹಿರಿಯ ಶಾಸಕರು ದೆಹಲಿಗೆ ಭೇಟಿ ನೀಡಿ ಸಂಪುಟ ಪುನಾರಚನೆ ಬಗ್ಗೆ ಒತ್ತಡ ಹೇರಿ ಬಂದಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ಸಹೋದರ ಸುರೇಶ್ ಅವರೊಂದಿಗೆ ದೆಹಲಿ ಪ್ರವಾಸ ಕೈಗೊಂಡು ಮತ್ತೊಮ್ಮೆ ‘ಹಕ್ಕು’ ಮಂಡಿಸಿ ಬಂದಿದ್ದಾರೆ. ಇನ್ನೊಂದು ಗಡುವು ನೀಡಿದ್ದಾರೆ. ಆದರೆ, ಕಾಂಗ್ರೆಸ್ ಹೈಕಮಾಂಡ್ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ.

ಪಿ.ವಿ. ನರಸಿಂಹರಾವ್ ಪ್ರಧಾನಿಯಾಗಿದ್ದಾಗ ಒಂದು ಮಾತು ಚಾಲ್ತಿಯಲ್ಲಿ ಇತ್ತು. ‘ಯಾವುದೇ ಸಮಸ್ಯೆಗೆ ಯಾವುದೇ ನಿರ್ಧಾರ ಕೈಗೊಳ್ಳದಿರುವುದೇ ಪಕ್ಷದ ನಿರ್ಧಾರ’ ಎಂದು. ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ನಡೆಯುತ್ತಿರುವ ಅಧಿಕಾರ ಹಸ್ತಾಂತರ ಎಂಬ ಪ್ರಹಸನದ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಇದೇ ನಿರ್ಧಾರ ಕೈಗೊಂಡಿರುವಂತೆ ಕಾಣುತ್ತದೆ. ಹೀಗೆ ಆದಾಗಲೆಲ್ಲ ಮತದಾರರು ಪಾಠ ಕಲಿಸಿದ್ದಾರೆ. ಆದರೆ, ಇತಿಹಾಸದಿಂದ ಕೈಕಮಾಂಡ್ ಯಾವುದೇ ಬುದ್ಧಿ ಕಲಿತ ಹಾಗೆ ಇಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಕಲಿಯುವ ಲಕ್ಷಣವೂ ಕಾಣುತ್ತಿಲ್ಲ.

ರಾಜಸ್ಥಾನದಲ್ಲಿ ಏನೇನಾಯಿತು ಎನ್ನುವುದನ್ನು ನೆನಪಿಸಿಕೊಳ್ಳಿ. 2018ರಿಂದ 2023ರವರೆಗೆ ರಾಜಸ್ಥಾನ ಕಾಂಗ್ರೆಸ್‌ನಲ್ಲಿ ಏನೇನು ವಿದ್ಯಮಾನಗಳು ನಡೆದವೋ ಅವೆಲ್ಲವೂ 2023ರಿಂದ ಕರ್ನಾಟಕದಲ್ಲಿ ಡಿಟ್ಟೋ ನಡೆಯುತ್ತಿವೆ. 2018ರ ಚುನಾವಣೆಯಲ್ಲಿ ರಾಜಸ್ಥಾನದಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಿದಾಗ ಸಚಿನ್ ಪೈಲಟ್ ಅವರು ಸಹಜವಾಗಿಯೇ ತಾವು ಮುಖ್ಯಮಂತ್ರಿಯಾಗಬೇಕು ಎಂದು ಹಕ್ಕು ಮಂಡಿಸಿದರು. ಆದರೆ, ಕಾಂಗ್ರೆಸ್ ಹೈಕಮಾಂಡ್ ಅನುಭವದ ಆಧಾರದಲ್ಲಿ ಹಿರಿಯರಾದ ಅಶೋಕ್ ಗೆಹಲೋತ್ ಅವರನ್ನು ಮುಖ್ಯಮಂತ್ರಿ ಮಾಡಿತು. ಸಚಿನ್ ಪೈಲಟ್ ಉಪಮುಖ್ಯಮಂತ್ರಿಯಾದರು. ಅಲ್ಲಿಯೂ ಅಧಿಕಾರ ಹಂಚಿಕೆಯ ಒಪ್ಪಂದವಾಗಿದೆ ಎನ್ನಲಾಗಿತ್ತು. ಕರ್ನಾಟಕದಲ್ಲಿಯೂ 2023ರಲ್ಲಿ ಕಾಂಗ್ರೆಸ್ ಜಯ ಗಳಿಸಿದಾಗ ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗುವ ಬಯಕೆ ವ್ಯಕ್ತಪಡಿಸಿದರು. ಆದರೆ, ಪಕ್ಷ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಮಾಡಿತು. ಶಿವಕುಮಾರ್ ಉಪಮುಖ್ಯಮಂತ್ರಿಯಾದರು. ಇಲ್ಲಿಯೂ ಎರಡೂವರೆ ವರ್ಷದ ಒಪ್ಪಂದವಾಗಿದೆ ಎಂಬ ಮಾತುಗಳು ರಾಜಕೀಯ ಪಡಸಾಲೆಯಲ್ಲಿ ಕೇಳಿಬಂದವು. ಆದರೆ, ರಾಜಸ್ಥಾನದಲ್ಲಿ ಆದಂತೆಯೇ ಇಲ್ಲಿಯೂ ಕೂಡ ಅಧಿಕಾರ ಹಂಚಿಕೆಯ ಬಗ್ಗೆ ಹೈಕಮಾಂಡ್ ಹ್ಞೂಂ ಅನ್ನಲೂ ಇಲ್ಲ. ಊಹ್ಞೂಂ ಅನ್ನಲೂ ಇಲ್ಲ. ಗೊಂದಲ ಮುಂದುವರಿಯುವಂತೆ ನೋಡಿಕೊಂಡಿತು.

2020ರ ಜುಲೈ ತಿಂಗಳಿನಲ್ಲಿ ಸಚಿನ್ ಪೈಲಟ್ ಅವರು ತಮ್ಮ ಬೆಂಬಲಿಗ 18 ಶಾಸಕರೊಂದಿಗೆ ಬಂಡಾಯವೆದ್ದರು. ಆಗಲೂ ಕಾಂಗ್ರೆಸ್ ಪಕ್ಷ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರ ಪರವಾಗಿಯೇ ನಿಂತಿತು. ಪೈಲಟ್ ಅವರನ್ನು ರಾಜ್ಯ ಘಟಕದ ಅಧ್ಯಕ್ಷ ಹುದ್ದೆಯಿಂದ ಮತ್ತು ಉಪಮುಖ್ಯಮಂತ್ರಿ ಸ್ಥಾನದಿಂದ ಕಿತ್ತು ಹಾಕಿತು. ಈಗ ಇಲ್ಲಿಯೂ ಕೂಡ ಶಿವಕುಮಾರ್ ಅವರು ಗಡುವಿನ ಮೇಲೆ ಗಡುವು ನೀಡುತ್ತಿದ್ದಾರೆ. ಅವರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದಲೂ, ಉಪಮುಖ್ಯಮಂತ್ರಿ ಸ್ಥಾನದಿಂದಲೂ ಕೆಳಗೆ ಇಳಿಸುವ ಯತ್ನಗಳೂ ತೆರೆಯ ಹಿಂದೆ ನಡೆಯುತ್ತಲೇ ಇವೆ. ರಾಜಸ್ಥಾನದಲ್ಲಿ ಸಚಿನ್ ಪೈಲಟ್ ಮತ್ತು ಅಶೋಕ್ ಗೆಹಲೋತ್ ಅವರನ್ನು ಒಂದುಗೂಡಿಸುವ ಪ್ರಯತ್ನ ಸಾಧ್ಯವಾಗಲೇ ಇಲ್ಲ. 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ನೆಲಕಚ್ಚಿತು. ಯಾವುದೇ ನಿರ್ಧಾರ ಕೈಗೊಳ್ಳದಿರುವುದೇ ಪಕ್ಷದ ನಿರ್ಧಾರ ಎನ್ನುವುದು ಕರ್ನಾಟಕದಲ್ಲಿಯೂ ಮುಂದುವರಿದರೆ ಇಲ್ಲಿಯೂ ಪಕ್ಷಕ್ಕೆ ಅದೇ ಗತಿಯಾಗಬಹುದು ಎಂದು ಹೇಳುವುದಕ್ಕೆ ಯಾವ ಭವಿಷ್ಯಕಾರನ ಅಗತ್ಯವೂ ಇಲ್ಲ.

ನಿರ್ಧಾರ ಕೈಗೊಳ್ಳುವುದು ಮತ್ತು ಭಿನ್ನಮತ ಶಮನ ಮಾಡುವುದರಲ್ಲಿ ವಿಳಂಬ ಮಾಡಿದ್ದರಿಂದ ಅಧಿಕಾರ ಕಳೆದುಕೊಂಡಿದ್ದು ಬರೀ ರಾಜಸ್ಥಾನದಲ್ಲಿ ಮಾತ್ರ ಅಲ್ಲ. ಪಂಜಾಬಿನಲ್ಲಿಯೂ ಕಾಂಗ್ರೆಸ್ ಪಕ್ಷದ್ದು ಇದೇ ಕತೆ. ಪಂಜಾಬ್ ಕಾಂಗ್ರೆಸ್‌ನಲ್ಲಿ ಆಂತರಿಕ ಭಿನ್ನಮತ ಮತ್ತು ಗುಂಪುಗಾರಿಕೆ ತೀವ್ರಗೊಂಡಿದ್ದು, ನಾಯಕರು ಬಹಿರಂಗವಾಗಿ ಹೇಳಿಕೆ ನೀಡುವುದನ್ನು ತಡೆಯಲು ಹೈಕಮಾಂಡ್ ಜನವರಿ 2026ರಲ್ಲಿ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದೆ. ಅಮರಿಂದರ್ ಸಿಂಗ್ ರಾಜಾ ವಾರಿಂಗ್ ಮತ್ತು ಪ್ರತಾಪ್ ಸಿಂಗ್ ಬಾಜ್ವಾ ನಾಯಕತ್ವದ ವಿರುದ್ಧ ಕೆಲವು ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದು, ಪಕ್ಷದ ಕಾರ್ಯಕ್ರಮಗಳಿಂದ ಅಂತರ ಕಾಯ್ದುಕೊಳ್ಳುತ್ತಿದ್ದಾರೆ. ಭಿನ್ನಮತ ಇನ್ನೂ ಮುಂದುವರಿದಿದೆ. 2027ರ ವಿಧಾನಸಭಾ ಚುನಾವಣೆಗೆ ಮುನ್ನ ಒಗ್ಗಟ್ಟು ಮೂಡಿಸಲು ಹೈಕಮಾಂಡ್ ಶ್ರಮಿಸುತ್ತಿದೆ. ಆದರೆ, ಫಲ ಸಿಗುತ್ತಿಲ್ಲ. ಕಾಂಗ್ರೆಸ್ ಪಕ್ಷದ ಭಿನ್ನಮತದಿಂದಾಗಿಯೇ 2022ರಲ್ಲಿ ಪಂಜಾಬಿನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿತು. ಆಗ ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ನವಜೋತ್ ಸಿಂಗ್ ಸಿಧು ಮತ್ತು ಅಮರಿಂದರ್ ಸಿಂಗ್ ನಡುವೆ ವೈಮನಸ್ಯ ಹೆಚ್ಚಾಗಿತ್ತು. ಅದನ್ನು ತಡೆಯುವಲ್ಲಿ ಕಾಂಗ್ರೆಸ್ ಹೈಕಮಾಂಡ್ ವಿಫಲವಾಯಿತು. ಪ್ರಸ್ತುತ ಅಲ್ಲಿ ಪಿಸಿಸಿ ಅಧ್ಯಕ್ಷ ಅಮರಿಂದರ್ ಸಿಂಗ್ ರಾಜಾ ವಾರಿಂಗ್, ವಿರೋಧ ಪಕ್ಷದ ನಾಯಕ ಪ್ರತಾಪ್ ಸಿಂಗ್ ಬಾಜ್ವಾ ಮತ್ತು ಮಾಜಿ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ನಡುವೆ ನಾಯಕತ್ವದ ಪೈಪೋಟಿ ಮುಂದುವರಿದಿದೆ.

ಛತ್ತೀಸಗಢದಲ್ಲಿಯೂ ಕಾಂಗ್ರೆಸ್ ಪಕ್ಷದ್ದು ಇದೇ ಕತೆ. ಮುಖ್ಯಮಂತ್ರಿ ಭೂಪೇಶ್ ಬಘೇಲ್ ಮತ್ತು ಆರೋಗ್ಯ ಸಚಿವ ಟಿ.ಎಸ್. ಸಿಂಗ್ ದೇವ್ ನಡುವಿನ ಶೀತಲ ಸಮರ ದೀರ್ಘಕಾಲದವರೆಗೆ ಪಕ್ಷವನ್ನು ಕಾಡಿತು. ಸಿಂಗ್ ದೇವ್ ಬಣವು ನಾಯಕತ್ವ ಬದಲಾವಣೆಗೆ ಒತ್ತಾಯಿಸಿತ್ತು. ಎರಡೂ ಬಣಗಳು ಹೈಕಮಾಂಡ್ ಭೇಟಿ ಮಾಡಿ ತಮ್ಮ ತಮ್ಮ ಒತ್ತಾಯ ಮಂಡಿಸಿದವು. ಆದರೆ, ಸೂಕ್ತ ಕಾಲದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳದೇ ಇರುವುದರಿಂದ 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋತುಸುಣ್ಣವಾಯಿತು.

ಹಿಮಾಚಲ ಪ್ರದೇಶದಲ್ಲಿಯೂ ಕಾಂಗ್ರೆಸ್ ಪಕ್ಷದ್ದು ಇದೇ ಕತೆ. 2022ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಜಯ ಗಳಿಸಿದಾಗ 1980ರಿಂದಲೂ ರಾಜ್ಯದಲ್ಲಿ ಪ್ರಬಲ ನಾಯಕರಾಗಿದ್ದ ವೀರಭದ್ರ ಸಿಂಗ್ ಅವರ ಪತ್ನಿ ಪ್ರತಿಭಾ ಸಿಂಗ್ ಅವರು ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯಾಗಿದ್ದರು. ಹಕ್ಕನ್ನೂ ಮಂಡಿಸಿದ್ದರು. ಆದರೆ ಪಕ್ಷ ಅವರನ್ನು ಬದಿಗೆ ಸರಿಸಿ ಸುಖ್ವಿಂದರ್ ಸಿಂಗ್ ಸುಖು ಅವರನ್ನು ಮುಖ್ಯಮಂತ್ರಿಯನ್ನಾಗಿಸಿತು. ಅಲ್ಲಿನ ಕಾಂಗ್ರೆಸ್ ಸರ್ಕಾರ ಹುಟ್ಟಿನೊಂದಿಗೆ ಭಿನ್ನಮತವನ್ನು ಅಂಟಿಸಿಕೊಂಡು ಬಂದಿದೆ. ಇದರಿಂದಾಗಿ ಮುಂದಿನ ವರ್ಷ ಅಲ್ಲಿ ಮತ್ತೆ ವಿಧಾನಸಭೆ ಚುನಾವಣೆಗೆ ಹೋಗುವುದು ಪಕ್ಷಕ್ಕೆ ಕಷ್ಟದ ಮಾತಾಗಿದೆ.

2024ರ ರಾಜ್ಯಸಭಾ ಚುನಾವಣೆ ಸಂದರ್ಭದಲ್ಲಿ ಹಿಮಾಚಲ ಪ್ರದೇಶ ಕಾಂಗ್ರೆಸ್ ಪಕ್ಷದ 6 ಶಾಸಕರು ಬಿಜೆಪಿಗೆ ಮತ ಚಲಾಯಿಸುವುದರೊಂದಿಗೆ ಭಿನ್ನಮತ ಇನ್ನಷ್ಟು ಜೋರಾಯಿತು. ಆಗ ಅಲ್ಲಿನ ಭಿನ್ನಮತ ಶಮನಕ್ಕೆ ಹೋಗಿದ್ದು ಡಿ.ಕೆ. ಶಿವಕುಮಾರ್. ಕಾಂಗ್ರೆಸ್ ಪಕ್ಷದಲ್ಲಿ ‘ಟ್ರಬಲ್ ಶೂಟರ್’ ಎಂದೇ ಶಿವಕುಮಾರ್ ಖ್ಯಾತಿ ಪಡೆದಿದ್ದಾರೆ. ಗುಜರಾತ್‌ನಲ್ಲಿ ಅಹ್ಮದ್ ಪಟೇಲ್ ಅವರ ರಾಜ್ಯಸಭಾ ಚುನಾವಣೆ ಸ್ಪರ್ಧೆಗೆ ತೊಂದರೆಯಾದರೆ ಅದನ್ನು ನಿವಾರಿಸಲು ಶಿವಕುಮಾರ್, ಮುಂಬೈ ರಾಜಕೀಯದಲ್ಲಿ ಗೊಂದಲ ಉಂಟಾದರೆ ಅದಕ್ಕೆ ಶಿವಕುಮಾರ್, ಹಿಮಾಚಲ ಪ್ರದೇಶದಲ್ಲಿ ತೊಂದರೆಯಾದರೆ ಶಿವಕುಮಾರ್, ಒಡಿಶಾದಲ್ಲಿ ಸಮಸ್ಯೆಯಾದರೆ ಪಕ್ಷಕ್ಕೆ ನೆನಪಾಗುವುದು ಶಿವಕುಮಾರ್. ಅಸ್ಸಾಂ, ತೆಲಂಗಾಣ ಸೇರಿದಂತೆ ಪಕ್ಷದಲ್ಲಿ ಎಲ್ಲಿಯೇ ಬಿಕ್ಕಟ್ಟು ಉಂಟಾದರೆ ಶಾಸಕರನ್ನು ಕರೆತಂದು ಯೋಗಕ್ಷೇಮ ನೋಡಿಕೊಳ್ಳುವ ಜವಾಬ್ದಾರಿ ಶಿವಕುಮಾರ್ ಅವರದ್ದು. ಕುಮಾರಸ್ವಾಮಿ ಸರ್ಕಾರದ ವಿರುದ್ಧ ಬಂಡೆದ್ದು 17 ಶಾಸಕರು ಮುಂಬೈಯಲ್ಲಿ ಬೀಡುಬಿಟ್ಟಾಗ, ಅವರು ತಂಗಿದ್ದ ಹೋಟೆಲ್ ಮುಂದೆ ಮಳೆಯಲ್ಲಿ ನೆನೆದಿದ್ದು ಶಿವಕುಮಾರ್. ಆದರೆ, ಈಗ ಟ್ರಬಲ್ ಶೂಟರ್ ಅವರೇ ಟ್ರಬಲ್‌ನಲ್ಲಿ ಇದ್ದಾರೆ. ಹೈಕಮಾಂಡ್ ಮನೆಯ ಕದ ಮತ್ತೆ ಮತ್ತೆ ಬಡಿಯುತ್ತಿದ್ದಾರೆ.

ಕಳೆದ ಒಂದು ವರ್ಷದಿಂದ ರಾಜ್ಯದಲ್ಲಿ ಅಧಿಕಾರ ಹಂಚಿಕೆಯದ್ದೇ ಸುದ್ದಿ. ಮೇ 20ಕ್ಕೆ ಕಾಂಗ್ರೆಸ್ ಸರ್ಕಾರಕ್ಕೆ ಮೂರು ವರ್ಷ ಪೂರ್ಣವಾಗುತ್ತದೆ. ಅಧಿಕಾರ ಹಸ್ತಾಂತರಕ್ಕೆ ಗಡುವಿನ ಮೇಲೆ ಗಡುವು ಕೊಟ್ಟಾಗಿದೆ. ಇದನ್ನೆಲ್ಲಾ ನೋಡಿ ರಾಜ್ಯದ ಮತದಾರನ ಮಂಡೆ ಎಷ್ಟು ಬಿಸಿಯಾಗಿದೆ ಎಂದರೆ, ಮತದಾರರ ನಿಯೋಗವೇ ದೆಹಲಿಗೆ ಹೋಗಿ ಹೈಕಮಾಂಡ್ ಭೇಟಿ ಮಾಡಿ ‘ಏನಾದ್ರೂ ಒಂದು ನಿರ್ಧಾರ ಮಾಡ್ರಪ್ಪ. ನಮಗೆ ಸಿದ್ದರಾಮಯ್ಯ ಅಥವಾ ಶಿವಕುಮಾರ್ ಯಾರು ಮುಖ್ಯಮಂತ್ರಿ ಆಗ್ತಾರೆ ಅನ್ನೋದು ಮುಖ್ಯವಲ್ಲ. ಒಳ್ಳೆ ಆಡಳಿತ ಕೊಡ್ರಿ, ಅಷ್ಟೇ ಸಾಕು’ ಎಂದು ಹೇಳುವುದೊಂದೇ ಬಾಕಿ. ಇಲ್ಲವಾದರೆ, ಮುಂದಿನ ಚುನಾವಣೆಗೆ ಮತದಾರರ ಕೈಯಲ್ಲಿ ಬಡಿಗೆ ಸಿದ್ಧವಾಗಿದೆ.



ವಾಚಕರ ವಾಣಿ

ಭೂಮಾಪಕರ ಮುಷ್ಕರ: ರೈತರ ಪರದಾಟ

ಸುಮಾರು ಎರಡು ತಿಂಗಳಿನಿಂದ ನಡೆಯುತ್ತಿರುವ ಸರ್ಕಾರಿ ಮತ್ತು ಗುತ್ತಿಗೆ ಸರ್ವೆಯರ್‌ಗಳ ಮುಷ್ಕರ ನಿಲ್ಲುವ ಲಕ್ಷಣ ಕಾಣುತ್ತಿಲ್ಲ. ಇದರಿಂದ ರೈತರಿಗೆ ತುಂಬಾ ಅನನುಕೂಲವಾಗಿದೆ. ಜಮೀನುಗಳನ್ನು ಭಾಗ ಮಾಡಿಕೊಳ್ಳಲು ಸ್ಕೆಚ್‌ಗೆ, ಪೋಡಿಗೆ, ದುರಸ್ತಿಗೆ ಮತ್ತು ಅಳತೆಗೆ ಅರ್ಜಿ ಸಲ್ಲಿಸಿದ್ದಾರೆ. ಭೂಮಾಪಕರು ಮುಷ್ಕರದಲ್ಲಿ ಪಾಲ್ಗೊಂಡಿರುವುದರಿಂದ ಕೆಲಸ ವಿಳಂಬವಾಗುತ್ತಿದೆ. ಪ್ರತಿದಿನ ರೈತರು ತಾಲ್ಲೂಕು ಕಚೇರಿಗೆ ಅಲೆದು ಹೈರಾಣಾಗುತ್ತಿದ್ದಾರೆ. ಆನ್‌ಲೈನ್‌ನಲ್ಲಿ ಸ್ಕೆಚ್ ಮಾಡಿ ಕೊಡುತ್ತೇವೆ ಎಂದು ಹೇಳಿ ಮಧ್ಯವರ್ತಿಗಳು ಹೆಚ್ಚಿನ ಹಣ ಸುಲಿಗೆ ಮಾಡುತ್ತಿದ್ದಾರೆ. ಆದರೆ, ಇದು ಸ್ಥಳ ಪರಿಶೀಲನೆ ನಡೆಸದೆ ಮಾಡುವುದಾಗಿದೆ. ಮುಂದೆ ಇದರಿಂದ ತೊಂದರೆಯಾಗಬಹುದು. ಸರ್ಕಾರ ಆದಷ್ಟು ಬೇಗ ಸರ್ವೆಯರ್‌ಗಳ ಬೇಡಿಕೆಯತ್ತ ಗಮನಹರಿಸಿ ಮುಷ್ಕರ ಇತ್ಯರ್ಥಕ್ಕೆ ಕ್ರಮವಹಿಸಲಿ.

ಶ್ರೀನಿವಾಸ ರಾಂಪುರ, ಚನ್ನಪಟ್ಟಣ

ಅಧಿಕಾರದಾಸೆ: ಜನರಿಗೆ ಮೋಸ ಸರಿಯೆ?

ಪ್ರಜಾಪ್ರಭುತ್ವದಲ್ಲಿ ಪಕ್ಷದ ಚಿಹ್ನೆಯಡಿ ಗೆದ್ದ ಅಭ್ಯರ್ಥಿಯು ಲೋಕಸಭೆ ಅಥವಾ ವಿಧಾನಸಭೆಗೆ ಪ್ರವೇಶಿಸುತ್ತಾನೆ. ಪಕ್ಷದ ಸಿದ್ಧಾಂತವನ್ನು ಗ್ರಹಿಸಿದ ಮತದಾರರು ಆ ಅಭ್ಯರ್ಥಿಗೆ ಮತ ಹಾಕಿರುತ್ತಾರೆ. ಹಾಗೆಯೇ, ಅಭ್ಯರ್ಥಿಯ ವ್ಯಕ್ತಿತ್ವ ಗಮನಿಸಿಯೂ ಮತ ಚಲಾಯಿಸಿರಬಹುದು. ಪಕ್ಷ ಮತ್ತು ಅಭ್ಯರ್ಥಿಯನ್ನು ಗಮನದಲ್ಲಿಟ್ಟುಕೊಂಡು ಮತ ಚಲಾಯಿಸಿರುವ ಸಾಧ್ಯತೆಗಳಿವೆ. ಹೀಗೆ ಮೂರು ತೆರನಾದ ವ್ಯಕ್ತಿತ್ವದ ಮತದಾರರಿದ್ದಾರೆ. ಆದರೆ, ಗೆದ್ದವರು ಏಕಾಏಕಿ ಬೇರೊಂದು ಪಕ್ಷಕ್ಕೆ ಹೋದಾಗ ಆ ಕ್ಷೇತ್ರದ ಮತದಾರರಿಗೆ ದ್ರೋಹ ಬಗೆದಂತಾಗುತ್ತದೆ. ಏಕೆಂದರೆ, ತನಗಿಷ್ಟವಿಲ್ಲದ ಪಕ್ಷ ಸೋಲಬೇಕೆಂದೇ ಮತದಾರ ಮತ ಚಲಾಯಿಸಿರುತ್ತಾನೆ. ಗೆದ್ದವರು ತಮ್ಮ ಅಧಿಕಾರಾವಧಿ ಮುಗಿಯುವ ತನಕ ಒಂದೇ ಪಕ್ಷಕ್ಕೆ ನಿಷ್ಠೆಯಿಂದ ಇರಬೇಕು ಹಾಗೂ ಪ್ರಜೆಗಳಿಗೆ ಋಣಿಯಾಗಿರಬೇಕು. ಮತದಾರರನ್ನು ಮೋಸಗೊಳಿಸುವ ರಾಜಕಾರಣಿಗಳಿಗೆ ಕಡಿವಾಣ ಹಾಕಲು ಜನಪ್ರತಿನಿಧಿಗಳ ಕಾಯ್ದೆಗೆ ತಿದ್ದುಪಡಿ ತರಬೇಕಿದೆ.

ರಾಜೇಂದ್ರಕುಮಾರ್ ಮುದ್ನಾಳ್, ಯಾದಗಿರಿ

ಪಕ್ಷದ ರ‍್ಯಾಲಿ: ತ್ರಿವರ್ಣ ಧ್ವಜ ದುರ್ಬಳಕೆ

ಸಿಕ್ಕಿಂ ರಾಜ್ಯದ ಗ್ಯಾಂಗ್ಟಕ್‌ನಲ್ಲಿ ಪ್ರಧಾನಿ ಮೋದಿ ಅವರ ಚುನಾವಣಾ ಪ್ರವಾಸದ ಸಂದರ್ಭದಲ್ಲಿ ರ‍್ಯಾಲಿ ಹೊರಡುವಾಗ, ಬಿಜೆಪಿ ಕಾರ್ಯಕರ್ತರು ತ್ರಿವರ್ಣ ಧ್ವಜ ಹಿಡಿದು ಪ್ರಧಾನಿಗೆ ಜಯಘೋಷ ಕೂಗುತ್ತಿದ್ದರು. ಈ ರೀತಿ ಚುನಾವಣಾ ಪ್ರಚಾರದ ರ‍್ಯಾಲಿಯಲ್ಲಿ ರಾಷ್ಟ್ರಧ್ವಜ ಬಳಸುವುದು ಸರಿಯೆ? ರಾಷ್ಟ್ರಧ್ವಜ ಹಿಡಿದು ಚುನಾವಣಾ ಪ್ರಚಾರಕ್ಕಾಗಿ ಬಂದ ಪಕ್ಷದ ನಾಯಕನ ಹೆಸರಿನಲ್ಲಿ ಜಯಘೋಷ ಕೂಗುವುದು ಸರಿಯಲ್ಲ. ರ‍್ಯಾಲಿ ಮುಗಿದ ಬಳಿಕ ಜನಜಂಗುಳಿಯ ನಡುವೆ ಕೆಲವು ರಾಷ್ಟ್ರಧ್ವಜಗಳು ರಸ್ತೆಯಲ್ಲೇ ಬಿದ್ದಿರುತ್ತವೆ. ರಾಜಕೀಯ ನಾಯಕರು ರ‍್ಯಾಲಿಗೆ ಆಗಮಿಸುವುದು ತಮ್ಮ ಪಕ್ಷದ ಪ್ರಚಾರಕ್ಕಾಗಿಯೇ ಹೊರತು ದೇಶ ಯುದ್ಧ ಗೆದ್ದ ಸಂಭ್ರಮ ಆಚರಿಸಲು ಅಲ್ಲ.

ಸುರೇಂದ್ರ ಪೈ, ಭಟ್ಕಳ

ಸಮಾವೇಶದ ಜಪ: ಜನರ ಸಮಸ್ಯೆ ನಗಣ್ಯ

ಕಾಂಗ್ರೆಸ್‌ನ ಕೆಲ ಸಚಿವರು, ಶಾಸಕರು ‘ಅಹಿಂದ’ ಸಮಾವೇಶ ಹಾಗೂ ಬಿಜೆಪಿಯ ಕೆಲ ನಾಯಕರು ಯಡಿಯೂರಪ್ಪನವರ ಅಭಿಮಾನೋತ್ಸವಕ್ಕೆ ಸಜ್ಜಾಗುತ್ತಿದ್ದಾರೆ. ಆದರೆ, ಈ ಎರಡೂ ಪಕ್ಷಗಳ ನಾಯಕರಿಗೆ ಜನರ ಸಮಸ್ಯೆ ಪರಿಹರಿಸುವ ಬಗ್ಗೆ ಕಾಳಜಿ ಇದ್ದಂತಿಲ್ಲ. ರಾಜ್ಯದಲ್ಲಿ ಜಲಕ್ಷಾಮದಿಂದಾಗಿ ನದಿಗಳು ಬರಿದಾಗುತ್ತಿವೆ. ಜನ, ಜಾನುವಾರು ಕುಡಿಯುವ ನೀರಿಗೆ ಪರದಾಡುವಂತಾಗಿದೆ. ಯುವಜನರು ಉದ್ಯೋಗಕ್ಕಾಗಿ ಹೋರಾಡುತ್ತಿದ್ದಾರೆ. ಕಬ್ಬಿನ ಬಾಕಿ ಹಣ, ಬೆಳೆ ವಿಮೆಗಾಗಿ ರೈತರು ಧರಣಿ ಮಾಡುತ್ತಿದ್ದಾರೆ. ಆದರೂ, ಸಮಸ್ಯೆ ಆಲಿಸಲು ಜನಪ್ರತಿನಿಧಿಗಳು ಮುಂದಾಗುತ್ತಿಲ್ಲ. ಬಿಜೆಪಿಯು ವ್ಯಕ್ತಿಪೂಜೆ ಹಾಗೂ ಕುಟುಂಬ ರಾಜಕಾರಣವನ್ನು ವಿರೋಧಿಸುತ್ತಿದೆ. ಹಾಗಿದ್ದಾಗ ಅಭಿಮಾನೋತ್ಸವ ಏತಕ್ಕೆ? ಜಾತ್ಯತೀತ ಪಕ್ಷವೆಂದು ಹೇಳುವ ಕಾಂಗ್ರೆಸ್ ‘ಅಹಿಂದ’ ಸಮಾವೇಶ ನಡೆಸುವುದು ಸರಿಯೆ?

ವಿ.ಜಿ. ಇನಾಮದಾರ, ಸಾರವಾಡ

ಸರ್ಕಾರಿ ಶಾಲೆಗೆ ಹೊಸ ದಿಕ್ಕು ಸಿಗುವುದೆ?

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಘೋಷಿಸಿರುವ ‘ಸರ್ಕಾರಿ ಶಾಲೆಗಳ ಬಲವರ್ಧನೆಗೆ ಎಂಟು ಗ್ಯಾರಂಟಿ’ಗಳನ್ನು ಕ್ರಮವಾಗಿ ಅನುಷ್ಠಾನಕ್ಕೆ ತಂದರೆ ಗ್ರಾಮೀಣ ಜನರು ಹಾಗೂ ಬಡವರ ಮಕ್ಕಳಿಗೆ ಶೈಕ್ಷಣಿಕವಾಗಿ ಬಹಳ ಪ್ರಯೋಜನ ಆಗಲಿದೆ. ಯೋಜನೆಯು ಯಶಸ್ವಿ ಆಗಬೇಕಾದರೆ ವಿದ್ಯಾರ್ಥಿಗಳ ಅನುಪಾತಕ್ಕೆ ಅನುಗುಣವಾಗಿ ಶಿಕ್ಷಕರ ನೇಮಕಾತಿ ಮಾಡಬೇಕಿದೆ. ಅವರನ್ನು ಬೋಧನೆಗೆ ಹೊರತಾದ ಅನಗತ್ಯ ಹೊಣೆಗಾರಿಕೆಯಿಂದ ಮುಕ್ತಗೊಳಿಸಬೇಕಿದೆ. ದೈಹಿಕ ಶಿಕ್ಷಣ ಶಿಕ್ಷಕರ ನೇಮಕಾತಿ ಜರೂರಾಗಿ ಆಗಬೇಕಿದೆ. ಉಚಿತ ಸಾರಿಗೆ ವ್ಯವಸ್ಥೆ ಮಾಡುವುದರಿಂದ ಗ್ರಾಮೀಣ ಹಾಗೂ ನಗರ ಪ್ರದೇಶದ ವಾರ್ಡ್‌ಗಳ ಮಕ್ಕಳ ಸಂಚಾರಕ್ಕೆ ಅನುವು ಮಾಡಿದಂತಾಗುತ್ತದೆ. ಶೈಕ್ಷಣಿಕ ಗುಣಮಟ್ಟದ ಮೇಲ್ವಿಚಾರಣೆಗೆ ರಾಜಕಾರಣಿಗಳನ್ನು ನೇಮಿಸದೆ ಶಿಕ್ಷಣ ಕ್ಷೇತ್ರದ ಪರಿಣತರನ್ನು ನೇಮಿಸುವುದು ಸೂಕ್ತ.

ಎಂ.ಜಿ. ರಂಗಸ್ವಾಮಿ, ಹಿರಿಯೂರು

ಫಲಿತಾಂಶ: ವೈಭವೀಕರಿಸುವುದು ಬೇಡ

ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಚಾರಿತ್ರಿಕ ಫಲಿತಾಂಶವೆಂದು ವೈಭವೀಕರಿಸಲಾಗುತ್ತಿದೆ. ಆದರೆ, ಹಿಂದಿನ ಮಾನದಂಡಗಳನ್ನು ಅನುಸರಿಸಿ ಅವಲೋಕಿಸಿದರೆ ಕಳೆದ ವರ್ಷದ ಫಲಿತಾಂಶಕ್ಕೂ ಈಗಿನ ಫಲಿತಾಂಶಕ್ಕೂ ಯಾವುದೇ ವ್ಯತ್ಯಾಸವಿಲ್ಲ. ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನು ಖಾತರಿಪಡಿಸದೆ; ಕಲಿಕಾ ನ್ಯೂನತೆ ಸರಿಪಡಿಸದೆ ತೇರ್ಗಡೆ ನಿಯಮವನ್ನು ಸರಳಗೊಳಿಸಿ, ತರಗತಿಯಿಂದ ತರಗತಿಗೆ ಮುಂದೂಡಿ ಜವಾಬ್ದಾರಿಯಿಂದ ನುಣುಚಿಕೊಳ್ಳುವ ತಂತ್ರ ಅನುಸರಿಸುತ್ತಿರುವುದು ಭವಿಷ್ಯದ ಶೈಕ್ಷಣಿಕ ಭದ್ರ ಬುನಾದಿಗೆ ಹಿನ್ನಡೆಯಾಗುವ ಸಾಧ್ಯತೆಯೇ ಹೆಚ್ಚು. ಈ ಕುರಿತು ಶಿಕ್ಷಣ ತಜ್ಞರು ವಿಸ್ತೃತವಾಗಿ ಚರ್ಚಿಸಬೇಕಿದೆ.

ಪುಟ್ಟದಾಸು, ಮಂಡ್ಯ

ಚುರುಮುರಿ



ಓದಿನ ಕಲಿಕೆ

• ಮಣ್ಣೆ ರಾಜು

ಮಕ್ಕಳ ಮೊಬೈಲ್ ಚಟ ಬಿಡಿಸಲು ಸುಮಿ, ‘ಒಂದೇ ತಿಂಗಳಲ್ಲಿ ಮಕ್ಕಳನ್ನು ಮೊಬೈಲ್ ವ್ಯಸನದಿಂದ ಮುಕ್ತಗೊಳಿಸ್ತೀವಿ’ ಎನ್ನುವ ಸಮ್ಮರ್ ಕ್ಯಾಂಪ್‌ಗೆ ಮಕ್ಕಳನ್ನು ಸೇರಿಸಿದ್ದಳು. ಕ್ಯಾಂಪ್ ಮುಗಿದರೂ ಮಕ್ಕಳು ಮೊಬೈಲ್ ಮೋಹ ಬಿಡಲಿಲ್ಲ.

‘ಮೊಬೈಲ್ ಕಾಯಿಲೆಗೆ ಮದ್ದಿಲ್ಲ...’ ಶಂಕ್ರಿ ನಿರಾಶೆ ವ್ಯಕ್ತಪಡಿಸಿದ.

‘ನೇತ್ರತಜ್ಞ, ಹೃದಯತಜ್ಞ, ನರರೋಗತಜ್ಞರಂತೆ ಮೊಬೈಲ್ ತಜ್ಞರು ಇದ್ದಿದ್ದರೆ ಮೊಬೈಲ್ ಕಾಯಿಲೆಗೆ ಚಿಕಿತ್ಸೆ ಕೊಡಿಸಬಹುದಾಗಿತ್ತು’ ನೊಂದುಕೊಂಡಳು ಸುಮಿ.

‘ಮಕ್ಕಳ ಮೊಬೈಲ್ ಕಲಿಕೆಗೆ ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು!’

‘ಅಳುವ ಮಕ್ಕಳಿಗೆ ಮೊಬೈಲ್‌ನಲ್ಲಿ ವಿಡಿಯೊ ತೋರಿಸಿ ಸಮಾಧಾನ ಮಾಡಿದ್ದು ತಪ್ಪಾ?’

‘ಚಂದ್ರನ ಬದಲು ಮೊಬೈಲ್ ತೋರಿಸಿಕೊಂಡು ಮಕ್ಕಳಿಗೆ ಊಟ ತಿನ್ನಿಸುತ್ತಿದ್ದೆ. ಮಕ್ಕಳು ಯೂಟ್ಯೂಬ್ ಓಪನ್ ಮಾಡಿಕೊಂಡು ರೀಲ್ಸ್ ನೋಡಲು ಶುರು ಮಾಡಿದಾಗ ಅವರ ಜಾಣತನಕ್ಕೆ ನೀನು ಮಾರುಹೋಗಿದ್ದೆ, ಅದರ ಪರಿಣಾಮ ಇದು!’

ಸುಮಿಗೆ ಸಿಕ್ಕಾಪಟ್ಟೆ ಸಂಕಟವಾಯಿತು.

‘ಮೊಬೈಲ್ ವ್ಯಸನ ಸಾರ್ವತ್ರಿಕ ರೋಗವಾಗಿದೆ. ಮಕ್ಕಳನ್ನು ಮೊಬೈಲ್ ಚಟದಿಂದ ಮುಕ್ತಗೊಳಿಸಲು ಸರ್ಕಾರ ಶಾಲೆಗಳ ಪ್ರೇಯರ್ ಟೈಮಿನಲ್ಲಿ ನ್ಯೂಸ್ ಪೇಪರ್ ರೀಡಿಂಗ್ ಕಡ್ಡಾಯ ಮಾಡಿ ಓದುವ ಹವ್ಯಾಸ ಬೆಳೆಸಲು ತೀರ್ಮಾನಿಸಿದೆ’.

‘ಮೊಬೈಲ್ ಚಟ ಬಿಡಿಸುವುದಾದರೆ ನ್ಯೂಸ್ ಪೇಪರ್ ರೀಡಿಂಗ್ ಅನ್ನು ಒಂದು ಸಬ್ಜೆಕ್ಟ್ ಅಂತ ಪರಿಗಣಿಸಲಿ’.

‘ಸಿಲೆಬಸ್ ಹೆವಿ ಆಗುತ್ತೆ’.

‘ಹಿಂದಿ ಹೇರಿಕೆ ತಡೆಯುವ ಪ್ರಯತ್ನದಲ್ಲಿ ಹಿಂದಿ ಬದಲು ನ್ಯೂಸ್ ಪೇಪರ್ ರೀಡಿಂಗ್ ಸಬ್ಜೆಕ್ಟ್ ಸೇರಿಸಿ ಪರೀಕ್ಷೆ ನಡೆಸಿ ಮಕ್ಕಳ ಪ್ರಚಲಿತ ವಿದ್ಯಮಾನಗಳ ಜ್ಞಾನ ಮಾಪನ ಮಾಡಲಿ’ ಎಂದ ಸುಮಿ, ‘ಇನ್ಮೇಲೆ ನೀವೂ ಗಂಭೀರವಾಗಿ ನ್ಯೂಸ್ ಪೇಪರ್ ಓದಿ ಕನ್ನಡ ಭಾಷೆ, ಬರಹ ಸುಧಾರಿಸಿಕೊಳ್ಳಿ, ಮೊನ್ನೆ ನೀವು ಕಾರ್ಪೊರೇಷನ್‌ಗೆ ಬರೆದ ಅರ್ಜಿಯಲ್ಲಿ ಅರ್ಧಕ್ಕರ್ಧ ಸ್ಪೆಲ್ಲಿಂಗ್ ತಪ್ಪಿದ್ದವು’ ಎಂದು ಕಿಚಾಯಿಸಿದಳು.

ಸಂಗತ

ಕುಡಿಯುವ ನೀರಿಗೆ ಬೇಡ ಪ್ಲಾಸ್ಟಿಕ್ ಹಂಗು

ಕುಡಿಯುವ ನೀರಿಗೂ ಪ್ಲಾಸ್ಟಿಕ್ ಬಾಟಲಿಗೂ ಇನ್ನಿಲ್ಲದ ನಂಟು! ಇದು ಆರೋಗ್ಯ ಹಾಗೂ ಪರಿಸರಕ್ಕೆ ಹಾನಿಕರ. ಬೇಸಗೆಯಲ್ಲಂತೂ ಪ್ಲಾಸ್ಟಿಕ್ ಮತ್ತಷ್ಟು ಅಪಾಯಕರ.

• ಡಾ. ಮುರಳೀಧರ ಕಿರಣಕೆರೆ

ಹಳ್ಳಿಯ ಪ್ರೌಢಶಾಲೆಯೊಂದರಲ್ಲಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ವ್ಯಕ್ತಿತ್ವ ವಿಕಸನ ಕಾರ್ಯಕ್ರಮದಲ್ಲಿ, ‘ನಿಮ್ಮಲ್ಲಿ ಎಷ್ಟು ಮಕ್ಕಳು ಮನೆಯಿಂದ ಕುಡಿಯಲು ನೀರು ತರುತ್ತೀರಿ?’ ಎಂದೆ. ಬಹುತೇಕ ವಿದ್ಯಾರ್ಥಿಗಳ ಕೈ ಮೇಲೆದ್ದವು. ಅವರನ್ನು ಮೆಚ್ಚುತ್ತಾ, ‘ಚೀಲದಿಂದ ವಾಟರ್ ಬಾಟಲ್ ತೆಗೆದು ತೋರಿಸಿ’ ಎಂದೆ. ಮಕ್ಕಳು ಉತ್ಸಾಹದಿಂದ ಬಾಟಲಿಗಳನ್ನು ಹೊರತೆಗೆದಾಗಿನ ದೃಶ್ಯ ಆಘಾತ ತರುವಂತಿತ್ತು. ಅರ್ಧಕ್ಕಿಂತ ಹೆಚ್ಚಿನವರಲ್ಲಿ ಇದ್ದುದು ಏಕ ಬಳಕೆ ಪ್ಲಾಸ್ಟಿಕ್ ಬಾಟಲಿಗಳು! ಅವುಗಳನ್ನೇ ಅವರು ನಿತ್ಯ ಬಳಸುತ್ತಿದ್ದರು. ಅವುಗಳಿಂದಾಗಿ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳನ್ನು ತುಸು ವಿವರವಾಗಿಯೇ ಮಕ್ಕಳಿಗೆ ಮನದಟ್ಟು ಮಾಡಿಸಬೇಕಾಯಿತು.

ಏಕ ಬಳಕೆಯ ಪ್ಲಾಸ್ಟಿಕ್ ಬಾಟಲಿಗಳನ್ನು ಒಂದು ಬಾರಿ ಬಳಸಲು ಮಾತ್ರ ವಿನ್ಯಾಸಗೊಳಿಸಲಾಗಿರುತ್ತದೆ. ಅವುಗಳನ್ನು ಮತ್ತೆ ಮತ್ತೆ ಬಳಸುವುದರಿಂದ ದೇಹಸ್ವಾಸ್ಥ್ಯದ ಮೇಲೆ ಗಂಭೀರ ಪರಿಣಾಮಗಳಾಗುತ್ತವೆ. ಇಂತಹ ಬಾಟಲಿಗಳನ್ನು ದೀರ್ಘಕಾಲ ಉಪಯೋಗಿಸಿದಾಗ ಹಾಗೂ ಅವುಗಳನ್ನು ಶಾಖ, ಬಿಸಿಲಿಗೆ ಒಡ್ಡಿದಾಗ ಪ್ಲಾಸ್ಟಿಕ್‌ನಲ್ಲಿರುವ ರಾಸಾಯನಿಕಗಳು ನೀರಿನಲ್ಲಿ ಕರಗಲು ಪ್ರಾರಂಭಿಸುತ್ತವೆ. ಬಿಸ್ಫೆನಾಲ್–ಎ (ಬಿಪಿಎ), ಥಾಲೇಟ್ಸ್‌ನಂತಹ ರಾಸಾಯನಿಕಗಳನ್ನು ಪ್ಲಾಸ್ಟಿಕ್ ತಯಾರಿಕೆಯಲ್ಲಿ ಪ್ರಮುಖವಾಗಿ ಬಳಸುತ್ತಾರೆ. ಇವು ನೀರಿನೊಂದಿಗೆ ಬೆರೆತು ದೇಹ ಸೇರಿದಾಗ ರಸದೂತಗಳ (ಹಾರ್ಮೋನ್) ಅಸಮತೋಲನ ಉಂಟಾಗುತ್ತದೆ. ಇದರಿಂದಾಗಿ, ಬೇಗನೆ ಪ್ರೌಢಾವಸ್ಥೆಗೆ ಬರುವುದು, ಬೆಳವಣಿಗೆಯಲ್ಲಿ ಕುಂಠಿತವಾಗುವಂತಹ ಸಮಸ್ಯೆಗಳನ್ನು ಮಕ್ಕಳಲ್ಲಿ ಕಾಣಬಹುದು. ಬಾಟಲಿಯನ್ನು ಪದೇ ಪದೇ ತೊಳೆಯುವುದರಿಂದ ಮತ್ತು ಬಳಸುವುದರಿಂದ ಪ್ಲಾಸ್ಟಿಕ್ ಒಳಗಿನ ಪದರ ಸವೆಯಲು ಆರಂಭಿಸುತ್ತದೆ. ಈ ಸೂಕ್ಷ್ಮ ಪ್ಲಾಸ್ಟಿಕ್ ಕಣಗಳು ಕರುಳಿನ ಪದರವನ್ನು ದಾಟಿ ನೇರವಾಗಿ ರಕ್ತಕ್ಕೆ ಸೇರಬಲ್ಲವು.

ರಕ್ತದ ಮೂಲಕ ಹೃದಯ, ಶ್ವಾಸಕೋಶ, ಯಕೃತ್ತು, ಮೆದುಳನ್ನು ತಲಪಿ ಅಲ್ಲಿನ ಜೀವಕೋಶಗಳಿಗೆ ಹಾನಿಯನ್ನು ಉಂಟುಮಾಡಬಹುದು. ರಕ್ತನಾಳಗಳಲ್ಲಿ ಸಂಗ್ರಹವಾಗುವ ಪ್ಲಾಸ್ಟಿಕ್ ಕಣಗಳು ಹೃದಯಾಘಾತ ಮತ್ತು ಪಾರ್ಶ್ವವಾಯುವಿನ ಅಪಾಯವನ್ನು ಹೆಚ್ಚಿಸುತ್ತವೆ. ಪ್ಲಾಸ್ಟಿಕ್ ಕಣಗಳ ನಿರಂತರ ಸೇವನೆಯು ಇನ್ಸುಲಿನ್ ಪ್ರತಿರೋಧಕತೆ, ತೂಕದಲ್ಲಿ ಹೆಚ್ಚಳ, ಸ್ಥೂಲಕಾಯ, ಸಂಧಿವಾತ, ಸಂತಾನೋತ್ಪತ್ತಿ ಸಾಮರ್ಥ್ಯ ಕುಸಿಯುವುದು, ಕ್ಯಾನ್ಸರ್‌ನಂತಹ ಹತ್ತಾರು ಗಂಭೀರ ಸಮಸ್ಯೆಗಳಿಗೆ ಕಾರಣವಾಗಬಹುದು. ಪ್ಲಾಸ್ಟಿಕ್‌ನಿಂದ ಸೋರಿಕೆಯಾಗುವ ರಾಸಾಯನಿಕಗಳು ರೋಗನಿರೋಧಕ ವ್ಯವಸ್ಥೆಯನ್ನು ದುರ್ಬಲಗೊಳಿಸಿ ಪದೇ ಪದೇ ಸೋಂಕುಗಳಿಗೆ ಒಳಗಾಗುವಂತೆ ಮಾಡುತ್ತವೆ.

ಒಂದು ಲೀಟರ್ ಬಾಟಲಿ ನೀರಿನಲ್ಲಿ 1.10 ಲಕ್ಷದಿಂದ 3.7 ಲಕ್ಷದವರೆಗೆ ಅತಿಸೂಕ್ಷ್ಮ ಪ್ಲಾಸ್ಟಿಕ್ ಕಣಗಳಿರುತ್ತವೆ ಎನ್ನುತ್ತದೆ ಒಂದು ಅಧ್ಯಯನ. ಇದು ನಿತ್ಯ ನಾವು ಸೇವಿಸುತ್ತಿರುವ ಅದೃಶ್ಯ ವಿಷದ ಪ್ರಮಾಣ! ಕಾರಿನ ಒಳಗೆ ಅಥವಾ ಬಿಸಿಲಿನಲ್ಲಿ ಪ್ಲಾಸ್ಟಿಕ್ ಬಾಟಲಿ ಇಟ್ಟರೆ, ಆ ಶಾಖದಿಂದಾಗಿ ಪ್ಲಾಸ್ಟಿಕ್ ಕಣಗಳು ನೀರಿನಲ್ಲಿ ಕರಗುವ ವೇಗ ಸುಮಾರು ಹತ್ತು ಪಟ್ಟು ಹೆಚ್ಚಾಗುತ್ತದೆ. ಹಾಗಾಗಿ, ಮಕ್ಕಳಷ್ಟೇ ಅಲ್ಲ, ಸಾರ್ವಜನಿಕರೂ ಆರೋಗ್ಯದ ದೃಷ್ಟಿಯಿಂದ ಸ್ಟೀಲ್ ಬಾಟಲಿಗಳನ್ನು ಬಳಸುವುದು ಉತ್ತಮ. ಸರ್ಕಾರವು ಸಮಗ್ರ ಆರೋಗ್ಯದ ದೃಷ್ಟಿಯಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಸ್ಟೀಲ್ ಬಾಟಲಿಗಳನ್ನು ನೀಡುವ, ಅದರಲ್ಲೇ ಕುಡಿಯುವ ನೀರು ತರಲು ಉತ್ತೇಜಿಸುವ ಯೋಜನೆಯನ್ನು ರೂಪಿಸುವುದು ಒಳಿತು.



ಕಾಫಿ, ನೀರು, ಪಾನೀಯಗಳನ್ನು ಕುಡಿಯಲು ಪರಿಸರಸ್ನೇಹಿ ಹಣೆಪಟ್ಟಿಯೊಂದಿಗೆ ಪೇಪರ್ ಕಪ್‌ಗಳು ಬಂದಿವೆ. ಹಾಗೆಂದು ಅವು ಪೂರ್ಣವಾಗಿ ಕಾಗದದಿಂದ ಮಾಡಿದವುಗಳೇನೂ ಅಲ್ಲ. ಕಪ್‌ನ ಒಳಭಾಗದಲ್ಲಿ ಪ್ಲಾಸ್ಟಿಕ್‌ನ ತೆಳುವಾದ ಪದರವನ್ನು ಹಚ್ಚಲಾಗಿರುತ್ತದೆ. ಬಿಸಿ ಕಾಫಿ ಅಥವಾ ಚಹಾವನ್ನು ಆ ಕಪ್‌ಗೆ ಸುರಿದಾಗ, ಬಿಸಿಗೆ ಅಸಂಖ್ಯ ಸೂಕ್ಷ್ಮ ಪ್ಲಾಸ್ಟಿಕ್ ಕಣಗಳು ಪಾನೀಯ ಸೇರುತ್ತವೆ. ಇದರಿಂದಾಗಿ ದೀರ್ಘಾವಧಿಯಲ್ಲಿ ಆರೋಗ್ಯದ ಮೇಲೆ ದುಷ್ಪರಿಣಾಮಗಳಾಗುತ್ತವೆ. ಪ್ರತಿ ದಿನವೂ ಇಂತಹ ಕೋಟ್ಯಂತರ ಕಪ್‌ಗಳು ಕಸದ ರೂಪದಲ್ಲಿ ಪರಿಸರ ಸೇರಿ ಅಪಾಯಕಾರಿ ಮಾಲಿನ್ಯಕ್ಕೆ ಕಾರಣವಾಗುತ್ತಿವೆ.

ಪರಿಸರ ಸಂರಕ್ಷಣೆಯೆಂಬುದು ಒಂದು ಮಹಾಯಜ್ಞ. ಅದರಲ್ಲಿ ಎಲ್ಲರ ಸಹಭಾಗಿತ್ವವೂ ಮುಖ್ಯ. ಸಂಘ–ಸಂಸ್ಥೆಗಳು ತಮ್ಮ ಸಾಮಾಜಿಕ ಹೊಣೆಗಾರಿಕೆ ನಿಭಾಯಿಸಲು ಕಾರ್ಯಕ್ರಮಗಳಿಗೆ ಸ್ಟೀಲ್ ತಟ್ಟೆ, ಲೋಟಗಳನ್ನು ಉಚಿತವಾಗಿ ಒದಗಿಸುವ ಪ್ಲೇಟ್ ಬ್ಯಾಂಕ್‌ನಂತಹ ಉಪಕ್ರಮಗಳನ್ನು ಆರಂಭಿಸಬೇಕು. ಆ ಮೂಲಕ, ಪ್ಲಾಸ್ಟಿಕ್ ಕಸದ ನಿಯಂತ್ರಣದಲ್ಲಿ ಮುಂದಾಳತ್ವ ವಹಿಸಬೇಕು. ಮದುವೆಯಂತಹ ಸಮಾರಂಭಗಳು ಹಾಗೂ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಪ್ಲಾಸ್ಟಿಕ್ ಬಾಟಲಿಗಳು, ಪ್ಲೇಟ್‌ಗಳು, ಬಟ್ಟಲು, ಕಪ್‌ಗಳನ್ನು ಬಳಸದೆ ಪರ್ಯಾಯವಾಗಿ ಸ್ಟೀಲ್ ಪರಿಕರಗಳನ್ನು ಬಳಸುವ ದೃಢ ನಿರ್ಧಾರವನ್ನು ಸಂಘಟಕರು ತೆಗೆದುಕೊಂಡರೆ, ಪ್ರತಿನಿತ್ಯ ಟನ್‌ಗಟ್ಟಲೆ ವಿಷಕಾರಿ ತ್ಯಾಜ್ಯ ಭೂಮಿಯ ಒಡಲು ಸೇರುವುದನ್ನು ಸುಲಭವಾಗಿ ತಪ್ಪಿಸಬಹುದು. ಇದಕ್ಕೂ ಮಿಗಿಲಾದ ಒಳ್ಳೆಯ ಕಾರ್ಯ ಮತ್ತೊಂದಿರಲಾರದು.

ಸರ್ಕಾರವೂ ಪ್ಲಾಸ್ಟಿಕ್ ಬಳಕೆಗೆ ಅಂಕುಶ ಹಾಕಲು ಮುಂದಾಗಬೇಕು. ಸರ್ಕಾರಿ ಕಾರ್ಯಕ್ರಮಗಳಲ್ಲಿ ಪ್ಲಾಸ್ಟಿಕ್ ಬಾಟಲಿಗಳಿಗೆ ನಿಷೇಧ ಹೇರಿದಂತೆ, ಖಾಸಗಿ ಸಭೆ, ಸಮಾರಂಭಗಳಲ್ಲೂ ಕಡಿವಾಣ ಹಾಕಬೇಕು. ಜನರೂ ಅಷ್ಟೆ, ಸ್ವಚ್ಛತೆಯ ವಿಷಯದಲ್ಲಿ ಸದಾ ಇನ್ನೊಬ್ಬರತ್ತಲೋ, ಸರ್ಕಾರದತ್ತಲೋ ಬೆರಳು ತೋರಿಸುತ್ತಾ ದೂಷಿಸುವ ಮೊದಲು, ನಾವೇನು ಮಾಡುತ್ತಿದ್ದೇವೆ ಎಂದು ಯೋಚನೆ ಮಾಡಬೇಕಾಗಿದೆ.


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮದ್ಯದಲ್ಲಿನ ಆಲ್ಕೋಹಾಲ್ ಪ್ರಮಾಣಕ್ಕೆ ಅನುಗುಣವಾಗಿ ತೆರಿಗೆ; ಸಾಮಾಜಿಕ ಪರಿಣಾಮಗಳೂ ಗಣನೆಗೆ

ಸುರಕ್ಷಿತ ಕರ್ನಾಟಕಕ್ಕೆ ಅಬಕಾರಿ ಸುಧಾರಣೆ

ರಾಜ್ಯ ಸರ್ಕಾರವು ಮದ್ಯದ ಮೇಲಿನ ಅಬಕಾರಿ ಸುಂಕದ ಸ್ವರೂಪದಲ್ಲಿ ಬದಲಾವಣೆ ತರಲು ಮುಂದಾಗಿದೆ. ಮದ್ಯದಲ್ಲಿನ ಆಲ್ಕೋಹಾಲ್ ಪ್ರಮಾಣ ಮತ್ತು ಅದು ಉಂಟುಮಾಡುವ ಸಾಮಾಜಿಕ ಪರಿಣಾಮಗಳನ್ನೂ ಪರಿಗಣಿಸಿ ತೆರಿಗೆ ವಿಧಿಸುವ ಸಂಬಂಧ ಕರಡು ನಿಯಮಗಳನ್ನು ಬಿಡುಗಡೆ ಮಾಡಿದೆ. ಹೆಚ್ಚು ಆಲ್ಕೋಹಾಲ್ ಇರುವ, ಸಮಾಜದ ಮೇಲೆ ಹೆಚ್ಚಿನ ಪರಿಣಾಮಗಳನ್ನು ಬೀರುವ ಮದ್ಯದ ಮೇಲಿನ ತೆರಿಗೆ ಪ್ರಮಾಣ ಹೆಚ್ಚಾಗಲಿದೆ. ಮದ್ಯ ನಿಷೇಧದ ಬದಲಿಗೆ ಬೇರೊಂದು ರೀತಿಯಲ್ಲಿ ಕುಡಿತದ ಸಮಸ್ಯೆ-ಸವಾಲುಗಳನ್ನು ಎದುರಿಸಲು ಪೂರಕವಾಗುವಂತೆ ಹೊಸ ನಿಯಮಗಳನ್ನು ರೂಪಿಸಲಾಗಿದೆ

● ಕೆ.ಪಿ.ಕೃಷ್ಣನ್





ಕಳೆದ ಅರವತ್ತು ವರ್ಷಗಳಲ್ಲಿ ಕರ್ನಾಟಕದ ಅಬಕಾರಿ ವ್ಯವಸ್ಥೆ ಯಾವುದೇ ಪ್ರಮುಖ ಬದಲಾವಣೆಗಳಿಲ್ಲದೆ ಸಾಗಿಬಂದಿದೆ. ಈ ವ್ಯವಸ್ಥೆಯನ್ನು ನೇರ ಮೇಲುಸ್ತುವಾರಿ ಹಾಗೂ ಭೌತಿಕ ನಿಯಂತ್ರಣದ ಮಾದರಿಯಲ್ಲಿ ರೂಪಿಸಲಾಗಿದೆ. ಇದರ ಪ್ರಮುಖ ಉದ್ದೇಶ ಸ್ಥಿರ ಆದಾಯ ಗಳಿಕೆ. ಈ ವ್ಯವಸ್ಥೆಯು ಇಲ್ಲಿಯವರೆಗೂ ನಮ್ಮ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸುತ್ತಾ ಬಂದಿದೆ. ಆದರೆ, ಈ ಅವಧಿಯಲ್ಲಿ ನಮ್ಮ ಸುತ್ತಲಿನ ಪ್ರಪಂಚ ಹಾಗೂ ಮದ್ಯಪಾನದ ಸಾಮಾಜಿಕ ಪರಿಣಾಮಗಳ ಕುರಿತಾದ ನಮ್ಮ ತಿಳಿವಳಿಕೆ ಕೂಡ ಸಾಕಷ್ಟು ವಿಕಸನಗೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2026ರ ಬಜೆಟ್ ಭಾಷಣದಲ್ಲಿ ಮದ್ಯದ ಅಬಕಾರಿ ತೆರಿಗೆ ಹಾಗೂ ನಿಯಂತ್ರಣ ನಿಟ್ಟಿನಲ್ಲಿ ಮಹತ್ವದ ಸುಧಾರಣೆಗೆ ಚಾಲನೆ ನೀಡಿದ್ದಾರೆ. ಬಜೆಟ್‌ನಲ್ಲಿ ಮಾಡಲಾದ ಘೋಷಣೆಗಳಿಗೆ ಪೂರಕವಾಗಿ ಅಬಕಾರಿ ಸುಂಕದ ಹೊಸ ಸ್ವರೂಪದ ಕರಡನ್ನು ಪ್ರಕಟಿಸಿ ಕಳೆದ ವಾರ ಅಧಿಸೂಚನೆ ಹೊರಡಿಸಲಾಗಿದೆ. ಇದು ಕೇವಲ ತೆರಿಗೆ ಹಂತಗಳ ತಾಂತ್ರಿಕ ಹೊಂದಾಣಿಕೆಯಲ್ಲ; ಬದಲಿಗೆ ಅಬಕಾರಿ ವ್ಯವಸ್ಥೆಯನ್ನು ಮೂಲದಿಂದಲೇ ಮರುವಿನ್ಯಾಸಗೊಳಿಸುವ ಪ್ರಯತ್ನ.

ದೇಶದಲ್ಲಿ ಇದೇ ಮೊದಲ ಬಾರಿಗೆ ರಾಜ್ಯವೊಂದು, ಹೆಚ್ಚಿನ ಆದಾಯ ಗಳಿಕೆಗೆ ಆದ್ಯತೆ ನೀಡುವ ಮಾದರಿಯಿಂದ ದೂರ ಸರಿದು– ಸಾರ್ವಜನಿಕ ಆರೋಗ್ಯ, ಸಾಮಾಜಿಕ ಜವಾಬ್ದಾರಿ ಹಾಗೂ ಹಾನಿಯ ಪ್ರಮಾಣವನ್ನು ಕಡಿಮೆ ಮಾಡುವುದು– ಈ ಮೂರು ವಿಚಾರಗಳ ನಡುವೆ ಸಮತೋಲನ ಸಾಧಿಸಲು ಮುಂದಾಗಿದೆ.

ಕರ್ನಾಟಕ ಸರ್ಕಾರವು ರಚಿಸಿದ ಅಬಕಾರಿ ವರಮಾನ ಸಂಗ್ರಹ ಸಲಹಾ ಸಮಿತಿ (ಆರ್‌ಎಂಸಿ) ಒಂದು ವರ್ಷದಲ್ಲಿ ರಾಜ್ಯದ ಹಣಕಾಸು ಸಾಮರ್ಥ್ಯ ಮತ್ತು ಆಡಳಿತವನ್ನು ಸುಧಾರಿಸಲು ಹಲವಾರು ಶಿಫಾರಸುಗಳನ್ನು ಮಾಡಿದೆ. ಅಬಕಾರಿ ಸುಧಾರಣೆಗಳ ಕುರಿತಾಗಿ ಸಮಿತಿ ಇತ್ತೀಚೆಗೆ ಸಲ್ಲಿಸಿರುವ ಕರಡು ವರದಿಯಲ್ಲಿ ರಾಜ್ಯದ ಅಬಕಾರಿ ತೆರಿಗೆ ಮತ್ತು ಮದ್ಯದ ನಿಯಂತ್ರಣದಲ್ಲಿ ಆಮೂಲಾಗ್ರ ಮತ್ತು ಮೂಲಭೂತ ಬದಲಾವಣೆಗಳನ್ನು ತರುವ ಕುರಿತು ಶಿಫಾರಸು ಮಾಡಿದೆ.

ಈ ಸುಧಾರಣೆಗೆ ಪ್ರಮುಖ ಕಾರಣವಾಗಿರುವುದು, ಮದ್ಯಪಾನ ಉಂಟುಮಾಡುತ್ತಿರುವ ಸಾಮಾಜಿಕ ಪರಿಣಾಮಗಳು. ಮದ್ಯ ಉಂಟು ಮಾಡುವ ಹಾನಿಯಿಂದಾಗುವ ಆರ್ಥಿಕ ನಷ್ಟವು ದೇಶದ ಜಿಡಿಪಿಯ ಶೇ 1.45ರಿಂದ ಶೇ 2.6ರಷ್ಟಿದೆ ಎಂದು ಹೇಳುತ್ತವೆ ಅಧ್ಯಯನಗಳು. ದೇಶದಲ್ಲಿ ಕಂಡುಬರುತ್ತಿರುವ ಈ ಪ್ರವೃತ್ತಿಗೆ ಪೂರಕವಾಗಿ ಕರ್ನಾಟಕಕ್ಕೆ ಸಂಬಂಧಿಸಿದ ಲಭ್ಯ ದಾಖಲೆಗಳು ರಾಜ್ಯವು ಮದ್ಯದ ಕಾರಣದಿಂದ ಸ್ವಲ್ಪ ಹೆಚ್ಚೇ ಸಾಮಾಜಿಕ ಆರ್ಥಿಕ ಹೊರೆಯ ಸವಾಲು ಎದುರಿಸುತ್ತಿರುವುದನ್ನು ತೋರಿಸುತ್ತವೆ. ಅಂದಾಜು ಶೇ 2ರಷ್ಟು ಸಾಮಾಜಿಕ ನಷ್ಟವನ್ನು ಲೆಕ್ಕ ಹಾಕಿದರೆ, ಈ ಮೊತ್ತ ವಾರ್ಷಿಕವಾಗಿ ₹51 ಸಾವಿರ ಕೋಟಿಯಾಗುತ್ತದೆ. ಇವು ಕೇವಲ ಅಂಕಿ ಅಂಶಗಳಲ್ಲ; ಕೌಟುಂಬಿಕ ಹಿಂಸಾಚಾರದ ರೂಪದಲ್ಲಿ ಕರ್ನಾಟಕದ ಕುಟುಂಬಗಳು ಪ್ರತಿದಿನ ಭರಿಸುತ್ತಿರುವ ಹಣ.

ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದರಿಂದ ನಮ್ಮ ರಸ್ತೆಗಳಲ್ಲಿ ಸಾವಿರಾರು ಸಾವುಗಳು ಸಂಭವಿಸುತ್ತಿರುತ್ತವೆ. ಸಾವಿರಾರು ಜನರು ಗಾಯಗೊಳ್ಳುತ್ತಾರೆ. ಇವುಗಳೆಲ್ಲವೂ ತಡೆಗಟ್ಟಬಹುದಾದ ಸಾವು ನೋವುಗಳು. ಇದರ ನಿರ್ವಹಣೆಗೆ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಹಣ ವ್ಯಯಿಸುತ್ತಿದೆ. ಮಾತ್ರವಲ್ಲ, ಮದ್ಯ ಕುಡಿತದಿಂದಾಗಿ ಉಂಟಾಗುವ ಯಕೃತ್ತಿನ ಕಾಯಿಲೆ ಹಾಗೂ ಇನ್ನಿತರ ಕಾಯಿಲೆಗಳಿಗೆ ಚಿಕಿತ್ಸೆ ನೀಡುವ ಜವಾಬ್ದಾರಿಯನ್ನು ಹೊರಬೇಕಾದ ಒತ್ತಡದಲ್ಲಿರುವ ನಮ್ಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಕೂಡ ಈ ಮೊತ್ತವನ್ನು ಭರಿಸುತ್ತಿದೆ. ಇವೆಲ್ಲಕ್ಕಿಂತಲೂ ಮಿಗಿಲಾಗಿ, ಗಳಿಸುವ ಕಡಿಮೆ ಆದಾಯವನ್ನು ಆಹಾರ, ಶಿಕ್ಷಣ ಮತ್ತು ಆರೋಗ್ಯಕ್ಕೆ ಮೀಸಲಿಡಬೇಕಾದ ನಮ್ಮ ಬಡ ಕುಟುಂಬಗಳು ಅದನ್ನು ಮದ್ಯಕ್ಕೆ ಖರ್ಚು ಮಾಡುತ್ತಿರುವುದು ಅತ್ಯಂತ ದುರದೃಷ್ಟಕರ ಸಂಗತಿ.

ಆದರೆ, ಈ ಸನ್ನಿವೇಶವು ಮದ್ಯ ನಿಷೇಧದಂತಹ ಸುಲಭವಾದ ತಕ್ಷಣದ ಪ್ರತಿಕ್ರಿಯೆಗೆ ದಾರಿ ಮಾಡಬಾರದು. ಮದ್ಯನಿಷೇಧ ಯಶಸ್ವಿಯಾಗುವುದಿಲ್ಲ ಎಂಬುದಕ್ಕೆ ಭಾರತದ ಕೆಲವು ರಾಜ್ಯಗಳಲ್ಲಿ ಹಾಗೂ ಪ್ರಪಂಚದಲ್ಲಿ ಹಲವು ಪುರಾವೆಗಳಿವೆ.

ವಾಸ್ತವದಲ್ಲಿ ಮದ್ಯನಿಷೇಧ ಎನ್ನುವ 'ಚಿಕಿತ್ಸೆ'ಯು ಮೂಲ ಕಾಯಿಲೆಗಿಂತಲೂ ಕೆಟ್ಟದಾಗಿದೆ. ಯಾಕೆಂದರೆ, ನಿಷೇಧವು ಬೇಜವಾಬ್ದಾರಿತನದ ಕುಡಿತದ ಸಮಸ್ಯೆಯನ್ನು ಹೋಗಲಾಡಿಸುವುದಿಲ್ಲ, ಬದಲಿಗೆ ಸರ್ಕಾರದ ಜಾರಿ ವ್ಯವಸ್ಥೆಯ ಸೀಮಿತ ಸಾಮರ್ಥ್ಯದ ಮೇಲೆ ಇನ್ನಷ್ಟು ಒತ್ತಡ ಉಂಟುಮಾಡುತ್ತದೆ ಮತ್ತು ಭ್ರಷ್ಟಾಚಾರವನ್ನು ವ್ಯವಸ್ಥಿತಗೊಳಿಸುತ್ತದೆ.

ದುರದೃಷ್ಟವಶಾತ್, ನಮ್ಮ ಪ್ರಸ್ತುತ ತೆರಿಗೆ ವ್ಯವಸ್ಥೆಯು ಎಲ್ಲಾ ಸಾಮಾಜಿಕ ವೆಚ್ಚಗಳ ವಾಸ್ತವಿಕತೆಗಳನ್ನು ಸಮರ್ಪಕವಾಗಿ ನಿಭಾಯಿಸುವ ನಿಟ್ಟಿನಲ್ಲಿ ರೂಪುಗೊಂಡಿಲ್ಲ. ಇದು ಮದ್ಯದ ಮೇಲೆ ತೆರಿಗೆಯನ್ನು ಮದ್ಯದಲ್ಲಿರುವ ಆಲ್ಕೋಹಾಲ್ ಪ್ರಮಾಣಕ್ಕಿಂತ ಹೆಚ್ಚಾಗಿ ಬೆಲೆ ಮತ್ತು ಉತ್ಪನ್ನದ ವರ್ಗದ ಆಧಾರದ ಮೇಲೆ ವಿಧಿಸುತ್ತದೆ. ಇದು ಒಂದು ರೀತಿಯ ವಿರೋಧಾಭಾಸದ ಪರಿಸ್ಥಿತಿಯನ್ನು ಉಂಟುಮಾಡುತ್ತದೆ. ಅಂದರೆ, ಅತಿ ಹೆಚ್ಚು ಅಮಲೇರಿಸುವ ಮತ್ತು ಅತ್ಯಂತ ಹಾನಿಕಾರಕವಾದ 'ಎಕಾನಮಿ' ಮದ್ಯಕ್ಕೆ ಅದು ಉಂಟುಮಾಡುವ ಹಾನಿಗೆ ಹೋಲಿಸಿದರೆ ಕಡಿಮೆ ತೆರಿಗೆ ವಿಧಿಸಲಾಗುತ್ತಿದೆ. ಆದರೆ ಪ್ರೀಮಿಯಂ ಉತ್ಪನ್ನಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ಅಬಕಾರಿ ಸುಧಾರಣೆಗಳು (2026) ನಾಲ್ಕು 'ಮೂಲ ತತ್ವ' ಆಧರಿಸಿವೆ:

1. ಆಲ್ಕೋಹಾಲ್ ಪ್ರಮಾಣ ಆಧರಿತ ತೆರಿಗೆ ವ್ಯವಸ್ಥೆ: ಮದ್ಯ ಕುಡಿತದಿಂದ ಉಂಟಾಗುವ ಹಾನಿಯು ಅವರು ಸೇವಿಸುವ ಆಲ್ಕೋಹಾಲ್ ಪ್ರಮಾಣವನ್ನು ಆಧರಿಸಿರುತ್ತದೆ. ಆದ್ದರಿಂದ, ಒಂದು ಲೀಟರ್ ಶುದ್ಧ ಆಲ್ಕೋಹಾಲ್ ಮೇಲಿನ ತೆರಿಗೆಯು (ಎಲ್‌ಎಐಬಿ) ಪ್ರತಿಯೊಂದು ಮದ್ಯಕ್ಕೂ ಅದರ ಹಾನಿಯ ಸಂಭಾವ್ಯಕ್ಕೆ ಅನುಗುಣವಾಗಿಯೇ ತೆರಿಗೆ ವಿಧಿಸುವುದನ್ನು ಖಚಿತಪಡಿಸುತ್ತದೆ.

2. ಸಾಮಾಜಿಕ ಪರಿಣಾಮಗಳನ್ನು ಒಳಗೊಂಡಿರುವುದು: ನಾವು ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ ಪ್ರತಿ ಲೀಟರ್ ಶುದ್ಧ ಆಲ್ಕೋಹಾಲ್‌ಗೆ ಅಂದಾಜು ₹2,000ದಷ್ಟು 'ಸಾಮಾಜಿಕ ಪರಿಣಾಮಗಳ ಮಾನದಂಡದ ವೆಚ್ಚ'ವನ್ನು ನಿಗದಿಪಡಿಸಿದ್ದೇವೆ. ಅದಕ್ಕೆ ಅನುಗುಣವಾಗಿ ಮದ್ಯದ ತೆರಿಗೆ ದರಗಳನ್ನು ಹೊಂದಿಸುವ ಮೂಲಕ, ಮದ್ಯವು ಸಮಾಜದ ಮೇಲೆ ಹೇರುವ ಬಾಹ್ಯ ವೆಚ್ಚಗಳನ್ನು ಸರಿದೂಗಿಸುವುದು ನಮ್ಮ ಗುರಿಯಾಗಿದೆ.

3. ಮಿತ ಕುಡಿತವನ್ನು ಉತ್ತೇಜಿಸುವುದು: ನಾವು ಮದ್ಯದಲ್ಲಿನ ಆಲ್ಕೋಹಾಲ್ ಪ್ರಮಾಣಕ್ಕೆ ತಕ್ಕಂತೆ ತೆರಿಗೆ ವಿಧಿಸುತ್ತೇವೆ. ಈ ಮೂಲಕ ಜಾಗತಿಕ ಪದ್ಧತಿಗಳಿಗೆ ಅನುಗುಣವಾಗಿ ಉತ್ಪಾದಕರು ಹಾಗೂ ಗ್ರಾಹಕರು ಕಡಿಮೆ ಆಲ್ಕೋಹಾಲ್ ಸಾಮರ್ಥ್ಯದ ಮದ್ಯಗಳತ್ತ ವಾಲುವಂತೆ ಉತ್ತೇಜನ ನೀಡುತ್ತೇವೆ.

4. ಆಡಳಿತದ ಆಧುನೀಕರಣ: ನಾವು ಈ ಹಿಂದಿನ 'ಪರ್ಮಿಟ್ ರಾಜ್' ಹಾಗೂ ಭೌತಿಕ ತಪಾಸಣೆ ಪದ್ಧತಿಗಿಂತ ಭಿನ್ನವಾದ, ಪಾರದರ್ಶಕವಾದ 'ಡಿಜಿಟಲ್ ಟ್ರ್ಯಾಕ್ ಆ್ಯಂಡ್ ಟ್ರೇಸ್' ತಂತ್ರಜ್ಞಾನದತ್ತ ಅಡಿಯಿಡುತ್ತಿದ್ದೇವೆ. ಇದರಿಂದ ಅಕ್ರಮ ವ್ಯಾಪಾರವನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಜಾರಿಗೆ ಬರುತ್ತದೆ.

ಇಂತಹ ಮೂಲ ಸ್ವರೂಪದ ಬದಲಾವಣೆ ದಿನಬೆಳಗಾಗುವುದರೊಳಗೆ ಸಂಭವಿಸಲು ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿಯೇ, ನಾವು ಹಂತಹಂತದ ಸ್ಪಷ್ಟ ಯೋಜನೆಯನ್ನು ಸೂಚಿಸಿದ್ದೇವೆ.

ಹಂತ 1 (2026-27ನೇ ಹಣಕಾಸು ವರ್ಷ): ಕರ್ನಾಟಕ ಸರ್ಕಾರ ದರದ ಸ್ಲ್ಯಾಬ್‌ಗಳನ್ನು 16ರಿಂದ 8ಕ್ಕೆ ನಿಗದಿಪಡಿಸುವ ಮೂಲಕ ಈಗಾಗಲೇ ಈ ಹಂತವನ್ನು ಆರಂಭಿಸಿದೆ. ಈ ವರ್ಷ, ರಾಜ್ಯವು ಹೈಬ್ರಿಡ್ ತೆರಿಗೆ ರಚನೆಯನ್ನು ಪರಿಚಯಿಸಲು ಪ್ರಸ್ತಾಪಿಸಿದೆ. ಆಲ್ಕೋಹಾಲ್ ಪ್ರಮಾಣಕ್ಕೆ ಸಂಬಂಧಿಸಿದ ಏಕರೂಪದ ಸುಂಕದೊಂದಿಗೆ ಸರಳೀಕೃತ ಹೆಚ್ಚುವರಿ ಸುಂಕವೂ ಸೇರಿ, ಈ ಪರಿವರ್ತನೆಯನ್ನು ಸುಗಮಗೊಳಿಸುತ್ತದೆ. ಈ ಸುಧಾರಣೆಯು ಆಲ್ಕೋಹಾಲ್ ಪ್ರಮಾಣಕ್ಕೆ ಸಂಬಂಧಿಸಿರುವುದರಿಂದ ಕೆಲವು ವಿಭಾಗಗಳಲ್ಲಿ ಬೆಲೆ ಏರಿಕೆಗೆ ಮತ್ತು ಇನ್ನು ಕೆಲವು ವಿಭಾಗಗಳಲ್ಲಿ ಬೆಲೆ ಇಳಿಕೆಗೆ ಕಾರಣವಾಗಬಹುದು ಎಂಬ ಅರಿವು ನಮಗಿದೆ. ಈ ಬದಲಾವಣೆಗಳು ಕನಿಷ್ಠ ಮಟ್ಟದಲ್ಲಿರುವಂತೆ ನೋಡಿಕೊಳ್ಳಲು ಪ್ರಯತ್ನಿಸಲಾಗಿದೆ.

ಹಂತ 2 (2027-28ನೇ ಹಣಕಾಸು ವರ್ಷ): ಸರ್ಕಾರವು ರಾಜ್ಯದಾದ್ಯಂತ ಡಿಜಿಟಲ್ ಟ್ರ್ಯಾಕ್-ಆ್ಯಂಡ್-ಟ್ರೇಸ್ ವ್ಯವಸ್ಥೆಯನ್ನು ಜಾರಿಗೆ ತರುವುದರ ಜೊತೆಯಲ್ಲಿಯೇ, ಸಾಮಾಜಿಕ ಪರಿಣಾಮಗಳ ಮಾನದಂಡಕ್ಕೆ ತಕ್ಕಂತೆ ವೆಚ್ಚಗಳನ್ನು ಹೊಂದಿಸುವುದನ್ನು ಮುಂದುವರಿಸಲಾಗುವುದು.

ಹಂತ 3 (2029-30ನೇ ಹಣಕಾಸು ವರ್ಷ): ಸುಧಾರಿತ ವ್ಯವಸ್ಥೆಯು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲಿದೆ. ಅಬಕಾರಿ ದರವನ್ನು ಅಂದಾಜು ಜಿಎಸ್‌ಡಿಪಿ ಬೆಳವಣಿಗೆಗೆ ಅನುಗುಣವಾಗಿ ನಿಗದಿಪಡಿಸಲಾಗುವುದು. ಆಲ್ಕೋಹಾಲ್‌ನಿಂದ ಸಾಮಾಜಿಕ ಪರಿಣಾಮಗಳು ಹೆಚ್ಚಾದಂತೆ, ಆ ಮದ್ಯದ ಮೇಲಿನ ತೆರಿಗೆಯೂ ಹೆಚ್ಚುತ್ತಾ ಹೋಗುತ್ತದೆ.

ಈ ಸುಧಾರಣೆಯ ಪ್ರಮುಖ ಭಾಗವೆಂದರೆ, ಈ ತೆರಿಗೆಗಳಿಂದ ಸಂಗ್ರಹಿಸಲಾದ ಆದಾಯದ ಒಂದು ಭಾಗವನ್ನು ಮದ್ಯ ಕುಡಿತದಿಂದ ಉಂಟಾದ ಹಾನಿಗಳನ್ನು ಸರಿಪಡಿಸಲು ಬಳಸುವುದು.

ಅಬಕಾರಿ ಆದಾಯದ ಒಂದು ನಿರ್ದಿಷ್ಟ ಪಾಲನ್ನು ನಾಲ್ಕು ನಿರ್ಣಾಯಕ ಕ್ಷೇತ್ರಗಳಿಗೆ ಮೀಸಲಿಡಲು ಶಾಸನಬದ್ಧವಾಗಿ ಕ್ರಮ ಕೈಗೊಳ್ಳಬೇಕೆಂದು ಆರ್‌ಎಂಸಿ ಶಿಫಾರಸು ಮಾಡಿದೆ: ವ್ಯಸನಮುಕ್ತಿ ಮತ್ತು ಮಾನಸಿಕ ಆರೋಗ್ಯ ಸೇವೆಗಳು, ರಸ್ತೆ ಸುರಕ್ಷೆ, ಕೌಟುಂಬಿಕ ಹಿಂಸಾಚಾರ ತಡೆಗಟ್ಟುವಿಕೆ ಮತ್ತು ಯುವಜನರ ಶಿಕ್ಷಣ. ಈ ಜವಾಬ್ದಾರಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ನೀಡಲಾಗುವುದು.

ಅಬಕಾರಿ ಕುರಿತಾದ ಆರ್‌ಎಂಸಿ ಕರಡು ವರದಿಯನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಲಾಗಿದೆ. ಸಾರ್ವಜನಿಕ ಆರೋಗ್ಯ ತಜ್ಞರು, ಉತ್ಪಾದಕರು, ಚಿಲ್ಲರೆ ಮಾರಾಟಗಾರರು ಮತ್ತು ಮುಖ್ಯವಾಗಿ ಕರ್ನಾಟಕದ ನಾಗರಿಕರನ್ನು ಆರ್‌ಎಂಸಿಯೊಂದಿಗೆ ಸಮಾಲೋಚನೆ ನಡೆಸಲು ನಾವು ಆಹ್ವಾನಿಸುತ್ತಿದ್ದೇವೆ. ಎಲ್ಲಾ ಪ್ರಶ್ನೆಗಳಿಗೆ ನಮ್ಮ ಬಳಿ ಉತ್ತರಗಳಿವೆ ಎಂದು ನಾವು ಹೇಳಿಕೊಳ್ಳುವುದಿಲ್ಲ. 60 ವರ್ಷ ಹಳೆಯ ವ್ಯವಸ್ಥೆಯನ್ನು ಸುಧಾರಿಸುವುದು ಒಂದು ಸಂಕೀರ್ಣ ಕಾರ್ಯವಾಗಿದ್ದು, ಇದಕ್ಕೆ ಸಾಮುದಾಯಿಕ ತಿಳಿವಳಿಕೆಯ ಅಗತ್ಯವಿದೆ.

ಈ ವರದಿಯನ್ನು ಓದಲು, ಸಂವಾದದಲ್ಲಿ ಪಾಲ್ಗೊಳ್ಳಲು ಮತ್ತು ಹೆಚ್ಚು ಸುಸಂಬದ್ಧ, ಪಾರದರ್ಶಕ ಮತ್ತು ಸಾಮಾಜಿಕವಾಗಿ ಜವಾಬ್ದಾರಿಯುತ ಕರ್ನಾಟಕವನ್ನು ನಿರ್ಮಿಸಲು ನಮಗೆ ಸಹಾಯ ಮಾಡಲು ನಿಮ್ಮಲ್ಲಿ ವಿನಂತಿಸುತ್ತೇವೆ. ನಾವು ಒಟ್ಟಾಗಿ ಸೇರಿ, ತಡೆಗಟ್ಟಬಹುದಾದ ಮಾದಕದ್ರವ್ಯ ವ್ಯಸನದ ವೆಚ್ಚಗಳಿಂದ ನಮ್ಮ ರಾಜ್ಯದ ಪ್ರಗತಿಯು ಕುಂಠಿತವಾಗದಂತೆ ನೋಡಿಕೊಳ್ಳಬಹುದು ಮತ್ತು ಕರ್ನಾಟಕದ ಪ್ರತಿ ಕುಟುಂಬವು ಸುರಕ್ಷೆ ಮತ್ತು ಘನತೆಯಿಂದ ಬದುಕುವಂತೆ ಮಾಡಬಹುದು

ಲೇಖಕ: ಕರ್ನಾಟಕ ಕೇಡರ್‌ನ ನಿವೃತ್ತ ಐಎಎಸ್ ಅಧಿಕಾರಿ, ಅಬಕಾರಿ ವರಮಾನ ಸಂಗ್ರಹ ಸಲಹಾ ಸಮಿತಿ ಅಧ್ಯಕ್ಷ

ರಾಷ್ಟ್ರೀಯ

ಧಾರ್ಮಿಕ ಗುರುತು ಪ್ರಶ್ನಿಸಿ ಭದ್ರತಾ ಸಿಬ್ಬಂದಿ ಮೇಲೆ ದಾಳಿ



ಮುಂಬೈ (ಪಿಟಿಐ): ಮಹಾರಾಷ್ಟ್ರದ ಠಾಣೆ ಜಿಲ್ಲೆಯಲ್ಲಿ ಧಾರ್ಮಿಕ ಗುರುತನ್ನು ಉಲ್ಲೇಖಿಸಿ, ಇಬ್ಬರು ಭದ್ರತಾ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿ ಬಂಧನಕ್ಕೊಳಗಾದ ವ್ಯಕ್ತಿಯ ಮನೆಯಲ್ಲಿ ಒಬ್ಬಂಟಿ ಭಯೋತ್ಪಾದನೆ ಮಾದರಿ ಮತ್ತು 'ಇಸ್ಲಾಮಿಕ್ ಸ್ಟೇಟ್'ನ ಉಲ್ಲೇಖವಿರುವ ಟಿಪ್ಪಣಿಗಳು ಪತ್ತೆಯಾಗಿವೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಜೈಬ್ ಜುಬೇರ್ ಅನ್ಸಾರಿ (31) ಬಂಧಿತ. ಹಲವು ವರ್ಷಗಳಿಂದ ಅಮೆರಿಕದಲ್ಲಿ ನೆಲಸಿದ್ದ ಆರೋಪಿಯು ತೀವ್ರಗಾಮಿಯಂತೆ ಕಾಣುತ್ತಿದ್ದಾನೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದ್ದಾರೆ.

ಮೇಲ್ನೋಟಕ್ಕೆ ಈ ಘಟನೆ, 'ಒಬ್ಬಂಟಿ ಭಯೋತ್ಪಾದಕ ದಾಳಿ'ಯಂತೆ ಕಂಡುಬಂದಿದೆ ಎಂದು ರಾಜ್ಯ ಭಯೋತ್ಪಾದನಾ ನಿಗ್ರಹ ದಳದ (ಎಟಿಎಸ್) ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಯಾವುದೇ ಸಂಘಟನೆಯ ಸಹಾಯ /ಪ್ರಚೋದನೆಯಿಲ್ಲದೆ ನಡೆಸುವ ಭಯೋತ್ಪಾದಕ ದಾಳಿಯನ್ನು 'ಒಬ್ಬಂಟಿ ಭಯೋತ್ಪಾದನೆ' ಎನ್ನುತ್ತಾರೆ.

'ಆರೋಪಿಯು ಮೊದಲಿಗೆ ಇಬ್ಬರು ಭದ್ರತಾ ಸಿಬ್ಬಂದಿಗೆ ಆಸುಪಾಸಿನಲ್ಲಿ ಮಸೀದಿ ಎಲ್ಲಿದೆ ಎಂದು ಕೇಳಿದ್ದಾನೆ. ಈ ವೇಳೆ ಅವರು ಇಲ್ಲೇ ಹತ್ತಿರ–ಬಲಭಾಗದಲ್ಲಿದೆ ಎಂದು ಉತ್ತರಿಸಿದ್ದು, ಆಗ ಆರೋಪಿ ನೀವು ಹಿಂದೂಗಳೇ ಎಂದು ಪ್ರಶ್ನಿಸಿ ಅಲ್ಲಿಂದ ತೆರಳಿದ್ದ. ಅದಾಗಿ ಕೆಲವೇ ಕ್ಷಣದಲ್ಲಿ ವಾಪಸಾದ ಆರೋಪಿ, ತನ್ನಲ್ಲಿದ್ದ ಚಾಕುವನ್ನು ಹೊರತೆಗೆದು ಭದ್ರತಾ ಸಿಬ್ಬಂದಿಯ ಮೇಲೆ ದಾಳಿ ನಡೆಸಿದ್ದಾನೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ದಾಳಿಗೂ ಮೊದಲು ಆತ ನೀವು ಹಿಂದೂ ಹೌದೇ ಎಂದು ಪ್ರಶ್ನಿಸಿದ್ದು, ಹಿಂದೂ ಅಲ್ಲವೆಂದರೆ ಕಲ್ಮಾ ಪಠಿಸಲು ಕೇಳಿದ್ದ. ಕಲ್ಮಾ ಪಠಿಸಲು ತಿಳಿಯದ ಅವರನ್ನು ಆರೋಪಿ ಇರಿದಿದ್ದ' ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಘಟನೆಯ ವಿಡಿಯೊ ಕೂಡ ಹರಿದಾಡಿದೆ.

ನೀಲಗಿರಿ ಅರಣ್ಯ ಪ್ರದೇಶದಲ್ಲಿ ಬೆಂಕಿ 13 ದಿನಗಳ ಕಾರ್ಯಾಚರಣೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಚೆನ್ನೈ: ಪ್ರಾಕೃತಿಕ ದೃಶ್ಯಕಾವ್ಯದಂತಿರುವ ತಮಿಳುನಾಡಿನ ಉದಕಮಂಡಲದ ನೀಲಗಿರಿ ಅರಣ್ಯ ವಿಭಾಗದಲ್ಲಿರುವ ವೆನ್‌ಲಾಕ್ ಡಾನ್ ಅರಣ್ಯ ಪ್ರದೇಶ ಮತ್ತು ಮುದುಮಲೈ ಹುಲಿ ಸಂರಕ್ಷಿತ ಪ್ರದೇಶದ ವಿವಿಧೆಡೆ ಏಪ್ರಿಲ್ 15ರಂದು ಹೊತ್ತಿಕೊಂಡಿದ್ದ ಬೆಂಕಿಯನ್ನು 13 ದಿನಗಳ ಸತತ ಪ್ರಯತ್ನದಿಂದ ಮಂಗಳವಾರ ನಂದಿಸಲಾಗಿದೆ.

ಬೆಂಕಿಯ ಕೆನ್ನಾಲಿಗೆಗೆ ಸುಮಾರು 5 ಸಾವಿರ ಎಕರೆ ಪ್ರದೇಶ ನಾಶವಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. 400 ಅರಣ್ಯ ಸಿಬ್ಬಂದಿ, ಸ್ಥಳೀಯ ಪರಿಸರ ಕಾರ್ಯಕರ್ತರು, ಏಳು ಅರಣ್ಯ ಅಗ್ನಿಶಾಮಕ ವಾಹನಗಳು ಮತ್ತು ಭಾರತೀಯ ವಾಯು ಸೇನೆಯ ಎರಡು ಹೆಲಿಕಾಪ್ಟರ್ ಮೂಲಕ ಬೆಂಕಿ ನಂದಿಸುವ ಕಾರ್ಯಾಚರಣೆಯು ಹಲವು ದಿನಗಳಿಂದ ನಡೆದಿತ್ತು.

ತಾಪಮಾನ ಏರಿಕೆ ಮತ್ತು ತೀವ್ರ ಗಾಳಿಯ ಕಾರಣ ಬೆಂಕಿಯು ಹೆಚ್ಚು ವ್ಯಾಪಿಸಿತು ಮತ್ತು ಬೆಂಕಿ ನಂದಿಸುವ ಕಾರ್ಯಕ್ಕೆ ಇವುಗಳು ಅಡ್ಡಿಯನ್ನೂ ಉಂಟು ಮಾಡಿದವು.

'ಮುನ್ನೆಚ್ಚರಿಕಾ ಕ್ರಮವಾಗಿ ಅಗ್ನಿಶಾಮಕ ದಳದ ಸಿಬ್ಬಂದಿ ಸೇರಿ ರಕ್ಷಣಾ ಸಿಬ್ಬಂದಿ ಇನ್ನೂ ಕೆಲವು ದಿನಗಳವರೆಗೆ ಇವರು ಅಲ್ಲಿಯೇ ಇರಲಿದ್ದಾರೆ' ಎಂದು ಜಿಲ್ಲಾಧಿಕಾರಿ ಕಚೇರಿ ಮೂಲಗಳು ತಿಳಿಸಿವೆ.

ಜನರೇ ಹಚ್ಚಿದ ಬೆಂಕಿ?: ಅರಣ್ಯ ಇಲಾಖೆ ಮೇಲಿನ ಸಿಟ್ಟಿನ ಕಾರಣದಿಂದ ಜನರೇ ಬೆಂಕಿ ಹಚ್ಚಿದ್ದಾರೆ ಎಂದು ವಿವಿಧ ಮಾಧ್ಯಮಗಳು ವರದಿ ಮಾಡಿವೆ. ನೀಲಗಿರಿ ಅರಣ್ಯ ಪ್ರದೇಶದಲ್ಲಿ ಕಳೆದ ವರ್ಷ ಹುಲಿ ದಾಳಿಯಲ್ಲಿ ಮೂವರು ಮೃತಪಟ್ಟಿದ್ದರು. ಈ ಪ್ರಕರಣದ ಕುರಿತು ಇಲಾಖೆಯು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎನ್ನುವುದು ಜನರು ಆರೋಪ. ಇಲಾಖೆಯು ಸಂರಕ್ಷಿತ ಪ್ರದೇಶದ ಸುತ್ತಮುತ್ತ ವಾಸವಿರುವ ಜನರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ವಿಚಾರಣೆಗೆ ಹಾಜರಾಗಲ್ಲ: ಸಿಸೋಡಿಯಾ

ನವದೆಹಲಿ: 'ಅಬಕಾರಿ ನೀತಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಗೆ ಹಾಜರಾಗುವುದಿಲ್ಲ' ಎಂದು ದೆಹಲಿ ಮಾಜಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಸ್ವರ್ಣ ಕಾಂತಾ ಶರ್ಮಾ ಅವರಿಗೆ ಪತ್ರ ಬರೆದಿದ್ದಾರೆ.

ಎಎಪಿ ಸಂಚಾಲಕ, ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸಹ ಸೋಮವಾರ ಇಂಥದ್ದೇ ಘೋಷಣೆ ಮಾಡಿದ್ದರು.

ರಾಜ್ ಘಾಟ್‌ನಲ್ಲಿ ಮಹಾತ್ಮ ಗಾಂಧಿ ಅವರಿಗೆ ಗೌರವ ನಮನ ಸಲ್ಲಿಸಿದ ಬಳಿಕ ಮಾತನಾಡಿದ ಕೇಜ್ರಿವಾಲ್ ಮತ್ತು ಸಿಸೋಡಿಯಾ ಅವರು, 'ತಮ್ಮ ನಿರ್ಧಾರಕ್ಕೆ ಗಾಂಧೀಜಿ ಅವರ 'ಸತ್ಯಾಗ್ರಹ' ಪರಿಕಲ್ಪನೆಯೇ ಪ್ರೇರಣೆ' ಎಂದು ಹೇಳಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಸ್ವರ್ಣ ಕಾಂತಾ ಶರ್ಮಾ ಅವರು ಮಾತನಾಡುತ್ತಿರುವ ವಿಡಿಯೊ ತುಣುಕೊಂದನ್ನು ರಾಜಕೀಯ ಮುಖಂಡರು ಸೇರಿದಂತೆ ಹಲವರು ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಸ್ವರ್ಣ ಕಾಂತಾ ಅವರು ಆರ್‌ಎಸ್‌ಎಸ್ ಕಾರ್ಯಕ್ರಮಗಳಲ್ಲಿ ಭಾಗಿಯಾದ ನಂತರ ಅವರಿಗೆ ಬಡ್ತಿಗಳು ಸಿಕ್ಕಿವೆ ಎಂದು ಪ್ರತಿಪಾದಿಸುತ್ತಾ ಈ ವಿಡಿಯೊವನ್ನು ಪೋಸ್ಟ್ ಮಾಡಲಾಗುತ್ತಿದೆ. ದೆಹಲಿಯ ಅಬಕಾರಿ ನೀತಿ ಪ್ರಕರಣದ ವಿಚಾರಣೆಯಿಂದ ಹಿಂದೆ ಸರಿಯಲು ಸ್ವರ್ಣ ಕಾಂತಾ ಅವರು ಇತ್ತೀಚೆಗೆ ನಿರಾಕರಿಸಿದ ನಂತರ, ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಪೋಸ್ಟ್‌ನಲ್ಲಿ ಮಾಡುತ್ತಿರುವ ಪ್ರತಿಪಾದನೆ ಸುಳ್ಳು.



ವಿಡಿಯೊದಲ್ಲಿರುವ ಭಾಷಣವನ್ನು ಕೂಲಂಕಷವಾಗಿ ಆಲಿಸಿದಾಗ, ಅವರು ಎಲ್ಲಿಯೂ ಆರ್‌ಎಸ್‌ಎಸ್ ಅಥವಾ ಬೇರೆ ಯಾವುದೇ ರಾಜಕೀಯ ಕಾರ್ಯಕ್ರಮಗಳ ಬಗ್ಗೆ ಉಲ್ಲೇಖಿಸಿರುವುದು ಕಂಡು ಬರಲಿಲ್ಲ. 'ಕಳೆದ ಕೆಲವು ವರ್ಷಗಳಿಂದ ನನ್ನನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಿದಾಗಲೆಲ್ಲ ನಾನು ಬೇರೆ ಬೇರೆ ಹುದ್ದೆಯಲ್ಲಿದ್ದೆ. ಮೊದಲು ಜಿಲ್ಲಾ ಕೌಟುಂಬಿಕ ನ್ಯಾಯಾಧೀಶೆ ಆಗಿದ್ದೆ, ಮರು ವರ್ಷ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಆಗಿದ್ದೆ. ಈಗ ಇದೇ ಕಾರ್ಯಕ್ರಮದಲ್ಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿ ಭಾಗವಹಿಸುತ್ತಿದ್ದೇನೆ. ಆ 'ಬಾಬಾ'ನ ಕೃಪೆಯಿಂದ ಇದು ನಡೆದಿದೆ' ಎಂದು ಭಾಷಣದಲ್ಲಿ ಹೇಳುವುದು ಕೇಳಿಸುತ್ತದೆ. ವಿಡಿಯೊದ ಕೀಫ್ರೇಮ್ ಒಂದನ್ನು ರಿವರ್ಸ್ ಸರ್ಚ್ ವಿಧಾನದ ಮೂಲಕ ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ ಉತ್ತರ ಪ್ರದೇಶದ ವಾರಾಣಸಿಯ ಮಹಾತ್ಮಗಾಂಧಿ ಕಾಶಿ ವಿದ್ಯಾಪೀಠದ ಕಾನೂನು ವಿಭಾಗದ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಲಾದ ವಿಡಿಯೊ ಸಿಕ್ಕಿತು. 2024ರ ಮೇ 19ರಂದು ಸಂಸ್ಥೆಯ ಕಾನೂನು ವಿಭಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಸ್ವರ್ಣ ಕಾಂತಾ ಶರ್ಮಾ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಇಲ್ಲಿ ಅವರು ಕಾಶಿ ವಿಶ್ವನಾಥನನ್ನು 'ಬಾಬಾ' ಎಂದು ಉಲ್ಲೇಖಿಸಿ ಮಾತನಾಡಿದ್ದರು. ಭಾಷಣದ ಪೂರ್ಣ ವಿಡಿಯೊ ಕಾನೂನು ವಿಭಾಗದ ಫೇಸ್‌ಬುಕ್ ಪುಟದಲ್ಲಿ ಲಭ್ಯವಿದೆ. ಹಳೆಯ ವಿಡಿಯೊವನ್ನು ಈಗ ತಪ್ಪಾಗಿ ಬಿಂಬಿಸಿ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಕದ ತೆರೆಯಲಿ



ನುಡಿ ಬೆಳಗು

ವಾಸುದೇವ ನಾಡಿಗ್

ಇಂಥವರ ಕಥೆಗಳು ಅಗಾಧವಾದ ಅರಿವು ಮತ್ತು ಮಾಸದ ಅನುಭವವನ್ನು ಕೊಡಬಲ್ಲವು. ಜಾರ್ಜ್, ವಾಷಿಂಗ್ಟನ್‌ನ ಒಂದು ದೊಡ್ಡ ರೆಸ್ಟೋರೆಂಟ್‌ನ ದ್ವಾರಪಾಲಕ. ಬರೋಬ್ಬರಿ ಎಪ್ಪತ್ತು ವರ್ಷ ವಯಸ್ಸು. ಕಳೆದ ಮೂವತ್ತೈದು ವರ್ಷಗಳಿಂದ ರೆಸ್ಟೋರೆಂಟ್‌ಗೆ ಬಂದವರನ್ನು ಸ್ವಾಗತಿಸಿ ಮುಖ್ಯದ್ವಾರವನ್ನು ತೆರೆಯುವುದು, ಒಳಗೆ ಕರೆಯುವುದು, ಅವರು ಹಿಂದಿರುಗುವಾಗ ತಲೆಬಾಗಿ ವಂದಿಸಿ ಕಳಿಸುವುದು. ಇದೇ ಇದೇ ಕೆಲಸ. ಆ ಬಾಗಿಲ ಹಿಡಿಯ ತುಂಬಾ ಅವನ ಕೈಗಳ ಗುರುತುಗಳು. ಚಾಚೂತಪ್ಪದೆ ನಡೆವ ದಿನಚರಿ. ಬಂದುಹೋದವರೆಲ್ಲ ಗಮನಿಸಲಿ ಬಿಡಲಿ, ಏನೂ ನಿರೀಕ್ಷೆ ಇರದ ಜೀವ. ಅನ್ಯರು ತಮ್ಮ ನೆನಪಿಗಾಗಿ ಫೋಟೊ ತೆಗೆದುಕೊಳ್ಳುವ ಒಂದು ವಸ್ತು ಅಷ್ಟೆ. ಬಾಗಿಲ ಹಿನ್ನೆಲೆಯ ಸೌಂದರ್ಯದ ಎದುರು ಒಂದು ಗೊಂಬೆ ಅಷ್ಟೇ. ಯಾರಿಂದಲೂ ಬಾಗಿಲು ತೆರೆಯಲು ಹಾಕಲು ಬಿಡದ ಜಾರ್ಜ್ ಒಂದು ನಿಮಿಷ ಕೂಡುವವನಲ್ಲ. ಹತ್ತಾರು ಗಂಟೆ ನಿಂತೇ ಇರುವವ. ಯಾರಾದರೂ ನೋಟು ನಾಣ್ಯ ಅಂಗೈಗೆ ತುರುಕುವುದೂ ಅಪರೂಪ. ಮನೋರಂಜನೆ, ರೊಮಾನ್ಸ್, ಐಷಾರಾಮಿ ಅನುಕೂಲಗಳಿಗಾಗಿಯೇ ಬರುವವರಿಗೆ ಎಪ್ಪತ್ತರ ಈ ವೃದ್ಧನ ಕಡೆಗೆ ಗಮನ ಹೇಗೆ ಸಾಧ್ಯ? ಕಣ್ಣೆತ್ತಿ ನೋಡದ ಜನ ಹೊಟ್ಟೆ ಸವರಿಕೊಂಡು ತೇಗುತ್ತ ಹೊರಟುಬಿಡುತ್ತಾರೆ. ಮಾತನಾಡಿಸುವವರು ಯಾರು?

ಜಪಾನಿನ ಉದ್ಯಮಿಯೊಬ್ಬ ತನ್ನ ಸಹಚರರ ಜೊತೆ ಬಿಲಿಯನ್ ವ್ಯವಹಾರ ಮಾತುಕತೆಗೆ ಅಂತ ಆ ರೆಸ್ಟೋರೆಂಟ್‌ಗೆ ಬಂದಾಗ ಸುಕ್ಕು ಕೆನ್ನೆ ಹಣೆ ಕೊರಳು ಮುಂಗೈ ಮತ್ತು ಕಣ್ಣಿಗೆ ಸಣ್ಣ ಪೊರೆ ಬಂದಂತಿರುವ ದ್ವಾರಪಾಲಕ ಜಾರ್ಜ್‌ನ ಕಂಡು ಜಪಾನಿ ಶೈಲಿಯಲ್ಲಿ ಸೊಂಟ ಬಗ್ಗಿಸಿ ಗೌರವ ಸಲ್ಲಿಸಿದ, ಕೈಕುಲುಕಿದ. ಜಾರ್ಜ್‌ನ ಹಿನ್ನೆಲೆ ವಿವರಗಳನ್ನು ತಿಳಿದುಕೊಂಡು ಡೋರ್‌ಮ್ಯಾನ್ ಬಗ್ಗೆ ಜಪಾನಿನಲ್ಲಿ ಇರುವ ಮೌಲ್ಯ ಮತ್ತು ಘನತೆಯ ಬಗ್ಗೆ ವಿವರಣೆ ನೀಡಿದ. ಲೋಕ ಮತ್ತು ವಹಿವಾಟಿನ ಸ್ಥಳವಾದ ರೆಸ್ಟೋರೆಂಟ್‌ನ ಮಧ್ಯೆ ಸೇತುವೆ ಕಲ್ಪಿಸುವ ಜಾರ್ಜ್‌ನ ಬಗ್ಗೆ ಅತೀವ ಸಂತಸ ವ್ಯಕ್ತಪಡಿಸಿದ. ಅವನ ಕೈ ಬೆರಳುಗಳು ಮುಂದೆ ಬಂದು ಬಾಗಿಲು ತೆರೆಯದೇ ಇದ್ದರೆ, ಗ್ರಾಹಕರಿಗೆ ಮುಗುಳ್ನಗೆ ಸಲ್ಲಿಸದೇ ಇದ್ದರೆ ರೆಸ್ಟೋರೆಂಟ್‌ಗೆ ಅರ್ಥ ಮತ್ತು ಅಸ್ತಿತ್ವವೇ ಇಲ್ಲ. ಎಪ್ಪತ್ತರ ಈ ಇಳಿ ವಯಸ್ಸಿನಲ್ಲೂ ಇಷ್ಟು ನಿಷ್ಠೆ ಮತ್ತು ಪ್ರೀತಿಯಿಂದ ಕೆಲಸ ಮಾಡುವುದು ಸುಲಭವಲ್ಲ. ಎಷ್ಟು ಜನ ಇಂತಹ ವ್ಯಕ್ತಿಯ ಕಣ್ಣಲ್ಲಿ ಕಣ್ಣಿಟ್ಟು ನೋಡಿದ್ದೀರಿ? ಕೈಕುಲುಕಿ ನಕ್ಕು ಮಾತಾಡಿಸಿದ್ದೀರಿ? ದರ್ಪದಿಂದ ನಾಣ್ಯವನ್ನು ಅಂಗೈಗೆ ಎಸೆದು ಹೊರಡುವ ಜನಕ್ಕೆ ಈ ಖುಷಿಯ ಬಗ್ಗೆ ಹೇಗೆ ಅರ್ಥವಾದೀತು?

ನಿಜ ಅಲ್ಲವೆ? ಸುಡು ಬಿಸಿಲಲ್ಲಿ ನಿಂತು ಪಾರ್ಕಿಂಗ್‌ಗೆ ವಿಶಲ್ ಊದುತ್ತ ದಾರಿ ತೋರಿಸುವವ, ಶೋರೂಂ ಬಾಗಿಲು ಕಾಯುವವ, ಸರ್ವರ್, ಸಪ್ಲಯರ್ ಹೀಗೇ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಹಾಗೆಲ್ಲ ಅವರು ಹಣಕ್ಕೆ ನೇರವಾಗಿ ಕೈಚಾಚುವ ಹಾಗಿಲ್ಲ. ಆದರೆ ಅವರನ್ನು ಈ ಲೋಕ ಕಡೆಗಣಿಸುವ ಪರಿ ಇದೆಯಲ್ಲ, ಅದು ಮಾನವೀಯತೆಯನ್ನು ಅಣಕಿಸುತ್ತದೆ. ಹಣ ಬೇಡ ಬಿಡಿ, ಒಂದು ಮಾನವೀಯ ನೋಟ, ಒಂದು ಕುಶಲೋಪರಿ ಮಾತು, ಒಂದು ಸಣ್ಣ ಧನ್ಯತೆಯ ಮುಗುಳು, ಒಂದು ಹಲೋ, ಒಂದು ಥ್ಯಾಂಕ್ಸ್ ಅವರ ವಯಸ್ಸು, ಆಯಾಸ, ಸಂಕಟವನ್ನು ಕಡಿಮೆ ಮಾಡಬಲ್ಲುದಾದರೆ ಅದಕ್ಕೂ ಏಕೆ ಜಿಪುಣತನ? ❖

ಗುಂಡಣ್ಣ



ಪದಬಂಧ 6388


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ದುಃಖ ಅಥವಾ ಉಮ್ಮಳ (3)
3.ಮಾನಿನಿಯ ಬಗ್ಗೆ ಸಂದೇಹವೇ? (3)
5.ಎಲ್ಲವೂ ನಶ್ವರ ಎನ್ನುತ್ತಿರುವ ಮನುಷ್ಯ (2)
6.ಪೇರಿಸಿಕೊಂಡಿರುವ ಸಾಮಾನುಗಳ ದುರಸ್ತಿ (3)
7.ಸಾವನ್ನು ತರುವವನು (2)
9.ಶಿರವೆತ್ತಿದಾಗ ಚಳಿಗಾಲ ಬಂದಿತಲ್ಲಾ! (3)
10.ಅಡಗಿಕೊಳ್ಳಲು ಸೂಕ್ತವಾದ ಕಾಡು (3)
11.ತಟಕ್ಕನೆ ತಲುಪಿದ ತಟಾಕದ ದಡ (2)
13.ಪದ್ಮರಾಗಕ್ಕೆ ಅಂಟಿರುವ ಹೂವಿನ ದೂಳು (3)
15.ಸರೋವರದ ಬಳಿಯಿರುವ ಮಾಲೆ (2)
16.ಭಾಗಲಬ್ಧ ಗೊತ್ತಿರದ ಜಿಪುಣ! (3)
17.ದಿಗಂತ ರೇಖೆ (3)

ಮೇಲಿಂದ ಕೆಳಕ್ಕೆ

1.ಮದುವೆ ಗಂಡು ನೀಡಿರುವ ವಿಸ್ತಾರ ನಿರೂಪಣೆ (3)
2.ಪ್ರಜ್ವಲಿಸುವ ಬೆಂಕಿಯಿದು (3)
3.ಜರ್ಜರಿತ ವಸ್ತುಗಳನ್ನು ಮಾರುವ ಅಂಗಡಿ (3)
4.ನಿಶ್ಚಿತಾರ್ಥದ ಮೊದಲೆರಡು ವರ್ಣದಿಂದಾದ ಗೊತ್ತುವಳಿ (3)
5.ಕಾಲುಗುರಿನಿಂದ ತಲೆಯ ಮುಡಿಯವರೆಗೆ (5)
8.ಮರದಲ್ಲಿರುವವನಿಗೆ ಚಿತ್ತವಿಕಲ್ಪವೇ? (5)
12.ಹಿಸ್ಸೆ ಕೇಳಿ ಬಂದಿರುವ ಅಂಚೆ (3)
13.ಹಾಡು ಹೇಳಿ ಗಿಟ್ಟಿಸಿಕೊಂಡಿರುವ ಮಡಲು (3)
14.ಬೆಳಕು ಕಿಂಡಿ ಇಲ್ಲಿದೆ (3)
15.ಸರೋವರದಲ್ಲಿ ಹುಟ್ಟಿದುದು (3)



6387ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಿವಾರ 3.ಆಟಿಕೆ 5.ರತಿ 7.ನಿಗಮ 8.ಯದಾವಿ 10.ಗಡಾರಿ 11.ವಿನೋದ 12.ಗಡಿಗೆ 14.ಹಡಪ 16.ತ್ರಮಿ 18.ಡಿಕಾವು 19.ತಿರೋಧಾನ

ಮೇಲಿಂದ ಕೆಳಕ್ಕೆ: 1.ಪರಿಣಯ 2.ರದನಿ 3.ಆಗಮ 4.ಕೆರ 6.ತಿಜೋರಿ 9.ವಿಷಾದ 10.ಗಟ್ಟಿಗ 11.ವಿಚಿತ್ರ 13.ಗೆಳೆತನ 14.ಹಗೇವು 15.ಪದ್ಧತಿ 17.ಮಿಡಿ

ಸುಡೊಕು 6771

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		6					5	
		7	5		6	3		2
3							6	
	2							4
			2	4	7			6
	7					5		
7		9			8		4	5
4				3			8	
	6		4		2	7		3

6770 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

29 ಏಪ್ರಿಲ್ 2026 ಬುಧವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಚತುರ್ದಶಿ ಗಂ. 21-13 ನಕ್ಷತ್ರ: ಚಿತ್ರಾ ಗಂ. 26-17 ಯೋಗ: ವಜ್ರ ಗಂ. 20-55 ಕರಣ: ಗರ ಗಂ. 8-30, ಮೇಷ ಮಾಸದ 16 ನೇ ದಿನ. ಮಳೆ ನಕ್ಷತ್ರ : ಭರಣಿ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30 ,ಸೂರ್ಯೋದಯ : 06-14 ಸೂರ್ಯಾಸ್ತ : 06-42,ಮುಸ್ಲಿಂ ದಿನಾಂಕ : 10 ಜುಲ್ಕಾದಾ,ಅದೃಷ್ಟ ಸಂಖ್ಯೆ : 7, 10

ಮೇಷ: ಬುದ್ಧಿಯನ್ನು ನಿಮ್ಮ ಕೈಯಲ್ಲಿ ಇಟ್ಟುಕೊಳ್ಳುವುದು ಅಭಿವೃದ್ಧಿಗೆ ಅನುಕೂಲ. ಸಾಧ್ಯವಾದರೆ ಆಪ್ತರ ಕಷ್ಟಗಳ ಕಡೆಗೆ ಗಮನಹರಿಸಿ. ಮನೆಯ ಹೆಣ್ಣುಮಕ್ಕಳ ಮದುವೆ ವಿಚಾರ ಪ್ರಸ್ತಾಪಕ್ಕೆ ಬರಲಿದೆ.

ವೃಷಭ: ಪದವೀಧರರಿಗೆ ಉನ್ನತ ಶಿಕ್ಷಣಕ್ಕಾಗಿ ಉತ್ತಮ ಸ್ಥಳ ಲಭಿಸಲಿದೆ. ಅಧ್ಯಯನಕ್ಕೆ ಗಣ್ಯರ ಪ್ರೋತ್ಸಾಹ ದೊರೆಯಲಿದೆ. ಹಿರಿಯರ ಅನುಭವದ ಸಲಹೆಯನ್ನು ನಿರ್ಲಕ್ಷಿಸುವುದು ಮೂರ್ಖತನದ ಪ್ರದರ್ಶನವಾಗುತ್ತದೆ.

ಮಿಥುನ: ಐ.ಟಿ. ಕಂಪನಿ ಉದ್ಯೋಗಿಗಳಿಗೆ ಕೆಲಸದ ಒತ್ತಡ ಜಾಸ್ತಿಯಾಗಲಿದೆ. ವರಮಾನ ಹೆಚ್ಚಳದ ಸಂಭವವು ಇರುವುದು. ಸಂಗಾತಿಯೊಂದಿಗೆ ಸ್ನೇಹದಿಂದ ವರ್ತಿಸಿ.

ಕರ್ಕಾಟಕ: ಗಾಬರಿಗೊಳ್ಳದೇ ಮೇಲಧಿಕಾರಿಗೆ ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸದೆ ನಿಮ್ಮ ಮನದ ಭಾವನೆಯನ್ನು ಸ್ಪಷ್ಟವಾಗಿ ತೆರೆದಿಡಿ. ಹೊಸದನ್ನು ಕಲಿಯುವ ಉತ್ಸಾಹ ಮೂಡಲಿದೆ.

ಸಿಂಹ: ಹೊಟ್ಟೆಯುಬ್ಬರ ಅಥವಾ ಉದರಕ್ಕೆ ಸಂಬಂಧಿಸಿದ ಯಾವುದೇ ತೊಂದರೆಯಾದರೂ ಮನೆಮದ್ದನ್ನು ಬಳಸಿ. ವೃತ್ತಿರಂಗದಲ್ಲಿ ನಕಾರಾತ್ಮಕ ಬೆಳವಣಿಗೆ ಮನಸ್ಸಿಗೆ ಕಳವಳ ಉಂಟುಮಾಡಲಿದೆ.

ಕನ್ಯಾ: ಅಭಿವೃದ್ಧಿ ಕೆಲಸಗಳಿಗೆ ಮಹತ್ವ ನೀಡಿ ಅವುಗಳನ್ನು ಕಾರ್ಯಗತಗೊಳಿಸಿರಿ. ಕೆಲಸದಲ್ಲಿ ಬಹಳ ದಿನಗಳಿಂದ ಇದ್ದ ಸಮಸ್ಯೆ ಬಗೆಹರಿಯುವುದು. ಅಗ್ನಿಯಿಂದ ಅಪಾಯವಾಗುವ ಭೀತಿ ಇರುವುದು.

ತುಲಾ: ವ್ಯವಹಾರದಲ್ಲಿ ಎದುರಾಗುವ ಸಮಸ್ಯೆಗೆ ಸೋಮಾರಿತನವೇ ಮೂಲಕಾರಣ. ಎದುರಾಗಿರುವ ಕೌಟುಂಬಿಕ ಸಂದಿಗ್ಧ ಪರಿಸ್ಥಿತಿಯನ್ನು ಮಾರ್ಗದರ್ಶಕರ ಸಲಹೆ ಪಡೆದು ಎದುರಿಸಿ.

ವೃಶ್ಚಿಕ: ಮನೆಯಲ್ಲಿ ನಡೆದ ಅಹಿತಕರ ಘಟನೆಯಿಂದಾಗಿ ಮಾನಸಿಕ ಹಾಗೂ ದೈಹಿಕವಾಗಿ ಹಾನಿಯುಂಟಾಗಲಿದೆ. ನಾಯಕತ್ವದ ಸಾಮರ್ಥ್ಯವನ್ನು ಪ್ರದರ್ಶಿಸುವಿರಿ.


ಧನು: ಕಾರ್ಮಿಕರು ಕೊಡುವ ಸಲಹೆಯಿಂದ ಅನುಕೂಲವಾಗುವ ಸನ್ನಿವೇಶ ಒದಗಿ ಬರಲಿದೆ. ವಿದ್ಯಾಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಅವಕಾಶಗಳು ಲಭಿಸಲಿವೆ. ಮನಸ್ಸಿನ ನಾಗಾಲೋಟಕ್ಕೆ ತಕ್ಷಣ ಕಡಿವಾಣ ಹಾಕುವುದು ಉತ್ತಮ.

ಮಕರ: ಚಿನ್ನಾಭರಣದ ಮೇಲಿನ ಅಥವಾ ಭೂ ಮೇಲಿನ ಹೂಡಿಕೆ ಲಾಭವನ್ನು ಉಂಟುಮಾಡುತ್ತದೆ. ಅನಿರೀಕ್ಷಿತವಾಗಿ ಶತ್ರುಗಳ ಬಣ್ಣ ಬಯಲಾಗುವುದು ಸಂತೋಷಕ್ಕೆ ಕಾರಣವಾಗುತ್ತದೆ. ಔಷಧಿ ವ್ಯಾಪಾರಿಗಳಿಗೆ ಲಾಭವಾಗುವುದು.

ಕುಂಭ: ಕೆಲಸದಲ್ಲಿ ಬಹಳ ಅವಸರ ತೋರುವ ಸ್ವಭಾವದಿಂದ ತೊಂದರೆ ಆಗದಂತೆ ಎಚ್ಚರವಹಿಸಿ. ತಾಯಿಯ ಸಲಹೆಯಿಂದಾಗಿ ಯಾವ ದಿಕ್ಕಿನಲ್ಲಿ ಸಾಗಬೇಕೆಂಬ ಗೊಂದಲಗಳು ನಿವಾರಣೆಯಾಗುತ್ತವೆ.

ಮೀನ: ದೊರೆತಿರುವ ಖ್ಯಾತಿಯನ್ನು ಉಳಿಸಿಕೊಳ್ಳುವತ್ತ ಗಮನ ಹರಿಸಿ. ಹೊಸ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಸರಿಯಾಗಿ ಯೋಚಿಸಿ ತೀರ್ಮಾನಿಸಿ. ಕುಟುಂಬದಲ್ಲಿ ಸೌಖ್ಯವಿದ್ದು ಮನರಂಜನೆ ಪಡೆಯುವಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,092
ಇಂದಿನ ಅಂತ್ಯ: 23,995
ದಿನದ ಕನಿಷ್ಠ: 23,957
97

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹575
12 ಕ್ಕೆ ₹78
ಮೈಸೂರು: 100 ಕ್ಕೆ ₹580

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹310-628
ದ್ವಿತಳಿ (ಬಿ.ವಿ) ₹300-759

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹239
ಆರ್‌ಎಸ್‌ಎಸ್-5 ₹233
ಗುಡ್ ಲಾಟ್ ₹208

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹23,750
ಎಸಿ ₹14,050
ಆರ್‌ಪಿ ₹18,150
ಆರ್‌ಸಿ ₹9775

ಕೆಎಸ್‌ಡಿಎಲ್‌ಗೆ ₹507 ಕೋಟಿ ಲಾಭ

₹2,016 ಕೋಟಿ ವಹಿವಾಟು ನಡೆಸಿದ ಹೆಗ್ಗಳಿಕೆ: ಸಚಿವ ಎಂ.ಬಿ. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಗಮ (ಕೆಎಸ್‌ಡಿಎಲ್) 2025-26ನೇ ಸಾಲಿನಲ್ಲಿ ₹2,016 ಕೋಟಿ ವಹಿವಾಟು ನಡೆಸಿದ್ದು, ₹507 ಕೋಟಿ ಲಾಭ ಗಳಿಸಿದೆ.

ಸಂಸ್ಥೆಯು ₹1,000 ಕೋಟಿ ವಹಿವಾಟು ನಡೆಸಲು 105 ವರ್ಷ ತೆಗೆದುಕೊಂಡಿದ್ದು, ನಂತರ ನಾಲ್ಕು ವರ್ಷಗಳಲ್ಲಿ ₹2,000 ಕೋಟಿ ದಾಟಿದೆ.

ಇಂತಹ ಐತಿಹಾಸಿಕ ಸಾಧನೆಯ ನಿಮಿತ್ತ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಮಂಗಳವಾರ ಸನ್ಮಾನಿಸಿದ ನಂತರ ಮಾತನಾಡಿದ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, 'ಸಂಸ್ಥೆಯು 2022-23ರಲ್ಲಿ ₹1,375 ಕೋಟಿ ವಹಿವಾಟು ನಡೆಸಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕಳೆದ ಮೂರು ವರ್ಷಗಳಲ್ಲಿ ₹641 ಕೋಟಿ ಹೆಚ್ಚಳ ಕಂಡಿದೆ' ಎಂದರು.

'ಮೊದಲು 34 ಉತ್ಪನ್ನ ತಯಾರಿಸುತ್ತಿತ್ತು. ಮೂರು ವರ್ಷಗಳಲ್ಲಿ 57 ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದೇವೆ. ಒಟ್ಟು 94 ಉತ್ಪನ್ನಗಳಿವೆ. ಯಾವುದೇ ಹೊಸ ನೇಮಕಾತಿ ಇಲ್ಲದೆ,

> **ಸಂಸ್ಥೆಯ ವಹಿವಾಟನ್ನು ಮತ್ತಷ್ಟು ದಾಖಲೆ ಮಟ್ಟಕ್ಕೆ ಕೊಂಡೊಯ್ಯುವುದಕ್ಕೆ ಪೂರಕವಾಗಿ ವಿಜಯಪುರದಲ್ಲಿ 50 ಎಕರೆಯಲ್ಲಿ ನೂತನ ಉತ್ಪಾದನಾ ಘಟಕ ಆರಂಭವಾಗಲಿದ್ದು, ₹229 ಕೋಟಿ ಮಂಜೂರು ಮಾಡಲಾಗಿದೆ**
> **ಎಂ.ಬಿ. ಪಾಟೀಲ,** ಬೃಹತ್ ಕೈಗಾರಿಕಾ ಸಚಿವ

ಯಂತ್ರೋಪಕರಣಗಳ ಖರೀದಿ ಇಲ್ಲದೆ ಈ ಸಾಧನೆ ಮಾಡಲಾಗಿದೆ. ಸಂಸ್ಥೆಯ ಉತ್ಪಾದನಾ ಸಾಮರ್ಥ್ಯ 26 ಸಾವಿರ ಟನ್ ಇದ್ದರೂ ಪರಿಣಾಮಕಾರಿ ಕಾರ್ಯ ವಿಧಾನದ ಮೂಲಕ 47 ಸಾವಿರ ಟನ್ ಉತ್ಪಾದಿಸಲಾಗಿದೆ. ₹507 ಕೋಟಿ ಲಾಭದಲ್ಲಿ ಸರ್ಕಾರಕ್ಕೆ ₹157 ಕೋಟಿ, ಮುಖ್ಯಮಂತ್ರಿ ಪರಿಹಾರ ನಿಧಿಗೆ ₹5 ಕೋಟಿ ನೀಡಲಾಗುವುದು ಎಂದು ಹೇಳಿದರು.

ಬೆಂಗಳೂರು, ದಾಬಸ್ ಪೇಟೆ, ಮೈಸೂರು ಮತ್ತು ಶಿವಮೊಗ್ಗದಲ್ಲಿರುವ ಸಂಸ್ಥೆಯ ಖಾಲಿ ಜಾಗ ಸದ್ಬಳಕೆಗೆ ನೀಲನಕ್ಷೆ ಸಿದ್ಧಪಡಿಸಲಾಗಿದೆ. ಇದು ಸಾಧ್ಯವಾದರೆ ಸಂಸ್ಥೆಯ ಪಾಲಿಗೆ ಆರ್ಥಿಕ ಹರಿವಿನ ಶಾಶ್ವತ ಸಂಪನ್ಮೂಲ ಸೃಷ್ಟಿಯಾಗಲಿದೆ. ಸಂಸ್ಥೆಯ ವಹಿವಾಟನ್ನು 2028ರ ವೇಳೆಗೆ ₹3 ಸಾವಿರ ಕೋಟಿ, 2030ರ ವೇಳೆಗೆ ₹5 ಸಾವಿರ ಕೋಟಿ ತಲುಪುವ ಗುರಿ ಇಟ್ಟುಕೊಳ್ಳಲಾಗಿದೆ ಎಂದರು.

ಸಂಸ್ಥೆಯ ಅಧ್ಯಕ್ಷ ಸಿ.ಎಸ್.ಅಪ್ಪಾಜಿ ನಾಡಗೌಡ ಮಾತನಾಡಿದರು.

'ಸಂಸ್ಥೆಯ ನೌಕರರಿಗೆ ₹4.83 ಕೋಟಿ ವೇತನ ನೀಡಲಾಗಿದೆ. ₹20 ಕೋಟಿ ಕ್ಯಾಂಪಸ್ ಸಂರಕ್ಷಣೆ ವಿನಿಯೋಗಿಸಲಾಗಿದೆ' ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪಿ.ಕೆ. ಎಂ.ಪ್ರಶಾಂತ್ ಹೇಳಿದರು.



ಕೆಎಸ್‌ಡಿಎಲ್ ಮಂಗಳವಾರ ಆಯೋಜಿಸಿದ್ದ ಸಾಧನೆಯ ಶಿಖರ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧಿಕಾರಿಗಳು, ಸಿಬ್ಬಂದಿಯನ್ನು ಸನ್ಮಾನಿಸಲಾಯಿತು. ಪಿ.ಕೆ.ಎಂ ಪ್ರಶಾಂತ್, ಸಿ.ಎಸ್.ಅಪ್ಪಾಜಿ ನಾಡಗೌಡ, ಎಂ.ಬಿ.ಪಾಟೀಲ, ಸೆಲ್ವಕುಮಾರ್ ಹಾಜರಿದ್ದರು ಪ್ರಜಾವಾಣಿ ಚಿತ್ರ

10 ಸಾವಿರ ಎಕರೆಯಲ್ಲಿ ಶ್ರೀಗಂಧ ನೆಡುತೋಪು

ಮೈಸೂರು ಸ್ಯಾಂಡಲ್ ಸೋಪ್ ತಯಾರಿಕೆಗೆ ಗಂಧದ ಎಣ್ಣೆಯೇ ಮೂಲವಸ್ತು. ಸಂಸ್ಥೆಯು ರೈತರೊಂದಿಗೆ 'ಗ್ರೋ ಮೋರ್ ಸ್ಯಾಂಡಲ್' ಕಾರ್ಯಕ್ರಮ ರೂಪಿಸಿದೆ. 10 ವರ್ಷಗಳಲ್ಲಿ 10 ಸಾವಿರ ಎಕರೆಯಲ್ಲಿ ಗಂಧದ ನೆಡುತೋಪು ಬೆಳೆಸಲಾಗುವುದು. ರೈತರಿಗೆ ಪ್ರತಿ ಗಿಡಕ್ಕೆ 3 ವರ್ಷಗಳಿಗೆ ₹500 ಪ್ರೋತ್ಸಾಹಧನ ನೀಡಲಾಗುವುದು ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.

ಬೆಂಗಳೂರಿನ ಜಿಕೆವಿಕೆ ಮತ್ತು ವಿಜಯಪುರದ ಕೃಷಿ ವಿದ್ಯಾಲಯಗಳ ಸಹಯೋಗದಲ್ಲಿ ಶ್ರೀಗಂಧದ ಅಧ್ಯಯನ ಪೀಠ ತೆರೆಯಲಾಗುವುದು. ಕಳೆದ ಮೂರು ವರ್ಷಗಳಲ್ಲಿ ಸಂಸ್ಥೆಯು ರೈತರಿಂದಲೇ ನೇರವಾಗಿ 174 ಟನ್ ಶ್ರೀಗಂಧ ಖರೀದಿಸಿದ್ದು, ₹6.08 ಕೋಟಿ ನೇರ ಪಾವತಿ ಮಾಡಿದೆ. ಹೊಸ ಯಂತ್ರೋಪಕರಣಗಳ ಖರೀದಿಗೆ ₹15 ಕೋಟಿ ಮೊತ್ತದ ಟೆಂಡರ್ ಕರೆಯಲಾಗಿದೆ. ವಿದೇಶಗಳಿಗೆ ರಫ್ತು, ಭಾರತದ ಎಲ್ಲೆಡೆ ಮಾರುಕಟ್ಟೆ ವಿಸ್ತರಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ದಯಾಕುಮಾರ್, ಬೆಂಗಳೂರು

• **ಪ್ರಶ್ನೆ: ನಾನು ಕಳೆದ ಕೆಲವು ವರ್ಷಗಳಿಂದ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿದ್ದೇನೆ. ಈ ಅವಧಿಯಲ್ಲಿ ಸುಮಾರು 25 ಫಂಡ್‌ಗಳಲ್ಲಿ ನನ್ನ ಹೂಡಿಕೆ ಇದೆ. ಈಗ ಜಾಗತಿಕ ಮಟ್ಟದಲ್ಲಿ ಎಲ್ಲ ಮಾರುಕಟ್ಟೆಗಳಲ್ಲಿ ತಲ್ಲಣ ಇದೆ. ಹೀಗಾಗಿ ನನ್ನ ಪೋರ್ಟ್‌ಫೋಲಿಯೊ ಸ್ಥಿತಿಗತಿಯನ್ನು ಒಮ್ಮೆ ಅವಲೋಕಿಸಿ ನೋಡುತ್ತಿದ್ದೇನೆ. ಪ್ರತ್ಯೇಕವಾಗಿ ನೋಡಿದಾಗ ಕೆಲವೆಲ್ಲ ಉತ್ತಮ ಲಾಭದಲ್ಲಿವೆ ಹಾಗೂ ಕೆಲವು ನಷ್ಟದಲ್ಲಿವೆ. ಹೀಗಾಗಿ ನಷ್ಟದಲ್ಲಿರುವ ಫಂಡ್ ವಿಮರ್ಶಿಸಿ, ಮುಂದೆ ಲಾಭ ಸಿಗಬಹುದಾದ ಕ್ಷೇತ್ರಗಳಿಗೆ ಫಂಡ್ ಮೊತ್ತವನ್ನು ವರ್ಗಾಯಿಸೋಣ ಎನ್ನುವ ನಿರ್ಧಾರ ಮಾಡಿದ್ದೇನೆ. ಯಾವ ರೀತಿಯಲ್ಲಿ ಸೆಕ್ಟರ್ ರೊಟೇಶನ್ ಅಥವಾ ಪೋರ್ಟ್‌ಫೋಲಿಯೊ ಮರು ಹೊಂದಾಣಿಕೆ ಮಾಡಬಹುದು ಎನ್ನುವ ಸಲಹೆ ಬೇಕಿತ್ತು.**

ಉತ್ತರ: ನಿಮ್ಮ ಪ್ರಶ್ನೆ ಹೂಡಿಕೆ ನಿರ್ವಹಣೆಯ ದೃಷ್ಟಿಯಿಂದ ಬಹಳ ಮಹತ್ವದ್ದು. ನೀವು ಹಲವು ವರ್ಷಗಳಿಂದ ಅನೇಕ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಾ ಬಂದಿರುವುದಾಗಿ ತಿಳಿಸಿದ್ದೀರಿ. ಪೋರ್ಟ್‌ಫೋಲಿಯೊ ವೈವಿಧ್ಯಗೊಳಿಸುವ ದೃಷ್ಟಿಯಿಂದ ಇದು ಒಳ್ಳೆಯದಾದರೂ, ಬಹಳಷ್ಟು ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ಪೋರ್ಟ್‌ಫೋಲಿಯೊ ನಿಯಂತ್ರಣ ಮಾಡುವುದೇ ಕಷ್ಟವಾಗುವ ಸಾಧ್ಯತೆ ಇರುತ್ತದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಅಸ್ಥಿರತೆ ಇದ್ದಾಗ, ಪ್ರತಿ ಫಂಡ್‌ನ ತಾತ್ಕಾಲಿಕ ಲಾಭ-ನಷ್ಟವನ್ನು ಆಧರಿಸಿ ತಕ್ಷಣದ ನಿರ್ಧಾರ ಕೈಗೊಳ್ಳುವುದು ಸೂಕ್ತವಲ್ಲ. ಬದಲಿಗೆ, ಪೋರ್ಟ್‌ಫೋಲಿಯೊವನ್ನು ಒಟ್ಟಾರೆಯಾಗಿ ನೋಡಬೇಕು — ಅದರಲ್ಲಿರುವ ಆಸ್ತಿ ವರ್ಗಗಳು, ವಲಯಗಳಿಗೆ ಒಟ್ಟಾರೆ ಆದ್ಯತೆ ಹಾಗೂ ನಿಮ್ಮ ಹೂಡಿಕೆಯ ಗುರಿಗಳಿಗೆ ಹೊಂದಾಣಿಕೆ ಹೇಗಿದೆ ಎಂಬುದನ್ನು ವಿಶ್ಲೇಷಿಸಬೇಕು.

ಮೊದಲು, ನಿಮ್ಮೆಲ್ಲ ಫಂಡ್‌ಗಳನ್ನು 6ರಿಂದ 8 ಉತ್ತಮ ಗುಣಮಟ್ಟದ ಫಂಡ್‌ಗಳಿಗೆ ಮೊಟಕುಗೊಳಿಸುವುದು ಉತ್ತಮ. ಲಾರ್ಜ್ ಕ್ಯಾಪ್, ಫ್ಲೆಕ್ಸಿ ಕ್ಯಾಪ್, ಇಂಡೆಕ್ಸ್ ಫಂಡ್, ಒಂದು ಅಥವಾ ಎರಡು ಉತ್ತಮ ಮಿಡ್/ಸ್ಮಾಲ್ ಕ್ಯಾಪ್ ಫಂಡ್ ಹಾಗೂ ಅಗತ್ಯವಿದ್ದರೆ ಒಂದು ಅಂತರರಾಷ್ಟ್ರೀಯ ಹೂಡಿಕೆ ಇರುವ ಫಂಡ್ — ಈ ರೀತಿಯ ಸರಳ ಮತ್ತು ಸ್ಪಷ್ಟ ಹೊಂದಾಣಿಕೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಒಂದೇ ರೀತಿಯ ಪೋರ್ಟ್‌ಫೋಲಿಯೊ ಹೊಂದಿರುವ ಅನೇಕ ಫಂಡ್‌ಗಳನ್ನು ಇಟ್ಟುಕೊಳ್ಳುವುದು ಅನಾವಶ್ಯಕ ಪುನರಾವರ್ತನೆಗೆ ಕಾರಣವಾಗುತ್ತದೆ ಮತ್ತು ಗಳಿಕೆಯಲ್ಲಿ ಹೆಚ್ಚು ಸುಧಾರಣೆ ನಿರೀಕ್ಷಿಸಲಾಗುವುದಿಲ್ಲ.

ಸೆಕ್ಟರ್ ರೊಟೇಶನ್ (ವಲಯವಾರು ಹೂಡಿಕೆ ಆವರ್ತನ) ಬಗ್ಗೆ ಹೇಳುವುದಾದರೆ, ಇದು ಮಾರುಕಟ್ಟೆಯ ವಿವಿಧ ವಲಯಗಳ ಏರಿಳಿತದ ಆಧಾರದ ಮೇಲೆ ನಡೆಯುವ ಪ್ರಕ್ರಿಯೆ. ಉದಾಹರಣೆಗೆ, ಬಡ್ಡಿ ದರಗಳು ಏರಿಕೆಯಾಗುವ ಸಮಯದಲ್ಲಿ ಬ್ಯಾಂಕಿಂಗ್ ವಲಯ ಲಾಭದಾಯಕ ಆಗಬಹುದು. ಆರ್ಥಿಕ ಚೇತರಿಕೆ ಹಂತದಲ್ಲಿ ಬಂಡವಾಳ ಸರಕು, ಮೂಲಸೌಕರ್ಯ ವಲಯಗಳು ಉತ್ತಮ ಲಾಭ ಕೊಡುತ್ತವೆ. ನೀವು ಯಾವುದೇ ವಲಯವಾರು ಫಂಡ್‌ಗಳಲ್ಲಿ ಈಗಾಗಲೇ ಹೂಡಿಕೆ ಮಾಡಿದ್ದರೆ, ಯಾವ ಸಮಯದಲ್ಲಿ ಯಾವ ವಲಯ ಹೆಚ್ಚು ಲಾಭ - ನಷ್ಟಕ್ಕೆ ಈಡಾಗುತ್ತದೆ ಎನ್ನುವ ಮಾಹಿತಿ ಇರಬೇಕು. ಈ ಮಾಹಿತಿಯನ್ನು ಪರಿಗಣಿಸದೆ ಸಣ್ಣ ಹೂಡಿಕೆದಾರರು ನೇರವಾಗಿ ವಲಯವಾರು ಫಂಡ್‌ಗಳಲ್ಲಿ ಹೆಚ್ಚುವರಿ ಹೂಡಿಕೆ ಅಥವಾ ಆವರ್ತನ ಮಾಡುವುದು ಅಪಾಯಕರ. ಆದ್ದರಿಂದ, ಫ್ಲೆಕ್ಸಿ ಕ್ಯಾಪ್ ಅಥವಾ 'ಡೈನಾಮಿಕ್ ಆಸ್ತಿ ಹಂಚಿಕೆ'ಯ ಫಂಡ್‌ಗಳನ್ನು ಬಳಸುವುದು ಸುರಕ್ಷಿತ ಮಾರ್ಗ. ಇಲ್ಲಿ ಸಮಯಕ್ಕೆ ತಕ್ಕಂತೆ ನಿರ್ಧಾರ ಕೈಗೊಳ್ಳುವ ಕ್ಷಮತೆ-ಅಧಿಕಾರ ಫಂಡ್ ನಿರ್ವಾಹಕರಲ್ಲಿರುತ್ತದೆ.

ಪೋರ್ಟ್‌ಫೋಲಿಯೊ ಮರು ಹೊಂದಾಣಿಕೆಯನ್ನು ವರ್ಷಕ್ಕೆ ಒಮ್ಮೆ ಅಥವಾ ಗರಿಷ್ಠವಾಗಿ ಅರ್ಧವಾರ್ಷಿಕವಾಗಿ ಮಾಡುವುದು ಸೂಕ್ತ. ಪ್ರತಿ ತಿಂಗಳು ಅಥವಾ ಅದಕ್ಕೂ ಕಡಿಮೆ ಅವಧಿಯಲ್ಲಿ ಬದಲಾವಣೆ ಮಾಡುವುದು ನಿರ್ಧಾರ ಕೈಗೊಳ್ಳುವಲ್ಲಿ ತೊಡಕಾಗುವ ಸಾಧ್ಯತೆ ಹೆಚ್ಚಿಸುತ್ತದೆ. ನೀವು ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ ಏನೆಂದರೆ, ಫಂಡ್‌ನ ದೀರ್ಘಾವಧಿಯ ಗಳಿಕೆ, ಫಂಡ್ ಮ್ಯಾನೇಜರ್‌ನ ಸ್ಥಿರತೆ, ವಲಯವಾರು ಹೂಡಿಕೆ ಪ್ರಮಾಣ, ಮತ್ತು ಅವೆಲ್ಲ ನಿಮ್ಮ ಗುರಿಗಳಿಗೆ ಹೊಂದಾಣಿಕೆ ಆಗುವಂತೆ ಇವೆಯೇ ಎಂಬುದು. ನಷ್ಟದಲ್ಲಿರುವ ಫಂಡ್ ಅನ್ನು ಕೇವಲ ನಷ್ಟದ ಕಾರಣಕ್ಕೆ ಮಾರಾಟ ಮಾಡಬಾರದು; ಅದರ ಮೂಲಭೂತ ಕಾರಣಗಳು ದುರ್ಬಲವಾಗಿದ್ದರೆ ಮಾತ್ರ ನಿರ್ಧಾರ ಕೈಗೊಳ್ಳಬೇಕು.

ಮ್ಯೂಚುವಲ್ ಫಂಡ್‌ಗಳ ಹೊರತಾಗಿಯೂ ಸಮರ್ಪಕ ವೈವಿಧ್ಯಕ್ಕಾಗಿ ಇತರ ಆಸ್ತಿ ವರ್ಗಗಳನ್ನು ಸಮತೋಲನದಿಂದ ಹೂಡಿಕೆಗೆ ಬಳಸಿಕೊಳ್ಳಬೇಕು. ಚಿನ್ನ ಮತ್ತು ಬೆಳ್ಳಿ ಹೂಡಿಕೆಗಾಗಿ ಇಟಿಎಫ್ ಅಥವಾ ಅವುಗಳ ಮ್ಯೂಚುವಲ್ ಫಂಡ್ ಬಳಸಬಹುದು; ಇವು ಮಾರುಕಟ್ಟೆ ಅಸ್ಥಿರತೆಯ ಸಮಯದಲ್ಲಿ ನೆರವಾಗುತ್ತವೆ. ಈಕ್ವಿಟಿ ಫಂಡ್‌ಗಳು ಎಲ್ಲ ಕಾಲದಲ್ಲೂ ಉತ್ತಮ ಲಾಭ ನೀಡಲಾರವು. ಹಾಗೆಯೇ ಸ್ಥಿರ ಆದಾಯ ಮತ್ತು ಆಸ್ತಿ ಆಧಾರಿತ ಹೂಡಿಕೆಗೆ ರಿಯಲ್ ಎಸ್ಟೇಟ್ ಹೂಡಿಕೆ ಟ್ರಸ್ಟ್ (ರೀಟ್ಸ್) ಪರಿಗಣಿಸಬಹುದು. ಮಾರುಕಟ್ಟೆಯಲ್ಲಿ ಕುಸಿತ ಇರುವಾಗ ಸಂಪೂರ್ಣವಾಗಿ ಹೊರಬರುವ ಬದಲು ಹಣವನ್ನು ಲಿಕ್ವಿಡ್ ಅಥವಾ ಕಡಿಮೆ ಅವಧಿಯ ಡೆಟ್ ಸಾಧನಗಳಲ್ಲಿ ತಾತ್ಕಾಲಿಕವಾಗಿ ಇರಿಸುವುದು ಉತ್ತಮ. ಇದರಿಂದ ನೀವು ಅವಕಾಶ ಸಿಕ್ಕಾಗ ಮತ್ತೆ ಈಕ್ವಿಟಿ ಫಂಡ್‌ಗಳಲ್ಲಿ ಹೂಡಿಕೆ ಮಾಡಲು ಸನ್ನದ್ಧವಾಗಿರಬಹುದು.

ನಿಮ್ಮ ಒಟ್ಟಾರೆ ಹೂಡಿಕೆಗಳಲ್ಲಿ ವೈವಿಧ್ಯದ ಸಮತೋಲನ ತರಲು ಶೇ 10ರಿಂದ ಶೇ 15ರಷ್ಟನ್ನು ಪರ್ಯಾಯ ಆಸ್ತಿಗಳಲ್ಲಿ ತೊಡಗಿಸಬಹುದು. ಇದರಲ್ಲಿ ಮೇಲೆ ಉಲ್ಲೇಖಿಸಿದಂತೆ ಚಿನ್ನ-ಬೆಳ್ಳಿ ಇಟಿಎಫ್ ಅಥವಾ ಮ್ಯೂಚುವಲ್ ಫಂಡ್, ಹಾಗೆಯೇ ಆದಾಯ ಕೇಂದ್ರೀಕೃತ ಹೂಡಿಕೆಗಾಗಿ ರಿಯಲ್ ಎಸ್ಟೇಟ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್ ಪರಿಗಣಿಸಬಹುದು. ಉಳಿದ ಶೇ 5ರಿಂದ ಶೇ 10ರಷ್ಟು ಭಾಗವನ್ನು ಲಿಕ್ವಿಡ್ ಮ್ಯೂಚುವಲ್ ಫಂಡ್ ಅಥವಾ ನಗದು ರೂಪದಲ್ಲಿ ಇಟ್ಟುಕೊಳ್ಳುವುದು, ಮಾರುಕಟ್ಟೆ ಕುಸಿತದ ವೇಳೆ ಅವಕಾಶ ಬಳಸಿಕೊಳ್ಳಲು ಸಹಾಯಕ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮಾಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

5ನೇ 'ಎಸ್‌–400 ಟ್ರಯಂಫ್' ಕ್ಷಿಪಣಿ ವ್ಯವಸ್ಥೆ ನಿರೀಕ್ಷೆಯಲ್ಲಿ ಭಾರತ

ನವದೆಹಲಿ (ಪಿಟಿಐ): ನಾಲ್ಕನೇ 'ಎಸ್‌–400 ಟ್ರಯಂಫ್' ಕ್ಷಿಪಣಿ ವ್ಯವಸ್ಥೆಯು ಮುಂದಿನ ತಿಂಗಳಾರಂಭದಲ್ಲಿ ರಷ್ಯಾದಿಂದ ಭಾರತಕ್ಕೆ ತಲುಪುವ ನಿರೀಕ್ಷೆಯಿದೆ ಎಂದು ಭದ್ರತಾ ಸಂಸ್ಥೆಯಲ್ಲಿನ ಮೂಲಗಳು ಮಂಗಳವಾರ ತಿಳಿಸಿವೆ.

ಐದನೇ 'ಎಸ್‌–400 ಟ್ರಯಂಫ್' ಕ್ಷಿಪಣಿ ವ್ಯವಸ್ಥೆಯು ನವೆಂಬರ್‌ನಲ್ಲಿ ಪೂರೈಕೆಯಾಗಬಹುದು ಎಂದು ಮೂಲಗಳು ತಿಳಿಸಿವೆ.

ಪಠ್ಯಪುಸ್ತಕ ಕೊರತೆ: ಪರಿಶೀಲನಾ ಸಭೆ

ನವದೆಹಲಿ: ಹೊಸ ಶೈಕ್ಷಣಿಕ ವರ್ಷದಲ್ಲಿ (2026–27) ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕದ ಕೊರತೆ ಎದುರಾಗದಂತೆ ಎಚ್ಚರವಹಿಸಬೇಕು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತಿನ (ಎನ್‌ಸಿಇಆರ್‌ಟಿ) ಅಧಿಕಾರಿಗಳಿಗೆ ಮಂಗಳವಾರ ನಿರ್ದೇಶಿಸಿದರು.

ಪಠ್ಯ ಪುಸ್ತಕದ ತೀವ್ರ ಕೊರತೆ ಎದುರಾಗಬಹುದು ಎಂಬ ಸೂಚನೆಗಳು ದೊರೆತ ಬೆನ್ನಲ್ಲೇ ಸಚಿವರು ಎನ್‌ಸಿಇಆರ್‌ಟಿ ಅಧಿಕಾರಿಗಳು ಮತ್ತು ಸಚಿವಾಲಯದ ಹಿರಿಯ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದರು.

ಸದ್ಯ ಪುಸ್ತಕಗಳ ದಾಸ್ತಾನು ಎಷ್ಟಿದೆ ಎಂಬುದರ ಮಾಹಿತಿ ಪಡೆದ ಸಚಿವರು, ಪುಸ್ತಕಗಳ ಮುದ್ರಣವನ್ನು ಹೆಚ್ಚಿಸಿ, ಅವುಗಳು ತ್ವರಿತವಾಗಿ ಲಭ್ಯವಾಗುವಂತೆ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿದರು.

ಮುಂಬೈ ಧಾರಣೆ (ಶೇಂಗಾ)	
28-04-2026	
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9200-9300
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1610 (1625)
ಒಂದು ವಾರದ ಡೆಲಿವರಿ	1605 (1620)
ಪಾಮ್ ವಾರದ ಡೆಲಿವರಿ	1443 (1448)
ಸೂರ್ಯಕಾಂತಿ ಎಣ್ಣೆ ಕಚ್ಚಾ	1550 (1550)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,48,000 (1,43,000)
ಬೆಳ್ಳಿ ಕೆ.ಜಿಗೆ	2,36,000 (2,44,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1600 (1615)
ಸೋಯಾ (ರಿಫೈನ್ಡ್)	₹1490 (1500)
ಸೂರ್ಯಕಾಂತಿ (ರಿಫೈನ್ಡ್)	₹1660 (1660)
ಪಾಮೋಲಿನ್	₹1445 (1450)

ಅಡಿಕೆ ಧಾರಣೆ

ಪುತ್ತೂರು		ಬೆಟ್ಟೆ	54619-64399	ಬಿಳಿಗೋಟು	26609-37399
ಕೋಕ	20000-34500	ರಾಶಿ	44009-56599	ಚಾಲಿ	44490-48422
ಹೊಸತು	30000-47500	ಗೊರಬಲು	19100-44119	ಕೆಂಪುಗೋಟು	22100-36299
ಸಾಗರ		ಸಿದ್ದಾಪುರ		ರಾಶಿ	50200-54199
ಬಿಳಿಗೋಟು	26580-33299	ಬಿಳಿಗೋಟು	27699-38809	ಯಲ್ಲಾಪುರ	
ಚಾಲಿ	38599-41999	ಚಾಲಿ	40000-48239	ಆಪಿ	58099-58999
ಕೋಕ	30699-32699	ಕೋಕ	23899-34899	ಬಿಳಿಗೋಟು	18099-39409
ಕೆಂಪುಗೋಟು	34399-36299	ಕೆಂಪುಗೋಟು	30900-39689	ಚಾಲಿ	39599-48599
ರಾಶಿ	41999-54710	ರಾಶಿ	48199-53899	ಕೋಕ	16501-34969
ಸಿಪ್ಪೆಗೋಟು	20809-22899	ತಟ್ಟಿಬೆಟ್ಟೆ	36900-48699	ಕೆಂಪುಗೋಟು	21899-38961
ಶಿವಮೊಗ್ಗ		ಶಿರಸಿ		ರಾಶಿ	49500-57265
ಸರಕು	55099-94996	ಬೆಟ್ಟೆ	30599-52099	ತಟ್ಟಿಬೆಟ್ಟೆ	38969-50399



ಕೊಲಂಬಿಯಾದಲ್ಲಿ ಸಂಕಷ್ಟದಲ್ಲಿರುವ ನೀರಾನೆಗಳು

ಕೊಲಂಬಿಯಾದ 80 ನೀರಾನೆಗಳ ರಕ್ಷಣೆಗೆ ಮುಂದಾದ 'ವಂತಾರ'

ಜಾಮ್ ನಗರ (ಗುಜರಾತ್): ಕೊಲಂಬಿಯಾದಲ್ಲಿ ಸಂಕಷ್ಟದಲ್ಲಿರುವ 80 ನೀರಾನೆಗಳನ್ನು ಸುರಕ್ಷಿತವಾಗಿ ಭಾರತಕ್ಕೆ ಸ್ಥಳಾಂತರಿಸಿ, ಅವುಗಳ ಜೀವನಪರ್ಯಂತ ಕಾಳಜಿ ಮಾಡಲು ಪ್ರಾಣಿ ಸಂರಕ್ಷಣೆ ಮತ್ತು ಪುನರ್ವಸತಿ ಕೇಂದ್ರ ವಂತಾರ ಮುಂದಾಗಿದೆ.

ಈ ಬಗ್ಗೆ ವಂತಾರದ ಸ್ಥಾಪಕ ಮತ್ತು ರಿಲಯನ್ಸ್ ಇಂಡಸ್ಟ್ರೀಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಅನಂತ್ ಅಂಬಾನಿ ಅವರು ಕೊಲಂಬಿಯಾ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಕೊಲಂಬಿಯಾದ ಮಗ್ದಲಿನಾ ನದಿ ಪಾತ್ರದಲ್ಲಿರುವ 80 ನೀರಾನೆಗಳ ಹತ್ಯೆಗೆ ಅಲ್ಲಿನ ಸರ್ಕಾರ ನಿರ್ಧರಿಸಿದೆ. ಈ ಬೆನ್ನಲ್ಲೇ, ಕೊಲಂಬಿಯಾದ ಪರಿಸರ ಹಾಗೂ ಸುಸ್ಥಿರ ಅಭಿವೃದ್ಧಿ ಸಚಿವ ವೆಲೆಜ್ ಟೊರೆಸ್ ಅವರಿಗೆ ಪತ್ರ ಬರೆದಿರುವ ಅನಂತ್ ಅವರು, 'ಈ ನಿರ್ಧಾರವನ್ನು ತಡೆಹಿಡಿದು, ಮಾನವೀಯ ನೆಲೆಯಲ್ಲಿ ಪರ್ಯಾಯ ಮಾರ್ಗವನ್ನು ಆಲೋಚಿಸಿ' ಎಂದು ಮನವಿ ಮಾಡಿದ್ದಾರೆ.

80 ನೀರಾನೆಗಳನ್ನು ಸುರಕ್ಷಿತ ಮತ್ತು ವೈಜ್ಞಾನಿಕ ರೀತಿಯಲ್ಲಿ ಸ್ಥಳಾಂತರ ಮಾಡಿ, ಗುಜರಾತ್‌ನ ಜಾಮ್ ನಗರದಲ್ಲಿರುವ ವಂತಾರದಲ್ಲಿ ಶಾಶ್ವತ ನೆಲೆ ಕಲ್ಪಿಸುವ ಪ್ರಸ್ತಾವವನ್ನು ಮುಂದಿಟ್ಟಿದ್ದಾರೆ. 'ಇದಕ್ಕೆ ಕೊಲಂಬಿಯಾದ ಅಧಿಕಾರಿಗಳಿಂದ ಅನುಮತಿ ದೊರಕಿಸಬೇಕು' ಎಂದೂ ವಿನಂತಿಸಿದ್ದಾರೆ.

56,432 ಹುದ್ದೆಗಳ ಭರ್ತಿ ದಾರಿ ಸುಗಮ

ಒಂದನೇ ಪುಟದಿಂದ...

ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶದ ಅನ್ವಯ ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇ 17ರಿಂದ ಶೇ 15ಕ್ಕೆ ಸೀಮಿತಗೊಳಿಸಿ ಒಳ ಮೀಸಲಾತಿ ಜಾರಿಗೊಳಿಸಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ರಾಜ್ಯ ಸರ್ಕಾರ ಹೆಚ್ಚಿರುವ ಶೇ 24ರಷ್ಟು ಮೀಸಲಾತಿ ಪ್ರಮಾಣವನ್ನು ಕೋರ್ಟ್ ಒಪ್ಪಿದರೆ, ಈ ಹೆಚ್ಚುವರಿ ಶೇಕಡಾ 6ರಷ್ಟು ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿ ನೇಮಕಾತಿ ಮಾಡಬೇಕು ಎಂದೂ ಆದೇಶದಲ್ಲಿದೆ.

ಪ್ರವರ್ಗ 'ಸಿ' ಹುದ್ದೆಗಳಲ್ಲಿ ಅತ್ಯಂತ ಹಿಂದುಳಿದವರಿಗೆ ಶೇ 20: ಪ್ರವರ್ಗ 'ಸಿ'ಗೆ ಲಭ್ಯವಾಗುವ ಹುದ್ದೆಗಳಲ್ಲಿ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಾತಿ ಸೀಟುಗಳಲ್ಲಿ ಶೇ 20 ರಷ್ಟನ್ನು ಪರಿಶಿಷ್ಟ ಜಾತಿಗಳಲ್ಲಿನ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಮೀಸಲಿರಿಸಲಾಗುವುದು ಎಂದು ಆದೇಶ ಹೇಳಿದೆ.

ಒಂದೊಮ್ಮೆ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಸೇರಿದವರು ಲಭ್ಯವಾಗದೇ ಇದ್ದರೆ, ಆ ಹುದ್ದೆಗಳನ್ನು ಹಾಗೂ ಪ್ರವೇಶಾತಿ ಸೀಟುಗಳನ್ನು ಪ್ರವರ್ಗ 'ಸಿ'ಯಲ್ಲಿರುವ ಇತರೆ ಜಾತಿಗಳಿಗೆ ನೀಡಲಾಗುವುದು ಎಂದು ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ಇಂಧನ ಬೆಲೆ ಹೆಚ್ಚಳ ಇಲ್ಲ: ಕೇಂದ್ರ

ಒಂದನೇ ಪುಟದಿಂದ...

ಕಚ್ಚಾ ತೈಲದ ಬೆಲೆ ಹಾಗೂ ಇಂಧನ ಮಾರಾಟದ ಬೆಲೆಯಲ್ಲಿನ ವ್ಯತ್ಯಾಸವು ಹೆಚ್ಚಳ ಆಗಿರುವುದರಿಂದಾಗಿ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಭಾರಿ ನಷ್ಟ ಅನುಭವಿಸುತ್ತಿವೆ.

ತಮಿಳುನಾಡು, ಪಶ್ಚಿಮ ಬಂಗಾಳ, ಅಸ್ಸಾಂ, ಕೇರಳ ಮತ್ತು ಪುದುಚೆರಿ ವಿಧಾನಸಭೆಗಳ ಚುನಾವಣೆಯ ಭಾಗವಾದ ಮತದಾನವು ಬುಧವಾರ ಪೂರ್ಣಗೊಂಡ ನಂತರ ಇಂಧನ ಬೆಲೆ ಹೆಚ್ಚಿಸಲಾಗುತ್ತದೆ ಎಂಬ ಊಹಾಪೋಹಗಳು ಇವೆ.

ಇಂಧನ ಬೆಲೆ ಹೆಚ್ಚಿಸುವ ಪ್ರಸ್ತಾವ ಇಲ್ಲ ಎಂಬ ಸಂಗತಿಯನ್ನು ಸುಜಾತಾ ಅವರು ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದ್ದಾರೆ.

'ಕೆಲವು ಕಡೆಗಳಲ್ಲಿ ಜನರು ಭೀತಿಗೆ ಒಳಗಾಗಿ ಇಂಧನ ಖರೀದಿಸಿದ್ದನ್ನು ಕಂಡಿದ್ದೇವೆ. ನಾವು ಸಂಬಂಧಪಟ್ಟ ರಾಜ್ಯ ಸರ್ಕಾರಗಳ ಜೊತೆ ನಿರಂತರವಾಗಿ ಸಂಪರ್ಕದಲ್ಲಿದ್ದೇವೆ. ಎಲ್ಲ ಪೆಟ್ರೋಲ್ ಬಂಕ್‌ಗಳ ಮೇಲೆ ನಿಗಾ ಇರಿಸಲಾಗಿದೆ, ಹೆಚ್ಚು ಇಂಧನ ಖರೀದಿ ಆಗುತ್ತಿರುವ ಬಂಕ್‌ಗಳಿಗೆ ಇಂಧನ ಪೂರೈಕೆಗೆ ಆದ್ಯತೆ ನೀಡಲಾಗಿದೆ' ಎಂದು ಸುಜಾತಾ ಹೇಳಿದ್ದಾರೆ.

ಪೆಟ್ರೋಲ್, ಡೀಸೆಲ್, ಎಲ್‌ಪಿಜಿ, ವಿಮಾನ ಇಂಧನದ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ, ಬೇಡಿಕೆಗೆ ಸ್ಪಂದಿಸಲು ಆಗುವ ಮಟ್ಟದಲ್ಲಿ ಇದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

'ಎಲ್‌ಪಿಜಿ, ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆ ಕೂಡ ನಮ್ಮಲ್ಲಿ ಸಾಕಷ್ಟಿದೆ. ಬೆಲೆಯಲ್ಲಿ ಸ್ಥಿರತೆ ಇದೆ. ಯಾರೂ ಕೂಡ ಗಾಳಿಮಾತುಗಳನ್ನು ನಂಬಬಾರದು ಎಂದು ಕೋರುವೆ. ಭೀತಿಗೆ ಒಳಗಾಗಿ ಮುಗಿಬಿದ್ದು ಖರೀದಿಸಬೇಕಾಗಿಲ್ಲ, ಮಾಹಿತಿಗಾಗಿ ಅಧಿಕೃತ ಮೂಲಗಳನ್ನು ಮಾತ್ರ ನೆಚ್ಚಿಕೊಳ್ಳಬೇಕು' ಎಂದು ಅವರು ಹೇಳಿದ್ದಾರೆ.

ಬೆಂಗಳೂರಿಗೆ ಅಗ್ರ ಪಟ್ಟ

89 ಒಪ್ಪಂದ, ₹7,747 ಕೋಟಿ ಹೂಡಿಕೆ: ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ನವೋದ್ಯಮ ಕ್ಷೇತ್ರದಲ್ಲಿ 2026 ರ ಮೊದಲ ಮೂರು ತಿಂಗಳ ಅವಧಿಯಲ್ಲಿ ಬೆಂಗಳೂರು ಅಗ್ರಪಟ್ಟದಲ್ಲೇ ಮುಂದುವರೆದಿದೆ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಅವಧಿಯಲ್ಲಿ 89 ಒಪ್ಪಂದಗಳ ಮೂಲಕ ₹7,747 ಕೋಟಿ ಹೂಡಿಕೆ ಆಗಿದೆ. ಇದು ಇತರ ಪ್ರತಿಸ್ಪರ್ಧಿ ನಗರಗಳಿಗಿಂತಲೂ ಉತ್ತಮ ಮುನ್ನಡೆ ಎಂದು ಅವರು ಹೇಳಿದ್ದಾರೆ.

ದೆಹಲಿ 74 ಒಪ್ಪಂದ ಮಾಡಿಕೊಂಡಿದ್ದು ಸುಮಾರು ₹4,300 ಕೋಟಿ ಹೂಡಿಕೆ ಆಗಿದೆ. ಮುಂಬೈ 34 ಒಪ್ಪಂದ ಮಾಡಿಕೊಂಡಿದ್ದು, ಸುಮಾರು ₹3,000 ಕೋಟಿ ಹೂಡಿಕೆ ಆಗಿದೆ. ಇದು ಬಂಡವಾಳ ಹರಿವು ಮತ್ತು ಒಪ್ಪಂದದ ವೇಗ ಎರಡರಲ್ಲೂ ಇರುವ ಸ್ಪಷ್ಟ ಅಂತರವನ್ನು ಸೂಚಿಸುತ್ತದೆ ಎಂದಿದ್ದಾರೆ.

'ಬೆಂಗಳೂರು ಈಗ ಅಮೆರಿಕ, ಯುರೋಪ್ ಮತ್ತು ಚೀನಾದ ಹೊರಗೆ ಅತಿ ದೊಡ್ಡ ನವೋದ್ಯಮ ಕೇಂದ್ರವಾಗಿ ಮತ್ತು ಜಾಗತಿಕವಾಗಿ 5 ನೇ ಅತಿದೊಡ್ಡ ಯೂನಿಕಾರ್ನ್ ಕೇಂದ್ರವಾಗಿ ಬೆಳೆದಿದೆ. ನಮ್ಮ ನಾಯಕತ್ವವು ಬಂಡವಾಳ ಮತ್ತು ಉತ್ತಮ ಗುಣಮಟ್ಟದ ಉದ್ಯಮಿಗಳನ್ನು ಆಕರ್ಷಿಸುತ್ತಲೇ ಇದೆ' ಎಂದು ಹೇಳಿದ್ದಾರೆ.

'ಡೀಪ್ ಟೆಕ್‌ನಿಂದ ದೈನಂದಿನ ತಂತ್ರಜ್ಞಾನದವರೆಗೆ, ಬೆಂಗಳೂರಿನ ನವೋದ್ಯಮಗಳು ಪ್ರತಿಯೊಂದು ಪ್ರಮುಖ ವಲಯದಲ್ಲೂ ಪ್ರಾಬಲ್ಯ ಸಾಧಿಸಿವೆ. ಬೆಂಗಳೂರು ನಗರವು ಭಾರತದ ತಂತ್ರಜ್ಞಾನ ಆರ್ಥಿಕತೆ ಕೇಂದ್ರವಾಗಿದೆ' ಎಂದು ಪ್ರಿಯಾಂಕ್ ಪ್ರತಿಪಾದಿಸಿದ್ದಾರೆ.

ಬಾಗ್ಮನೆ ಆರ್‌ಇಐಟಿ: 5ರಿಂದ ಐಪಿಒ

ನವದೆಹಲಿ (ಪಿಟಿಐ): ಬಾಗ್ಮನೆ ಪ್ರೈಮ್ ಆಫೀಸ್ ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್ ₹3,405 ಕೋಟಿ ಬಂಡವಾಳ ಸಂಗ್ರಹಿಸುವ ಗುರಿಯೊಂದಿಗೆ ಐಪಿಒ ನಡೆಸಲಿದೆ. ಈ ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ನ (ಆರ್‌ಇಐಟಿ) ಯೂನಿಟ್‌ಗಳಿಗೆ ಮೇ 5ರಿಂದ 7ರವರೆಗೆ ಬಿಡ್ ಸಲ್ಲಿಸಲು ಅವಕಾಶ ಇರಲಿದೆ.

ಆರಂಭಿಕ ಹೂಡಿಕೆದಾರರಿಗೆ ಮೇ 4ರಂದು ಬಿಡ್ ಸಲ್ಲಿಸಲು ಅವಕಾಶ ಇರಲಿದೆ. ಬೆಂಗಳೂರು ಮೂಲದ ಬಾಗ್ಮನೆ ಪ್ರೈಮ್ ಆಫೀಸ್ ಆರ್‌ಇಐಟಿ, ಪ್ರೀಮಿಯಂ ವರ್ಗದ ಕಚೇರಿ ಸ್ಥಳಗಳನ್ನು ನಿರ್ವಹಿಸುತ್ತಿದೆ.

ಐಪಿಒ ಮೂಲಕ ಸಂಗ್ರಹಿಸುವ ಬಂಡವಾಳವನ್ನು ಬಾಗ್ಮನೆ ಕ್ಯಾಪಿಟಲ್ ಟೆಕ್ ಪಾರ್ಕ್‌ನಲ್ಲಿರುವ ಲಕ್ಸರ್ ಆಸ್ತಿಯನ್ನು ಖರೀದಿಸಲು, ಬಾಗ್ಮನೆ ರಿಯೊದಲ್ಲಿನ ಶೇ 93ರಷ್ಟು ಪಾಲು ಖರೀದಿಸಲು ಬಳಸಲಾಗುತ್ತದೆ.

ಆರ್‌ಇಐಟಿಗಳು ವರಮಾನ ತಂದುಕೊಡುವ ರಿಯಲ್ ಎಸ್ಟೇಟ್ ಆಸ್ತಿಗಳ ಮಾಲೀಕತ್ವ ಹೊಂದಿರುತ್ತವೆ ಅಥವಾ ಅಂತಹ ಆಸ್ತಿಗಳ ನಿರ್ವಹಣೆಯಲ್ಲಿ ತೊಡಗಿರುತ್ತವೆ. ಆ ಆಸ್ತಿಗಳಿಂದ ಸಿಗುವ ವರಮಾನದಲ್ಲಿ ಒಂದು ಪಾಲನ್ನು ಹೊಂದಲು ಅವು ಹೂಡಿಕೆದಾರರಿಗೆ ಅನುವು ಮಾಡಿಕೊಡುತ್ತವೆ.

ಈಗ ದೇಶದ ಬಂಡವಾಳ ಮಾರುಕಟ್ಟೆಗಳಲ್ಲಿ ಒಟ್ಟು ಐದು ಆರ್‌ಇಐಟಿಗಳು ಇವೆ. ಅವು: ನಾಲೆಜ್ ರಿಯಾಲ್ಟಿ ಟ್ರಸ್ಟ್, ಮೈಂಡ್‌ಸ್ಪೇಸ್ ಬಿಸಿನೆಸ್ ಪಾರ್ಕ್ಸ್ ಆರ್‌ಇಐಟಿ, ಬ್ರೂಕ್‌ಫೀಲ್ಡ್ ಇಂಡಿಯಾ ರಿಯಲ್ ಎಸ್ಟೇಟ್ ಟ್ರಸ್ಟ್, ಎಂಬಸಿ ಆಫೀಸ್ ಪಾರ್ಕ್ಸ್ ಆರ್‌ಇಐಟಿ ಮತ್ತು ನೆಕ್ಸಸ್ ಸೆಲೆಕ್ಟ್ ಟ್ರಸ್ಟ್.

ಮಾರುತಿ ಸುಜುಕಿ ಲಾಭ ಇಳಿಕೆ

ನವದೆಹಲಿ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಮಾರುತಿ ಸುಜುಕಿ ಇಂಡಿಯಾ ಕಂಪನಿಯ ನಿವ್ವಳ ಲಾಭವು ಶೇ 6.45ರಷ್ಟು ಕಡಿಮೆ ಆಗಿದೆ. ಈ ಅವಧಿಯಲ್ಲಿ ಕಂಪನಿಯು ₹3,659 ಕೋಟಿ ಲಾಭ ಗಳಿಸಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ವಾಹನ ಮಾರಾಟವು ದಾಖಲೆಯ ಮಟ್ಟ ತಲುಪಿದೆ. ಆದರೆ, ಕಂಪನಿಯು ತ್ರೈಮಾಸಿಕದ ಹಣಕಾಸಿನ ಲೆಕ್ಕಾಚಾರ ಸಿದ್ಧಪಡಿಸುವಾಗ, ಹೊಣೆಗಾರಿಕೆ ಹಾಗೂ ಆಸ್ತಿಗಳ ಮೌಲ್ಯವನ್ನು ಈಗಿನ ಮಾರುಕಟ್ಟೆ ದರಕ್ಕೆ ಅನ್ವಯ ಮಾಡಿರುವ ಕಾರಣದಿಂದಾಗಿಯೂ ಲಾಭದ ಪ್ರಮಾಣ ಕಡಿಮೆ ಆಗಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹3,911 ಕೋಟಿ ಲಾಭ ಗಳಿಸಿತ್ತು. ಕಾರ್ಯಾಚರಣೆ ಹೊರತಾದ ವರಮಾನವು ಕಡಿಮೆ ಆಗಿದೆ ಎಂದು ಕಂಪನಿ ಮಾಹಿತಿ ನೀಡಿದೆ.

ಒಪೆಕ್ ತೊರೆಯಲು ಯುಎಇ ತೀರ್ಮಾನ

ದುಬೈ (ಎಎಫ್‌ಪಿ): ಪೆಟ್ರೋಲಿಯಂ ರಫ್ತುದಾರ ದೇಶಗಳ ಒಕ್ಕೂಟಗಳಾದ 'ಒಪೆಕ್' ಹಾಗೂ 'ಒಪೆಕ್ +' ನಿಂದ ಹೊರಬರಲು ಯುಎಇ ತೀರ್ಮಾನಿಸಿದೆ. 'ರಾಷ್ಟ್ರದ ಹಿತಾಸಕ್ತಿಯ ಮೇಲೆ ಗಮನ ನೀಡಲು' ಹೀಗೆ ಮಾಡುತ್ತಿರುವುದಾಗಿ ಅದು ಮಂಗಳವಾರ ತಿಳಿಸಿದೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದಾಗಿ ಕಚ್ಚಾ ತೈಲದ ಬೆಲೆಯು ಹೆಚ್ಚಾಗಿರುವ ಸಂದರ್ಭದಲ್ಲಿ ಯುಎಇ ಈ ತೀರ್ಮಾನ ತೆಗೆದುಕೊಂಡಿದೆ.

ಕಚ್ಚಾ ತೈಲ ಉತ್ಪಾದನೆಗೆ ಕೋಟಾ ನಿಗದಿಪಡಿಸಿದ ಒಪೆಕ್ ಕ್ರಮದ ಬಗ್ಗೆ ಯುಎಇ ಈ ಹಿಂದೆ ಅಸಮಾಧಾನ ವ್ಯಕ್ತಪಡಿಸಿತ್ತು. ಜಾಗತಿಕವಾಗಿ ಕಚ್ಚಾ ತೈಲ ಉತ್ಪಾದಿಸುವ ಪ್ರಮುಖ ದೇಶಗಳಲ್ಲಿ ಯುಎಇ ಕೂಡ ಒಂದು. 'ಒಪೆಕ್' ಹಾಗೂ 'ಒಪೆಕ್ +'ನಿಂದ ಹೊರಬರುವ ತೀರ್ಮಾನವು ಶುಕ್ರವಾರದಿಂದ ಜಾರಿಗೆ ಬರಲಿದೆ.

'ಒಕ್ಕೂಟದ ಭಾಗವಾಗಿದ್ದಾಗ ನಾವು ಗಣನೀಯ ಕೊಡುಗೆ ನೀಡಿದ್ದೇವೆ, ಎಲ್ಲರ ಒಳಿತಿಗಾಗಿ ದೊಡ್ಡ ತ್ಯಾಗ ಮಾಡಿದ್ದೇವೆ' ಎಂದು ಯುಎಇ ಹೇಳಿದೆ.

ಹೊರ್ಮುಜ್ ಜಲಸಂಧಿಯ ಮೂಲಕ ಸರಕು ಸಾಗಣೆ ಸರಿಯಾಗಿ ಆಗುತ್ತಿಲ್ಲ. ಈ ಸಂದರ್ಭದಲ್ಲಿ ಯುಎಇ ತೆಗೆದುಕೊಂಡಿರುವ ಈ ತೀರ್ಮಾನದಿಂದಾಗಿ ತೈಲ ಮಾರುಕಟ್ಟೆಯಲ್ಲಿ ತಕ್ಷಣಕ್ಕೆ ಪರಿಣಾಮ ಕಾಣಲಿಕ್ಕಿಲ್ಲ ಎಂದು ಮಾರುಕಟ್ಟೆ ತಜ್ಞ ಜಾರ್ಜ್ ಲಿಯೋನ್ ಹೇಳಿದ್ದಾರೆ.

ಇನ್ನು ಮುಂದೆ ಕಚ್ಚಾ ತೈಲ ಉತ್ಪಾದನೆಯನ್ನು ಹೆಚ್ಚು ಮಾಡುವ ಸ್ವಾತಂತ್ರ್ಯ ಯುಎಇಗೆ ಇರಲಿದೆ. ಹೀಗಾಗಿ, ತೈಲ ಮಾರುಕಟ್ಟೆಯಲ್ಲಿ ಸ್ಥಿರತೆ ತರುವ ಪ್ರಮುಖ ದೇಶ ಎಂಬ ಹೆಗ್ಗಳಿಕೆ ಸೌದಿ ಅರೇಬಿಯಾ ಪಾಲಿಗೆ ಎಷ್ಟು ದಿನ ಉಳಿಯಲಿದೆ ಎಂಬ ಪ್ರಶ್ನೆ ಮೂಡಲಿದೆ ಎಂದಿದ್ದಾರೆ

'₹64.24 ಲಕ್ಷ ಕೋಟಿ ತಲುಪಿದ ವಿದೇಶಿ ವಿನಿಮಯ ಮೀಸಲು'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಜಗತ್ತಿನಲ್ಲೇ ಅತಿ ಹೆಚ್ಚು ವಿದೇಶಿ ವಿನಿಮಯ ಮೀಸಲು ಹೊಂದಿರುವ ದೇಶಗಳಲ್ಲಿ ಭಾರತವೂ ಒಂದಾಗಿದೆ. ನಮ್ಮ ವಿದೇಶಿ ವಿನಿಮಯ ಮೀಸಲು 700 ಬಿಲಿಯನ್ ಡಾಲರ್ (₹64.24 ಲಕ್ಷ ಕೋಟಿ) ಗಡಿ ದಾಟಿದೆ. 11 ತಿಂಗಳ ಆಮದು ನಿರ್ವಹಣೆಗೆ ಇದು ಸಾಕಾಗಲಿದೆ' ಎಂದು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯವು ದೇರಳಕಟ್ಟೆಯಲ್ಲಿ ಮಂಗಳವಾರ ಏರ್ಪಡಿಸಿದ್ದ 'ನಿಟ್ಟೆ ವಿನಯ ಹೆಗ್ಡೆ ಉಪನ್ಯಾಸ- 2026' ಕಾರ್ಯಕ್ರಮದಲ್ಲಿ ಅವರು 'ವಿಕಸಿತ ಭಾರತ- 2047 ರ ದೂರದೃಷ್ಟಿ' ಕುರಿತು ಮಾತನಾಡಿದರು.

'ವಿಕಸಿತ ಭಾರತ್ 2047' ಎಂಬುದು ರಾಜಕೀಯ ಘೋಷಣೆ ಅಲ್ಲ. ಅದೊಂದು ಜಿಡಿಪಿ ಸಂಖ್ಯೆಯಲ್ಲ. ಕಲ್ಯಾಣ ಕರ್ನಾಟಕದ ಕೃಷಿಕರ ಭವಿಷ್ಯಕ್ಕೂ ಅದು ಖಾತರಿ ನೀಡಬಲ್ಲುದು. ರಾಯಚೂರಿನ ಹೆಣ್ಣುಮಗಳು ವಿಜ್ಞಾನಿ ಆಗುವ ಕನಸು ಕಾಣುವಂತೆ ಮಾಡಬಲ್ಲುದು. ಒಂದು ಕಾಲದಲ್ಲಿ ರೋಮ್ ಜೊತೆ ವ್ಯಾಪಾರ ನಡೆಸಿದ್ದ ಉಡುಪಿ ಕರಾವಳಿಯ ಮೊಗವೀರರಲ್ಲೂ ಕೋಲ್ಡ್ ಸ್ಟೋರೇಜ್ ಸೌಲಭ್ಯ ಪಡೆಯುವ ಭರವಸೆ ಮೂಡಿಸಬಲ್ಲದು. ದಂಡಕಾರಣ್ಯ ಬುಡಕಟ್ಟು ಜನರಿಗೂ ಸಮೃದ್ಧಿಯ ಪಾಲು ಸಿಗಲಿದೆ. ಇದನ್ನು ಸಾಧಿಸಬೇಕಾದರೆ ಅಭಿವೃದ್ಧಿ ವೇಗವನ್ನು ಕಾಯ್ದುಕೊಳ್ಳಬೇಕಿದೆ' ಎಂದರು.

'ನಮ್ಮ ದೇಶದ 90 ಕೋಟಿ ಜನರು 35 ವರ್ಷ ವಯಸ್ಸಿನೊಳಗಿನವರು. ಇದು ನಮ್ಮ ಜನಸಂಖ್ಯೆಯ ಶೇ 65ರಷ್ಟು. ಮಾನವ ಪ್ರಭೇದದ ಇತಿಹಾಸದಲ್ಲೇ ಅತಿಹೆಚ್ಚು ಯುವಶಕ್ತಿಯ ಪ್ರಮಾಣವಿದು. ಈ ಯುವಜನರಲ್ಲಿ ಮಹತ್ವಾಕಾಂಕ್ಷೆ ಇದೆ. ಹೃದಯವಂತಿಕೆ ಜೊತೆ ಬುದ್ಧಿವಂತಿಕೆಯೂ ಇದೆ. ಬಲಿಷ್ಠ ಭಾರತದ ಅನುಕೂಲಗಳ ಸ್ಪಷ್ಟ ಕಲ್ಪನೆ ಅವರಿಗಿದೆ' ಎಂದರು.

ಅಂಗಲಾಚುತ್ತಿರುವ ಇರಾನ್: ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ • ಪ್ರತಿಕ್ರಿಯಿಸದ ಶ್ವೇತಭವನ

'ಹೊರ್ಮುಜ್: ಅಮೆರಿಕವೇ ಮುಕ್ತಗೊಳಿಸಲಿ'

ವಾಷಿಂಗ್ಟನ್ (ರಾಯಿಟರ್ಸ್/ಎಪಿ): 'ಹೊರ್ಮುಜ್ ಜಲಸಂಧಿಯನ್ನು ಅಮೆರಿಕವೇ ಶೀಘ್ರ ಮುಕ್ತಗೊಳಿಸಬೇಕು ಎಂಬುದು ಇರಾನ್ ಬಯಕೆಯಾಗಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಹೇಳಿಕೊಂಡಿದ್ದಾರೆ.

'ದೇಶವು ಸಂಪೂರ್ಣ ಕುಸಿಯುವ ಹಂತದಲ್ಲಿದೆ ಹಾಗೂ ದೇಶದ ನಾಯಕತ್ವ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಿದೆ. ಹೀಗಾಗಿ ನೀವೇ ನೇತೃತ್ವ ವಹಿಸಿ, ಎಷ್ಟು ಸಾಧ್ಯವೋ ಅಷ್ಟು ಶೀಘ್ರ ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲು ಕ್ರಮ ಕೈಗೊಳ್ಳುವಂತೆ ಇರಾನ್ ಅಂಗಲಾಚಿದೆ' ಎಂಬುದಾಗಿ ಟ್ರಂಪ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.



ಡೊನಾಲ್ಡ್ ಟ್ರಂಪ್

ಟ್ರಂಪ್ ಅವರ ಈ ಹೇಳಿಕೆ ಕುರಿತು ಇರಾನ್ ಪ್ರತಿಕ್ರಿಯೆ ನೀಡಿಲ್ಲ.

ಸಾಮಾಜಿಕ ಮಾಧ್ಯಮ 'ಟ್ರೂತ್ ಸೋಷಿಯಲ್'ನಲ್ಲಿ ಈ ಕುರಿತು ಟ್ರಂಪ್ ಮಾಡಿರುವ ಪೋಸ್ಟ್ ಕುರಿತಂತೆ ಶ್ವೇತಭವನ ಕೂಡ ಪ್ರತಿಕ್ರಿಯೆ ನೀಡಿಲ್ಲ.

> **ಇನ್ನು ಮುಂದೆ ಇತರ ದೇಶಗಳ ಮೇಲೆ ತನ್ನ ನೀತಿಗಳನ್ನು ಹೇರುವ ಸ್ಥಿತಿಯಲ್ಲಿ ಅಮೆರಿಕ ಇಲ್ಲ. ಅಂತಿಮವಾಗಿ ತನ್ನ ಕಾನೂನುಬಾಹಿರ ಮತ್ತು ಅಸಂಬದ್ಧ ಬೇಡಿಕೆಗಳನ್ನು ಕೈಬಿಡಬೇಕು ಎಂಬುದನ್ನು ಅದು ಒಪ್ಪಿಕೊಳ್ಳಬೇಕು**
> **ರೆಜಾ ತಲೈ-ನಿಕ್,** ಇರಾನ್ ರಕ್ಷಣಾ ಸಚಿವಾಲಯದ ವಕ್ತಾರ

'ಇರಾನ್ ಪರವಾಗಿ ಯಾರು ಈ ಸಂದೇಶ ರವಾನಿಸಿದ್ದಾರೆ? ಶ್ವೇತಭವನದಲ್ಲಿ ಈ ಸಂದೇಶ ಸ್ವೀಕರಿಸಿದವರು ಯಾರು? ಹಾಗೂ ಇರಾನ್‌ನ ಈ ಬೇಡಿಕೆಯನ್ನು ನೇರವಾಗಿ ಅಮೆರಿಕಕ್ಕೆ ತಿಳಿಸಲಾಗಿದೆಯೇ ಅಥವಾ ಮಧ್ಯವರ್ತಿಗಳು ತಲುಪಿಸಿದ್ದಾರೆಯೇ' ಎಂಬ ಪ್ರಶ್ನೆಗಳಿಗೂ ಶ್ವೇತಭವನ ಪ್ರತಿಕ್ರಿಯಿಸಿಲ್ಲ


'ಯುದ್ಧ ಕೊನೆಗೊಂಡಂತೆ ಅಲ್ಲ': ಈ ನಡುವೆ, 'ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಕೊನೆಗೊಂಡಿದೆ ಎಂಬುದಾಗಿ ನಾವು ಪರಿಗಣಿಸುವುದಿಲ್ಲ. ಸದ್ಯದ ಪರಿಸ್ಥಿತಿಯನ್ನು ಯುದ್ಧವೆಂದೇ ಭಾವಿಸುತ್ತೇವೆ. ನಮ್ಮ ಸಶಸ್ತ್ರ ಪಡೆಗಳಿಗೆ ಅಗತ್ಯವಿರುವ ಶಸ್ತ್ರಾಸ್ತ್ರಗಳನ್ನು ಪೂರೈಕೆ ಮಾಡಲಾಗಿದೆ' ಎಂದು ಇರಾನ್ ಸೇನೆಯ ವಕ್ತಾರರೊಬ್ಬರು ಹೇಳಿದ್ದಾರೆ.

'ಅಣ್ವಸ್ತ್ರ ಯೋಜನೆ: ಚರ್ಚೆಯ ವಿಷಯ'

ಇರಾನ್ ಜೊತೆ ನಡೆಸುವ ಶಾಂತಿ ಮಾತುಕತೆ ವೇಳೆ, ಅಣ್ವಸ್ತ್ರ ಕಾರ್ಯಕ್ರಮವೇ ಚರ್ಚೆಯ ಮುಖ್ಯ ವಿಷಯವಾಗಿರಲಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.


'ಫಾಕ್ಸ್ ನ್ಯೂಸ್'ಗೆ ನೀಡಿರುವ ಸಂದರ್ಶನದಲ್ಲಿ ಈ ಮಾತು ಹೇಳಿರುವ ಅವರು, 'ಇರಾನ್‌ನ ಪ್ರಸ್ತಾವವನ್ನು ಅಮೆರಿಕ ಒಪ್ಪಲು ಸಾಧ್ಯವಿಲ್ಲ. ಅಣ್ವಸ್ತ್ರ ವಿಷಯವೇ ಸಂಘರ್ಷಕ್ಕೆ ಮೂಲ ಕಾರಣವಾಗಿದ್ದು, ಅದನ್ನು ಚರ್ಚಿಸದೆ ಅಥವಾ ಪರಿಹರಿಸದೆಯೇ ಯಾವುದೇ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

'ಇರಾನ್‌ನಲ್ಲಿ ಮೂಲಭೂತವಾದಿ ಸರ್ಕಾರ ಇರುವವರೆಗೂ ಅಣ್ವಸ್ತ್ರ ಯೋಜನೆಯನ್ನು ಬಯಸುತ್ತದೆ' ಎಂದೂ ಅವರು ಹೇಳಿದ್ದಾರೆ.



ರಮೇಶ್ ಅರವಿಂದ್ 'KD' ಚಿತ್ರದಲ್ಲಿ ಖಳನಾಯಕನಾಗಿ ಹಲವು ದಶಕಗಳ ಬಳಿಕ ಮತ್ತೆ ಲಾಂಗ್ ಹಿಡಿದಿದ್ದಾರೆ. ಅವರ ನಟನೆಯ 'ಅಮೆರಿಕಾ! ಅಮೆರಿಕಾ!!' ಚಿತ್ರ ತೆರೆಕಂಡು 29 ವರ್ಷಗಳು ಕಳೆದಿವೆ. ಇವೆಲ್ಲ ಹಿನ್ನೆಲೆ ಇಟ್ಟುಕೊಂಡು ತಮ್ಮ ಸಿನಿಪಯಣ ಕುರಿತು ಅವರು ಮಾತನಾಡಿದ್ದಾರೆ.

‘ಅತಿಥಿ ಪಾತ್ರ ಹೀರೊಗೆ ಅಡ್ಡಿಯಾಗಬಾರದು’


ಸುದೀಪ್

ಪ್ರೇಮ್ ನಿರ್ದೇಶನದ ‘KD’ ಸಿನಿಮಾ ಏ.30ರಂದು ತೆರೆಕಾಣುತ್ತಿದ್ದು, ಚಿತ್ರದಲ್ಲಿ ‘ಕಾಲಭೈರವ’ ಎಂಬ ಪಾತ್ರದಲ್ಲಿ ಸುದೀಪ್ ಕಾಣಿಸಿಕೊಳ್ಳಲಿದ್ದಾರೆ. ಇತ್ತೀಚೆಗೆ ನಡೆದ ಸುದ್ದಿಗೋಷ್ಠಿಯಲ್ಲಿ ತಮ್ಮ ಪಾತ್ರ ಹಾಗೂ ಸಿನಿಮಾ ಸುತ್ತಲಿನ ಹಲವು ವಿಷಯಗಳ ಬಗ್ಗೆ ಸುದೀಪ್ ಮಾತನಾಡಿದ್ದಾರೆ. ಅವರ ಮಾತಿನ ಸಾರಾಂಶ ಇಲ್ಲಿದೆ.

1 **ಪ್ರೇಮ್** ಸಿನಿಮಾದ ಅತಿಮೋಹಿ. ಅವರು ವ್ಯಕ್ತಿಯಾಗಿ ನನಗಿಷ್ಟ. ಆ ವ್ಯಕ್ತಿಗಾಗಿ ಏನು ಬೇಕಾದರೂ ಮಾಡುತ್ತೇನೆ. ‘ಕಾಲಭೈರವ’ ಎನ್ನುವ ಪಾತ್ರ ಇಂತಹ ಪ್ರೀತಿಯ ಸಣ್ಣ ಗುಳ್ಳೆಯಷ್ಟೇ. ಇದು ನಾನು ಮಾಡುತ್ತಿರುವ ಉಪಕಾರವಲ್ಲ. ಇದು ಪ್ರೇಮ್ ಸಂಪಾದಿಸಿರುವ ಪ್ರೀತಿ. ಒಂದು ಅದ್ದೂರಿಯಾದ ಸಿನಿಮಾದಲ್ಲಿ, ನಾವು ಎಲ್ಲೋ ಒಂದು ಚೂರು ಇರಬೇಕಲ್ಲವೇ? ಧ್ರುವ ನನ್ನ ಸಹೋದರನಂತೆ. ಚಿರು, ಧ್ರುವ ಅವರನ್ನು ಬಹಳ ವರ್ಷದಿಂದ ನೋಡಿದ್ದೇನೆ. ಚಿರು (ಚಿರಂಜೀವಿ ಸರ್ಜಾ) ಜೊತೆ ಈಗಾಗಲೇ ಸಿನಿಮಾ ಮಾಡಿದ್ದೇನೆ. ಪ್ರೇಮ್ ಇದ್ದಲ್ಲಿ ಅದ್ಭುತವಾದ ಎನರ್ಜಿ ಇರುತ್ತದೆ. ಇದನ್ನು ‘ವಿಲನ್’ನಲ್ಲಿ ಅನುಭವಿಸಿದ್ದೇನೆ.

2 **KD** ಮಲ್ಟಿಸ್ಟಾರರ್ ಸಿನಿಮಾವಲ್ಲ. ಅತಿಥಿ ಪಾತ್ರ ಮಾಡಿದ್ದೇನೆ. ಧ್ರುವ ಈ ಸಿನಿಮಾದಲ್ಲಿ 130 ದಿನ ಕೆಲಸ ಮಾಡಿದ್ದಾರೆ. ನಾನು ಮೂರೇ ದಿನ ಕೆಲಸ ಮಾಡಿದ್ದು. ಹೀರೊ ಧ್ರುವ ಅವರೇ. 6ನೇ ಸಿನಿಮಾಗೇ ಇಷ್ಟೊಂದು ಅದ್ದೂರಿ ಸಿನಿಮಾ ಮಾಡುತ್ತಿದ್ದಾರೆ ಎಂದರೆ ಅದೊಂದು ಅದ್ಭುತ ಸಾಧನೆ. ಇಂತಹ ಹೀರೊಗಳು, ಸಿನಿಮಾಗಳು ಬೇಕು.

3 **ನಾವು** ಬುಟ್ಟಿಯೊಳಗಿನ ಚಿಕ್ಕಹೂವುಗಳಂತೆ. ನಮ್ಮನ್ನು ಪೋಣಿಸಿ ಹಾರ ಮಾಡುವವರು ನಿರ್ದೇಶಕರು. ಕಥೆ ನಿರ್ದೇಶಕರಿಗಷ್ಟೇ ಗೊತ್ತು. ಚಿತ್ರೀಕರಣದಲ್ಲಿ ಭಾಗವಹಿಸಿದ್ದ ಮೂರು ದಿನಗಳಲ್ಲಿ ಏನಾಯಿತೋ ಅಷ್ಟೇ ನನಗೆ ಗೊತ್ತು. ಅವರಿಗೆ ನಾನು ಒಂದು ಪಾತ್ರವನ್ನು ಮಾಡಬೇಕಿತ್ತು. ನಾನು ಹೋಗಿ ಪಾತ್ರ ಮಾಡಿದೆ. ಇವರೆಲ್ಲರದ್ದು ದೊಡ್ಡ ಹೆಸರುಗಳೇ. ಹಾಗಿದ್ದಾಗ ಜವಾಬ್ದಾರಿಯಲ್ಲಿ ಒಳ್ಳೆಯ ಸಿನಿಮಾ ಮಾಡಿರುತ್ತಾರೆ.

4 **ಅನಾರೋಗ್ಯದ** ತುರ್ತು ಬಂದಾಗ ಆಸ್ಪತ್ರೆಗೆ ಹೋಗುತ್ತೇವೆ. ಆಗ ವೈದ್ಯರನ್ನು ನಂಬುತ್ತೇವೆ. ಕೆಲವೊಮ್ಮೆ ರೋಗ ಗುಣವಾಗಬಹುದು, ಆಗದೇ ಇರಬಹುದು. ವೈದ್ಯ ವೈದ್ಯನಲ್ಲವೇ. ಕೆಲವೊಮ್ಮೆ ಅತಿಥಿ ಪಾತ್ರಗಳು ಹಿಟ್ ಆಗಬಹುದು, ಆಗದೆಯೇ ಇರಬಹುದು. ವೈಯಕ್ತಿಕವಾಗಿ ನಾನು ಹೀರೊ ಆಗಿ ನಟಿಸಿರುವ ಎಷ್ಟೋ ಸಿನಿಮಾಗಳೇ ವರ್ಕ್‌ಔಟ್ ಆಗಿರಲ್ಲ. ಮೂರು ದಿನಗಳಿಗೆ ಏಕೆ ತಲೆಕೆಡಿಸಿಕೊಳ್ಳಲಿ?

5 **ಕಾಲಭೈರವ** ಓರ್ವ ರಕ್ಷಕ ಮತ್ತು ವಿಧ್ವಂಸಕ. ಒಂದು ಸಿನಿಮಾದಲ್ಲಿ ಅತಿಥಿ ಪಾತ್ರ(ಕ್ಯಾಮಿಯೊ) ಮಾಡಲು ಹೋದಾಗ, ಆ ಪಾತ್ರ ಆ ಚಿತ್ರದ ನಾಯಕನಟನ ಪಾತ್ರಕ್ಕೆ ಅಡಚಣೆ ಉಂಟುಮಾಡಬಾರದು ಎನ್ನುವುದಕ್ಕೆ ಆದ್ಯತೆ ನೀಡುತ್ತೇನೆ. ಸಿನಿಮಾಗೆ ಬೆಂಬಲವಾಗುತ್ತದೆ ಎಂದರೆ ಬರುತ್ತೇನೆ. ನನಗೆ ಕಥೆ ಬಗ್ಗೆ ಹೆಚ್ಚೇನು ಗೊತ್ತಿಲ್ಲ. ಹಾಗೆಂದ ಮಾತ್ರಕ್ಕೆ ಅದು ಅಲಕ್ಷ್ಯತೆ ಅಲ್ಲ. ಸಿನಿಮಾ ಕ್ಷೇತ್ರದಲ್ಲಿದ್ದು ಮೂವತ್ತು ವರ್ಷವಾಗಿದೆ. ನಾನೇನು ಮಾಡುತ್ತಿದ್ದೇನೆ ಎಂದು ನನಗೆ ಅರಿವಿದೆ.

6 **ಸೀಕ್ವೆಲ್** ಇದೆ, ಅದಕ್ಕೆ ನೀವೇ ಹೀರೊ ಎಂದಾಕ್ಷಣ ಆಕರ್ಷಣೆಗೊಂಡು ಸಿನಿಮಾ ಮಾಡುವವನು ನಾನಲ್ಲ. ನನಗೆ ನನ್ನದೇ ಆದ ಸಿನಿಮಾಗಳು, ಜವಾಬ್ದಾರಿಗಳು ಇವೆ. ಸೀಕ್ವೆಲ್ ಮಾಡುತ್ತಾರೆ ಎಂದರೆ ನನ್ನ ಮೊದಲ ಭೇಟಿ ಹಾಗೂ ಚರ್ಚೆ ಧ್ರುವ ಅವರ ಜೊತೆ ಇರಲಿದೆ.

7 **ಸದ್ಯ** ಕನ್ನಡ ಚಿತ್ರರಂಗ ಬಹಳ ನಿರ್ಣಾಯಕ ಹಂತದಲ್ಲಿದೆ. ಚಿಕ್ಕ, ದೊಡ್ಡ ಎಲ್ಲಾ ಸಿನಿಮಾಗಳೂ ಮುಖ್ಯ. ಪ್ರತಿ ಸಿನಿಮಾಗೆ ಎಷ್ಟು ಬೆಂಬಲ ನೀಡಲು ಸಾಧ್ಯವೋ ನೀಡೋಣ. ದುರ್ಬೀನು ಹಾಕಿಕೊಂಡು ಒಂದು ಸಿನಿಮಾದಲ್ಲಿ ಬರೀ ತಪ್ಪುಗಳನ್ನು ಹುಡುಕುವ ಬದಲು ತಿದ್ದಿಕೊಳ್ಳಲು ಅವಕಾಶ ನೀಡಿ. ಕನ್ನಡದಲ್ಲಿ ಬಿಡುಗಡೆಯಾಗುತ್ತಿರುವ ಪ್ರತೀ ಸಿನಿಮಾವೂ ‘KD’ಯಷ್ಟೇ ಮುಖ್ಯವಾಗಿದೆ.

8 **ಪ್ರೇಮ್** ಕನ್ನಡ ಚಿತ್ರರಂಗಕ್ಕೆ ಸಾಕಷ್ಟು ವಹಿವಾಟು ನೀಡಿರುವ ನಿರ್ದೇಶಕ. ಹಾಡಿನ ಸಮಸ್ಯೆಯಾದಾಗ ಕರೆ ಮಾಡಿ, ‘ತಲೆಕೆಡಿಸಿಕೊಳ್ಳಬೇಡಿ’ ಎಂದಿದ್ದೆ. ವಿವಾದ ಎನ್ನುವುದು ಪ್ರತಿ ಸಿನಿಮಾದಲ್ಲಿ ಇರುತ್ತದೆ. ಮನೆಯವರಾಗಿ ನಾವು ಮುಲಾಮು ಹಾಕದೆ ಒಗ್ಗರಣೆ, ಖಾರಪುಡಿ ಹಾಕಿದರೆ ಸರಿ ಹೋಗುವುದಿಲ್ಲ. ಪ್ರೇಮ್ ಈ ಹಿಂದೆ ಎಂತೆಂಥಾ ಹಾಡುಗಳನ್ನು ಬರೆದಿದ್ದಾರೆ. ಮನೆಯಲ್ಲಿ ತಂದೆ, ತಾಯಿಯಿಂದ ದೂರವಿದ್ದಾಗ ಇವರ ಹಾಡುಗಳ ಮೂಲಕ ಹತ್ತಿರವಾದೆವು. ಕನ್ನಡದ ಒಬ್ಬ ನಿರ್ದೇಶಕನ ಮೇಲೆ ಇಷ್ಟು ಕಟುವಾಗಬೇಕೇ? ಹೊರರಾಜ್ಯದವರು ಸಾವಿರ ಮಾತನಾಡಿಕೊಳ್ಳಲಿ. ಅವರ ಕೊಡುಗೆಯನ್ನು ಇಷ್ಟು ಬೇಗ ಮರೆಯುವವರು ನಾವಾಗಬಾರದು.

9 **ಮಾರ್ಕ್‌ಗೆ** ಸತತ 120 ದಿನ ಕೆಲಸ ಮಾಡಿದ್ದೆ. ಬಳಿಕ ಬಿಗ್‌ಬಾಸ್, ಸಿಸಿಎಲ್‌ನಲ್ಲಿ ತೊಡಗಿಸಿಕೊಂಡೆ. ಇದಾದ ಬಳಿಕ ಒಂದು ಸಣ್ಣ ಬಿಡುವು ಪಡೆದುಕೊಂಡಿದ್ದೇನೆ. ಸದ್ಯದಲ್ಲೇ ‘ಬಿಲ್ಲ ರಂಗ ಬಾಷಾ–ಫಸ್ಟ್ ಬ್ಲಡ್’ ಶುರುವಾಗಲಿದೆ.

‘ಯಶಸ್ಸಿನ ಮರುಸೃಷ್ಟಿ ಸಾಧ್ಯವಿಲ್ಲ’

‘ನಿರ್ದೇಶಕರು, ಬರಹಗಾರರು ನಮ್ಮನ್ನು ಕಲ್ಪಿಸಿಕೊಂಡು ಹೊಸ ರೀತಿ ಪಾತ್ರ ಬರೆದರೆ, ನಟರಾದ ನಾವು ಯಾವಾಗಲೂ ಅದಕ್ಕೆ ಸಿದ್ಧರಾಗಿರುತ್ತೇವೆ. ಈ ವಯಸ್ಸಿನಲ್ಲಿ ಯಾರಾದರೂ ಹೊಸ ರೀತಿಯ ಪಾತ್ರಕೊಟ್ಟರೆ ಬಹಳ ಖುಷಿ. ಪ್ರೇಕ್ಷಕರಿಗೆ ಮಾತ್ರವಲ್ಲ, ನಟರಾಗಿ ನಮಗೂ ಹೊಸತನದ ಪಾತ್ರಗಳು ಬೇಕು. ಇದು ಬರವಣಿಗೆ ಮತ್ತು ನಿರ್ದೇಶಕನ ಮೂಲಕ ಆಗುತ್ತದೆ. ಎಷ್ಟೋ ಸಲ ನಟರು ನಿರ್ದೇಶಕ್ಕೆ ಇಳಿಯಲು ಇದೇ ಕಾರಣ. ಏನೋ ಒಂದು ಹೊಸತನಕ್ಕೆ ಕಾಯುತ್ತ ಇರುತ್ತೇವೆ. ಅದು ಎಲ್ಲಿಯೂ ಸಿಗದಿದ್ದಾಗ ನಾವೇ ಅದನ್ನು ಹುಡುಕಿಕೊಳ್ಳಲು ಮುಂದಾಗುತ್ತೇವೆ’ ಎಂದು ಮಾತು ಪ್ರಾರಂಭಿಸಿದರು ರಮೇಶ್.

‘ಪ್ರೇಮ್ ಸಿನಿಮಾ ಕುರಿತು ಬಹಳ ಬದ್ಧತೆ ಇರುವ ನಿರ್ದೇಶಕ. ಮೊದಲ ಬಾರಿ ಅವರು ಕಥೆ ಹೇಳಿದಾಗ, ರಕ್ತಪಾತ, ಮಚ್ಚು, ಹೊಡೆದಾಟದ ಅವರ ಕಲ್ಪನೆ ಚೆನ್ನಾಗಿದೆ ಎನ್ನಿಸಿತು. ಆದರೆ ನಾನು ಕಳೆದ 15–20 ವರ್ಷಗಳಿಂದ ನಾಯಕನ ಪಾತ್ರವನ್ನಷ್ಟೇ ಮಾಡುತ್ತಾ ಬಂದಿದ್ದೇನೆ. ಬೇರೆ ಪಾತ್ರ ಮಾಡಿಲ್ಲ. ಬೇರೆ ರೀತಿಯ ಪಾತ್ರದಲ್ಲಿ ನಟಿಸಲು ನನಗೆ ಮನಸ್ಸಿಲ್ಲ ಎಂದೆ. ಆದರೆ, ನೀವೇ ಈ ಪಾತ್ರ ಮಾಡಬೇಕು ಎಂದು ಅವರು ಹಠ ಹಿಡಿದರು. ನನ್ನ ಷರತ್ತುಗಳಿಗೆ ಒಪ್ಪಿಕೊಂಡರು. ಹೀಗಾಗಿ ನಟಿಸಿದೆ. ನಾನಿಲ್ಲಿ ಧರ್ಮ ಎಂಬ ಪಾತ್ರದಲ್ಲಿ ನಟಿಸಿದ್ದೇನೆ’ ಎಂದು ‘KD’ ಪಯಣವನ್ನು ತೆರೆದಿಟ್ಟರು.

ಇದುವರೆಗೆ 120ಕ್ಕೂ ಅಧಿಕ ಸಿನಿಮಾಗಳಲ್ಲಿ ರಮೇಶ್ ಅರವಿಂದ್ ನಟಿಸಿದ್ದಾರೆ. ವಿಭಿನ್ನ ಜಾನರ್ ಕಥೆಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ‘ಒಂದು ಕಾಲಕ್ಕೆ ಪ್ರೇಮಕಥೆಗಳ ಸರಣಿಯಲ್ಲಿ ಸಿನಿಮಾ ಮಾಡಿ ಹಿಟ್ ಮೇಲೆ ಹಿಟ್ ಕೊಟ್ಟೆ. ತ್ಯಾಗರಾಜ ಎಂಬ ಬಿರುದು ಪಡೆದೆ. ಆಮೇಲೆ ನನಗೆ ಎಲ್ಲೋ ಒಂದು ಕಡೆ ಬದಲಾವಣೆ ಬೇಕು ಅನ್ನಿಸಲು ಶುರುವಾಯ್ತು. ಆಗ ‘ಉಲ್ಟಾ ಪಲ್ಟಾ’ ಅಂತ ಕಾಮಿಡಿಯತ್ತ ಹೊರಳಿದೆ. ಅದು ಸೂಪರ್ ಹಿಟ್ ಆಯಿತು. ನಂತರ ‘ಕೋತಿಗಳು ಸರ್ ಕೋತಿಗಳು’, ‘ಕುರಿಗಳು ಸರ್ ಕುರಿಗಳು’... ಹೀಗೆ ಹೆಚ್ಚು ಹಾಸ್ಯಮಯ ಚಿತ್ರಗಳನ್ನು ಮಾಡಿದೆ. ಬಳಿಕ ‘ತುತ್ತಾ ಮುತ್ತಾ’ದಂತ ಕೌಟುಂಬಿಕ ಕಥೆಗಳತ್ತ ಗಮನಹರಿಯಿತು. ನಮ್ಮ ವ್ಯಕ್ತಿತ್ವಕ್ಕೆ, ನಟನಾ ಶೈಲಿಗೆ ಪಾತ್ರ ಸರಿಹೊಂದಬೇಕು. ನಮಗೊಂದು ಮಿತಿ ಇರುತ್ತದೆ. ಅದರಲ್ಲಿ ಬೇಕಾದಷ್ಟು ಪ್ರಯತ್ನ ಮಾಡಬಹುದು. ‘KD’ಯಲ್ಲಿ ಆ ರೀತಿಯ ಒಂದು ಅವಕಾಶ ಸಿಕ್ಕಿದೆ’ ಎಂದರು.

‘ಅಮೆರಿಕಾ! ಅಮೆರಿಕಾ!!’, ‘ಅಮೃತ ವರ್ಷಿಣಿ’ಯಂಥ ಸಿನಿಮಾಗಳನ್ನು ಮತ್ತೆ ಮಾಡುತ್ತೇವೆ ಎಂದರೆ ಸಾಧ್ಯವಿಲ್ಲ. ನೂರು ಜನ ಅತ್ಯುತ್ತಮ ನಿರ್ದೇಶಕರನ್ನು ಕರೆತಂದು, ಅನಿಯಮಿತ ಬಜೆಟ್ ಕೊಟ್ಟು ಮತ್ತೊಂದು ‘ಅಮೆರಿಕಾ! ಅಮೆರಿಕಾ!!’ ಸಿನಿಮಾ ನನಗೆ ಬೇಕು, 30 ವರ್ಷಗಳ ನೆನಪಿನಲ್ಲಿ ಉಳಿಯಬೇಕು ಎಂದು ಷರತ್ತು ಹಾಕಿದರೂ, ಆ ಯಶಸ್ಸಿನ ಮರುಸೃಷ್ಟಿ ಸಾಧ್ಯವಿಲ್ಲ. ಅವೆಲ್ಲ ತಾನಾಗಿಯೇ ಆದಂಥ ಸಿನಿಮಾಗಳು. ಆವತ್ತಿನ ದಿನಗಳು, ಅನುಭವಗಳೇ ಮಜವಾಗಿತ್ತು. ಸದ್ಯ ಬಿಡುಗಡೆಗೆ ಇರುವ ನನ್ನ ಮೂರು ಸಿನಿಮಾಗಳು ವಿಭಿನ್ನ ಜಾನರ್‌ನವು. ‘ದೈಜಿ’ ಹಾರರ್ ಸಿನಿಮಾ. ಅದರಲ್ಲಿರುವುದು ವಿದೇಶಿ ದೆವ್ವ! ಲಂಡನ್‌ನಲ್ಲಿ ನಡೆಯುವ ಕಥೆ. ‘KD’ ಮೊದಲೇ ಹೇಳಿದಂತೆ ರಕ್ತಪಾತದ ಕಥೆ. ‘ಯುವರ್ ಸಿನ್ಸಿಯರ್ಲಿ ರಾಮ್’ ಒಂದು ಭಾವುಕ ಪಯಣ. ನಿರ್ದೇಶನಕ್ಕೆಂದು ಒಂದು ಸ್ಕ್ರಿಪ್ಟ್ ಸಿದ್ಧಪಡಿಸಿಕೊಂಡಿರುವೆ. ನಾನು ಎಲ್ಲರ ಜತೆಯೂ ಹೊಂದಿಕೊಳ್ಳುತ್ತೇನೆ. ಯಾರೇ ಒಳ್ಳೆ ಕಥೆಯೊಂದಿಗೆ ಬಂದರೂ ಕೈಜೋಡಿಸುತ್ತೇನೆ’ ಎಂದು ಮಾತಿಗೆ ವಿರಾಮವಿತ್ತರು.

‘ಪ್ರೇಮ್ ಉತ್ತಮ ಸೈಕಿಯಾಟ್ರಿಸ್ಟ್’

‘ಪ್ರೇಮ್ ಉತ್ತಮ ಸೈಕಿಯಾಟ್ರಿಸ್ಟ್. ಎಲ್ಲರ ಸೈಕಾಲಜಿಯನ್ನೂ ಅರ್ಥ ಮಾಡಿಕೊಂಡು ಕೆಲಸ ಮಾಡುತ್ತಾರೆ. ಒಂದು ಕಡೆ ಸಂಜಯ್ ದತ್, ಇನ್ನೊಂದು ಕಡೆ ರವಿಚಂದ್ರನ್, ಮತ್ತೊಂದು ಕಡೆ ರಮೇಶ್ ಅರವಿಂದ್... ಹೀಗೆ ಆರೆಂಟು ದೊಡ್ಡ ಕಲಾವಿದರನ್ನು ಒಂದೆಡೆ ಸೇರಿಸಿ, ಯಾರಿಗೂ ಬೇಸರ, ವೈಮನಸ್ಸು ಆಗದಂತೆ ನಿಭಾಯಿಸುವುದು ಇವತ್ತಿನ ಕಾಲದಲ್ಲಿ ಬಹಳ ಕಷ್ಟ. ಆ ವಿಷಯದಲ್ಲಿ ಪ್ರೇಮ್ ಜಾಣರು. ಎರಡು–ಮೂರು ವರ್ಷ ಎಲ್ಲ ಕಲಾವಿದರನ್ನು ಅವರು ನಿಭಾಯಿಸಿದ್ದಾರೆ’ ಎಂದು ಪ್ರೇಮ್ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

‘ಅವರು ಸಿಂಘಂ ಆಗಿದ್ದರೆ, ನಾನು ಪುಷ್ಪ’

ಐಪಿಎಸ್ ಅಧಿಕಾರಿ ವಿರುದ್ಧ ಟಿಎಂಸಿ ಅಭ್ಯರ್ಥಿ ಜಹಾಂಗೀರ್ ಖಾನ್ ಆಕ್ರೋಶ


ಜಹಾಂಗೀರ್ ಖಾನ್


ಅಜಯ್ ಪಾಲ್ ಶರ್ಮಾ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಎರಡನೇ ಹಂತದ ಮತದಾನಕ್ಕೂ ಮುನ್ನ ಚುನಾವಣಾ ಆಯೋಗವು ನೇಮಕ ಮಾಡಿರುವ ಉತ್ತರ ಪ್ರದೇಶ ಕೇಡರ್ ಐಪಿಎಸ್ ಅಧಿಕಾರಿ ಅಜಯ್ ಪಾಲ್ ಶರ್ಮಾ ಅವರ ವಿರುದ್ಧ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಕಾರ್ಯಕರ್ತರು ದಕ್ಷಿಣ 24 ಪರಗಣ ಜಿಲ್ಲೆಯ ಫಾಲ್ಟಾದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

‘ಶರ್ಮಾ ಅವರು ಟಿಎಂಸಿ ನಾಯಕರು ಹಾಗೂ ಕಾರ್ಯಕರ್ತರಿಗೆ ಬೆದರಿಕೆ ಹಾಕಿದ್ದಾರೆ. ಅವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ವರ್ತಿಸುತ್ತಿದ್ದಾರೆ’ ಎಂದು ಟಿಎಂಸಿ ಸಚಿವರು ಮತ್ತು ನಾಯಕರು ಆರೋಪಿಸಿದ್ದಾರೆ.

‘ಸ್ಥಳೀಯ ಟಿಎಂಸಿ ಅಭ್ಯರ್ಥಿ ಜಹಾಂಗೀರ್ ಖಾನ್ ಅವರ ನಿವಾಸ ಹಾಗೂ ಚುನಾವಣಾ ಕಚೇರಿ ಎದುರು ಪಕ್ಷದ ಬೆಂಬಲಿಗರು ‘ಜೈ ಬಾಂಗ್ಲಾ’ ಎಂಬ ಘೋಷಣೆಗಳನ್ನು ಕೂಗಿದ್ದಾರೆ’ ಎಂದು ಅಧಿಕಾರಿಗಳು ಆರೋಪಿಸಿದ್ದಾರೆ.

‘ಖಾನ್‌ನ ಬೆಂಬಲಿಗರು ಮತದಾರರ ಗುರುತಿನ ಚೀಟಿಗಳನ್ನು ಸಂಗ್ರಹಿಸುತ್ತಿದ್ದಾರೆ ಮತ್ತು ಮತದಾರರಿಗೆ ಬೆದರಿಕೆ ಹಾಕುತ್ತಿದ್ದಾರೆ’ ಎಂಬ ದೂರುಗಳು ಚುನಾವಣಾ ಆಯೋಗಕ್ಕೆ ಬಂದಿದ್ದರಿಂದ ಶರ್ಮಾ ಅವರು ಆ ಪ್ರದೇಶಕ್ಕೆ ಭೇಟಿ ನೀಡಿದ್ದರು’ ಎಂದು ಚುನಾವಣಾ ಸಮಿತಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಸಮಯದಲ್ಲಿ, ಉತ್ತರ ಪ್ರದೇಶದಲ್ಲಿ ‘ಸಿಂಘಂ’ (ಧೈರ್ಯಶಾಲಿ) ಎಂದೇ ಖ್ಯಾತಿ ಗಳಿಸಿರುವ ಐಪಿಎಸ್ ಅಧಿಕಾರಿ ಶರ್ಮಾ ಅವರು, ‘ಅಭ್ಯರ್ಥಿ ಅಥವಾ ಅವರ ಸಹಚರರು ಮತದಾರರನ್ನು ಹೆದರಿಸಲು ಬಿಡುವುದಿಲ್ಲ’ ಎಂದು ಹೇಳಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಜಹಾಂಗೀರ್ ಖಾನ್, ತೆಲುಗಿನ ‘ಪುಷ್ಪ’ ಮತ್ತು ಬಾಲಿವುಡ್‌ನ ‘ಸಿಂಘಂ’ ಸಿನಿಮಾವನ್ನು ಉಲ್ಲೇಖಿಸುತ್ತಾ, ‘ಬಿಜೆಪಿ ನೇಮಿಸಿದ ಪೊಲೀಸ್ ಅಧಿಕಾರಿಗಳು ಮತದಾರರನ್ನು ಹೆದರಿಸಲು ನಾನು ಬಿಡುವುದಿಲ್ಲ’ ಎಂದು ಮಂಗಳವಾರ ಹೇಳಿದ್ದಾರೆ.

‘ಇದು ಪಶ್ಚಿಮ ಬಂಗಾಳ. ಅವರು ‘ಸಿಂಘಂ’ ಆದರೆ, ನಾನು ‘ಪುಷ್ಪ’. ಉತ್ತರ ಪ್ರದೇಶದಿಂದ ಬಂದಿರುವ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ನೇಮಿಸಿರುವ ಪೊಲೀಸ್ ಅಧಿಕಾರಿಗಳು ಹಾಕುವ ಯಾವುದೇ ಬೆದರಿಕೆ ಅಥವಾ ಒತ್ತಡಕ್ಕೆ ಫಾಲ್ಟಾದಲ್ಲಿ ಅವಕಾಶ ನೀಡುವುದಿಲ್ಲ’ ಎಂದಿದ್ದಾರೆ.

‘ಶರ್ಮಾ ಅವರು ದೊಡ್ಡ ಪಡೆಯೊಂದಿಗೆ ಬಂದು ನನ್ನ ಹಾಗೂ ಜನರ ಮೇಲೆ ಒತ್ತಡ ಹೇರಲು ಯತ್ನಿಸಿದ್ದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ಕೃತ್ಯಗಳು ಸ್ವೀಕಾರಾರ್ಹವಲ್ಲ’ ಎಂದು ಹೇಳಿದ್ದಾರೆ.

> ನಾವು ಇಂತಹ ವಿಷಯಗಳನ್ನು ಖಂಡಿಸುತ್ತೇವೆ. ಒಂದಲ್ಲ ಒಂದು ನೆಪ ಮಾಡಿಕೊಂಡು ಶಾಂತಿ ಕದಡಲು ಶರ್ಮಾ ಅವರನ್ನು ಕಳುಹಿಸಿರುವಂತೆ ತೋರುತ್ತಿದೆ
> **ಚಂದ್ರಿಮಾ ಭಟ್ಟಾಚಾರ್ಯ,** ಸಚಿವೆ, ಪಶ್ಚಿಮ ಬಂಗಾಳ

ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2026

‘ಚುನಾವಣೆ ಮುಗಿಯುವವರೆಗೂ ಆದೇಶ ಇಲ್ಲ’

ಕೋಲ್ಕತ್ತ (ಪಿಟಿಐ): ಚುನಾವಣಾ ಕರ್ತವ್ಯದಲ್ಲಿರುವ ಯಾವುದೇ ಅಧಿಕಾರಿಗೆ ಸಂಬಂಧಿಸಿದಂತೆ ಏಪ್ರಿಲ್ 29ರವರೆಗೆ ಆದೇಶ ನೀಡುವುದಿಲ್ಲ ಎಂದು ಕಲ್ಕತ್ತ ಹೈಕೋರ್ಟ್ ಮಂಗಳವಾರ ತಿಳಿಸಿದೆ.

‘ನೀತಿ ಸಂಹಿತೆ ಉಲ್ಲಂಘಿಸಿರುವ ಐಪಿಎಸ್ ಅಧಿಕಾರಿ ಅಜಯ್ ಪಾಲ್ ಶರ್ಮಾ ಚುನಾವಣಾ ಕರ್ತವ್ಯದಲ್ಲಿ ಭಾಗಿಯಾಗದಂತೆ ನಿರ್ಬಂಧ ಹೇರಬೇಕು’ ಎಂದು ವಕೀಲರು ನ್ಯಾಯಮೂರ್ತಿ ಕೃಷ್ಣ ರಾವ್ ಅವರಿಗೆ ಮನವಿ ಮಾಡಿದರು. ಈ ವೇಳೆ ಕೃಷ್ಣ ರಾವ್ ಅವರು, ‘ಏಪ್ರಿಲ್ 29ರವರೆಗೆ ಇದಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶ ಹೊರಡಿಸುವುದಿಲ್ಲ’ ಎಂದು ಹೇಳಿದರು.

ದಕ್ಷಿಣ 24 ಪರಗಣ ಜಿಲ್ಲೆಯ ಪೊಲೀಸ್ ವೀಕ್ಷಕರಾಗಿ ಅಜಯ್ ಪಾಲ್ ಅವರನ್ನು ನೇಮಕ ಮಾಡಲಾಗಿದೆ.

ಪಶ್ಚಿಮ ಬಂಗಾಳ ಮತದಾನ ಇಂದು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಎರಡನೇ ಹಂತದ ಮತದಾನ ಇಂದು (ಏ.29) ನಡೆಯಲಿದೆ. ರಾಜ್ಯದ 142 ಕ್ಷೇತ್ರಗಳಿಗೆ ನಡೆಯುವ ಚುನಾವಣೆಯಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಹಲವು ಸಚಿವರು ಸೇರಿದಂತೆ ಕಣದಲ್ಲಿರುವ ಅಭ್ಯರ್ಥಿಗಳ ಭವಿಷ್ಯವನ್ನು ಮತದಾರರು ನಿರ್ಧರಿಸಲಿದ್ದಾರೆ. 41,001 ಮತಗಟ್ಟೆಗಳಲ್ಲಿ ಬೆಳಿಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆವರೆಗೆ ಮತದಾನ ನಡೆಯಲಿದೆ.


ಮೊದಲ ಹಂತದದಲ್ಲಿ ರಾಜ್ಯದಲ್ಲಿ ಶೇ 93.19ರಷ್ಟು ಮತದಾನವಾಗಿತ್ತು. ಫಲಿತಾಂಶ ಮೇ 4ರಂದು ಪ್ರಕಟವಾಗಲಿದೆ.

3.21 ಕೋಟಿ ಒಟ್ಟು ಮತದಾರರು
1.64 ಕೋಟಿ ಪುರುಷರು
1.57 ಕೋಟಿ ಮಹಿಳೆಯರು
792 ಲಿಂಗತ್ವ ಅಲ್ಪಸಂಖ್ಯಾತರು

1,468 ಹೆಸರು ಪಟ್ಟಿಗೆ ಸೇರ್ಪಡೆ

ಎಸ್‌ಐಆರ್‌ಗೆ ಸಂಬಂಧಿಸಿದ ನ್ಯಾಯಮಂಡಳಿಯ ಆದೇಶದ ಬಳಿಕ ಪಶ್ಚಿಮ ಬಂಗಾಳದಲ್ಲಿ 1,468 ಜನರ ಹೆಸರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ. ಇವರು 2ನೇ ಹಂತದ ಚುನಾವಣೆಯಲ್ಲಿ ಮತದಾನ ಮಾಡಬಹುದು ಎಂದು ಆಯೋಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಏಪ್ರಿಲ್ 27ರವರೆಗೆ ವಿಲೇವಾರಿ ಮಾಡಿರುವ ಅರ್ಜಿಗಳ ಪೈಕಿ ಅರ್ಹ ಮತದಾರರ ಹೆಸರನ್ನು ಪಟ್ಟಿಗೆ ಸೇರಿಸಲಾಗಿದೆ ಎಂದಿದ್ದಾರೆ.

ಡೋಲಾ ಎನ್‌ಸಿಬಿ ವಶಕ್ಕೆ: ಶಾ


ಅಮಿತ್ ಶಾ

ನವದೆಹಲಿ (ಪಿಟಿಐ): ಕುಖ್ಯಾತ ಮಾದಕವಸ್ತು ಕಳ್ಳ ಸಾಗಣೆದಾರ ಮೊಹಮ್ಮದ್ ಸಲೀಂ ಡೋಲಾನನ್ನು (59) ಮಾದಕವಸ್ತು ನಿಯಂತ್ರಣ ಬ್ಯೂರೋ (ಎನ್‌ಸಿಬಿ) ಮಂಗಳವಾರ ಟರ್ಕಿಯಿಂದ ಕರೆತಂದಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಇಲ್ಲಿ ತಿಳಿಸಿದ್ದಾರೆ.

2024ರ ಮಾರ್ಚ್ ವೇಳೆ ಭಾರತದ ಕೋರಿಕೆಯ ಮೇರೆಗೆ ಹೊರಡಿಸಲಾದ ಇಂಟರ್‌ಪೋಲ್ ರೆಡ್ ನೋಟಿಸ್ ಆಧಾರದ ಮೇಲೆ ಡೋಲಾನನ್ನು ಟರ್ಕಿಯಲ್ಲಿ ಬಂಧಿಸಲಾಯಿತು. ಭಾರತದಲ್ಲಿ ಹಲವು ಮಾದಕವಸ್ತು ಕಳ್ಳಸಾಗಣೆ ಪ್ರಕರಣಗಳಲ್ಲಿ ಬೇಕಾಗಿದ್ದ ಡೋಲಾ, ಕಾನೂನು ಜಾರಿ ಸಂಸ್ಥೆಗಳಿಂದ ತಲೆಮರೆಸಿಕೊಂಡಿದ್ದ.

ಮಾದಕವಸ್ತು ಜಾಲದ ವಿರುದ್ಧ ಸರ್ಕಾರ ಶೂನ್ಯ ಸಹಿಷ್ಣುತೆ ನೀತಿ ಪಾಲಿಸುತ್ತಿದೆ ಎಂದು ಪ್ರತಿಪಾದಿಸಿದ ಅಮಿತ್ ಶಾ, ‘ಮೋದಿ ಸರ್ಕಾರದ ಅಡಿಯಲ್ಲಿ ಮಾದಕವಸ್ತು ಮಾಫಿಯಾವನ್ನು ಬುಡಸಹಿತ ಕಿತ್ತುಹಾಕಲು ನಮ್ಮ ತನಿಖಾ ಸಂಸ್ಥೆಗಳು ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಗಳ ಜೊತೆಗೂಡಿ ವಿದೇಶಗಳಲ್ಲೂ ಹಬ್ಬಿರುವ ಮಾದಕವಸ್ತು ಜಾಲವನ್ನು ಭೇದಿಸುತ್ತಿವೆ’ ಎಂದು ‘ಎಕ್ಸ್’ ಮಾಡಿದ್ದಾರೆ.

‘ಮಾದಕವಸ್ತು ಕಿಂಗ್‌ಪಿನ್‌ಗಳಿಗೆ ಯಾವುದೇ ಸ್ಥಳ ಸುರಕ್ಷಿತವಾಗಿಲ್ಲ, ಅವರು ಎಲ್ಲಿ ಅಡಗಿದ್ದಾರೆ ಎಂಬುವುದು ಈಗ ವಿಷಯವೇ ಅಲ್ಲ’ ಎಂದು ಅವರು ಹೇಳಿದ್ದಾರೆ.

‘ಡೋಲಾನನ್ನು ‘ಆಪರೇಷನ್ ಗ್ಲೋಬಲ್–ಹಂಟ್’ ಅಡಿಯಲ್ಲಿ ಟರ್ಕಿಯಿಂದ ಕರೆತರಲಾಗಿದೆ. ಇಂದು ಮುಂಜಾನೆ ನವದೆಹಲಿಯ ಐಜಿಐ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಎನ್‌ಸಿಬಿ ಆತನನ್ನು ವಶಕ್ಕೆ ತೆಗೆದುಕೊಂಡಿದೆ’ ಎಂದು ಗೃಹ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

‘ಈಶಾನ್ಯ ರಾಜ್ಯಗಳು ಭಾರತದ ಅಷ್ಟಲಕ್ಷ್ಮಿ’


ಸಿಕ್ಕಿಂನ ಗ್ಯಾಂಗ್ಟಕ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಯುವ ಆಟಗಾರರ ಜತೆ ಮಂಗಳವಾರ ಫುಟ್‌ಬಾಲ್ ಆಡಿದರು —ಪಿಟಿಐ ಚಿತ್ರ

ಗ್ಯಾಂಗ್ಟಕ್ (ಪಿಟಿಐ): ಈಶಾನ್ಯ ರಾಜ್ಯಗಳನ್ನು ಭಾರತದ ‘ಅಷ್ಟಲಕ್ಷ್ಮಿ’ ಎಂದು ಬಣ್ಣಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಈ ಪ್ರದೇಶಗಳು ಸಮೃದ್ಧಿ, ಸಂಪತ್ತು ಮತ್ತು ಶುಭದ ಬಹುಮುಖಿ ಸ್ವರೂಪವನ್ನು ಪ್ರತಿನಿಧಿಸುತ್ತವೆ ಎಂದು ಮಂಗಳವಾರ ಹೇಳಿದರು.

ಸಿಕ್ಕಿಂಗೆ ರಾಜ್ಯದ ಸ್ಥಾನಮಾನ ದೊರೆತ 50ನೇ ವರ್ಷಾಚರಣೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ‘ನಮ್ಮ ಸರ್ಕಾರ ‘ಪೂರ್ವ ಪರ ನೀತಿ’ಗೆ ಬದ್ಧವಾಗಿದೆ. ಜತೆಗೆ ಈಶಾನ್ಯ ರಾಜ್ಯಗಳ ಬೆಳವಣಿಗೆಗೆ ವೇಗವಾಗಿ ಕಾರ್ಯನಿರ್ವಹಿಸಲು ಸಿದ್ಧವಾಗಿದೆ’ ಎಂದು ಹೇಳಿದರು.

ಸಿಕ್ಕಿಂನ ಆರ್ಥಿಕತೆಯ ಮುಖ್ಯ ಆಧಾರವೇ ಪ್ರವಾಸೋದ್ಯಮ. ಅದಕ್ಕಾಗಿ ಇಲ್ಲಿನ ಮೂಲಸೌಕರ್ಯ ವೃದ್ಧಿಗೆ ಸರ್ಕಾರ ಕಾರ್ಯೋನ್ಮುಖವಾಗಿದೆ. ಪಶ್ಚಿಮ ಬಂಗಾಳದ ಬಾಗ್ಡೋಗ್ರಾದಿಂದ ಎಕ್ಸ್‌ಪ್ರೆಸ್ ವೇ ನಿರ್ಮಾಣ, ಗ್ಯಾಂಗ್ಟಕ್ ವರ್ತುಲ ರಸ್ತೆ ನಿರ್ಮಾಣಗಳ ಮೂಲಕ ರಾಜ್ಯಕ್ಕೆ ಪ್ರವಾಸಿಗರ ಹರಿವನ್ನು ಹೆಚ್ಚಿಸಲು ಯೋಜಿಸಲಾಗಿದೆ ಎಂದು ವಿವರಿಸಿದರು.

ಜತೆಗೆ ರೋಪ್‌ವೇ, ಸ್ಕೈವೇ ಯೋಜನೆಗಳು ಅಂತಿಮ ಹಂತದಲ್ಲಿದ್ದು, ಪ್ರವಾಸಿಗರನ್ನು ರಾಜ್ಯವು ಆಕರ್ಷಿಸಲಿದೆ ಎಂದರು.

ಅಭಿವೃದ್ಧಿ ಯೋಜನೆಗಳಿಗೆ ಚಾಲನೆ: ಸಿಕ್ಕಿಂನ ಮೂಲಸೌಕರ್ಯ ಸೇರಿದಂತೆ ಸುಮಾರು ₹4,000 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಇದೇ ವೇಳೆ ಚಾಲನೆ ನೀಡಿದರು.

ಸಂಪರ್ಕ, ಆರೋಗ್ಯ ರಕ್ಷಣೆ, ಶಿಕ್ಷಣ, ವಿದ್ಯುತ್, ನಗರಾಭಿವೃದ್ಧಿ, ಪರಿಸರ ಪ್ರವಾಸೋದ್ಯಮ ಮತ್ತು ಕೃಷಿ ಸೇರಿದಂತೆ ವಿವಿಧ ಕ್ಷೇತ್ರಗಳ ಯೋಜನೆಗಳನ್ನು ಇದು ಒಳಗೊಂಡಿದೆ. ಈ ಯೋಜನೆಗಳು ಸಿಕ್ಕಿಂನ ಸಮಗ್ರ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವ ಗುರಿ ಹೊಂದಿವೆ ಎಂದರು.

ಫುಟ್‌ಬಾಲ್ ಆಡಿದ ಪ್ರಧಾನಿ

ಗ್ಯಾಂಗ್ಟಕ್‌ನಲ್ಲಿ ಮಂಗಳವಾರ ಬೆಳಿಗ್ಗೆ ಸಿಕ್ಕಿಂನ ಯುವ ಆಟಗಾರರ ಜತೆ ಪ್ರಧಾನಿ ನರೇಂದ್ರ ಮೋದಿ ಅವರು ಕೆಲ ಕಾಲ ಫುಟ್‌ಬಾಲ್ ಆಡಿದರು. ಈ ಆಟಗಾರರ ಜತೆ ಸಂವಾದ ನಡೆಸಿದರು. ಉದಯೋನ್ಮುಖ ಆಟಗಾರರು ತಮ್ಮ ಫುಟ್‌ಬಾಲ್ ಮತ್ತು ಟಿ–ಶರ್ಟ್‌ಗಳಿಗೆ ಮೋದಿ ಅವರಿಂದ ಹಸ್ತಾಕ್ಷರ ಪಡೆದರು.

ಈ ವೇಳೆ ಮಾತನಾಡಿದ ಮೋದಿ, ಸಿಕ್ಕಿಂನಲ್ಲಿ ಕ್ರೀಡಾ ಮೂಲ ಸೌಕರ್ಯ ಹೆಚ್ಚಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು. ವಿಶೇಷವಾಗಿ ಫುಟ್‌ಬಾಲ್ ಮತ್ತು ಬಿಲ್ಲುಗಾರಿಕೆಗೆ ಒತ್ತು ನೀಡಲಾಗುವುದು ಎಂದು ಹೇಳಿದರು.

ಗುಜರಾತ್ ಸ್ಥಳೀಯ ಸಂಸ್ಥೆ ಚುನಾವಣೆ: ಬಿಜೆಪಿ ಪ್ರಾಬಲ್ಯ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್‌ನ ಪುರಸಭೆಗಳು, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಬಿಜೆಪಿಯು ತನ್ನ ಪ್ರಾಬಲ್ಯವನ್ನು ಮುಂದುವರಿಸಿದೆ. ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿಯು ಭಾರಿ ಗೆಲುವು ಪಡೆದುಕೊಂಡಿದೆ. ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ತೀವ್ರ ಹಿನ್ನಡೆ ಉಂಟಾಗಿದೆ.

2027ರಲ್ಲಿ ರಾಜ್ಯದಲ್ಲಿ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಈ ಕಾರಣದಿಂದ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶದ ಮೇಲೆ ಕುತೂಹಲ ಇತ್ತು. ಪ್ರಮುಖ ವಿರೋಧ ಪಕ್ಷವಾಗಬೇಕು ಎನ್ನುವ ಎಎಪಿ ಕನಸು ಭಗ್ನಗೊಂಡಿದೆ.

84 ಪುರಸಭೆಗಳಲ್ಲಿ 78ರಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸಿದೆ. 34 ಜಿಲ್ಲಾ ಪಂಚಾಯಿತಿಗಳ ಪೈಕಿ 33ರಲ್ಲಿ, 260 ತಾಲ್ಲೂಕು ಪಂಚಾಯಿತಿಗಳಲ್ಲಿ 253ರಲ್ಲಿ ಬಿಜೆಪಿ ಜಯಶಾಲಿಯಾಗಿದೆ. ಎಎಪಿ 1 ಮತ್ತು ಕಾಂಗ್ರೆಸ್ ಏಳು ತಾಲ್ಲೂಕು ಪಂಚಾಯಿತಿಗಳಲ್ಲಿ ಗೆದ್ದಿವೆ.

ಶಿಕ್ಷಣ ಹಕ್ಕು ಕಾಯ್ದೆ • ರಾಷ್ಟ್ರೀಯ ಯೋಜನೆಯಾಗಿ ಪರಿಗಣಿಸುವಂತೆ ಸೂಚನೆ

ಕಡ್ಡಾಯ ಪ್ರವೇಶಾತಿ ಎತ್ತಿಹಿಡಿದ ‘ಸುಪ್ರೀಂ’

ಮುಖ್ಯಾಂಶಗಳು
- ವಿದ್ಯಾರ್ಥಿಗಳ ಪ್ರವೇಶ ಖಾತರಿಯು ಸರ್ಕಾರದ ಕರ್ತವ್ಯ: ‘ಸುಪ್ರೀಂ’
- ಲಖನೌ ಪಬ್ಲಿಕ್ ಸ್ಕೂಲ್ ಸಲ್ಲಿಸಿದ್ದ ಮೇಲ್ಮನವಿ ವಜಾ

ನವದೆಹಲಿ (ಪಿಟಿಐ): ಬಡವರು ಹಾಗೂ ದುರ್ಬಲ ವರ್ಗದ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಜಾರಿಗೆ ತಂದಿರುವ ಶಿಕ್ಷಣ ಹಕ್ಕು ಕಾಯ್ದೆಯಡಿ (ಆರ್‌ಟಿಇ) ಮಕ್ಕಳ ಕಡ್ಡಾಯ ಪ್ರವೇಶವನ್ನು ಎತ್ತಿಹಿಡಿದಿರುವ ಸುಪ್ರೀಂ ಕೋರ್ಟ್, ಪೂರ್ವ ಪ್ರಾಥಮಿಕ ಶಾಲೆಗೆ ಮಕ್ಕಳ ಸೇರ್ಪಡೆಯನ್ನು ‘ರಾಷ್ಟ್ರೀಯ ಯೋಜನೆ’ಯಾಗಿ ಪರಿಗಣಿಸಬೇಕು ಎಂದು ಮಂಗಳವಾರ ಹೇಳಿದೆ.

ರಾಜ್ಯ ಸರ್ಕಾರದ ಮೂಲಕ ಹಂಚಿಕೆಯಾದ ಮಕ್ಕಳಿಗೆ ಆರ್‌ಟಿಇ ಅಡಿ ಪೂರ್ವ ಪ್ರಾಥಮಿಕ ತರಗತಿಗಳಿಗೆ ಯಾವುದೇ ವಿಳಂಬವಿಲ್ಲದೆ ಪ್ರವೇಶಾತಿ ಕಲ್ಪಿಸಲು ‘ನೆರೆಯ ಶಾಲೆ’ಗಳು ಸಾಂವಿಧಾನಿಕವಾಗಿ ಬದ್ಧವಾಗಿವೆ ಎಂದು ತೀರ್ಪು ನೀಡಿದೆ.

ಮಕ್ಕಳಿಗೆ ಪ್ರವೇಶ ನಿರಾಕರಿಸುವುದು ಸಂವಿಧಾನದ 21 (ಎ) ವಿಧಿ ಅಡಿಯಲ್ಲಿ ಖಾತರಿಪಡಿಸಲಾದ ಶಿಕ್ಷಣದ ಮೂಲಭೂತ ಹಕ್ಕನ್ನು ದುರ್ಬಲಗೊಳಿಸುತ್ತದೆ ಎಂದು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಆರಾಧೆ ಅವರ ಪೀಠ ಹೇಳಿತು.

‘2009ರ ಆರ್‌ಟಿಇ ಕಾಯ್ದೆಯ ಸೆಕ್ಷನ್ 12ರ ಅಡಿಯಲ್ಲಿ ‘ನೆರೆಯ ಶಾಲೆ’ಗಳು ಸಮಾಜದ ಬಡ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ಶೇಕಡ 25ರಷ್ಟು ಸೀಟುಗಳನ್ನು ಮೀಸಲಿಡಬೇಕು. ಈ ನಿಯಮವು ನಮ್ಮ ಸಮಾಜದಲ್ಲಿ ಬದಲಾವಣೆ ತರುವ ಅಸಾಧಾರಣ ಸಾಮರ್ಥ್ಯವನ್ನು ಹೊಂದಿದೆ’ ಎಂದು ಪೀಠ ಅಭಿಪ್ರಾಯ ಪಟ್ಟಿತು.

‘ಅಂತಹ ವಿದ್ಯಾರ್ಥಿಗಳ ಪ್ರವೇಶವನ್ನು ಖಾತರಿಪಡಿಸಿಕೊಳ್ಳುವುದು ಸರ್ಕಾರ, ಸ್ಥಳೀಯ ಪ್ರಾಧಿಕಾರದ ಬಾಧ್ಯತೆಯಾಗಿರಬೇಕು. ಶಿಕ್ಷಣ ಹಕ್ಕಿನ ನಿರಾಕರಣೆ ಕುರಿತ ದೂರಿನೊಂದಿಗೆ ಬರುವ ಪೋಷಕರಿಗೆ ಪರಿಹಾರವನ್ನು ಒದಗಿಸಲು ಕೋರ್ಟ್‌ಗಳು ಹೆಚ್ಚು ಆಸಕ್ತಿ ವಹಿಸ ಬೇಕು’ ಎಂದು ತೀರ್ಪನ್ನು ಬರೆದ ನ್ಯಾಯಮೂರ್ತಿ ನರಸಿಂಹ ಹೇಳಿದರು.

ಸಮಾಜದ ದುರ್ಬಲ ವರ್ಗದ ವಿದ್ಯಾರ್ಥಿಗೆ ಪ್ರವೇಶ ನೀಡುವಂತೆ ನಿರ್ದೇಶಿಸಿದ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ, ಲಖನೌ ಪಬ್ಲಿಕ್ ಸ್ಕೂಲ್ ಸಲ್ಲಿಸಿದ್ದ ಮೇಲ್ಮನವಿಯನ್ನು ಪೀಠ ವಜಾಗೊಳಿಸಿತು.

2024–25ರ ಶೈಕ್ಷಣಿಕ ವರ್ಷದಲ್ಲಿ ಉತ್ತರ ಪ್ರದೇಶ ಸರ್ಕಾರ ಹಂಚಿಕೆ ಮಾಡಿದ ವಿದ್ಯಾರ್ಥಿಯನ್ನು ಸೇರಿಸಿಕೊಳ್ಳಲು ಲಖನೌ ಪಬ್ಲಿಕ್ ಸ್ಕೂಲ್ ನಿರಾಕರಿಸಿತ್ತು. ವಿದ್ಯಾರ್ಥಿಯ ಪೋಷಕರು ಹೈಕೋರ್ಟ್ ಮೊರೆ ಹೋಗಿದ್ದರು. ಹೈಕೋರ್ಟ್, ವಿದ್ಯಾರ್ಥಿಯ ಪರ ತೀರ್ಪು ನೀಡಿತ್ತು. ಶಾಲೆಯ ಆಡಳಿತ ಮಂಡಳಿ ಈ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಮಹಿಳಾ ಮೀಸಲು: ಸರ್ವಪಕ್ಷ ಸಭೆ ಕರೆಯಿರಿ– ಕಾಂಗ್ರೆಸ್


ಜೈರಾಮ್ ರಮೇಶ್

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ಅಸ್ತಿತ್ವದಲ್ಲಿರುವ ಸಂಖ್ಯಾಬಲದೊಂದಿಗೆ 2029ರಿಂದ ಮಹಿಳಾ ಮೀಸಲು ಕಾನೂನನ್ನು ಹೇಗೆ ಜಾರಿಗೆ ತರಬಹುದು ಎಂಬುದನ್ನು ಚರ್ಚಿಸಲು ಕೇಂದ್ರ ಸರ್ಕಾರ ಸರ್ವ ಪಕ್ಷಗಳ ಸಭೆಯನ್ನು ಕರೆಯಬೇಕು ಎಂದು ಎಂದು ಕಾಂಗ್ರೆಸ್ ಮಂಗಳವಾರ ಪುನರುಚ್ಚರಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ವೈಯಕ್ತಿಕ ರಾಜಕೀಯ ಹಿತಾಸಕ್ತಿಗಾಗಿ ಭಾರತದ ಮಹಿಳೆಯರನ್ನು ಬಳಸಿಕೊಂಡು ಮಾಡಿದ ಪಾಪಗಳನ್ನು ತೊಳೆದುಕೊಳ್ಳುವ ಕಾಲ ಬಂದಿದೆ ಎಂದು ಅದು ಹೇಳಿದೆ.

‘ಇದೀಗ ಚುನಾವಣಾ ಪ್ರಚಾರ ಮುಗಿದಿದೆ. ಕ್ಷೇತ್ರ ಪುನರ್ ವಿಂಗಡಣೆ ಮಸೂದೆ ತರುವ ಕೇಂದ್ರದ ದುಷ್ಟ ನಡೆಯನ್ನು ವಿರೋಧ ಪಕ್ಷಗಳು ಒಗ್ಗಟ್ಟಿನಿಂದ ವಿಫಲಗೊಳಿಸಿವೆ. ಇದೀಗ ಪ್ರಧಾನಿ ಅವರು ವಿರೋಧ ಪಕ್ಷಗಳ ಒತ್ತಾಯವನ್ನು ಕೇಳಬೇಕಿದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಆಗ್ರಹಿಸಿದ್ದಾರೆ.

‘ನಾರಿಶಕ್ತಿ ವಂದನಾ ಅಧಿನಿಯಮ–2023 ಅನ್ನು 2029ರಿಂದ ಲೋಕಸಭೆಯಲ್ಲಿ ಹೇಗೆ ಜಾರಿಗೆ ತರಬಹುದು ಎಂಬುದನ್ನು ಚರ್ಚಿಸಲು ಸರ್ವಪಕ್ಷಗಳ ಸಭೆ ಕರೆಯಬೇಕು. ಅದು ಆಗಲೇಬೇಕಾದ ಅತ್ಯಗತ್ಯ ಕೆಲಸವಾಗಿದೆ’ ಎಂದು ಅವರು ಪ್ರತಿಪಾದಿಸಿದ್ದಾರೆ.

ಇತ್ತೀಚೆಗೆ ಕರೆದಿದ್ದ ಸಂಸತ್ತಿನ ವಿಶೇಷ ಅಧಿವೇಶನದ ಕಾರ್ಯಸೂಚಿಯು ಮಹಿಳಾ ಮೀಸಲಾತಿ ಮಸೂದೆ ಆಗಿರಲಿಲ್ಲ. ಬದಲಿಗೆ ಅದು ಕ್ಷೇತ್ರ ಪುನರ್‌ವಿಂಗಡಣೆ ಮಸೂದೆ ಕುರಿತ ಕಾರ್ಯಸೂಚಿಯಾಗಿತ್ತು ಎಂದು ಅವರು ಆರೋಪಿಸಿದ್ದಾರೆ.



‘ಕಿಂಗ್ಸ್’ಗೆ ಸೋಲುಣಿಸಿದ ‘ರಾಯಲ್ಸ್’

ಡೊನೊವನ್– ಶುಭಂ ಅಮೋಘ ಜೊತೆಯಾಟ

• ಶ್ರೇಯಸ್ ಅಯ್ಯರ್ ಪಡೆಯ ಅಜೇಯ ಓಟಕ್ಕೆ ತಡೆ

ಮುಲ್ಲನಪುರ (ಪಿಟಿಐ): ಪಂಜಾಬ್ ಕಿಂಗ್ಸ್ ತಂಡದ ಅಜೇಯ ಓಟಕ್ಕೆ ಮಂಗಳವಾರ ರಾಜಸ್ಥಾನ ರಾಯಲ್ಸ್ ತಡೆಯೊಡ್ಡಿತು. ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ತಂಡವು ಪ್ರಸಕ್ತ ಐಪಿಎಲ್‌ನಲ್ಲಿ ಮೊದಲ ಸೋಲು ಅನುಭವಿಸಿತು.

ಡೊನೊವನ್ ಫೆರೀರಾ (ಔಟಾಗದೇ 52; 26ಎ, 4x6, 6x3) ಮತ್ತು ಇಂಪ್ಯಾಕ್ಟ್ ಪ್ಲೇಯರ್ ಶುಭಂ ದುಬೆ (ಔಟಾಗದೇ 31; 12ಎ, 4x3, 6x2) ಅವರ ಅಮೋಘ ಜೊತೆಯಾಟದ ಬಲದಿಂದ ರಿಯಾನ್ ಪರಾಗ್ ಪಡೆ ಆರು ವಿಕೆಟ್‌ಗಳ ಜಯ ಸಾಧಿಸಿತು.

ಮಹಾರಾಜ ಯಾದವೀಂದ್ರ ಸಿಂಗ್ ಅಂತರ ರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಟಾಸ್ ಗೆದ್ದ ರಾಯಲ್ಸ್ ಬೌಲಿಂಗ್ ಆಯ್ದುಕೊಂಡಿತು. ಪ್ರಭಸಿಮ್ರನ್ ಸಿಂಗ್ ಮತ್ತು ಮಾರ್ಕಸ್ ಸ್ಟೊಯಿನಿಸ್ ಅವರ ಅಬ್ಬರದ ಬ್ಯಾಟಿಂಗ್‌ನಿಂದಾಗಿ ಪಂಜಾಬ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 222 ರನ್ ಗಳಿಸಿತು.

ದೊಡ್ಡ ಗುರಿ ಬೆನ್ನಟ್ಟಿದ ರಾಜಸ್ಥಾನ ರಾಯಲ್ಸ್ ತಂಡಕ್ಕೆ ಯುವ ತಾರೆ ವೈಭವ್ ಸೂರ್ಯವಂಶಿ (43; 16ಎ, 4x3, 6x5) ಹಾಗೂ ಯಶಸ್ವಿ ಜೈಸ್ವಾಲ್ (51; 27ಎ, 4x7, 6x1) ಅವರು ಬಿರುಸಿನ ಆರಂಭ ಒದಗಿಸಿದರು. ಈ ಜೋಡಿ ಮೊದಲ ವಿಕೆಟ್‌ಗೆ 3.2 ಓವರ್‌ಗಳಲ್ಲಿ 51 ರನ್ ಸೇರಿಸಿತು. ಅರ್ಧಶತಕದತ್ತ ಮುನ್ನುಗ್ಗುತ್ತಿದ್ದ ವೈಭವ್, ಅರ್ಷದೀಪ್ ಸಿಂಗ್ ಎಸೆದ ನಾಲ್ಕನೇ ಓವರ್‌ನಲ್ಲಿ ಶ್ರೇಯಸ್‌ಗೆ ಕ್ಯಾಚಿತ್ತರು.

ವೈಭವ್ ನಿರ್ಗಮನದ ನಂತರ ಜೈಸ್ವಾಲ್ ರನ್ ಗಳಿಕೆಗೆ ವೇಗ ನೀಡಿದರು. ಟೂರ್ನಿಯಲ್ಲಿ ಮೂರನೇ ಅರ್ಧಶತಕ ದಾಖಲಿಸಿದರು. ಪಂಜಾಬ್ ತಂಡದ ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರು ಜೈಸ್ವಾಲ್, ಧ್ರುವ ಜುರೇಲ್ (16;20ಎ) ಹಾಗೂ ನಾಯಕ ರಿಯಾನ್ ಪರಾಗ್‌ಗೆ (29; 16ಎ) ಪೆವಿಲಿಯನ್ ಹಾದಿ ತೋರಿದರು.

ರಾಯಲ್ಸ್ ಗೆಲುವಿಗೆ ಕೊನೆಯ ಆರು ಓವರ್‌ಗಳಲ್ಲಿ 72 ರನ್ ಬೇಕಿತ್ತು. ಆಗ ಜೊತೆಗೂಡಿದ ಡೊನೊವನ್– ಶುಭಂ ಅವರು 32 ಎಸೆತಗಳಲ್ಲಿ 77 ರನ್ ಸೇರಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ರಾಯಲ್ಸ್ ಇನ್ನೂ ನಾಲ್ಕು ಎಸೆತಗಳಿರುವಂತೆ 4 ವಿಕೆಟ್ ಕಳೆದುಕೊಂಡು ಸಂಭ್ರಮಿಸಿತು. ಗೆಲುವಿನ ಸಿಕ್ಸರ್ ಹೊಡೆದ ಡೊನೊವನ್, ಅರ್ಧಶತಕವನ್ನೂ ಪೂರ್ಣಗೊಳಿಸಿಕೊಂಡರು.

ಪಂಜಾಬ್ ತಂಡದ ವೇಗಿಗಳಾದ ಅರ್ಷದೀಪ್ (4–0–68–1) ಹಾಗೂ ಲಾಕಿ ಫರ್ಗ್ಯುಸನ್ (4–0–57–0) ದುಬಾರಿಯಾದರು.

ಇದಕ್ಕೆ ಮೊದಲು, ಲಯದಲ್ಲಿರುವ ಪ್ರಭಸಿಮ್ರನ್ ಸಿಂಗ್ (59; 44ಎ) ಹಾಗೂ ಪ್ರಿಯಾಂಶ್ ಆರ್ಯ (29; 11ಎ) ಅವರು ಎಂದಿನಂತೆ ಪಂಜಾಬ್ ತಂಡಕ್ಕೆ ಅಮೋಘ ಆರಂಭ ನೀಡಿದರು. ಇದರಿಂದಾಗಿ ಪವರ್‌ಪ್ಲೇನಲ್ಲಿ ಒಟ್ಟು 65 ರನ್‌ಗಳು ಸೇರಿದವು.

ಕೊನೆಯ ಹಂತದ ಓವರ್‌ಗಳಲ್ಲಿ ಸ್ಟೊಯಿನಿಸ್ (ಔಟಾಗದೇ 62; 22ಎ, 4x4, 6x6) ಬೀಸಾಟವಾಡಿದ್ದರಿಂದ ತಂಡವು ‘ದ್ವಿಶತಕ’ದ ಗಡಿ ದಾಟಿತು. ಎದುರಾಳಿಗೆ ಕಠಿಣ ಗುರಿಯೊಡ್ಡಿತು. ಸ್ಟೊಯಿನಿಸ್, ಈ ಆವೃತ್ತಿಯಲ್ಲಿ ಹೆಚ್ಚು ವೈಫಲ್ಯ ಅನುಭವಿಸಿದ್ದರು. ಆದರೆ ಇಲ್ಲಿ ರಾಯಲ್ಸ್ ಬೌಲರ್‌ಗಳ ಚಳಿ ಬಿಡಿಸಿದರು. ಕೊನೆಯ ನಾಲ್ಕು ಓವರ್‌ಗಳಲ್ಲಿ 62 ರನ್‌ಗಳು ಹರಿದು ಬಂದವು.

ರಾಯಲ್ಸ್ ತಂಡದ ‘ಕನ್ನಡಿಗ’ ಯಶ್ ರಾಜ್ ಪೂಂಜ (4–0–41–2) ಯಶಸ್ಸು ಗಳಿಸಿದರು.



ರಾಜಸ್ಥಾನ ರಾಯಲ್ಸ್ ತಂಡದ ಡೊನೊವನ್ ಫೆರೀರಾ (ಬಲ) ಮತ್ತು ಶುಭಂ ದುಬೆ —ಪಿಟಿಐ ಚಿತ್ರ

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	8	6	1	1	13	1.043
ಆರ್‌ಸಿಬಿ	8	6	2	0	12	1.919
ಆರ್ ಆರ್	9	6	3	0	12	0.617
ಎಸ್‌ಆರ್‌ಎಚ್	8	5	3	0	10	0.815
ಜಿ ಟಿ	8	4	4	0	8	- 0.475
ಸಿಎಸ್‌ಕೆ	8	3	5	0	6	- 0.121
ಡಿ ಸಿ	8	3	5	0	6	- 1.060
ಕೆಕೆಆರ್	8	2	5	1	5	- 0.751
ಎಂ ಐ	7	2	5	0	4	- 0.736
ಎಲ್‌ಎಸ್‌ಜಿ	8	2	6	0	4	- 1.106

ಆರೆಂಜ್ ಕ್ಯಾಪ್: ವೈಭವ್ ಸೂರ್ಯವಂಶಿ, ಆರ್‌ಆರ್ (400 ರನ್)

ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (14 ವಿಕೆಟ್)

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್: 4ಕ್ಕೆ 222 (20 ಓವರ್‌ಗಳಲ್ಲಿ)


ಪ್ರಭಸಿಮ್ರನ್ ಸಿ ಪರಾಗ್ ಬಿ ಯಶ್‌ರಾಜ್ 59 (44ಎ, 4x6, 6x1)
ಪ್ರಿಯಾಂಶ್ ಸಿ ಬರ್ಗರ್ ಬಿ ಆರ್ಚರ್ 29 (11ಎ, 4x5, 6x1)
ಕೂಪರ್ ಸಿ ಡೊನೊವನ್ ಬಿ ಯಶ್‌ರಾಜ್ 30 (14ಎ, 4x2, 6x3)
ಶ್ರೇಯಸ್ ಸಿ ಜುರೇಲ್ ಬಿ ಬರ್ಗರ್ 30 (27ಎ, 4x1, 6x1)
ಮಾರ್ಕಸ್ ಸ್ಟೊಯಿನಿಸ್ ಔಟಾಗದೇ 62 (22ಎ, 4x4, 6x6)
ಸೂರ್ಯಾಂಶ್ ಶೆಡ್ಗೆ ಔಟಾಗದೇ 3 (2ಎ)
ಇತರೆ: 9 (ಬೈ 4, ಲೆಗ್‌ಬೈ 4, ವೈಡ್ 1)
ವಿಕೆಟ್ ಪತನ: 1–37 (ಪ್ರಿಯಾಂಶ್ ಆರ್ಯ, 2.5), 2–96 (ಕೂಪರ್ ಕೊನೊಲಿ, 8.2), 3–144 (ಪ್ರಭಸಿಮನ್ ಸಿಂಗ್, 13.6), 4–181 (ಶ್ರೇಯಸ್ ಅಯ್ಯರ್, 17.6)
ಬೌಲಿಂಗ್: ಜೋಫ್ರಾ ಆರ್ಚರ್ 4–0–40–1, ನಾಂಡ್ರೆ ಬರ್ಗರ್ 4–0–59–1, ಬ್ರಿಜೇಶ್ ಶರ್ಮಾ 4–0–42–0, ಯಶ್‌ರಾಜ್ ಪೂಂಜ 4–0–41–2, ರವೀಂದ್ರ ಜಡೇಜ 4–0–32–0

ರಾಜಸ್ಥಾನ ರಾಯಲ್ಸ್: 4ಕ್ಕೆ 228 (19.2 ಓವರ್)

ಜೈಸ್ವಾಲ್ ಸಿ ಸೂರ್ಯಾಂಶ್ ಬಿ ಚಾಹಲ್ 51 (27ಎ, 4x7, 6x1)
ವೈಭವ್ ಸಿ ಶ್ರೇಯಸ್ ಬಿ ಅರ್ಷದೀಪ್ 43 (16ಎ, 4x3, 6x5)
ಜುರೇಲ್ ಸಿ ಯಾನ್ಸೆನ್ ಬಿ ಚಾಹಲ್ 16 (20ಎ, 6x1)
ಪರಾಗ್ ಸಿ ಸೂರ್ಯಾಂಶ್ ಬಿ ಚಾಹಲ್ 29 (16ಎ, 4x2, 6x2)
ಡೊನೊವನ್ ಫೆರೀರಾ ಔಟಾಗದೇ 52 (26ಎ, 4x6, 6x3)
ಶುಭಂ ದುಬೆ ಔಟಾಗದೇ 31 (12ಎ, 4x3, 6x2)
ಇತರೆ: 6 (ಬೈ 1, ವೈಡ್ 4, ನೋಬಾಲ್ 1)
ವಿಕೆಟ್ ಪತನ: 1–51 (ವೈಭವ್ ಸೂರ್ಯವಂಶಿ, 3.2), 2–105 (ಧ್ರುವ ಜುರೇಲ್, 9.4), 3–123 (ಯಶಸ್ವಿ ಜೈಸ್ವಾಲ್, 11.2), 4–151 (ರಿಯಾನ್ ಪರಾಗ್, 13.6)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–68–1, ಲಾಕಿ ಫರ್ಗ್ಯುಸನ್ 4–0–57–0, ಮಾರ್ಕೊ ಯಾನ್ಸೆನ್ 3.2–0–41–0, ಹರಪ್ರೀತ್ ಬ್ರಾರ್ 4–0–25–0, ಯಜುವೇಂದ್ರ ಚಾಹಲ್ 4–0–36–3.
ಪಂದ್ಯದ ಆಟಗಾರ: ಡೊನೊವನ್ ಫೆರೀರಾ

ಇಂದಿನ ಪಂದ್ಯ

ಮುಂಬೈ ಇಂಡಿಯನ್ಸ್ V/s ಸನ್‌ರೈಸರ್ಸ್ ಹೈದರಾಬಾದ್
ತಾಣ: ಮುಂಬೈ,
ಪಂದ್ಯ ಆರಂಭ: ರಾತ್ರಿ 7.30
ಲೈವ್ ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್



ಪಿಎಂ ಮೋದಿ ಮಕ್ಕಳೊಂದಿಗೆ ಫುಟ್ಬಾಲ್ ಆಡಿದರು!

ಹಾರ್ದಿಕ್ ಪಡೆಗೆ ಸನ್‌ರೈಸರ್ಸ್ ಹೈದರಾಬಾದ್ ಸವಾಲು

ಮುಂಬೈ ಮುಂದೆ ಕಠಿಣ ಹಾದಿ

ಮುಂಬೈ (ಪಿಟಿಐ): ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು ಈ ವರ್ಷ ಐಪಿಎಲ್‌ನಲ್ಲಿ ಪ್ಲೇ ಆಫ್ ಹಂತ ಪ್ರವೇಶಿಸುವ ಹಾದಿಯ ಅಗ್ನಿಪರೀಕ್ಷೆ ಈಗ ಆರಂಭವಾಗಿದೆ.

ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ನಡೆಯಲಿರುವ ಪಂದ್ಯದಲ್ಲಿ ಮುಂಬೈ ತಂಡವು ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ. ಈ ಪಂದ್ಯವೂ ಸೇರಿದಂತೆ ಉಳಿದಿರುವ ಏಳೂ ಹಣಾಹಣಿಗಳಲ್ಲಿ ಜಯಿಸುವ ಸವಾಲು ಇದೆ. ಏಕೆಂದರೆ ಪ್ರಥಮಾರ್ಧದಲ್ಲಿ ಆಡಿರುವ ಏಳು ಪಂದ್ಯಗಳಲ್ಲಿ ಮುಂಬೈ ಜಯಿಸಿರುವುದು ಎರಡರಲ್ಲಿ ಮಾತ್ರ.

ತಂಡದ ಕ್ವಿಂಟನ್ ಡಿ ಕಾಕ್ ಮತ್ತು ತಿಲಕ್ ವರ್ಮಾ ಈ ಟೂರ್ನಿಯಲ್ಲಿ ತಲಾ ಒಂದು ಶತಕ ಹೊಡೆದಿದ್ದಾರೆ. ಆದರೆ ಅವರಿಬ್ಬರೂ ಸೇರಿದಂತೆ ತಂಡದ ಯಾವುದೇ ಬ್ಯಾಟರ್ ಕೂಡ ಸ್ಥಿರ ಪ್ರದರ್ಶನ ನೀಡುತ್ತಿಲ್ಲ. ಮಧ್ಯಮ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್ (110 ರನ್) ಅವರ ವೈಫಲ್ಯವು ಕಾಡುತ್ತಿದೆ. ನಾಯಕ ಹಾರ್ದಿಕ್ ಪಾಂಡ್ಯ (3 ವಿಕೆಟ್ ಮತ್ತು 97 ರನ್), ವೇಗಿ ಜಸ್‌ಪ್ರೀತ್ ಬೂಮ್ರಾ (2 ವಿಕೆಟ್), ಟ್ರೆಂಟ್ ಬೌಲ್ಟ್ (1 ವಿಕೆಟ್) ಮತ್ತು ದೀಪಕ್ ಚಾಹರ್ (1 ವಿಕೆಟ್) ಅವರು ನಿರೀಕ್ಷಿತ ಮಟ್ಟದಲ್ಲಿ ತಮ್ಮ ಸಾಮರ್ಥ್ಯ ತೋರುತ್ತಿಲ್ಲ.

ರೋಹಿತ್ ಶರ್ಮಾ ಅವರ ಗೈರುಹಾಜರಿಯು ದೊಡ್ಡ ಪರಿಣಾಮ ಬೀರಿರುವುದು ಸುಳ್ಳಲ್ಲ. ಅವರ ಬದಲು ಅವಕಾಶ ಪಡೆದಿರುವ ದಾನೀಶ್ ಮಾಳೆವಾರ್ (2, 0) ಅವರು ರನ್ ಗಳಿಸುತ್ತಿಲ್ಲ. ಮಿಚೆಲ್ ಸ್ಯಾಂಟ್ನರ್ ಗಾಯಗೊಂಡಿದ್ದಾರೆ. ಅವರ ಜಾಗಕ್ಕೆ ದಕ್ಷಿಣ ಆಫ್ರಿಕಾ ಸ್ಪಿನ್ನರ್ ಕೇಶವ್ ಮಹಾರಾಜ್ ತಂಡಕ್ಕೆ ಸೇರಿಕೊಂಡಿದ್ದಾರೆ. ಆಲ್‌ರೌಂಡರ್ ವಿಲ್ ಜ್ಯಾಕ್ಸ್ ಅವರು 11ರ ಬಳಗದಲ್ಲಿ ಸ್ಥಾನ ಪಡೆಯುವರೇ ಎಂಬ ಕುತೂಹಲ ಇದೆ.

ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿರುವ ಹೈದರಾಬಾದ್ ತಂಡವು ಈ ಹಿಂದೆ ವಾಂಖೆಡೆ ಕ್ರೀಡಾಂಗಣದಲ್ಲಿ ಮುಂಬೈ ಎದುರು 3 ಪಂದ್ಯಗಳಲ್ಲಿ ಸೋತಿದೆ. ಆದರೆ ಪ್ರಸಕ್ತ ಲೀಗ್‌ನಲ್ಲಿ ಮುಂಬೈಗಿಂತ ಹೈದರಾಬಾದ್ ಬಲಿಷ್ಠವಾಗಿ ಕಾಣುತ್ತಿದೆ. ಈಚೆಗಷ್ಟೇ 15 ವರ್ಷದ ವೈಭವ್ ಸೂರ್ಯವಂಶಿ ಅವರ ಅಬ್ಬರದಿಂದ ಬೃಹತ್ ಮೊತ್ತದ ಗುರಿಯೊಡ್ಡಿದ್ದ ರಾಜಸ್ಥಾನ ರಾಯಲ್ಸ್ ತಂಡವನ್ನು ಹಣಿದಿದ್ದ ಸನ್‌ರೈಸರ್ಸ್ ತಂಡ ಆತ್ಮವಿಶ್ವಾಸದ ಉತ್ತುಂಗದಲ್ಲಿದೆ.

ವೇಗಿ ಪ್ಯಾಟ್ ಕಮಿನ್ಸ್ ಮರಳಿ ಬಂದಿರುವುದು ತಂಡದ ಬಲ ಹೆಚ್ಚಿಸಿದೆ. ಟೂರ್ನಿಯಲ್ಲಿ 380 ರನ್ ಗಳಿಸಿರುವ ಅಭಿಷೇಕ್ ಶರ್ಮಾ ಅಮೋಘ ಲಯದಲ್ಲಿದ್ದಾರೆ. ಅವರು ಈಗಾಗಲೇ ಒಂದು ಶತಕ ಮತ್ತು 3 ಅರ್ಧಶತಕ ಗಳಿಸಿದ್ದಾರೆ. ಇಶಾನ್ ಕಿಶನ್ (312) ಮತ್ತು ಹೆನ್ರಿಚ್ ಕ್ಲಾಸೆನ್ (349) ಕೂಡ ಉತ್ತಮ ಲಯದಲ್ಲಿದ್ದಾರೆ. ಟ್ರಾವಿಸ್ ಹೆಡ್ (186) ಪೂರ್ಣ ಸಾಮರ್ಥ್ಯ ತೋರುವ ಪ್ರಯತ್ನದಲ್ಲಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಕಮಿನ್ಸ್ ಅವರ ಅನುಭವವೇ ಪ್ರಮುಖ ಪಾತ್ರ ವಹಿಸಲಿದೆ.



ಮುಂಬೈ ಇಂಡಿಯನ್ಸ್ ತಂಡದ ಕೋಚ್ ಮಹೇಲ ಜಯವರ್ಧನೆ, ಸನ್‌ರೈಸರ್ಸ್ ಹೈದರಾಬಾದ್ ತಂಡದ ಬ್ಯಾಟರ್ ಟ್ರಾವಿಸ್ ಹೆಡ್, ಮುಂಬೈನ ಸೂರ್ಯಕುಮಾರ್ ಯಾದವ್ ಹಾಗೂ ಅಭಿಷೇಕ್ ಶರ್ಮಾ ಅವರು ಮಂಗಳವಾರ ಅಭ್ಯಾಸದ ವೇಳೆ ಮಾತುಕತೆ ನಡೆಸಿದರು ಪಿಟಿಐ ಚಿತ್ರ

ಬಲಾಬಲ	ಒಟ್ಟು ಪಂದ್ಯ 25
ಇಂಡಿಯನ್ಸ್ ಗೆಲುವು	15
ಸನ್‌ರೈಸರ್ಸ್ ಜಯ	10

ಮಹಿಳಾ ತಂಡದ ಅಭಿಯಾನಕ್ಕೆ ತೆರೆ

ಊಬರ್ ಕಪ್ ಬ್ಯಾಡ್ಮಿಂಟನ್: ಚೀನಾ ವಿರುದ್ಧ 0–5 ಸೋಲು

ಹಾರ್ಸೆನ್ಸ್, ಡೆನ್ಮಾರ್ಕ್ (ಪಿಟಿಐ): ಭಾರತದ ಮಹಿಳಾ ಶಟ್ಲರ್‌ಗಳು ಸೋಮವಾರ ಊಬರ್ ಕಪ್ ಬ್ಯಾಡ್ಮಿಂಟನ್ ಫೈನಲ್ಸ್ ಟೂರ್ನಿಯ ‘ಎ’ ಗುಂಪಿನ ಕೊನೆಯ ಪಂದ್ಯದಲ್ಲಿ 0–5 ಅಂತರದಿಂದ ಹಾಲಿ ಚಾಂಪಿಯನ್ ಚೀನಾ ತಂಡಕ್ಕೆ ಮಣಿದರು. ಇದರೊಂದಿಗೆ ಭಾರತ ತಂಡದ ಅಭಿಯಾನಕ್ಕೂ ತೆರೆಬಿತ್ತು.

ಭಾರತ ಮಹಿಳಾ ತಂಡವು ಆರಂಭಿಕ ಪಂದ್ಯದಲ್ಲಿ ಆತಿಥೇಯ ಡೆನ್ಮಾರ್ಕ್ ವಿರುದ್ಧ 2-3 ಅಂತರದಿಂದ ಸೋತಿತ್ತು. ನಂತರ ಉಕ್ರೇನ್ ವಿರುದ್ಧ 4-1 ಅಂತರದ ಜಯದೊಂದಿಗೆ ಚೇತರಿಸಿಕೊಂಡಿತ್ತು. ಕ್ವಾರ್ಟರ್ ಫೈನಲ್ ಅರ್ಹತೆ ಪಡೆಯಲು ಚೀನಾ ವಿರುದ್ಧ ಗೆಲುವು ನಿರ್ಣಾಯಕವಾಗಿತ್ತು.

ಊಬರ್ ಕಪ್ ಇತಿಹಾಸದಲ್ಲಿ 16 ಬಾರಿ ಚಾಂಪಿಯನ್ ಆಗಿರುವ ಚೀನಾ ಈ ಬಾರಿಯೂ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡ ಎನಿಸಿದೆ. ಗುಂಪಿನಲ್ಲಿರುವ ಉಕ್ರೇನ್ ಮತ್ತು ಡೆನ್ಮಾರ್ಕ್ ವಿರುದ್ಧವೂ 5–0 ಅಂತರದಿಂದ ಜಯ ದಾಖಲಿಸಿ, ಅಗ್ರಸ್ಥಾನದೊಂದಿಗೆ ಕಾರ್ಟರ್ ಫೈನಲ್ ಪ್ರವೇಶಿಸಿದೆ. ಕಳೆದ ಮೂರು ಮುಖಾಮುಖಿಗಳಲ್ಲಿ ಭಾರತ ತಂಡವು ಚೀನಾ ವಿರುದ್ಧ ಪರಾಭವಗೊಂಡಿದೆ.

ಗುಂಪಿನಲ್ಲಿ ಎರಡನೇ ಸ್ಥಾನ ಪಡೆದ ಡೆನ್ಮಾರ್ಕ್ ಎಂಟರ ಘಟ್ಟಕ್ಕೆ ಅರ್ಹತೆ ಪಡೆಯಿತು. ಮೂರನೇ ಸ್ಥಾನ ಪಡೆದ ಭಾರತ, ನಾಲ್ಕನೇ ಸ್ಥಾನದಲ್ಲಿರುವ ಉಕ್ರೇನ್ ತಂಡಗಳು ಟೂರ್ನಿಯಿಂದ ಹೊರಬಿದ್ದವು.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಗುಂಪಿನ ನಾಯಕಿಯಾಗಿದ್ದು, ಆರಂಭಿಕ ಸಿಂಗಲ್ಸ್‌ನಲ್ಲಿ ಕಣಕ್ಕಿಳಿದರು. ಇತರ ಎರಡು ಸಿಂಗಲ್ಸ್‌ಗಳಿಗೆ ಉನ್ನತಿ ಹೂಡಾ ಮತ್ತು ತನ್ವಿ ಶರ್ಮಾ ಬದಲು ಇಶಾರಾಣಿ ಬರುವಾ ಮತ್ತು ದೇವಿಕಾ ಸಿಹಾಗ್ ಅವರಿಗೆ ಅವಕಾಶ ನೀಡಲಾಯಿತು.

ವಿಶ್ವ ಕ್ರಮಾಂಕದಲ್ಲಿ 13ನೇ ಸ್ಥಾನದಲ್ಲಿರುವ ಸಿಂಧು 16-21, 21-19, 19-21ರ ರೋಚಕ ಹಣಾಹಣಿಯಲ್ಲಿ ಎರಡನೇ ಕ್ರಮಾಂಕದ ವಾಂಗ್ ಝಿಯಿ ಅವರಿಗೆ ಸೋತರು. ನಿರ್ಣಾಯಕ ಪಂದ್ಯದಲ್ಲಿ 18–12ರಿಂದ ಮುನ್ನಡೆ ಸಾಧಿಸಿದ್ದ ಸಿಂಧು ಕೊನೆಯಲ್ಲಿ ಮುಗ್ಗರಿಸಿದರು. ಇದರೊಂದಿಗೆ ಚೀನಾ 1–0 ಮುನ್ನಡೆ ಸಾಧಿಸಿತು.


ಪ್ರಿಯಾ ಕೊಂಜೆಂಗ್‌ಬಮ್ ಮತ್ತು ಶ್ರುತಿ ಮಿಶ್ರಾ ಜೋಡಿಯು ವಿಶ್ವದ ಅಗ್ರಮಾನ್ಯ ಜೋಡಿ ಲಿಯು ಶೆಂಗ್ ಶು ಮತ್ತು ಟಾನ್ ನಿಂಗ್ ಅವರಿಗೆ ಯಾವುದೇ ರೀತಿಯಲ್ಲಿ ಸಾಟಿಯಾಗಲಿಲ್ಲ. ಮೊದಲ ಡಬಲ್ಸ್‌ನಲ್ಲಿ 11-21, 8-21 ಅಂತರದಲ್ಲಿ ಗೆದ್ದ ಚೀನಾ ಮುನ್ನಡೆಯನ್ನು ದ್ವಿಗುಣಗೊಳಿಸಿತು. ಎರಡನೇ ಸಿಂಗಲ್ಸ್‌ನಲ್ಲಿ ಇಶಾರಾಣಿ 22-20, 21-13ರಿಂದ ಚೆನ್ ಯುಫಿ ಅವರಿಗೆ ಸೋತರೆ, ಎರಡನೇ ಡಬಲ್ಸ್‌ನಲ್ಲಿ ಟ್ರೀಸಾ ಜೋಳಿ ಮತ್ತು ಕವಿಪ್ರಿಯಾ ಸೆಲ್ವಂ 10-21, 21-12, 19-21ರಿಂದ ಲುವೊ ಕ್ಸು ಮಿನ್ ಮತ್ತು ಜಾಂಗ್ ಶು ಕ್ಸಿಯಾನ್ ಅವರಿಗೆ ಮಣಿದರು.

ಕೊನೆಯ ಸಿಂಗಲ್ಸ್ ಪಂದ್ಯದಲ್ಲಿ ವಿಶ್ವದ 43ನೇ ಕ್ರಮಾಂಕದ ದೇವಿಕಾ 21-19, 17-21, 10-21ರಿಂದ ಕ್ಸು ವೆನ್ ಜಿಂಗ್ ಅವರಿಗೆ ಶರಣಾದರು. ಇದೇ ವರ್ಷ ಥಾಯ್ಲೆಂಡ್ ಓಪನ್ ಪ್ರಶಸ್ತಿ ಗೆದ್ದಿರುವ ದೇವಿಕಾ ಮೊದಲ ಗೇಮ್‌ನಲ್ಲಿ ಮೇಲುಗೈ ಸಾಧಿಸಿದರು. ಆದರೆ, ನಂತರ ಲಯ ತಪ್ಪಿದರು.



ಭಾರತದ ಪಿ.ವಿ. ಸಿಂಧು ‘ಎಕ್ಸ್’ ಚಿತ್ರ

ರ‍್ಯಾಂಕಿಂಗ್: ನಾಲ್ಕನೇ ಸ್ಥಾನಕ್ಕೆ ದೀಪ್ತಿ



ದುಬೈ (ಪಿಟಿಐ): ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಭಾರತದ ದೀಪ್ತಿ ಶರ್ಮಾ ಅವರು ಐಸಿಸಿ ಮಹಿಳಾ ಟಿ20 ಬೌಲರ್‌ಗಳ ರ‍್ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ. ಆಲ್‌ರೌಂಡರ್‌ಗಳ ವಿಭಾಗದಲ್ಲಿ ಮೂರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಅವರು 5 ಪಂದ್ಯಗಳ ಸರಣಿಯಲ್ಲಿ 7 ವಿಕೆಟ್ ಗಳಿಸಿದ್ದರು. ನಾಲ್ಕನೇ ಪಂದ್ಯದಲ್ಲಿ ಐದು ವಿಕೆಟ್ ಪಡೆದು ಮಿಂಚಿದ್ದರು.

ಐಸಿಸಿ ಮಂಗಳವಾರ ಪ್ರಕಟಿಸಿರುವ ರ‍್ಯಾಂಕಿಂಗ್ ಪಟ್ಟಿಯಲ್ಲಿ, ಉಪನಾಯಕಿ ಸ್ಮೃತಿ ಮಂಧಾನ ಅವರು ಬ್ಯಾಟರ್‌ಗಳ ವಿಭಾಗದಲ್ಲಿ ಒಂದು ಸ್ಥಾನ ಹಿಂಬಡ್ತಿಯೊಂದಿಗೆ ಐದನೇ ಕ್ರಮಾಂಕ ಪಡೆದಿದ್ದಾರೆ. ಅವರು ಸರಣಿಯ ಮೊದಲ ಮೂರು ಪಂದ್ಯಗಳಿಂದ 62 ರನ್ ಸಂಪಾದಿಸಿದ್ದರು. ನಾಲ್ಕು ಮತ್ತು ಐದನೇ ಪಂದ್ಯದಲ್ಲಿ ಕಣಕ್ಕಿಳಿದಿರಲಿಲ್ಲ.

ದಕ್ಷಿಣ ಆಫ್ರಿಕಾ ತಂಡದ ನಾಯಕಿ ಲಾರಾ ವೋಲ್ವಾರ್ಟ್ ಅವರು (786 ಅಂಕ) ಮೂರನೇ ಸ್ಥಾನಕ್ಕೇರಿದ್ದಾರೆ. ಆಸ್ಟ್ರೇಲಿಯಾದ ಜಾರ್ಜಿಯಾ ವೋಲ್ (815) ಹಾಗೂ ಬೆತ್ ಮೂನಿ (788) ಮೊದಲೆರಡು ಸ್ಥಾನದಲ್ಲಿದ್ದಾರೆ. ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಅಗ್ರ 10ರಲ್ಲಿ (10ನೇ ಕ್ರಮಾಂಕ) ಮರಳಿ ಸ್ಥಾನ ಪಡೆದಿದ್ದಾರೆ.

ವೋಲ್ವಾರ್ಟ್ ಅವರು ಒಂದು ಶತಕವೂ ಸೇರಿ ಸರಣಿಯಲ್ಲಿ 330 ರನ್ ಗಳಿಸಿದ್ದರು. ಇದು, ಮಹಿಳಾ ತಂಡಗಳ ದ್ವಿಪಕ್ಷೀಯ ಸರಣಿಯಲ್ಲಿ ಬ್ಯಾಟರ್‌ವೊಬ್ಬರು ಗಳಿಸಿದ ಅತಿ ಹೆಚ್ಚಿನ ರನ್.

ಟಿ.ಟಿ: ಭಾರತ ಪುರುಷರ ಶುಭಾರಂಭ

ಲಂಡನ್ (ಪಿಟಿಐ): ಮಾನುಷ್ ಶಾ, ಮಾನವ್ ಠಕ್ಕರ್ ಮತ್ತು ಹರ್ಮೀತ್ ದೇಸಾಯಿ ಅವರ ಅಮೋಘ ಆಟದ ನೆರವಿನಿಂದ ಭಾರತ ಪುರುಷರ ತಂಡವು ಮಂಗಳವಾರ ವಿಶ್ವ ತಂಡ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿತು.



ಹರ್ಮೀತ್ ದೇಸಾಯಿ

ಭಾರತದ ಪುರುಷರು ಏಳನೇ ಗುಂಪಿನ (1ಬಿ) ಸ್ಪರ್ಧೆಯಲ್ಲಿ 3–0 ಅಂತರದಿಂದ ಟ್ಯುನೀಷಿಯಾ ವಿರುದ್ಧ ಗೆದ್ದು ಅಭಿಯಾನ ಆರಂಭಿಸಿದರು. ಭಾರತದ ಮಹಿಳಾ ತಂಡಕ್ಕೆ ಮೊದಲ ಪಂದ್ಯದಲ್ಲಿ ವಾಕ್‌ಓವರ್ ಲಭಿಸಿತು.

ಮೊದಲ ಸಿಂಗಲ್ಸ್ ಪಂದ್ಯದಲ್ಲಿ ಮಾನುಷ್ 3-1 (11-5, 9-11, 11-3, 11-5) ಅಂತರದಿಂದ ಎಸ್ಸಿದ್ ವಸೀಂ ಅವರನ್ನು ಮಣಿಸಿ, ಭಾರತಕ್ಕೆ 1–0 ಮುನ್ನಡೆ ಒದಗಿಸಿದರು.

ಎರಡನೇ ಸಿಂಗಲ್ಸ್‌ನಲ್ಲಿ ವಿಶ್ವದ 38 ನೇ ಕ್ರಮಾಂಕದ ಠಕ್ಕರ್ 3–0 (11-3, 11-3, 11-3) ರಿಂದ ಯೂಸೆಫ್ ಐದ್ದಿ ಅವರನ್ನು ಸೋಲಿಸಿದರು. ಕೊನೆಯ ಸಿಂಗಲ್ಸ್‌ನಲ್ಲಿ ಹರ್ಮೀತ್ 11-5, 11-4, 11-8 ಅಂತರದಿಂದ ಅಬೌಬಕರ್ ಬೌರಾಸ್ ಅವರನ್ನು ಸೋಲಿಸಿ, ಭಾರತ ತಂಡಕ್ಕೆ ಸಮಗ್ರ ಗೆಲುವು ತಂದುಕೊಟ್ಟರು.

ದಿನದ ಆರಂಭದಲ್ಲಿ ಭಾರತ ಮಹಿಳಾ ತಂಡವು ಆರನೇ ಗುಂಪಿನ ಸ್ಪರ್ಧೆಯಲ್ಲಿ ಉಗಾಂಡ ತಂಡವನ್ನು ಎದುರಿಸಬೇಕಿತ್ತು. ಆದರೆ, ಆ ತಂಡ ಪಂದ್ಯಕ್ಕೆ ವರದಿ ಮಾಡಲು ವಿಫಲವಾಯಿತು. ಹೀಗಾಗಿ, ಭಾರತಕ್ಕೆ ವಾಕ್‌ಓವರ್ ದೊರಕಿತು.

ಡೋಪಿಂಗ್: ವಿಸ್ಮಯಾ, ಶ್ರೀನಿವಾಸ ಅಮಾನತು

ನವದೆಹಲಿ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಪದಕವಿಜೇತ ಅಥ್ಲೀಟ್ ವಿ.ಕೆ. ವಿಸ್ಮಯಾ ಅವರನ್ನು ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕವು ಎರಡು ವರ್ಷ ಅಮಾನತು ಮಾಡಿದೆ.



ವಿ.ಕೆ. ವಿಸ್ಮಯಾ

2018ರ ಏಷ್ಯನ್ ಗೇಮ್ಸ್ 4X400 ಮೀಟರ್ ರಿಲೆಯಲ್ಲಿ ಚಿನ್ನ ಗೆದ್ದಿದ್ದ ತಂಡದಲ್ಲಿ ವಿಸ್ಮಯಾ ಅವರಿದ್ದರು. 2024ರಲ್ಲಿ ಅವರ ಮೂತ್ರದ ಮಾದರಿಯನ್ನು ನಾಡಾ ಸಂಗ್ರಹಿಸಿತ್ತು. ಅದರಲ್ಲಿ ಕ್ಲಾಮಿಫೆನ್ ಅಂಶ ಕಂಡುಬಂದಿತ್ತು. ಹಾರ್ಮೋನ್ ಮತ್ತು ಮೆಟಾಬಾಲಿಕ್ ಮಾಡ್ಯುಲೇಟರ್ಸ್ ವಿಭಾಗದಲ್ಲಿ ಈ ಮದ್ದು ಬರುತ್ತದೆ. 2024ರ ಆಗಸ್ಟ್ 15ರಂದು ಕೊಚ್ಚಿ ಸಮೀಪದ ಪೆರುಂಬವೂರ್‌ನಲ್ಲಿರುವ ವಿಸ್ಮಯಾ ಅವರ ಮನೆಯಲ್ಲಿಯೇ ಮಾದರಿಯನ್ನು ನಾಡಾ ಅಧಿಕಾರಿಗಳು ಪಡೆದಿದ್ದರು.

‘ಕ್ಲಾಮಿಫೆನ್ ಸ್ಟೆರಾಯ್ಡ್ ಇರುವ ಮದ್ದು ಅಲ್ಲ. ಗರ್ಭಿಣಿಯರ ಚಿಕಿತ್ಸೆಗಾಗಿ ಬಳಸುವ ಮದ್ದಾಗಿದೆ. ವೈದ್ಯರ ಸಲಹೆಯ ಮೇರೆಗೆ ಇದನ್ನು ಪಡೆಯಲಾಗಿತ್ತು. ನಿಯಮ ಉಲ್ಲಂಘಿಸಿಲ್ಲ’ ಎಂದು ವಿಸ್ಮಯಾ ಸ್ಪಷ್ಟನೆ ನೀಡಿದ್ದರು. ತಮ್ಮ ಸ್ಪರ್ಧಾಸಾಮರ್ಥ್ಯಕ್ಕೂ ಔಷಧಿಗೂ ಸಂಬಂಧವಿಲ್ಲ ಎಂದೂ ವಾದಿಸಿದ್ದರು.

2024ರ ಅಕ್ಟೋಬರ್ 29ರಿಂದ ವಿಸ್ಮಯಾ ಅವರನ್ನು ಅಮಾನತು ಮಾಡಿರುವ ಆದೇಶವನ್ನು ಹೋದ ತಿಂಗಳು ನೀಡಿದೆ. ಆ ಪ್ರಕಾರ ವಿಸ್ಮಯಾ ಅವರು ಮುಂದಿನ ಆರು ತಿಂಗಳುಗಳ ನಂತರ ಅಮಾನತು ಅನುಭವಿಸಬೇಕಿದೆ.

ಈ ನಡುವೆ ಓಟಗಾರ ಎನ್. ಷಣ್ಮುಗ ಶ್ರೀನಿವಾಸ್ ಅವರನ್ನು ನಾಲ್ಕು ವರ್ಷಗಳ ಅವಧಿಗೆ ಅಮಾನತು ಮಾಡಲಾಗಿದೆ. 2025ರ ಫೆಬ್ರುವರಿ 5ರಿಂದ ಅವರ ಮೇಲಿನ ಶಿಕ್ಷೆ ಜಾರಿಯಾಗಿದೆ. ಪರೀಕ್ಷೆಗಾಗಿ ಸ್ಯಾಂಪಲ್ ನೀಡಲು ಅವರು ನಿರಾಕರಿಸಿದ್ದರು. ಆದ್ದರಿಂದ ಅವರನ್ನು ವಿಚಾರಣೆಗೊಳಪಡಿಸಿ ಅಮಾನತು ಮಾಡಲಾಗಿದೆ.

ಕಣಕ್ಕಿಳಿಯಲು ವಿನೇಶ್ ಸಜ್ಜು

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಗೊಂಡಾದಲ್ಲಿ ಮೇ 10 ರಿಂದ 12ರ ವರೆಗೆ ನಡೆಯಲಿರುವ ರಾಷ್ಟ್ರೀಯ ರ‍್ಯಾಂಕಿಂಗ್ ಕುಸ್ತಿ ಸ್ಪರ್ಧೆಗಳಿಗೆ ತಮ್ಮ ನೋಂದಣಿ ಯಶಸ್ವಿ ಆಗಿರುವುದಾಗಿ ಭಾರತದ ಕುಸ್ತಿ ತಾರೆ ವಿನೇಶ್ ಫೋಗಟ್ ಮಂಗಳವಾರ ತಿಳಿಸಿದ್ದಾರೆ.



ತಾವು ಸ್ಪರ್ಧೆಗಳಲ್ಲಿ ಭಾಗವಹಿಸುವುದಕ್ಕೆ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ತಡೆ ಒಡ್ಡುತ್ತಿದೆ ಎಂದು ಅವರು ಸೋಮವಾರ ಆರೋಪಿಸಿದ್ದರು. ವಿನೇಶ್ ಅವರಿಗೆ ಈ ಮೊದಲು ನೋಂದಣಿ ಸಾಧ್ಯವಾಗಿರಲಿಲ್ಲ.

ಈ ಸಂಬಂಧ ಕುಸ್ತಿ ಫೆಡರೇಷನ್ ಸ್ಪಷ್ಟನೆ ನೀಡಿದ್ದು, ‘ವಿನೇಶ್ ಅವರಿಗಷ್ಟೇ ಅಲ್ಲ, ಹಲವು ಕುಸ್ತಿ ಸ್ಪರ್ಧಿಗಳಿಗೆ ಪೋರ್ಟಲ್‌ನಲ್ಲಾದ ತಾಂತ್ರಿಕ ದೋಷದಿಂದಾಗಿ ಅಗತ್ಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಆಗಿರಲಿಲ್ಲ’ ಎಂದು ಹೇಳಿದೆ.

ಮಂಗಳವಾರ ಬೆಳಿಗ್ಗೆ ಪ್ರವೇಶದ ಲಿಂಕ್ ದೊರೆತ ತಕ್ಷಣ ವಿನೇಶ್ ಅವರಿಗೆ ತಮ್ಮ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಲು ಸಾಧ್ಯವಾಗಿದೆ.

‘ಮುಂಬರುವ ರ‍್ಯಾಂಕಿಂಗ್ ಟೂರ್ನಿಯಲ್ಲಿ ಪಾಲ್ಗೊಳ್ಳಲು ನನ್ನ ಪ್ರವೇಶ ಪ್ರಕ್ರಿಯೆ ಮಂಗಳವಾರ ಬೆಳಿಗ್ಗೆ ಪೂರ್ಣಗೊಂಡಿದೆ. ಸೋಮವಾರ ಲಿಂಕ್ ಸ್ಥಗಿತಗೊಂಡ ಕಾರಣ ನನಗೆ ಇದನ್ನು ಪೂರೈಸಲು ಆಗಿರಲಿಲ್ಲ. ನಿಮ್ಮೆಲ್ಲರ ಬೆಂಬಲಕ್ಕಾಗಿ ಧನ್ಯವಾದಗಳು. 20 ತಿಂಗಳಲ್ಲಿ ನನ್ನ ಮೊದಲ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಎದುರು ನೋಡುತ್ತಿದ್ದೇನೆ’ ಎಂದು ಸಾಮಾಜಿಕ ಜಾಲತಾಣದಲ್ಲಿ ಅವರು ಬರೆದುಕೊಂಡಿದ್ದಾರೆ.

ಮಂಗಳವಾರ ಬೆಳಿಗ್ಗೆ ಯಷ್ಟೇ ತಮ್ಮ ಪ್ರವೇಶ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ವಿನೇಶ್ ಹೇಳಿದ್ದರೂ, ಸೋಮವಾರ ರಾತ್ರಿ 10.29ಕ್ಕೆ ಅವರ ಪ್ರವೇಶ ಪ್ರಕ್ರಿಯೆ ಯಶಸ್ವಿಯಾಗಿದೆ ಎಂದು ಡಬ್ಲ್ಯುಎಫ್‌ಐ ಹೇಳಿದೆ.

ರಾಷ್ಟ್ರೀಯ ಓಪನ್ ರ‍್ಯಾಂಕಿಂಗ್ ಟೂರ್ನಿಯಲ್ಲಿ ವಿನೇಶ್ ಅವರು 57 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ.

2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಿಗದಿಗಿಂತ ಹೆಚ್ಚು ತೂಕ ಹೊಂದಿದ್ದ ಕಾರಣಕ್ಕಾಗಿ ಅವರನ್ನು ಫೈನಲ್ ಸ್ಪರ್ಧೆಯಿಂದ ಅನರ್ಹಗೊಳಿಸಲಾಗಿತ್ತು. ಅವರು ಕೆಲದಿನಗಳ ನಂತರ ನಿವೃತ್ತಿ ಪ್ರಕಟಿಸಿದ್ದರು. ಆದರೆ, ಈ ವರ್ಷದ ಏಷ್ಯನ್ ಗೇಮ್ಸ್ ಮತ್ತು 2028ರ ಒಲಿಂಪಿಕ್ಸ್ ಗಮನದಲ್ಲಿಟ್ಟುಕೊಂಡು ನಿರ್ಧಾರ ಹಿಂಪಡೆದಿದ್ದರು.

ಅವರು 2024ರ ಚುನಾವಣೆಯಲ್ಲಿ ಹರಿಯಾಣ ವಿಧಾನಸಭೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದು ಆಯ್ಕೆ ಆಗಿದ್ದರು. ತಾಯಿಯೂ ಆಗಿದ್ದಾರೆ.

ಜನನ ಪ್ರಮಾಣಪತ್ರದಲ್ಲಿ ವ್ಯತ್ಯಾಸ ಮಹಿಳಾ ಕುಸ್ತಿಪಟುವಿನ ಸ್ಪರ್ಧೆಗೆ ತಡೆ

ನವದೆಹಲಿ (ಪಿಟಿಐ): ಮಹಿಳಾ ಕುಸ್ತಿಪಟು ಒಬ್ಬರು ಸಲ್ಲಿಸಿದ್ದ ಎರಡು ಜನನ ಪ್ರಮಾಣ ಪತ್ರಗಳಲ್ಲಿ ವ್ಯತ್ಯಾಸ ಕಂಡುಬಂದ ನಂತರ ಅವರಿಗೆ 17 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳದಂತೆ ಭಾರತ ಕುಸ್ತಿ ಫೆಡರೇಷನ್ ನಿರ್ಬಂಧ ಹೇರಿದೆ.

ಮಹಾರಾಷ್ಟ್ರದ ಸಂಭಾಜಿನಗರದಲ್ಲಿ ಮಂಗಳವಾರ ಚಾಂಪಿಯನ್‌ಷಿಪ್ ಆರಂಭವಾಗಿದೆ. ಮೊದಲ ದಿನ ಕುಸ್ತಿಪಟುವಿನ ತಂದೆ ಬೇರೆ ಬೇರೆ ರಾಜ್ಯಗಳ ಎರಡು ಜನನ ಪ್ರಮಾಣಪತ್ರ ಗಳನ್ನು ನೀಡಿದ್ದು, ಗೊಂದಲಕ್ಕೆ ಕಾರಣವಾಯಿತು.

ಬಾಲಕಿಯರ 57 ಕೆಜಿ ವಿಭಾಗದಲ್ಲಿ ಮಧ್ಯಪ್ರದೇಶ ರಾಜ್ಯವನ್ನು ಪ್ರತಿನಿಧಿಸಲು ಬಯಸಿದ್ದ ಕುಸ್ತಿಪಟುವಿನ (ಹೆಸರು ಗೌಪ್ಯವಾಗಿಡಲಾಗಿದೆ) ಜನನ ದಾಖಲೆಗಳಲ್ಲಿ ವ್ಯತ್ಯಾಸಗಳು ಕಂಡುಬಂದ ನಂತರ ಅವರ ಸ್ಪರ್ಧೆಯನ್ನು ತಡೆಹಿಡಿಯಲಾಯಿತು.

ಮಧ್ಯಪ್ರದೇಶದ ಅಧಿಕಾರಿಗಳು ನೀಡಿದ್ದ ಪ್ರಮಾಣಪತ್ರದಲ್ಲಿ ಆಕೆಯ ಜನನ ದಿನಾಂಕ 2010ರ ಆಗಸ್ಟ್ 26 ಎಂದು ನಮೂದು ಮಾಡಲಾಗಿದೆ. ಆದರೆ, ಅದರಲ್ಲಿ ನೋಂದಣಿ ಮತ್ತು ವಿತರಣೆಯ ದಿನಾಂಕ 2021ರ ನವೆಂಬರ್ 16 ಎಂದು ಉಲ್ಲೇಖಿಸಲಾಗಿದೆ. ಆಕೆಯ ಜನನದ ಒಂದು ದಶಕದ ನಂತರ ನೋಂದಾಯಿಸಲಾಗಿದೆ.

ದೈವಿಕ್ ಮಿಂಚು; ಪಿಪಿಸಿಗೆ ಜಯ

ಬೆಂಗಳೂರು: ದೈವಿಕ್ (34 ಅಂಕ) ಅವರ ಅಮೋಘ ಆಟದ ಬಲದಿಂದ ಪಾರ್ಕ್ ಪ್ಲೇಯರ್ಸ್ ಕ್ಲಬ್ (ಪಿಪಿಸಿ) ತಂಡವು ಬಿ.ಎಸ್.ನಾರಾಯಣ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ 13 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ 67–27ರಿಂದ ಮೌಂಟ್ಸ್ ಕ್ಲಬ್ ತಂಡವನ್ನು ನಿರಾಯಾಸವಾಗಿ ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆದ ಬಾಲಕರ ಸೂಪರ್ ಲೀಗ್ ಪಂದ್ಯದಲ್ಲಿ ಪಾರ್ಕ್ ಪ್ಲೇಯರ್ಸ್ ತಂಡದ ಆಟಗಾರರು ಆರಂಭದಿಂದಲೇ ಪಾರಮ್ಯ ಸಾಧಿಸಿದರು. ಧಾವಕಿ (13 ಅಂಕ) ಹಾಗೂ ನರೂನ್ (12 ಅಂಕ) ಅವರು ದೈವಿಕ್‌ಗೆ ಉತ್ತಮ ಬೆಂಬಲ ನೀಡಿದರು. ಮೌಂಟ್ಸ್ ಕ್ಲಬ್ ತಂಡದ ಸುಧಾನ್ವ ಪಿ.(13 ಅಂಕ) ಹಾಗೂ ಸುರಥೋಟಿ ಎನ್. (10) ಹೋರಾಟ ತೋರಿದರು.

ದಿನದ ಇನ್ನೊಂದು ಪಂದ್ಯದಲ್ಲಿ ಭಾರತ್ ಸ್ಪೋರ್ಟ್ಸ್ ಯೂನಿಯನ್ ತಂಡವು 61–43ರಿಂದ ಧಾರವಾಡ ಜಿಲ್ಲಾ ಎ ತಂಡದ ವಿರುದ್ಧ ಸುಲಭ ಜಯ ಸಾಧಿಸಿತು.

4 ಚಿನ್ನ ಗೆದ್ದ ಭಾರತದ ವೇಟ್‌ಲಿಫ್ಟರ್‌ಗಳು

ನವದೆಹಲಿ (ಪಿಟಿಐ): ಭಾರತ ತಂಡದ ಸ್ಪರ್ಧಿಗಳು, ಸಮೋವಾದ ಅಪಿಯಾದಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಯುವ ಮತ್ತು ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್ ಮತ್ತು ಜೊತೆಯಲ್ಲೇ ನಡೆಯುತ್ತಿರುವ ಯುನಿವರ್ಸಲ್ ಕಪ್ (ಸೀನಿಯರ್) ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದು, ಎರಡನೇ ದಿನ 4 ಚಿನ್ನದ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಸೋಮವಾರ ನಡೆದ ಪುರುಷರ 65 ಕೆ.ಜಿ. ವಿಭಾಗದಲ್ಲಿ ಸುನಿಲ್ ಸಿಂಗ್ ಒಟ್ಟು 271 ಕೆ.ಜಿ. ತೂಕ ಎತ್ತಿ (ಸ್ನಾಚ್‌ನಲ್ಲಿ 126 ಕೆ.ಜಿ ಮತ್ತು ಕ್ಲೀನ್ ಮತ್ತು ಜರ್ಕ್‌ನಲ್ಲಿ 145 ಕೆ.ಜಿ) ಸ್ವರ್ಣ ಜಯಿಸಿದರು.

ಮಹಿಳೆಯರ 58 ಕೆ.ಜಿ. ವಿಭಾಗದಲ್ಲಿ ಇಸಾಂಗ್‌ಫಾ ಗೊಗೊಯಿ ಮತ್ತು ಪುರುಷರ 71 ಕೆ.ಜಿ. ವಿಭಾಗದಲ್ಲಿ ಅಭಿನವ್ ಗೊಗೊಯಿ ಸ್ವರ್ಣಪದಕಗಳನ್ನು ಕೊರಳಿಗೇರಿಸಿಕೊಂಡರು. ಯಿಸಾಂಗ್‌ಫಾ ಒಟ್ಟು 185 ಕೆ.ಜಿ. (ಸ್ನಾಚ್‌ನಲ್ಲಿ 79 ಕೆ.ಜಿ, ಕ್ಲೀನ್ ಮತ್ತು ಜರ್ಕ್‌ನಲ್ಲಿ 106 ಕೆ.ಜಿ) ತೂಕ ಎತ್ತಿದರೆ, ಅಭಿನವ್ ಒಟ್ಟು 284 ಕೆ.ಜಿ. (ಸ್ನಾಚ್: 129 ಕೆ.ಜಿ., ಕ್ಲೀನ್ ಮತ್ತು ಜರ್ಕ್: 155 ಕೆ.ಜಿ) ಭಾರ ಎತ್ತಿದರು.

ಯುನಿವರ್ಸಲ್ ಕಪ್‌ನಲ್ಲಿ ಚಾರು ಪೆಸಿ ಪುರುಷರ 65 ಕೆ.ಜಿ. ಸ್ಪರ್ಧೆಯಲ್ಲಿ 289 ಕೆ.ಜಿ (ಸ್ನಾಚ್: 127 ಕೆ.ಜಿ, ಕ್ಲೀನ್ ಮತ್ತು ಜರ್ಕ್: 162 ಕೆ.ಜಿ) ಎತ್ತಿ ಅಗ್ರಸ್ಥಾನ ಪಡೆದರು.